



ಹರಿದಾಸರ

ಸಮಾಜಮುಖಿ ಕೀರ್ತನೆಗಳು

ಭಾಗ : ೪

35

ುದಾಯಿತು ಅದಕೆ ದುಗುಡ ಪಡಲೇಕೆ ।
ುದೆಲ್ಲವು ನಿನ್ನ ಹಿತಕೆ ಎಚ್ಚರಿಕೆ ।



ಸಂಪಾದಕರು: ◆ ಪ್ರೊ. ಜಿ.ಅಶ್ವತ್ಥನಾರಾಯಣ
◆ ಡಾ. ನಾ.ಗೀತಾಚಾರ್ಯ

ಸಂಪಾದನ ಪ್ರತಿ
10.10.23

ಶ್ರೀ ರಾಮನ [illegible] — [illegible]

ರಾಮನ [illegible] — [illegible]

ದಾರಿಯಲ್ಲಿ ಸುತಂತ್ರ [illegible] — [illegible]

[illegible] — [illegible]

ಹರಿದಾಸರ ಸಮಾಜಮುಖಿ ಕೀರ್ತನೆಗಳು

ಭಾಗ–೪ (೯೦೧–೯೪೦)

ಹರಿದಾಸರ ಸಮಾಜಮುಖಿ

ಕೀರ್ತನೆಗಳು

ಭಾಗ-೪ (೯೦೧-೯೪೦)

ಸಂಪಾದಕರು

ಪ್ರೊ. ಜಿ.ಅಶ್ವತ್ಥನಾರಾಯಣ

ಡಾ. ನಾ.ಗೀತಾಚಾರ್ಯ

ಪ್ರಕಾಶಕರು

ವಿಜಯ ಪ್ರಕಾಶನ

ವಿಜಯಪುರ

Haridasara Samajmukhi Keertanegalu– (Part–4)

Edited by– **Prof. G. Ashwathnarayan, Dr. N. Geethacharya**

Published by– **Vijaya Prakashana**
Mahipati, 633, Keerthi nagar, Vijayapur– 586 109.
Mob – 7204935255

©	–	Publisher
First Edition	–	2021
Copies	–	1000
Pages	–	xlviii + 214 = 262
Paper used	–	70 gsm Nova Print Maplitho
Size	–	1/8 Demy
Price	–	Rs.300.00
Printed	–	**The Print Point** Bengaluru-44 Mobile : 97390 67359

ಈ ಪುಸ್ತಕವನ್ನು ಇನ್‌ಫೋಸಿಸ್ ಪ್ರತಿಷ್ಠಾನದ ಧನಸಹಾಯದಿಂದ ಪ್ರಕಟಿಸಲಾಗಿದೆ.

ಹರಿದಾಸರ ಸಮಾಜಮುಖಿ ಕೀರ್ತನೆಗಳು (ಭಾಗ–೪)

ಸಂಪಾದಕರು– **ಪ್ರೊ. ಜಿ.ಅಶ್ವತ್ಥನಾರಾಯಣ, ಡಾ. ನಾ.ಗೀತಾಚಾರ್ಯ**

ಪ್ರಕಾಶಕರು– ವಿಜಯ **ಪ್ರಕಾಶನ,** 'ಮಹಿಪತಿ' ೬೩೩, ಕೀರ್ತಿನಗರ, ವಿಜಯಪುರ–೫೮೬೧೦೯
ಸಂಚಾರಿ– ೭೨೦೪೯ ೩೫೨೫೫

©	–	ಪ್ರಕಾಶಕರು
ಪ್ರಥಮ ಮುದ್ರಣ	–	೨೦೨೧
ಪ್ರತಿಗಳು	–	೧೦೦೦
ಪುಟಗಳು	–	xlviii + ೨೧೪ = ೨೬೨
ಆಕಾರ	–	೧/೮ ಡೆಮಿ
ಉಪಯೋಗಿಸಿದ ಹಾಳೆ	–	೭೦ ಜಿಎಸ್‌ಎಮ್ ನೋವಾ ಪ್ರಿಂಟ್
ಬೆಲೆ	–	ರೂ. ೩೦೦.೦೦
ಮುದ್ರಕರು	–	**ದಿ ಪ್ರಿಂಟ್ ಪಾಯಿಂಟ್,** ಬೆಂಗಳೂರು–೪೪ ಮೊ. ೯೭೩೯೦೬೭೩೫೯

ಹರಿದಾಸರ ಸಮಾಜಮುಖಿ ಕೀರ್ತನೆಗಳ ನಾಲ್ಕು ಸಂಪುಟಗಳು

ಎರಡು ವರುಷಗಳ ಹಿಂದೆ, ಸಾಮಾಜಿಕ ಜಾಲತಾಣದಲ್ಲಿ ಚರ್ಚಿಸುತ್ತಿದ್ದಾಗ, 'ಕನ್ನಡ ಸಾಹಿತ್ಯದಲ್ಲಿ ಹರಿದಾಸ ಸಾಹಿತ್ಯ ಶ್ರೇಷ್ಠವಾದದ್ದು' ಎಂದು ಹಲವರು ಅಭಿಪ್ರಾಯ ಪಟ್ಟಿದ್ದರು. ಅದಕ್ಕೆ ಪ್ರತಿಯಾಗಿ ಇನ್ನು ಕೆಲವರು 'ಏನಿದ್ದರೇನು? ಅದು ಒಂದು ಸಮುದಾಯಕ್ಕೆ, ವಿಶೇಷವಾಗಿ ಬ್ರಾಹ್ಮಣ ಸಮುದಾಯದ ಸಾಹಿತ್ಯ, ಅದರಲ್ಲೂ ಮಾಧ್ವರಿಗೆ ಮೀಸಲಾದ ಸಾಹಿತ್ಯ, ಮಧ್ವ ಸಿದ್ಧಾಂತವನ್ನು ಪ್ರಸಾರ ಮಾಡುವ ಸಾಹಿತ್ಯ' ಎಂದು ಮುಂತಾಗಿ ವಾದ ಮಾಡುತ್ತಿದ್ದರು. ಹೌದು, ಕೆಲವರಷ್ಟೇ ಏಕೆ? ನನಗೆ ಗೊತ್ತಿರುವಂತೆ ಈ ಮಾತುಗಳನ್ನು ಮೊದಲಿನಿಂದಲೂ ಕೇಳುತ್ತ ಬಂದಿದ್ದೆ. ಒಂದು ರೀತಿಯಲ್ಲಿ ಹರಿದಾಸ ಸಾಹಿತ್ಯಕ್ಕೆ ಬ್ರಾಹ್ಮಣ ಹಣೆಪಟ್ಟಿಯನ್ನು ಎಂದೋ ಬಡಿದಾಗಿತ್ತು. ಅದು ನಿಜವೆ? ಎಂದು ಚಿಂತಿಸುತ್ತಿರುವಾಗ, ಸಮಾನ ಮನಸ್ಕರಾದ ಕೆಲವರು 'ಅದು ನಿಜವಲ್ಲ, ಭಗವಂತನಲ್ಲಿ ದಾಸತ್ವವನ್ನು ವಹಿಸಿಕೊಂಡವನಿಗೆ ಜಾತಿ, ಮತ, ಪಂಥಗಳ ಗೋಜಲುಗಳೇ ಇಲ್ಲ. ಅದನ್ನೇ ದಾಸರು ತಮ್ಮ ಕೀರ್ತನೆಗಳಲ್ಲಿ ಪ್ರತಿಪಾದಿಸಿದ್ದಾರೆ. ಏನಿದ್ದರೂ ಅವರದ್ದು, ಮಾನವ ಕುಲದ ಉದ್ಧಾರ ಅವರ ಮುಖ್ಯ ಗುರಿಯಾಗಿತ್ತು ಮಾನವನ ನೈತಿಕತೆಯನ್ನು ಬಲಪಡಿಸುವಂಥ ಕೃತಿಗಳು, ಆಧ್ಯಾತ್ಮ ಸಾಧನೆಗೆ ಅನುಕೂಲವಾಗುವಂಥ ಕೃತಿಗಳು, ಜಾತಿ ಭೇದವಿಲ್ಲದೆ ಸಮಾಜದಲ್ಲಿಯ ಮೂಢ ನಂಬಿಕೆ, ತಪ್ಪು ಆಚರಣೆಗಳನ್ನು ತಿದ್ದಲು ಪ್ರಯತ್ನಿಸುವುದು, ಸಮಾಜದ ಸ್ವಾಸ್ಥ್ಯವನ್ನು ಕಾಪಾಡಲು ಪ್ರೇರೇಪಿಸುವ ನೀತಿ ಬೋಧಕ ಕೃತಿಗಳು, ಲೌಕಿಕ ಜನರಿಗೆ ಸದಾಚಾರ ಉಪದೇಶದ ಮೂಲಕ ಪಾರಲೌಕಿಕದ ಕಡೆಗೆ ಒಲವು ಹುಟ್ಟಿಸುವ ಕೃತಿಗಳು, ಒಂದು ರೀತಿಯಲ್ಲಿ ಇಹ-ಪರ ಎರಡರ ಚಿಂತನೆಯ ಕೃತಿಗಳನ್ನು ದಾಸರು ರಚಿಸಿದ್ದಾರೆ. ಅದಕ್ಕೆ ಉದಾಹರಣೆಯಾಗಿ ಅನೇಕ ಕೀರ್ತನೆಗಳನ್ನು ಕ[illegible]ಬಹುದು. ಪುರಂದರದಾಸರ, 'ಮಾನವ ಜನ್ಮ ದೊಡ್ಡದು ಅದ ಹಾನಿ ಮಾಡಬೇ[illegible] ಹುಚ್ಚಪ್ಪಗಳಿರಾ' ಕೀರ್ತನೆಯನ್ನು ಹೇಳುವುದು ಸಾಮಾನ್ಯವಾಗಿದೆ. ಆಶ್ಚರ್ಯ[illegible]ರೆ ಶ್ರೀ ಜಗನ್ನಾಥದಾಸರ 'ಹರಿಕಥಾಮೃತ ಸಾರ' ಮಾಧ್ವ ಸಿದ್ಧಾಂತವನ[illegible] ಹೇಳುವ ಕನ್ನಡದಲ್ಲಿಯ ಮೇರು ಕೃತಿ ಎಂದು ಮಾನ್ಯವಾಗಿದೆ. ಆದರೆ [illegible] ಬರುವ

'ಸರ್ವದೇಶವು ಪುಣ್ಯದೇಶವು । ಸರ್ವಕಾಲವು ಪರ್ವಕಾಲವು ।
ಸರ್ವಜೀವರು ದಾನಪಾತ್ರರು ಮೂರುಲೋಕದೊಳು ॥
ಸರ್ವಮಾತುಗಳೆಲ್ಲ ಮಂತ್ರವು । ಸರ್ವ ಕೆಲಸಗಳೆಲ್ಲ ಪೂಜೆಯು ।
ಶರ್ವವಂದ್ಯನ ವಿಮಲಮೂರ್ತಿ ಧ್ಯಾನವುಳ್ಳವಗೆ ॥ ಸಂಧಿ ೧೦–ನುಡಿ ೪ ॥

ಜೊತೆಗೆ

ಆವಕುಲದವನಾದಡೇನಿ । ನ್ನಾವ ದೇಶದೊಳಿದ್ದಡೇ ನಿ ।
ನ್ನಾವ ಕರ್ಮವ ಮಾಡಲೇನಿನ್ನಾವ ಕಾಲದಲಿ ॥
ಶ್ರೀವರನ ಸರ್ವತ್ರದಲಿ ಸಂ । ಭಾವಿಸುತ ಪೂಜಿಸುತ ಮೋದಿಪ ।
ಕೋವಿದರಿಗುಂಟೇನೊ ಭವದುಃಖಾದಿ ದೋಷಗಳು ॥ ಸಂಧಿ ೧೩, ನುಡಿ ೪॥

ಈ ಷಟ್ಪದಿಗಳು ಏನನ್ನು ಹೇಳುತ್ತವೆ? ಹರಿದಾಸ ಸಾಹಿತ್ಯ ಬ್ರಾಹ್ಮಣರ ಸಾಹಿತ್ಯ, ಮಾಧ್ವರ ಸಾಹಿತ್ಯ ಎಂದು ಹೇಳುವವರಿಗೆ ಇವುಗಳು ಉತ್ತರಗಳಂತಿವೆ. ಇವುಗಳು ಮತ್ತು ಇಂಥ ಸಮಾಜಮುಖಿ ಹರಿದಾಸರ ಕೃತಿಗಳನ್ನು ಎತ್ತಿ ಹೇಳಿ, ದಾಸಸಾಹಿತ್ಯ ಮಾನವ ಕುಲದ ಉದ್ಧಾರಕ್ಕೆ ಎಂಬುದನ್ನು ಮನದಟ್ಟು ಮಾಡಿ ಕೊಡಬೇಕಾಗಿದೆ. ಅಂತಿಮವಾಗಿ ಹರಿದಾಸರ ಸಮಾಜಮುಖಿ ಸಾಹಿತ್ಯವನ್ನು ಹುಡುಕಿ ತೆಗೆದು ಪ್ರಕಟಿಸುವುದೆಂದು ಸಾಮಾಜಿಕ ಜಾಲತಾಣದಲ್ಲೆ ನಿರ್ಧರಿತವಾಯಿತು

ಹರಿದಾಸ ಸಾಹಿತ್ಯದಲ್ಲಿ ಪರಿಣತರಾದ ರಾಜ್ಯಾದ್ಯಂತ ಕೆಲವರು ಈ ಜಾಲತಾಣದ ಚರ್ಚೆಯಲ್ಲಿ ಭಾಗವಹಿಸಿದ್ದರು. ಅವರನ್ನೂ ಮತ್ತು ಇನ್ನಷ್ಟು ಕೆಲ ಜನರನ್ನು ಸಂಪರ್ಕಿಸಿದಾಗ ಎಲ್ಲರೂ 'ಇದೊಂದು ಉಪಯುಕ್ತ ಯೋಜನೆ, ಎಂದೋ ಆಗಬೇಕಿತ್ತು. ಅಗತ್ಯವಾಗಿ ಮಾಡಬೇಕು' ಎಂದರು. ಅದಕ್ಕಾಗಿ ಒಂದು ಸಂಪಾದಕ ಮಂಡಳಿಯನ್ನು ಗುರುತಿಸಿ ಬೆಂಗಳೂರಿನಲ್ಲಿ ಸೇರಿದೆವು. ಸಭೆಗೆ ತಮ್ಮ ಸ್ವಂತ ಖರ್ಚಿನಲ್ಲಿ ಬಂದದ್ದು ವಿಶೇಷವಾಗಿತ್ತು. ಪ್ರಾರಂಭದಲ್ಲಿ ಒಂದು ಸಂಪುಟದಲ್ಲಿ ಸಂಗ್ರಹಿಸಿ ಪ್ರಕಟಿಸುವುದೆಂದು ನಿರ್ಧರಿಸಿದ್ದು ಅದು ಮುಂದೆ ೪ ಸಂಪುಟಗಳಿಗೆ ವಿಸ್ತಾರವಾಯಿತು. ಈ ಸಂಪುಟಗಳನ್ನು ಸಂಪಾದಿಸಿ ಕೊಡಲು, ಪ್ರಥಮ ಸಂಪುಟ, ಮೊದಲ ಹಂತದ ಶ್ರೀ ಶ್ರೀಪಾದರಾಯರಿಂದ ಶ್ರೀ ಪ್ರಸನ್ನವೆಂಕಟದಾಸರ ವರೆಗಿನ ೯ ಹರಿದಾಸರ ಸಮಾಜಮುಖಿ ಕೀರ್ತನೆಗಳನ್ನು, ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಮತ್ತು ಡಾ. ಸುಭಾಸ ಕಾಖಂಡಕಿ ಅವರುಗಳು ಸಂಗ್ರಹಿಸುವುದು, ೨ನೆಯ ಸಂಪುಟ, ವಿಜಯದಾಸರಿಂದ ಮುಂದುವರಿದು ೧೨ ಹರಿದಾಸರ ಸಮಾಜಮುಖಿ ಕೀರ್ತನೆಗಳನ್ನು ಡಾ. ಗೋಕುಲ... ರು, ಹೀಗೆಯೇ ೩ನೆಯ ಸಂಪುಟವನ್ನು ಕ್ರಿ. ಶ. ೧೮೦೧ರಿಂದ ೧೯೦೦ರ ವರೆಗಿನ ಸಮಾಜಮುಖಿ ಕೀರ್ತನೆಗಳನ್ನು ಕಲಬುರ್ಗಿಯ ಡಾ. ಸ್ವಾಮಿರಾ... ಕರ್ಣಿ ಅವರು ಹಾಗೂ ೪ನೆಯ ಸಂಪುಟವಾಗಿ ೧೯೦೧ರಿಂದ ಮುಂದುವ... ಹರಿದಾಸರ ಸಮಾಜಮುಖಿ ಕೀರ್ತನೆಗಳನ್ನು

ದಿ ಕ್ಷಿ
ಮೊ

ಪ್ರೊ. ಜಿ.ಅಶ್ವತ್ಥನಾರಾಯಣ ಹಾಗೂ ಡಾ. ನಾ.ಗೀತಾಚಾರ್ಯ ಅವರುಗಳು ಸಂಪಾದಿಸಿ ಕೊಡುವದೆಂದು ನಿರ್ಧಾರವಾಯಿತು.

ಸರಿ, ಎಲ್ಲರೂ ಒಪ್ಪಿಕೊಂಡರು. ಮುಂದೆ ಇವುಗಳನ್ನು ಪ್ರಕಟಿಸುವುದು ಹೇಗೆ? ಎಂಬ ಬಗ್ಗೆ ಚರ್ಚಿಸುತ್ತಿರುವಾಗ, ನಾನು ನಮ್ಮ 'ವಿಜಯ ಪ್ರಕಾಶನ ವಿಜಯಪುರ'ದಿಂದ, ಮೊದಲನೆ ಸಂಪುಟವನ್ನು, ೨ನೆಯ ಸಂಪುಟ, ಡಾ ಸುಭಾಸ ಕಾಖಂಡಕಿಯವರು ಪ್ರಸನ್ನವೆಂಕಟ ಟ್ರಸ್ಟ, ೩ನೆಯ ಸಂಪುಟ, ಡಾ. ಸ್ವಾಮಿರಾವ ಕುಲಕರ್ಣಿ ಹಾಗು ೪ನೆಯ ಸಂಪುಟವನ್ನು ಡಾ. ನಾ. ಗೀತಾಚಾರ್ಯರು ಪ್ರಕಟಿಸಲು ಮುಂದೆ ಬಂದರು. ಇಲ್ಲಿಗೆ ಮತ್ತೊಂದು ಹೆಜ್ಜೆ ಮುಂದೆ ಇಟ್ಟಂತಾಯಿತು. ಇದು ನಡೆದದ್ದು ೨೦೧೮ರ ಕೊನೆಯ ಭಾಗದಲ್ಲಿ !

೨೦೨೦ರ ಫೆಬ್ರುವರಿ ತಿಂಗಳಿನಲ್ಲಿ ಬೆಂಗಳೂರಿನ ಚಾಮರಾಜ ಪೇಟೆಯ ಶ್ರೀ ಶ್ರೀಪಾದರಾಯರ ಮಠದಲ್ಲಿ ಶ್ರೀ ಬೇಲಿಮಠದ ಸ್ವಾಮಿಗಳು ಮೊದಲನೆಯ ಸಂಪುಟವನ್ನು ಬಿಡುಗಡೆ ಮಾಡಿದರು. ಈ ಸಂಪುಟಕ್ಕೆ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ನಾಡೋಜ ಡಾ.ಮನು ಬಳಿಗಾರ ಅವರು ಸೊಗಸಾದ ಮುನ್ನುಡಿಯನ್ನು ಬರೆದಿದ್ದಾರೆ. ಈ ಸಂಪುಟವನ್ನು ನಾಡಿನಾದ್ಯಂತದ ಕೆಲವು ಪ್ರಮುಖ, ಪ್ರಸಿದ್ಧ ಬ್ರಾಹ್ಮಣೇತರ ಮಠಗಳಿಗೆ, ಹಲವು ಗಣ್ಯ ವಿದ್ವಾಂಸರುಗಳಿಗೆ ಕಳಿಸಿದಾಗ ಅಭೂತಪೂರ್ವ ಸ್ವಾಗತ ದೊರೆತು ಪ್ರತಿಕ್ರಿಯಿಸಿದರು. ಅಂಥ ಕೆಲವು ಮಠಗಳಿಂದ ಬಂದ ಪತ್ರಗಳನ್ನು ಆರ್ಶೀರ್ವಾದ ರೂಪದಲ್ಲಿ, ಈ ಸಂಪುಟದ ಪ್ರಾರಂಭದಲ್ಲಿ ಕೊಡಲು ಸಂತೋಷವಾಗುತ್ತದೆ. ಸಂದೇಶ ಕಳಿಸಿ ನಮ್ಮ ಮುಂದಿನ ಕೆಲಸಕ್ಕೆ ಉತ್ಸಾಹ, ಉತ್ತೇಜನ ನೀಡಿದ ಮಠಾಧೀಶರಿಗೆ, ಗಣ್ಯರಿಗೆ ನಮ್ಮ ಹೃದಯಪೂರ್ವಕ ನಮನಗಳು. ಹಾಗೆಯೇ ಮೊದಲ ಸಂಪುಟವನ್ನು ಓದಿ ಇನ್ಫೋಸಿಸ್ ಪ್ರತಿಷ್ಠಾನದ ಮುಖ್ಯಸ್ಥೆ, ಶ್ರೀಮತಿ ಡಾ. ಸುಧಾ ನಾರಾಯಣ ಮೂರ್ತಿ ಅವರು ಸಂತೋಷಪಟ್ಟು, ಸ್ವಯಂ ಪ್ರೇರಣೆಯಿಂದ ಮುಂದಿನ ಸಂಪುಟಗಳ ಪ್ರಕಟನೆಯ ವೆಚ್ಚವನ್ನು ಭರಿಸುವುದಾಗಿ ಹೇಳಿದರು. ಭರಿಸಿದರು. ಇದಕ್ಕೆ ಯಾವ ರೀತಿಯಿಂದ ಅವರಿಗೆ ಕೃತಜ್ಞತೆಗಳನ್ನು ತಿಳಿಸಬೇಕೋ ಗೊತ್ತಿಲ್ಲ. ಅವರೂ ಈ ಯೋಜನೆಯ ಒಂದು ಭಾಗವಾಗಿ ಬಿಟ್ಟರು.

ಸಂಪಾದಕರ ಸಂಪಾದನೆಯ ವೇಗ ಅಧಿಕವಾಯಿತು. ಒಂದು ವರುಷದಲ್ಲಿ, ಅಂದರೆ ೨೦೨೧ರ ಫೆಬ್ರುವರಿ ಹೊತ್ತಿಗೆ ಉಳಿದ ಮೂರೂ ಸಂಪುಟಗಳು ಮುದ್ರಣಕ್ಕೆ ಸಿದ್ಧವಾದುವು. ೨ನೆಯ ಸಂಪುಟಕ್ಕೆ ನಾಡಿನ ಶ್ರೇಷ್ಠ ವಿದ್ವಾಂಸ, ವಿಮರ್ಶಕ ಡಾ. ಗುರುಲಿಂಗ ಕಾಪಸೆ ಅವರು, ೩ನೆಯ ಸಂಪುಟಕ್ಕೆ ಜಾನಪದ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಡಿ.ಬಿ.ನಾಯಕ ಅವರು ಮತ್ತು ನಾಲ್ಕನೆಯ ಈ ಸಂಪುಟಕ್ಕೆ ವಚನ ಸಾಹಿತ್ಯದ ಉದ್ದಾಮ ಪಂಡಿತ, ಸಂಶೋಧಕ ಡಾ ಎಂ.ಎಸ್.ಮದಭಾವಿ ಅವರು ಮುನ್ನುಡಿಗಳನ್ನು ಬರೆದಿದ್ದಾರೆ. ಹಾಗೆ ಮುನ್ನುಡಿ ಬರೆದುಕೊಡಲು

ವಿನಂತಿಸಿದ ಮುಖ್ಯ ಉದ್ದೇಶ, ಬ್ರಾಹ್ಮಣೇತರರ ದೃಷ್ಟಿಯಲ್ಲಿ ಈ ಕೃತಿಗಳು ಹೇಗಿವೆ ಎಂಬುದನ್ನು ತಿಳಿದುಕೊಳ್ಳುವುದೇ ಆಗಿತ್ತು. ಅದು ಸಫಲವೂ ಆಯಿತು. ಮುನ್ನುಡಿ ಬರೆದ ಎಲ್ಲರಿಗೂ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

ಹೀಗೆ ಹರಿದಾಸರ ಈ ಕೈಂಕರ್ಯಕ್ಕೆ ನಿಮಿತ್ತ ಮಾತ್ರ ನಾವಾದೆಯೇ ಹೊರತು ಇಡೀ ಕಾರ್ಯವನ್ನು ಹರಿದಾಸರೇ ಮುನ್ನಡೆಸಿಕೊಂಡು ಹೋಗಿದ್ದಾರೆ ಎಂದು ನಮ್ಮ ಭಾವನೆ. ಈ ಕಾರ್ಯ ಹರಿದಾಸರ ಮುಖಾಂತರ ಶ್ರೀಹರಿಗೂ ಪ್ರೀತಿಯಾಗಿದೆ ಎಂದೇ ಅರ್ಥವಾಗುತ್ತದೆ. ಹಾಗೆಯೇ ಸಂಪುಟಗಳನ್ನು ಸಂಪಾದಿಸಿ ಕೊಟ್ಟ ಸಂಪಾದಕರುಗಳಿಗೂ ಕೃತಜ್ಞತೆಗಳು.

ಇದೀಗ ನಾಲ್ಕು ಸಂಪುಟಗಳಲ್ಲಿ ೮೬ ಹರಿದಾಸರ ೮೪೪ ಸಮಾಜಮುಖಿ ಕೀರ್ತನೆಗಳನ್ನು ಪ್ರಕಟಿಸಲಾಗಿದೆ. ಇನ್ನೂ ಇದರ ಹತ್ತು ಪಟ್ಟಿನಷ್ಟು ಕೀರ್ತನೆಗಳು ಇವೆ. ಹರಿದಾಸ ಸಾಹಿತ್ಯ ಪ್ರಿಯರು ಆ ಕಾರ್ಯವನ್ನು ಮುಂದುವರಿಸುತ್ತಾರೆ ಎಂದು ಭಾವಿಸುತ್ತೇವೆ.

ಹರಿದಾಸ ಸಾಹಿತ್ಯವು ವಿಶ್ವಸಾಹಿತ್ಯಕ್ಕೆ ಕನ್ನಡ ಭಾಷೆಯು ನೀಡಿದ ಅಪರೂಪದ ಕೊಡುಗೆ ಎಂದು ಪಾಶ್ಚಾತ್ಯರ ಸಹಿತವಾಗಿ ನಾಡಿನ ಘನ ವಿದ್ವಾಂಸರು ಒಪ್ಪಿಕೊಂಡು ತಮ್ಮ ಅಭಿಪ್ರಾಯಗಳನ್ನು ಕಾಲಕಾಲಕ್ಕೆ ದಾಖಲಿಸಿದ್ದಾರೆ. ಇದೀಗ ದಾಸಸಾಹಿತ್ಯವನ್ನು ವಿಶೇಷವಾಗಿ ಮನುಕುಲದ ಉದ್ಧಾರಕ್ಕಾಗಿ ರಚಿಸಿದ ಕೃತಿಗಳನ್ನು ಕನ್ನಡ ಬಲ್ಲ ಎಲ್ಲ ಸಮುದಾಯಗಳಿಗೂ ಮುಟ್ಟಿಸುವ ಕೆಲಸವನ್ನು ನಾಲ್ಕು ಸಂಪುಟಗಳ ಪ್ರಕಟನೆಯ ಮೂಲಕ ಕಿಂಚಿತ್ ಪ್ರಯತ್ನಿಸಲಾಗಿದೆ. ಮುಂದಿನ ದಿನಗಳಲ್ಲಿ ಇವುಗಳನ್ನು ದೇಶೀಯ ಭಾಷೆಗಳಲ್ಲಿ ವಿಶೇಷವಾಗಿ ಪಾಶ್ಚಾತ್ಯ ಭಾಷೆಗಳಲ್ಲಿ ಅನುವಾದಿಸಿ ಪ್ರಕಟಿಸುವ ಕಾರ್ಯ ಅಗತ್ಯವಾಗಿ ಆಗಬೇಕಾಗಿದೆ.

೧೯ನೆಯ ಶತಮಾನದಲ್ಲಿ ಪಾಶ್ಚಾತ್ಯ ಮಿಶನರಿಗಳಿಂದ ಕನ್ನಡ ಸಾಹಿತ್ಯವನ್ನು ಸಂಗ್ರಹಿಸುವ ಕೆಲಸ ನಡೆಯಿತು. ಕ್ರಿ. ಶ. ೧೮೪೪ರಲ್ಲಿ ವೈಗ್ಲೆ ಎಂಬವನು ಜರ್ಮನ್ ಪತ್ರಿಕೆ ಝಡ್‌ಡಿಎಮ್‌ಸಿ ಪತ್ರಿಕೆಯಲ್ಲಿ 'ಕನ್ನಡ ಸಾಹಿತ್ಯ ಚರಿತ್ರೆಯನ್ನು ಮೊದಲಬಾರಿಗೆ ಪ್ರಕಟಿಸಿದನು. ಅದರಲ್ಲಿ ದಾಸಸಾಹಿತ್ಯದ ಬಗ್ಗೆ ಮೆಚ್ಚುಗೆಯ ಮಾತುಗಳನ್ನು ಬರೆಯುತ್ತ 'ಅವುಗಳು ಪರ್ಶಿಯನ್ ಗಜಲುಗಳಂತೆ ಕೇಳುವುದಕ್ಕೆ ಮೋಹಕವಾಗಿವೆ' ಎಂದು ಅಭಿಪ್ರಾಯ ಪಟ್ಟಿದ್ದಾನೆ. ಉದಾಹರಣೆಯಾಗಿ, ಪುರಂದರದಾಸರ 'ಅಂತಕನ ದೂತರಿಗೆ ಕಿಂಚಿತ್ತು ದಯವಿಲ್ಲ' ಎಂಬ ಕೀರ್ತನೆಯನ್ನು ಜರ್ಮನ್ ಭಾಷೆಗೆ ಅನುವಾದಿಸಿ ಕೊಟ್ಟಿದ್ದಾನೆ. ಬಹುಶಃ ಕನ್ನಡ ಭಾಷೆಯ ಕೃತಿಯೊಂದು ಪಾಶ್ಚಾತ್ಯ ಭಾಷೆಗೆ ಅನುವಾದಗೊಂಡದ್ದು ಇದುವೆ ಮೊದಲು ಎಂದು ತೋರುತ್ತದೆ. ಏನಿದ್ದರೂ ದಾಸಸಾಹಿತ್ಯದ ಮಹತ್ತನ್ನು ಸಾರಿ ಹೇಳಿದ್ದರಲ್ಲಿ ಸಂಶಯವಿಲ್ಲ.

ಕನ್ನಡ ನಾಡಿನಾದ್ಯಂತ ಎಲ್ಲ ಸ್ತರಗಳಲ್ಲಿ, ವರ್ಗ, ವರ್ಣಗಳ ಭೇದವಿಲ್ಲದೆ ಜನರ ಬಾಯಲ್ಲಿ ಉಳಿದುಕೊಂಡು ಬಂದ ದಾಸಸಾಹಿತ್ಯವನ್ನು ಮೊಟ್ಟ ಮೊದಲಿಗೆ ಸಂಗ್ರಹಿಸಿ ಪ್ರಕಟಿಸಿದ ಶ್ರೇಯಸ್ಸು ಬಾಸೆಲ್ ಮಿಶನ್ನಿನ ರೆ. ಹರ್ಮನ್ ಮೊಗ್ಲಿಂಗನಿಗೆ (ಕ್ರಿ.ಶ. ೧೮೧೮–೧೮೮೧) ಸೇರುತ್ತದೆ. ಅವನು ೪೦೦ಕ್ಕಿಂತ ಅಧಿಕ ದಾಸರ ಪದಗನ್ನು ಸಂಗ್ರಹಿಸಿ ಅವುಗಳಲ್ಲಿಯ ೧೦೦ ಪದಗಳ ಸಂಗ್ರಹವನ್ನು 'ದಾಸರ ಪದಗಳು' ಎಂಬ ಹೆಸರಿನಿಂದ ಕ್ರಿ. ಶ. ೧೮೫೦ರಲ್ಲಿ ಕಲ್ಲಚ್ಚಿನಲ್ಲಿ ಮುದ್ರಿಸಿ ಪ್ರಕಟಿಸಿದನು. ಈ ದಿನಗಳಲ್ಲಿಯೇ ಪುರಂದರ–ಕನಕದಾಸರ ೨೪ ಕೀರ್ತನೆಗಳನ್ನು ಜರ್ಮನ್ ಭಾಷೆಗೆ ಅನುವಾದಿಸಿ ಪ್ರಕಟಿಸಿದನು.

ಅನಂತರ ಇಂದಿನ ವರೆಗೆ ದಾಸಸಾಹಿತ್ಯ ಗಂಗೆಯಲ್ಲಿ ಸಾಕಷ್ಟು ನೀರು ಹರಿದಿದೆ. ಬಹುತೇಕ ದಾಸರ ಕುರಿತು ಮಹಾಪ್ರಬಂಧಗಳು ಬಂದಿವೆ. ಕನ್ನಡ ಸಾಹಿತ್ಯ ಚರಿತ್ರೆಯಲ್ಲೂ ದಾಸ ಸಾಹಿತ್ಯ ಚರಿತ್ರೆ ಸೇರಿಕೊಂಡಿದೆ. ದಾಸ ಸಾಹಿತ್ಯಕ್ಕೆ ಪ್ರೇರಣೆ, ಪ್ರಭಾವ, ಬೆಳೆದು ಬಂದ ಬಗ್ಗೆ ಕನ್ನಡದಲ್ಲಿ ಇಂದಿಗೂ ಚರ್ಚೆ ನಡೆದು ಬಂದಿದೆ. ಇನ್ನೀಗ ಅದನ್ನು ಬೇರೆ ಭಾಷೆಗಳಿಗೆ ಪರಿಚಯಿಸುವ ಕೆಲಸ ಆಗಬೇಕಿದೆ. ಪ್ರಥಮ ಹಂತವಾಗಿ ಈ ನಾಲ್ಕು ಸಂಪುಟಗಳಲ್ಲಿಯ ಕನಿಷ್ಟ ೫೦೦ ಕೀರ್ತನೆಗಳನ್ನು ಆಯ್ದು ಇಂಗ್ಲೀಷಿಗೆ ಅನುವಾದಿಸಿ ಪ್ರಕಟಿಸಬೇಕೆಂಬ ಆಶಯ ನಮ್ಮದು. ಅದಕ್ಕೆ ನಾಡಿನ ಸಾಹಿತ್ಯ ಪ್ರಿಯರು ವಿಶೇಷವಾಗಿ ದಾಸಸಾಹಿತ್ಯ ಪ್ರಿಯರು ನಮ್ಮೊಂದಿಗೆ ಕೈ ಜೋಡಿಸುತ್ತಾರೆ ಎಂದು ಬಲವಾಗಿ ನಂಬಿದ್ದೇವೆ.

ಸಾಮಾಜಿಕ ಜಾಲತಾಣದಲ್ಲಿ ಪ್ರಾರಂಭವಾದ ಚರ್ಚೆಯೊಂದು ಹೀಗೆ ನಾಲ್ಕು ಸಂಪುಟಗಳಲ್ಲಿ ಪರಿವರ್ತಿತವಾದದ್ದು ಸಂತಸ ತಂದಿದೆ. ಭಾಗವಹಿಸಿದ ಎಲ್ಲರಿಗೂ, ಅನಂತರ ಶೀಘ್ರವಾಗಿ ಸಂಪುಟಗಳು ಹೊರಬರುವಂತೆ ಆರ್ಥಿಕ ಸಹಾಯ ನೀಡಿದ ಶ್ರೀಮತಿ ಸುಧಾ ನಾರಾಣಮೂರ್ತಿ ಅವರಿಗೂ ಕೃತಜ್ಞತೆಗಳು.

ನಮಸ್ಕಾರಗಳು

–ಕೃಷ್ಣ ಕೊಲ್ಹಾರಕುಲಕರ್ಣಿ
ಪ್ರಧಾನ ಸಂಪಾದಕರು

❖❖

ಮುನ್ನುಡಿ

ಹರಿದಾಸರ ಸಮಾಜಮುಖಿ ಕೀರ್ತನೆಗಳ ನಾಲ್ಕನೆಯ ಸಂಪುಟದಲ್ಲಿ ಒಟ್ಟು ೩೮ ಕೀರ್ತನಕಾರರ ೨೨೧ ಕೀರ್ತನೆಗಳಿವೆ. ಇದರ ಸಂಪಾದಕರು ಪ್ರೊ. ಜಿ.ಅಶ್ವತ್ಥನಾರಾಯಣ ಮತ್ತು ಡಾ. ನಾ.ಗೀತಾಚಾರ್ಯರು. ಈ ಕೀರ್ತನೆಗಳು ರಚನೆಯಾದದ್ದು ಕಿ.ಶ.೧೯೦೧ ರಿಂದ ೧೯೪೦ರ ಕಾಲಾವಧಿಯಲ್ಲಿ ಇವುಗಳನ್ನು ಸಂಪಾದಕರು ಸಮರ್ಥವಾಗಿ ಸಂಗ್ರಹಿಸಿದ್ದಾರೆ.

ಸಮಾಜವನ್ನು ಅಪ್ಪಿಕೊಂಡು ಅನುಭಾವದ ನೆರಳಿನಲ್ಲಿ ತಾತ್ವಿಕತೆಯನ್ನು ಅತ್ಯಂತ ಪರಿಣಾಮಕಾರಿಯಾಗಿ ಪ್ರಸಾರ ಮಾಡಿದವರು ಕನ್ನಡದ ವಚನಕಾರರು. ವಚನಕಾರರ ಮುಂದುವರಿಕೆಯಾಗಿ ಹರಿದಾಸರು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಒಂದು ವಿಶಿಷ್ಟಸ್ಥಾನವನ್ನು ಪಡೆದಿದ್ದಾರೆ. ಹೀಗಾಗಿ ಈ ಸಾಹಿತ್ಯ ಪ್ರಕಾರಗಳು ಜನಮಾನಸದಲ್ಲಿ ಶಾಶ್ವತವಾಗಿ ನೆಲೆನಿಂತಿವೆ. ಇವು ಜನಮುಖಿ ಚಳುವಳಿಗಳೆಂದೇ ಗುರುತಿಸಲಾಗುತ್ತದೆ.

ಹರಿದಾಸರು ಸಾಹಿತ್ಯದಲ್ಲಿ ಲೌಕಿಕ–ಅಲೌಕಿಕ, ಬಡವ–ಬಲ್ಲಿದ, ಮೇಲು–ಕೀಳು, ರಾಗ–ಅನುರಾಗ, ಅನುಭವ–ಅನುಭಾವ ಇಂತಹ ಹಲವಾರು ಸಂಗತಿಗಳನ್ನು ನೈಜವಾಗಿ ಎತ್ತಿ ತೋರಿಸಿ ಸಮಾಜದಲ್ಲಿರುವ ಬಿರುಕುಗಳನ್ನು ತುಂಬುವ, ಅಂಕು–ಡೊಂಕುಗಳನ್ನು ಹೋಗಲಾಡಿಸುವ, ನೈತಿಕತೆಯ ರಾಜಮಾರ್ಗವನ್ನು ತೋರಿಸಿದವರು.

ಪ್ರಸ್ತುತ ಸಂಪಾದನೆಯಲ್ಲಿ 'ಸದ್ಗುಣಗಳೇ ನನ್ನ ಬದುಕಿನಲ್ಲಿ ಹಾಸು ಹೊಕ್ಕಾಗಿಸಿ ನಿನ್ನನ್ನು ಒಲಿಯುವಂತೆ ಮಾಡು', 'ಈ ಭವ ಬಂಧನದಿಂದ ಮುಕ್ತಗೊಳಿಸು ಹರಿ' 'ಭಜನೆ ಮೂಲಕ ನಿನ್ನ ಪಾದಸೇವೆ ಮಾಡಲು ಅವಕಾಶ ಕೊಡು' 'ನಿನ್ನ ನಂಬಿದಡೆ ಕೈ ಬಿಡಬೇಡ' 'ನೀನು ಜಗದೊಡೆಯನಲ್ಲವೆ?' ಮೊದಲಾದ ಕೀರ್ತನೆಗಳಲ್ಲಿ ಭಕ್ತಿಯ ಅನನ್ಯತೆ ಹಾಸುಹೊಕ್ಕಾಗಿದೆ.

'ಹರಿಯ ನಾಮ ಸ್ಮರಣೆ ಮನದುಂಬಿ ಮಾಡಿದಾಗ ನನ್ನ ತಪ್ಪುಗಳನ್ನು ಮನ್ನಿಸು'. 'ಈ ಜನ್ಮದಲ್ಲಿ ಬಂದ ಮೇಲೆ ನನ್ನಲ್ಲಿರುವ ಅರಿಷಡ್ವರ್ಗಗಳನ್ನು ಅಳಿದು

ಸ್ವಾನುಭವದ ಜ್ಞಾನವನ್ನು ತುಂಬು'. 'ಹಾಡಿನ ಧಾಟಿಗೆ, ಗೀತೆಯ ನಾದಕ್ಕೆ ನಾನು ಮಣಿಯುವೆನು ಹರಿಯೇ'. ನೀನು ಕಲ್ಲಾಗದೆ ನಿನ್ನ ಕರುಣೆಯ ಕಂದನಾಗಿ ಇರುವಂತೆ ಮಾಡು ಎಂದು ಆಧುನಿಕ ಹರಿದಾಸರು ಕೀರ್ತನೆ ಮೂಲಕ ದೇವನಲ್ಲಿ ಅನನ್ಯ ಭಕ್ತಿಯಿಂದ ಪ್ರಾರ್ಥಿಸಿದ್ದಾರೆ.

'ಮಾಡುವ ಕೆಲಸದಿ ಶ್ರಮವಿರಬೇಕು। ಬೇಡುವುದನ್ನು ಕೈ ಬಿಡಬೇಕು। ಆಡಿದಂತೆ ನಡೆಯುತ್ತಿರಬೇಕು'। ಆ ನಾಲ್ಕು ದಿನ ಇರುವಾಗ ಚೆನ್ನಾಗಿ ಇರಬೇಕು। ನಾಲ್ಕಾರು ಜನರಿಗೆ ಉಪಕಾರ ಮಾಡಬೇಕು' 'ದುರ್ಜನರಿಂದ ದೂರ ಇರುವಂತೆ ಮಾಡು, ಸುಜನರ ಸಂಘವು ಒಲಿಯುವಂತೆ ಮಾಡು' ಎಂಬ ಕೀರ್ತನೆಗಳಲ್ಲಿ ಭಕ್ತಿಯಿಂದೊಡಗೂಡಿದ ಸಮರ್ಪಣಾಭಾವ ಅಡಗಿದೆ.

'ಮನುಜ ರೈಲು ಹಳಿಯ ಮೇಲೆ ಓಡುವುದು ತಪ್ಪಿದರೆ ಉರುಳುತ್ತದೆ. ನಿನ್ನ ಪುಟ್ಟ ಪಾದದ ದರ್ಶನ ತೋರಯ್ಯ'. ಹೀಗೆ ಅಡಿಗಡಿಗೆ ಹರಿಯ ಮೇಲೆ ಭಾರ ಹಾಕಿ, ಭಕ್ತಿಯ ಪರಮೋಕ್ಷಸ್ಥಾನವನ್ನು ಮುಟ್ಟಿಸುವಂತೆ ಮಾಡಿ ಕಾಪಾಡು ಹರಿಯೇ ಎಂದು ಕಿಂಕರನಾಗಿ ಬೇಡಿಕೊಳ್ಳುತ್ತಾರೆ.

ಹೀಗೆ ಹರಿದಾಸರು ಸಮಾಜದಲ್ಲಿರುವ ಅವ್ಯವಸ್ಥೆ, ಪ್ರತ್ಯೇಕತೆ, ಅಟ್ಟಹಾಸದಿಂದ ಮೆರೆಯುವಂತೆ, ಅಂಕೆಯಿಲ್ಲದ ಆಡಳಿತ, ಅಸಹನೀಯ ವರ್ತನೆ, ವಿಚ್ಛಿದ್ರಕಾರಿ ಸಂಘರ್ಷಗಳು, ಧನದಾಹ, ಭ್ರಷ್ಟತೆ, ನೈತಿಕ ಮೌಲ್ಯದ ಅಧಃಪತನ, ಕರುಣೆ ರಹಿತ ಸರ್ವಾಧಿಕಾರ, ಇಂತಹ ಹಲವಾರು ಸಂಗತಿಗಳನ್ನು ಎತ್ತಿ ತೋರಿಸಿ ಸಾಹಿತ್ಯದ ಮೂಲಕ ಜನಸಾಮಾನ್ಯರ ಮನಸ್ಸಿಗೆ ನಾಟುವಂತೆ ಆಡುಭಾಷೆಯಲ್ಲಿ ಕೀರ್ತನೆಗಳನ್ನು ಹಾಡಿ ಸ್ವಸ್ಥ ಸಮಾಜವನ್ನು ನಿರ್ಮಾಣ ಮಾಡುವ ಏಕೈಕ ಗುರಿ, ಹರಿದಾಸರದು. ಭಕ್ತಿಯ ಮೂಲಕ ಬೇಡಿಕೊಂಡು ಮುಕ್ತಿಯನ್ನು ಕಾಣುವ ಅಪೇಕ್ಷೆ ಅವರದಾಗಿತ್ತು. ದುಷ್ಟಶಕ್ತಿಗಳನ್ನು ಕೀರ್ತನೆ ಮೂಲಕ ಮರ್ಧನ ಮಾಡಿ, ಶಿಷ್ಟಶಕ್ತಿಗಳನ್ನು ನಿರ್ಮಾಣ ಮಾಡಿ ಸಮಾಜೋದ್ಧಾರ ಮಾಡಿದ ಕೀರ್ತಿ ಹರಿದಾಸರಿಗೆ ಸಲ್ಲುತ್ತದೆ.

೨೦ನೆಯ ಶತಮಾನದ ಸಂದರ್ಭದಲ್ಲಿ ಸರಳ ಭಾಷೆ, ಆದಿಪ್ರಾಸದ ನೆಲೆ, ವಸ್ತು ಮತ್ತು ವಿಷಯ ವೈವಿಧ್ಯದೊಂದಿಗೆ ಸಂಬಂಧವನ್ನು ಹೋಲಿಸಿ ಹರಿದಾಸರು ಸಂಗೀತಮಯವಾಗಿ, ಹೃದಯಂಗಮವಾಗಿ ಹಾಡಿದ್ದಾರೆ. ಶ್ರೀ ಹರಿಯನ್ನು ಕಾಣಲು ಅಡ್ಡ ಬಂದವರಿಗೆ ಚಾಟಿ ಏಟು ನೀಡುತ್ತ, ಮುಗ್ಧರನ್ನು, ಪಾರಮಾರ್ಥಿಕದ ಕಡೆಗೆ ಕರೆದುಕೊಂಡು ಹೋಗುವ ಭಾವನಾಲಹರಿ ಅಗಮ್ಯ ಅಗೋಚರವಾಗಿದೆ. 'ಅರಿತವರ ಬಳಿ ಕುಳಿತು ಅರಿಯುತಿರಬೇಕು', 'ಮುಸುರಿ ತೊಳೆಯಬೇಕು, ಮನಸಿನ ಕಸವ ದೂಡಬೇಕು' ಎನ್ನುವ ಆಧುನಿಕ ಹರಿದಾಸರ ನುಡಿಗಳು ನಮಗಿಂದು ದಾರಿದೀಪವಾಗಿವೆ.

ಆಧುನಿಕ ಹರಿದಾಸರ ಸಮಾಜಮುಖಿ ಕೀರ್ತನೆಗಳ ನಾಲ್ಕನೇ ಸಂಪುಟಕ್ಕೆ ಮುನ್ನುಡಿ ಬರೆಯಲು ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಅವರ ಹಿರಿತನಕ್ಕೆ ತಲೆಬಾಗಿ ಒಪ್ಪಿಕೊಂಡು ನಾಲ್ಕು ಮಾತುಗಳನ್ನು ಬರೆದಿದ್ದೇನೆ. ಅವರಿಗೆ ಗೌರವಪೂರ್ವಕ ವಂದನೆಗಳು. ಹಾಗೇ ಸಂಪಾದಕದ್ವಯರಿಗೆ ಅಭಿನಂದನೆಗಳು ಸಲ್ಲಬೇಕು.

–ಡಾ. ಎಂ.ಎಸ್.ಮದಭಾವಿ

❖❖

ಪ್ರಸ್ತಾವನೆ

ಸಂತರು, ಶರಣರು, ಹರಿದಾಸರ ಬದುಕು ಎಂದರೆ ಬೆಟ್ಟದ ಮೇಲೆ ಅರಳಿದ ಸುಂದರವಾದ ಹೂವು ಇದ್ದಂತೆ. ತನ್ನ ಪಾಡಿಗೆ ತಾನು ಬೆಳೆದು ಮೊಗ್ಗಾಗಿ, ಹೂವಾಗಿ ಅರಳಿ ಪರಿಸರದಲ್ಲೆಲ್ಲ ಪರಿಮಳವನ್ನು ಬೀರುವ ಪುಷ್ಪವಿದ್ದ ಹಾಗೆ. ಪರಿಮಳವನ್ನು ಆಘ್ರಾಣಿಸುವುದು, ಬಿಡುವುದು ಪರಿಸರದ ಜನರ ಮನಸ್ಸಿಗೆ ಬಿಟ್ಟದ್ದು. ಆದರೆ ಪರಿಮಳದ ಆಕರ್ಷಣೆಗೆ ಒಳಗಾದರೆ ಸಾಕು. ನಿರಂತರ ಆ ಪರಿಮಳದ ಪರಿಸರದಲ್ಲೇ ಬದುಕುವ ಆಶೆ ಸಹಜವಾಗಿ ಬರುತ್ತದೆ. ಅದನ್ನೇ ಬೇಕಿದ್ದರೆ ಮಾನವ ಬದುಕಿನ ಶಾಶ್ವತ ಮೌಲ್ಯಗಳು ಎನ್ನಬಹುದು. ಹರಿದಾಸರ ಕೀರ್ತನೆಗಳೆಂದರೆ ಬದುಕಿನ ಶಾಶ್ವತ ಮೌಲ್ಯಗಳಿದ್ದ ಹಾಗೆ..

ಆದರೆ, ಹರಿದಾಸ ಸಾಹಿತ್ಯವನ್ನು ಒಂದು ಮತಕ್ಕೆ ಅಂಟಿಸಿ, ಅದನ್ನು ಬ್ರಾಹ್ಮಣ ಸಾಹಿತ್ಯ, ಮಾಧ್ವ ಸಾಹಿತ್ಯ, ಮತೀಯ ಸಾಹಿತ್ಯ ಎಂದು ಹೇಳಲಾಗುತ್ತದೆ. ಕನ್ನಡ ಸಾಹಿತ್ಯ ಚರಿತ್ರಕಾರರಾದ ಡಾ. ರಂ. ಶ್ರೀ. ಮುಗಳಿ ಅವರು ಹೇಳುವಂತೆ, "........ ಸಾಹಿತ್ಯ ಗ್ರಂಥವನ್ನು ಮತ ಗ್ರಂಥವಾಗಿ ಮಾಡಿಕೊಳ್ಳುವ, ಮತಸಾಹಿತ್ಯವುಳ್ಳ ಗ್ರಂಥವನ್ನು ಕೇವಲ ಮತೀಯ ಗ್ರಂಥವಾಗಿ ಭಾವಿಸುವ ಪ್ರವೃತ್ತಿ ಈ ನಾಡಿನಲ್ಲಿ ಕಂಡು ಬಂದಿದೆ. ಆದರೂ ದಾಸ ಸಾಹಿತ್ಯದ ವಿಷಯದಲ್ಲಿ ಈ ಮಾತು ಸಂಪೂರ್ಣವಾಗಿ ಅನ್ವಯಿಸುವುದಿಲ್ಲ. ಮತವಿರಲಿ ಬಿಡಲಿ ಅದನ್ನು ಮೀರಿದ ತತ್ವ ಮತ್ತು ಸಾಹಿತ್ಯವುಳ್ಳ ಭಾಗ ಎಲ್ಲ ಕನ್ನಡ ಜನರ ಅಂತಃಕರಣವನ್ನು ಹೊಕ್ಕು ನಿಂತಿದೆ"

ಕರ್ನಾಟಕ ಸಾಹಿತ್ಯ ಚರಿತ್ರೆಯಲ್ಲಿ ಸಾಮಾಜಿಕ ಆಂದೋಲನದ ದೃಷ್ಟಿಯಿಂದ ಹರಿದಾಸರು ಮತ್ತು ಅವರ ಸಾಹಿತ್ಯ ಪ್ರಮುಖವಾಗುತ್ತದೆ. ಅದುವೆ ಅದರ ವೈಶಿಷ್ಟ್ಯವೂ ಹೌದು. ಅದಕ್ಕೆ ಬಹು ಮುಖ್ಯ ಕಾರಣ ಸಮಾಜ ಮತ್ತು ಅದು ನಂಬಿದ ಧರ್ಮದ ಜೀವನ ಮತ್ತು ಅದರ ಸಾಹಿತ್ಯ ರಚನೆ ಸಾಗಿದ್ದೇ ಆಗಿದೆ. ಅವರ ನೆಲೆ ಆ ಮೊದಲಿನವರಂತೆ ಸಾರಾ ಸಗಟಾಗಿ ವೈದಿಕ ವಿರೋಧಿ ನೆಲೆಯಾಗಿರಲಿಲ್ಲ. ಬಹು ಸಂಖ್ಯಾತರು ನಂಬಿದ, ಶ್ರದ್ಧೆ ಇಟ್ಟ ಧರ್ಮದೊಂದಿಗೆ ಸಾಗುತ್ತ ಅದರಲ್ಲಿ ಕಂಡು ಬರುವ ಕುಂದು ಕೊರತೆಗಳನ್ನು, ನ್ಯೂನ್ಯತೆಗಳನ್ನು, ಶ್ರದ್ಧೆಗೆ ಪೆಟ್ಟು ಬೀಳದಂತೆ ಎತ್ತಿ ತೋರಿಸಿ, ಅವರ ಮನ ಒಪ್ಪುವಂತೆ ಮಾಡಿದರು.

ಹಿರಿಯ ವಿದ್ವಾಂಸರಾಗಿದ್ದ ದಿ. ಎಂ.ಎಂ.ಕಲಬುರ್ಗಿ ಅವರು ಹೇಳುವಂತೆ, "ಮಾರ್ಗ ಸಾಹಿತ್ಯವನ್ನು ಹಂಪಿಯ ಹರಿಹರಾದಿಗಳು ದೇಶಿಗೆ ಹೊರಳಿಸಿದರೆ, ಅದನ್ನು ಪುರಂದರಾದಿಗಳು ಸಂಗೀತ ಪ್ರಧಾನವಾಗಿಸಿದರು. ಈಗ ವಾಚನ ಯೋಗ್ಯವಾಗಿದ್ದ ಮಾರ್ಗ ಸಾಹಿತ್ಯಕ್ಕೆ ಬದಲು ದೇಶೀ ಸಾಹಿತ್ಯ ಗಮಕಯೋಗ್ಯವಾಗಿ ಪುರಂದರಾದಿಗಳಿಂದ ಗಾನಯೋಗ್ಯವಾಗಿ ಹರಿಯಿತು. ಅರಮನೆಯಿಂದ ಮನೆಗೆ, ಮನೆಯಿಂದ ಮನೆ ಮನೆಗೆ ಮುನ್ನಡೆಯಿತು" ಇಲ್ಲಿ ಮನೆ ಮನೆಗೆ ಮುನ್ನಡೆಯಿತು ಎಂದು ಹೇಳುವಾಗ ಅದು ಕೇವಲ ಬ್ರಾಹ್ಮಣರ ಮನೆಗೆ ಮುಟ್ಟಲಿಲ್ಲ, ಎಲ್ಲರ ಮನೆಗೂ ಮುನ್ನಡೆಯಿತು ಎಂಬುದನ್ನು ಒಪ್ಪಿದಂತಾಯಿತು.

ಇದು ಹರಿದಾಸ ಸಾಹಿತ್ಯದ ವೈಶಿಷ್ಟ್ಯ. ಅದು ಬರೀ ಗಾನಯೋಗ್ಯವಾಗಿ ಹರಿದದ್ದರಿಂದ ಮನೆ ಮನೆಗೆ ಮುಟ್ಟಲಿಲ್ಲ. ಅವರ ಸಾಹಿತ್ಯ ಮನೆ ಮನೆಗಳಲ್ಲಿದ್ದ ಮನ ಮನಗಳಿಗೆ ತಟ್ಟಿದ ಸಾಹಿತ್ಯವಾದದ್ದರಿಂದ ಎಲ್ಲೆಡೆ ಹರಿಯಿತು. ಬಹುತೇಕ ಸಾಹಿತ್ಯ ಅರಮನೆ ಗುರುಮನೆ ಮತ್ತು ಪಂಡಿತರ ಮನಮನೆಗಳಿಗಷ್ಟೇ ಸೀಮಿತವಾಗಿರುತ್ತದೆ. ಆದರೆ ಹರಿದಾಸ ಸಾಹಿತ್ಯವು ಈ ಮೂರೂ ಮನೆಗಳೊಂದಿಗೆ ಪಾಮರರ ಮನೆಯನ್ನೂ ಮುಟ್ಟಿತು.

ಎರಡು ಸಾವಿರ ವರುಷಗಳ ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಜೈನಯುಗ, ಶೈವಯುಗ ಮತ್ತು ಬ್ರಾಹ್ಮಣಯುಗ ಎಂದು ಮೂರು ಭಾಗಗಳನ್ನು ಮಾಡಲಾಗಿದೆ. ಅನಂತರದ ೨೦ನೆಯ ಶತಮಾನದ ಸಾಹಿತ್ಯ, ನವೋದಯ, ನವ್ಯ, ದಲಿತ ಇತ್ಯಾದಿಗಳಿಂದ ಗುರುತಿಸಲಾಗಿದೆ. ಈ ಶೀರ್ಷಿಕೆಗಳೇ ಆಯಾ ಸಾಹಿತ್ಯವನ್ನು ಪರಿಚಯ ಮಾಡಿಕೊಡುತ್ತವೆ. ಆದರೆ ಹರಿದಾಸ ಸಾಹಿತ್ಯ ಈ ಎಲ್ಲ ಶೀರ್ಷಿಕೆಗಳಲ್ಲೂ ಸ್ವೀಕಾರವಾಗಿದೆ.

ದಲಿತರಿಂದ ಹಿಡಿದು ಸಮಾಜದ ಅತ್ಯಂತ ಉಚ್ಚ ವರ್ಗದವರೆಂದು ಹೇಳುವ ಬ್ರಾಹ್ಮಣ ವರ್ಗದಲ್ಲೂ ಹರಿದಾಸ ಸಾಹಿತ್ಯ ಸ್ವೀಕಾರವಾಗಿದೆ. ದ್ಯಾಮವ್ವ, ದುರ್ಗವ್ವರ ಗುಡಿಗಳಲ್ಲಿ, ಲಿಂಗಾಯತರ ಭಜನೆಗಳಲ್ಲಿ ಕೂಡ ದಾಸರ ಪದಗಳು ಅಂದಿನಿಂದಲೂ ಪ್ರವೇಶ ಪಡೆದಿವೆ. ಹೀಗೆ ಕನ್ನಡದ ಯಾವ ಸಾಹಿತ್ಯವೂ ಪ್ರವೇಶ ಪಡೆದಂತೆ ಕಾಣುವುದಿಲ್ಲ.

ಅವರವರ ಧರ್ಮದ ಅಸ್ತಿತ್ವವನ್ನು ಉಳಿಸಿ ಬೆಳೆಸಿ ಮುಂದುವರಿಯುವಂತೆ ಮಾಡಿದ ಬಹುಪಾಲು ಶ್ರೇಯಸ್ಸು ಹರಿದಾಸ ಸಾಹಿತ್ಯದ್ದಾದರೆ, ಅದರೊಂದಿಗೆ ಮೋಕ್ಷ ಅಥವಾ ಮುಕ್ತಿ ಸಾಧನೆಗೆ ಸ್ತ್ರೀಯರಿಗೂ ಶೂದ್ರರಿಗೂ ಒದಗಿಸಿ ಕೊಡುವಲ್ಲಿ ಮುಂದಾದದ್ದು ಅದರ ಇನ್ನೊಂದು ವೈಶಿಷ್ಟ್ಯವಾಗಿದೆ. (ಮೋಕ್ಷಕ್ಕೆ ಅಥವಾ ಮುಕ್ತಿಗೆ ಅರ್ಹತೆ ಇಲ್ಲಿ ಅಮುಖ್ಯ, ಸಾಧನೆ ಮುಖ್ಯ)

ಅವರವರ ಧರ್ಮಗಳ ಅಸ್ತಿತ್ವವನ್ನು ಉಳಿಸಿ ಬೆಳೆಸಿದರೆಂದು ಹೇಳಿದಾಕ್ಷಣ ಆ ಧರ್ಮಗಳಲ್ಲಿರುವ ಹಿಂಸಾತ್ಮಕ ಆಚರಣೆಗಳನ್ನು, ಬಲಿ ಪದ್ಧತಿಗಳನ್ನು, ಡಂಭಾಚಾರಗಳನ್ನು ಅವರು ಪುರಸ್ಕರಿಸಲಿಲ್ಲ. ಅವುಗಳನ್ನು ತೀಕ್ಷ್ಣವಾಗಿ ಖಂಡಿಸುತ್ತ, ಸರಳವಾದ ವಿಧಾನಗಳ ಮೂಲಕ ಜೀವನವನ್ನು ಸಾಗಿಸುತ್ತ ಸಾಧನೆಯನ್ನು ಮಾಡಲು ಸಾಧ್ಯ ಎಂಬುದನ್ನು ತೋರಿಸಿ ಕೊಟ್ಟರು.

ದೇವರ ಸಾನ್ನಿಧ್ಯವನ್ನು ಪಡೆಯಲು ಜನಸಾಮಾನ್ಯರಿಗಿದ್ದ ಎಲ್ಲ ತೊಡಕುಗಳನ್ನು ನಿವಾರಣೆ ಮಾಡಿದ್ದು ದಾಸ ಸಾಹಿತ್ಯದ ಬಹು ಮುಖ್ಯ ಲಕ್ಷಣವಾಗಿದೆ. ಕಳೆದ ಐದು ಶತಮಾನಗಳಿಂದ ಇಂದಿನವರೆಗೂ ನಮ್ಮ ನಾಡಿನ ಜನಜೀವನವನ್ನು ಉತ್ತಮಗೊಳಿಸಲು ದಾಸ ಸಾಹಿತ್ಯವು ಒಂದು ಮಹತ್ವಪೂರ್ಣವಾದ ಸೇವೆಯನ್ನು ಸಲ್ಲಿಸುತ್ತಿದೆ. ಯವುದೇ ಸಾಹಿತ್ಯದ ಉದ್ದೇಶವೂ ಅದುವೆ ಆಗಿರಬೇಕಷ್ಟೆ.

ದಾಸ ಸಾಹಿತ್ಯವು ಜನರ ಮಧ್ಯ ಜನರಿಂದ, ಜನರ ಮುಂದೆಯೆ ಹುಟ್ಟಿದ ಸಾಹಿತ್ಯ. ಯಾವುದೇ ಒಂದು ಕೇಂದ್ರೀಕೃತ ವ್ಯವಸ್ಥೆಯಲ್ಲಿ ಹುಟ್ಟಿದ್ದಲ್ಲ. ಮನೆ ಮನೆ, ಓಣಿ ಓಣಿಗಳಲ್ಲಿ ತಿರುಗಾಡುತ್ತ, ಹಾಡುತ್ತ, ಕುಣಿಯುತ್ತ ಸಾಗುವಾಗ ಕಂಡ ಲೋಕಾನುಭವಗಳು. ಭಾವ ತನ್ಮಯತೆಯಲ್ಲಿ ಮೂಡಿ ಬಂದ ಈ ಕೃತಿಗಳು ಕವಿತೆಯ ಎಲ್ಲ ಕಾವ್ಯಾಂಶಗಳಿಂದ ತುಂಬಿ ನಿಂತವು. ಸಾಹಿತ್ಯ ಮತ್ತು ಸಂಗೀತದ ಸಾಮರಸ್ಯ ಪ್ರತೀಕವಾದ ಈ ರಚನೆಗಳು ಶುದ್ಧ ಭಾವಗೀತೆಗಳಾದುವು.

ದಾಸರು ಜನತಾ ಶಿಕ್ಷಣದಲ್ಲಿ ನಾನಾ ಪ್ರಕಾರಗಳನ್ನು ಪ್ರಯೋಗಿಸಿದ್ದಾರೆ. ಅದು ಉತ್ತಮ ಸಾಹಿತ್ಯ ಸಂಗೀತಗಳ ಸಂಗಮವಾಗಿದೆ. ಅದು ಜನರನ್ನು ಸುಸಂಸ್ಕೃತರನ್ನಾಗಿ ಮಾಡುವ ಶಿಕ್ಷಣವಾಗಿದೆ. ಜನರ ಬುದ್ಧಿ ಮತ್ತು ಹೃದಯದ ವಿಕಾಸಕ್ಕೆ ಏಕಕಾಲದಲ್ಲಿ ಅವುಗಳು ಉತ್ತೇಜನ ಕೊಡುತ್ತವೆ.

ಜ್ಞಾನ, ಭಕ್ತಿಗಳ ಜೊತೆಗೆ ದಾಸರು ವೈರಾಗ್ಯವನ್ನು ಜನರಿಗೆ ಬೋಧಿಸಿದರು. ದಾಸರು ಸಂಸಾರಿಗಳಾಗಿದ್ದರೂ ಬಂದದ್ದರಲ್ಲಿ ತೃಪ್ತಿ ಪಡುತ್ತಿದ್ದರು. ಸಂಗ್ರಹ ಬುದ್ಧಿ ಇರಲಿಲ್ಲ. ಭಗವಂತನ ನಾಮ ಸಂಕೀರ್ತನೆಯನ್ನು ಮಾಡುತ್ತ ತಮ್ಮ ಜೀವನವನ್ನು ಸಾಗಿಸುತ್ತಿದ್ದ ರೀತಿ ಎಲ್ಲ ಸಂಸಾರಿಗಳಿಗೂ ಆದರ್ಶಪ್ರಾಯವಾಗಿತ್ತು. ವೃತ್ತಿಯಲ್ಲಿ ಎಂದೂ ದೀನರಾಗುತ್ತಿರಲಿಲ್ಲ. ಪ್ರತಿಯಾಗಿ ಹೆಮ್ಮೆಯನ್ನು ತಾಳಿ ನಿಶ್ಚಿಂತೆಯಿಂದ ಇದ್ದರು.

ಜ್ಞಾನ, ಭಕ್ತಿ, ವೈರಾಗ್ಯಗಳು ಬೆಳೆಯಬೇಕಾದರೆ ವ್ಯಕ್ತಿಯು ನೀತಿ ನಿಯಮಗಳನ್ನು ಪಾಲಿಸಬೇಕು. ಶೀಲದಿಂದ ನಡೆಯಬೇಕು. ದಾಸರು ತಮ್ಮ ಕೀರ್ತನೆಗಳಲ್ಲಿ ಇದಕ್ಕೆ ಅಧಿಕ ಒತ್ತು ನೀಡಿದ್ದಾರೆ. ಜನರನ್ನು ಎಚ್ಚರಿಸಿದ್ದಾರೆ. ದೋಷಗಳನ್ನು ಟೀಕಿಸಿದ್ದಾರೆ. ಡಾಂಭಿಕತನ, ಕಪಟ, ಮೋಸ, ಜಾತಿಯ ಅಹಂಕಾರ ಮೊದಲಾದ ಜನರ ನಡತೆಯನ್ನು ಖಂಡಿಸಿದ್ದಾರೆ. ಇದು ಯಾವುದೋ ಒಂದು ಮತ ಅಥವಾ ವ್ಯಕ್ತಿಯನ್ನು

ಉದ್ದೇಶಿಸಿ ಹೇಳಿದ ಮಾತುಗಳಲ್ಲ. ಕೇಳಿದವರು ಯಾರೇ ಆಗಿರಲಿ ತಮ್ಮನ್ನು ತಾವೆ ಮುಟ್ಟಿ ನೋಡಿಕೊಂಡು ತಿದ್ದಿಕೊಳ್ಳಬೇಕು.

ಸಮಾಜದಲ್ಲಿ ಅಂತ್ಯಜರು ಶತಶತಮಾನಗಳಿಂದ ತಿರಸ್ಕಾರಕ್ಕೆ ಗುರಿಯಾಗಿದ್ದರು. ಉಳಿದ ಜಾತಿಯ ಜನರಲ್ಲೂ ಉಚ್ಚ ನೀಚ ಎಂಬ ಭಾವನೆಗಳು ಬಹಳ ಹಿಂದಿನಕಾಲದಿಂದ ಬಂದವುಗಳಾಗಿವೆ. ಆದರೆ ಎಲ್ಲರ ಅಂತರ್ಯಾಮಿಯಾಗಿ ಭಗವಂತನಿರುವನೆಂಬ ಭಾವವನ್ನು ತಾಳಿದವರು ದಾಸರು. ಅವರು ತಮ್ಮ ಜೀವನದುದ್ದಕ್ಕೂ ಹಾಗೆ ಬಾಳಿದವರು.. ದಾಸಕೂಟದ ನೋಟ ವಿಶಾಲವಾದುದು. ದಾಸ ಸಾಹಿತ್ಯದ ಪ್ರಾರಂಭ ಕಾಲದ ಶ್ರೀ ವ್ಯಾಸರಾಯರು, ಕುರುಬರಾದ ಕನಕದಾಸರ ಮೇಲೆ ಪ್ರೀತಿ ಮಾಡಿದುದನ್ನು ಎಲ್ಲರೂ ಬಲ್ಲರು. ಹಂಪಿಯಲ್ಲಿದ್ದ ರಾಮಾವಧೂತರಿಂದ ಮುಸ್ಲಿಮ ಧರ್ಮದ, ಪಿಂಜಾರ ಶೇಖ ಬಡೇಸಾಬ (ಕ್ರಿ. ಶ. ೧೮೮೨–೧೯೪೦) ರಾಮದಾಸರಾದರು. 'ಶ್ರೀರಾಮ' ಅಂಕಿತದಲ್ಲಿ ಅವರ ೮೦೦ಕ್ಕಿಂತ ಅಧಿಕ ಕೀರ್ತನೆಗಳು ಪ್ರಕಟವಾಗಿವೆ.

ರಾಯಚೂರು ಹತ್ತಿರದ ಚಂಡರಕಿಯ ಬೇಡ ದೊರೆಗಳು ಗೋಪಾಲದಾಸರ ಪ್ರಭಾವದಿಂದ ಭಾಗವತರಾದರು. ಕೋಸಗಿಯ ಗುರುಜಗನ್ನಾಥದಾಸರ ಪ್ರಭಾವದಿಂದ ಹಲವಾರು ನೇಕಾರರು ಹರಿದಾಸರಾದರು. ಅಸ್ಕಿಹಾಳ ಗೋವಿಂದದಾಸರಿಂದ ಪ್ರಭಾವಿತರಾಗಿ ಅನೇಕ ಕ್ಷೌರಿಕರು ಹರಿದಾಸರಾದರು. ಮಾನವಿಯ ಶಾಮಸುಂದರ ವಿಠಲದಾಸರು ಹರಿಜನನಾದ ಮೂರ್ತೆಪ್ಪನನ್ನು ತಮ್ಮ ಆಪ್ತ ವರ್ಗಕ್ಕೆ ಸೇರಿಸಿಕೊಂಡು ಹರಿದಾಸನನ್ನಾಗಿ ಮಾಡಿದ್ದರು. ಚಂಡರಕಿ ರಾಘವೇಂದ್ರದಾಸರ ಪ್ರಭಾವದಿಂದ ಹೂಗಾರ ಭೀಮಪ್ಪ, ಭೀಮದಾಸರೆನೆಸಿ ಅಥಣಿಯಲ್ಲಿ ಅಭಿನವ ಮಂತ್ರಾಲಯವನ್ನೆ ಸೃಷ್ಟಿಸಿದರು. ಹಲವಾರು ಕೀರ್ತನೆಗಳನ್ನೂ ರಚಿಸಿದರು. ಇವುಗಳು ಕೆಲವು ಉದಾಹರಣೆಗಳು.

ಹರಿದಾಸರು ಸಂಸಾರವನ್ನು ತೊರೆದ ಸಂನ್ಯಾಸಿಗಳಲ್ಲ. ಬದುಕಿನುದ್ದಕ್ಕೂ ಹೆಂಡತಿ ಮಕ್ಕಳೊಡನೆ, ನೆರೆಹೊರೆಯವರೊಂದಿಗೆ, ಊರ ಮಂದಿಯ ನಡುವೆ ಬಾಳಿದವರು. ಸಾಮಾನ್ಯರಲ್ಲಿ ಸಾಮಾನ್ಯರಾಗಿ, ಭಕ್ತರಲ್ಲಿ ಭಕ್ತರಾಗಿ, ಭಾವುಕರಲ್ಲಿ ಭಾವುಕರಾಗಿ ಇದ್ದವರು. ಭಗವಂತ ಎಂದಾಕ್ಷಣ ಮೈಮೇಲೆ ದೇವರು ಬಂದ ಹಾಗೆ, ಎಂದೂ ಹುಚ್ಚರಂತೆ ಪಿಶಾಚಿಗಳಂತೆ ಕುಣಿದವರಲ್ಲ. ಕೈಯಿಂದ, ಬಾಯಿಯಿಂದ ಬೂದಿಯನ್ನೋ, ಇನ್ನೇನನ್ನೋ ಕೊಡುತ್ತಿರಲೂ ಇರಲಿಲ್ಲ. ನೆರೆಹೊರೆಯವರ ಪರಿಸ್ಥಿತಿಯನ್ನು ಅರಿತವರಾಗಿದ್ದರು. ಊರವರ ವ್ಯವಹಾರಗಳನ್ನು ಬಲ್ಲವರಾಗಿದ್ದರು. ಆಳುವವರ ಸರಿ ತಪ್ಪುಗಳನ್ನು ತಿಳಿದವರಾಗಿದ್ದರು. ಸಮಸ್ಯೆಗಳು ಎದುರಾದಾಗ ಅವುಗಳಗೆ ತಮ್ಮ ಸೀಮಿತ ಪರಿಧಿಯಲ್ಲಿ ಪರಿಹಾರವನ್ನು ಸೂಚಿಸುವಲ್ಲಿ ಸಮರ್ಥರಾಗಿದ್ದರು.

ಜಗತ್ತು ಮಾಯೆಯೆಂದು ಜರಿದು, ಸಂಸಾರದಿಂದ ಏನೇನೂ ಪ್ರಯೋಜನವಿಲ್ಲ ಎಂದು ಹೇಳುತ್ತ ಅಡವಿಯನ್ನು ಸೇರುವ ಹೇಡಿ ವೈರಾಗ್ಯವೂ ಅವರದಾಗಿರಲಿಲ್ಲ. ಇಲ್ಲಿಯೇ ಇರಬೇಕು, ಇದ್ದು ಜಗತ್ತನ್ನು ಜಯಿಸಬೇಕು ಎಂದು ಹೇಳುವ ಗಟ್ಟಿ ಎದೆ ಅವರದಾಗಿತ್ತು. ವ್ಯಕ್ತಿಯ ಶೀಲ ಬೆಳೆಯಬೇಕಾದರೆ ಮೊದಲು ಅವನು ತನ್ನನ್ನು ತಾನು ನೋಡಿಕೊಳ್ಳಬೇಕು, ಪರ ನಿಂದೆಯನ್ನು ಮಾಡಬಾರದು ಎಂದು ಎಲ್ಲ ದಾಸರೂ ಇದನ್ನು ಮನಮುಟ್ಟುವ ರೀತಿಯಲ್ಲಿ ಹೇಳಿದ್ದಾರೆ.

ದಾಸರು ಕನ್ನಡ ಸಾಹಿತ್ಯಕ್ಕೆ ನೀಡಿದ ಕೊಡುಗೆ ಗುಣದಲ್ಲಿಯೂ, ಪ್ರಮಾಣದಲ್ಲಿಯೂ ಗಣನೀಯವಾಗಿದೆ. ಅದರಿಂದಾಗಿ ದಾಸಸಾಹಿತ್ಯ, ವಿಶ್ವಸಾಹಿತ್ಯಕ್ಕೆ ಕನ್ನಡ ನೀಡಿದ ಕೊಡುಗೆಯೆಂದು ಗುರುತಿಸಲಾಗಿದೆ. ಭಾಷೆಯ ಸರಳತೆಯ ದೃಷ್ಟಿಯಿಂದ, ಸಾಮಾನ್ಯ ಜನರನ್ನುದ್ದೇಶಿಸಿ ರಚಿತವಾದ ಕೀರ್ತನೆಗಳು ಬಹು ಬೇಗ ಜನರಿಂದ ಆಕರ್ಷಿತಗೊಂಡುವು. ಇವುಗಳನ್ನು ರಚಿಸಿದವರು ಮೇಧಾವಿಗಳು, ಸುಸಂಸ್ಕೃತರು, ಅನುಭಾವಿಗಳಾಗಿದ್ದರು. ಅವರಲ್ಲಿಯ ಕೆಲವರು ಸಂಸ್ಕೃತ ಕನ್ನಡ ಭಾಷೆಗಳಲ್ಲಿ ವಿದ್ವಾಂಸರಾಗಿದ್ದರು. ಶಾಸ್ತ್ರ ಪಾಂಡಿತ್ಯವನ್ನು ಪಡೆದವರಾಗಿದ್ದರು. ಆದ್ದರಿಂದ ಅವರ ಕೃತಿಗಳು ಕೇವಲ ಮನೋರಂಜನೆಯನ್ನು ಕೊಡುವಂಥವಾಗಲಿಲ್ಲ. ವಿಚಾರ ಪ್ರಚೋದಕವಾದುವು. ಚಿತ್ತ ಶುದ್ಧಿಯನ್ನು ಮಾಡುವಂಥವಾದುವು. ಅಂತರಂಗವನ್ನು ಪ್ರವೇಶಿಸಿ ರಸೋತ್ಪಾದನೆಯನ್ನು ಮಾಡುವ ಶಕ್ತಿಯುಳ್ಳವುಗಳು. ಆದ್ದರಿಂದ ಈ ಕೀರ್ತನೆಗಳಲ್ಲಿ ಉತ್ತಮ ಕಾವ್ಯಗಳಲ್ಲಿರುವ ಲಕ್ಷಣಗಳನ್ನೂ ಗುರುತಿಸಲಾಗಿದೆ. ಹಾಗೆ ಹೇಳಿತೆಂದು ಎಲ್ಲ ದಾಸರ ಕೀರ್ತನೆಗಳು ಉತ್ತಮ ಕಾವ್ಯಮಟ್ಟದ್ದು ಎಂದು ಹೇಳಲಾಗದು. ಅಲ್ಲಲ್ಲಿ ಜೊಳ್ಳೂ ಇದೆ. ಗಟ್ಟಿ ಅಧಿಕ. ಈವರೆಗೆ ೧೩೦ ದಾಸರ ೧೬೫೦೦ ಕೀರ್ತನೆಗಳ ಸಂಗ್ರಹ ೫೦ ಸಂಪುಟಗಳಲ್ಲಿ ಕರ್ನಾಟಕ ಸರಕಾರದಿಂದ ಪ್ರಕಟವಾಗಿವೆ. ಅದರಷ್ಟೇ ಸಂಖ್ಯೆಯ ಕೀರ್ತನೆಗಳು ಪ್ರಕಟನೆಗೆ ಕಾದಿವೆ ಎಂಬುದನ್ನು ಗಮನಿಸಿದರೆ ದಾಸ ಸಾಹಿತ್ಯದ ಅಗಾಧತೆಯ ಅರಿವಾಗುತ್ತದೆ.

ಇಂದಿಗೂ ದಾಸ ಸಾಹಿತ್ಯ ಹರಿಗಡೆದಿಲ್ಲ. ಹಿಂದಿನವರಂತೆ ತಾಳ ತಂಬೂರಿ ಹಿಡಿದು ಊರೂರು ತಿರುಗುವುದಿಲ್ಲ ನಿಜ. ತಮ್ಮ ತಮ್ಮ ವೃತ್ತಿಯಲ್ಲಿ ಇದ್ದುಕೊಂಡೆ ದಾಸ ದೀಕ್ಷೆಯನ್ನು ಪಡೆದು ಭಗವಂತನ ನಾಮಸ್ಮರಣೆ, ಅವನ ಮಹಾತ್ಮೆಗಳ ಜೊತೆಗೆ ಆಧುನಿಕ ವಿಚಾರಗಳನ್ನು ಭಗವಂತನಿಗೆ ನಿವೇದಿಸಿಕೊಂಡಿದ್ದಾರೆ.

ದಾಸರು ಕರ್ನಾಟಕದಲ್ಲಿ ಕಳೆದ ಐದು ಶತಮಾನಗಳಿಂದ ಇಂದಿನವರೆಗು ನಮ್ಮ ಜನರ ಜೀವನವನ್ನು ಉತ್ತಮಗೊಳಿಸಲು ಮಹತ್ವಪೂರ್ಣವಾದ ಸೇವೆಯನ್ನು ಸಲ್ಲಿಸಿ ಕೃತಕೃತ್ಯರಾಗಿದ್ದಾರೆ. ಜನಾರ್ಧನನ ಸೇವೆಯನ್ನು ಜನತೆಯ ಸೇವೆಯ ಮೂಲಕ ಸಲ್ಲಿಸಿದ್ದಾರೆ. ಧರ್ಮ ಜಾಗೃತಿಯನ್ನು ಮಾಡಿದ್ದಾರೆ. ಜನರಲ್ಲಿ

ಭಗವದ್ಭಕ್ತಿಯನ್ನು ಮೂಡಿಸುವಲ್ಲಿ ಪ್ರಯತ್ನಿಸಿದ್ದಾರೆ. ತನ್ಮೂಲಕ ಜನರಲ್ಲಿ ನೀತಿ, ನ್ಯಾಯ, ಶೀಲ ಮೊದಲಾದ ಗುಣಗಳ ಬಗ್ಗೆ ಅರಿವನ್ನು ಮೂಡಿಸಿದ್ದಾರೆ. ಕನ್ನಡ ಸಾಹಿತ್ಯಕ್ಕೆ ಅಮೂಲ್ಯ ಕೊಡುಗೆಯನ್ನು ನೀಡಿದ್ದಾರೆ. ಪಾಮರರಲ್ಲಿ ಸಾಹಿತ್ಯ ಸಂಗೀತಗಳ ಅಭಿರುಚಿಯನ್ನು ಬೆಳೆಸಿದ್ದಾರೆ. ಜಾತಿ, ಮತ, ಕುಲಗಳ ಭೇದ ಭಾವವಿಲ್ಲದೆ ಜನರ ಮಧ್ಯ ಓಡಾಡಿ ಎಲ್ಲರನ್ನೂ ಸುಸಂಸ್ಕೃತರನ್ನಾಗಿ ಮಾಡುವ ಉದಾತ್ತ ಪ್ರಯತ್ನವನ್ನು ನಿಸ್ವಾರ್ಥತೆಯಿಂದ ಮಾಡಿದ್ದಾರೆ. ಭಾರತೀಯ ಸಂಸ್ಕೃತಿಯ ರಕ್ಷಣೆ ಪೋಷಣೆಗಳಿಗೆ ಅಮೂಲ್ಯ ಕೊಡುಗೆಯನ್ನಿತ್ತಿದ್ದಾರೆ.

ಸಂಸ್ಕೃತದಿಂದಲೇ ಮುಕ್ತಿ, ಶಾಸ್ತ್ರಪಾಂಡಿತ್ಯವಿಲ್ಲದವರು ಪಾಮರರು, ಪಾಪಿಗಳು ಎನ್ನುವ ಮನೋಧರ್ಮ ಪ್ರಚಲಿತದಲ್ಲಿದ್ದಾಗ ದಾಸರು ಕನ್ನಡದಲ್ಲಿ ವೇದಾಂತದ ಗಹನ ತತ್ವಗಳನ್ನು ಹೇಳಿದರು. ಕನ್ನಡದಲ್ಲಿಯೇ ಜನಸಾಮಾನ್ಯರು ಮುಕ್ತಿಗೆ ಪೂರ್ವವಾದ ಜ್ಞಾನವನ್ನು ಪಡೆಯಲು ದಾರಿ ಮಾಡಿ ಕೊಟ್ಟರು. ವಿದ್ಯುನ್ಮಾನದ ಆವಿಷ್ಕಾರದ ನಂತರ ಕಳೆದ ಅರೆಂಟು ದಶಕಗಳಲ್ಲಿ ದಾಸರ ಕೀರ್ತನೆಗಳ ಧ್ವನಿ ಸುರುಳಿ, ಸೀಡಿಗಳ ಮೂಲಕ ಜನಪ್ರಿಯವಾಗಿ ವಿಶ್ವದಾದ್ಯಂತ ಜನ ಮನ್ನಣೆ ಗಳಿಸಿವೆ.

ದಾಸರು ಮಧ್ವರ ತತ್ವಗಳಲ್ಲಿ ಅಚಲವಾದ ನಂಬುಗೆಯನ್ನು ಇಟ್ಟವರು. ಜಗತ್ತು ಸತ್ಯ, ಭಗವಂತನೊಬ್ಬನಿದ್ದಾನೆ. ಪ್ರಪಂಚದ ವ್ಯಾಪಾರವೆಲ್ಲವೂ ಅವನ ಅಧೀನದಲ್ಲಿ ನಡೆಯುತ್ತದೆ. ಎಂಬ ತತ್ವಗಳ ಹಿನ್ನೆಲೆಯಲ್ಲಿ ಇದ್ದುಕೊಂಡೇ ಬದುಕನ್ನು ಹಸನಾಗಿ ಇಟ್ಟುಕೊಂಡು ಪರವನ್ನು ಚಿಂತಿಸಬಹುದು ಎಂದು ಮನುಕುಲಕ್ಕೆ ತೋರಿಸಿಕೊಟ್ಟರು. ಇದನ್ನು ಅವರವರ ಧರ್ಮದ ಅಸ್ತಿತ್ವವನ್ನು, ಅವರವರ ನಂಬುಗೆಗಳನ್ನು, ಶ್ರದ್ಧೆಯನ್ನು ಉಳಿಸಿ ಜನರ ಮನಸ್ಸನ್ನು ಧರ್ಮದಲ್ಲಿ ನಡೆವಂತೆ ಮಾಡಿದ ಬಹುಪಾಲು ಶ್ರೇಯಸ್ಸು ದಾಸ ಸಾಹಿತ್ಯಕ್ಕೆ ಸಲ್ಲುತ್ತದೆ. ವಿಶೇಷವಾಗಿ ಸ್ತ್ರೀಯರಿಗೂ ಬ್ರಾಹ್ಮಣೇತರ ಸಮುದಾಯಗಳಿಗೂ ಆಧ್ಯಾತ್ಮದ ದಾರಿಯನ್ನು ಒದಗಿಸಿ ಕೊಡುವಲ್ಲಿ ಮುಂದಾದದ್ದು ದಾಸ ಸಾಹಿತ್ಯದ ಅದ್ಭುತ ಸಾಧನೆಯಾಗಿದೆ.

ದಾಸರು 'ಮಾಧ್ವರ ಜನ್ಮ ದೊಡ್ಡದು, ಇದ ಹಾನಿ ಮಾಡಬೇಡಿ ಹುಚ್ಚಪ್ಪಗಳಿರಾ' ಎಂದು ಹೇಳಲಿಲ್ಲ. ಅವರು ಹೇಳಿದ್ದು, 'ಮಾನವ ಜನ್ಮ ದೊಡ್ಡದು, ಇದ ಹಾನಿ ಮಾಡಬೇಡಿ ಹುಚ್ಚಪ್ಪಗಳಿರಾ' ಎಂದರು. ದಾಸರ ಕೀರ್ತನೆಗಳಲ್ಲಿ ಬರದೇ ಇದ್ದ ವಿಚಾರಗಳೇ ಇಲ್ಲ. ಧರ್ಮ, ನೀತಿ, ಸಂಸಾರ, ವೇದಾಂತ, ರಾಜಕಾರಣ, ಅರ್ಥನೀತಿ, ಸಾಮಾನ್ಯ ನೀತಿ, ವಿನೋದ ಎಲ್ಲವೂ ಇದೆ. ಮುಖ್ಯವಾಗಿ ಜೀವನಗಂಗೆಯ ಬೃಹದ್ದರ್ಶನವನ್ನು ಅವರು ತಮ್ಮ ಸಾಹಿತ್ಯದಲ್ಲಿ ಮಾಡಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಪ್ರಾರಂಭ ಕಾಲದಿಂದ ಇಂದಿನವರೆಗಿನ ಎಲ್ಲ ಹರಿದಾಸರ ಸಮಾಜಮುಖಿ ಕೀರ್ತನೆಗಳನ್ನು ಪ್ರಕಟಿಸುವುದೆಂದು ನಿರ್ಧರಿಸಿತು. ಭಾಗ ೧ರಲ್ಲಿ

ಹರಿದಾಸ ಸಾಹಿತ್ಯದ ಮೊದಲ ಒಂಭತ್ತು ಹರಿದಾಸರುಗಳಾದ ಶ್ರೀ ಶ್ರೀಪಾದರಾಯರು, ಶ್ರೀ ವ್ಯಾಸರಾಯರು, ಶ್ರೀ ವಾದಿರಾಜರು, ಶ್ರೀ ಪುರಂದರದಾಸರು, ಶ್ರೀ ಕನಕದಾಸರು, ಶ್ರೀ ಬೇಲೂರು ವೈಕುಂಠದಾಸರು, ಕಾಖಂಡಕಿ ಶ್ರೀ ಮಹಿಪತಿರಾಯರು, ಬಾಗಲಕೋಟೆಯ ಶ್ರೀ ಪ್ರಸನ್ನವೇಂಕಟದಾಸರು ಮತ್ತು ಕಾಖಂಡಕಿ ಶ್ರೀ ಕೃಷ್ಣದಾಸರ, ೨೬೨ ಕೀರ್ತನೆಗಳಿವೆ. ಈ ಕೀರ್ತನೆಗಳನ್ನು ಆಯ್ದುಕೊಳ್ಳುವಾಗ ಪ್ರಮುಖವಾಗಿ ಕೆಳಗಿನ ಅಂಶಗಳನ್ನು ಗಮನಿಸಲಾಗಿದೆ.

ಮಾನವನ ನೈತಿಕತೆಯನ್ನು ಬಲಪಡಿಸುವಂಥ ಕೃತಿಗಳು, ಆಧ್ಯಾತ್ಮ ಸಾಧನೆಗೆ ಅನುಕೂಲವಾಗುವ ಕೃತಿಗಳು. ಜಾತಿ ಭೇದವಿಲ್ಲದೆ ಸಮಾಜದಲ್ಲಿಯ ಮೂಢ ನಂಬಿಕೆ, ತಪ್ಪು ಆಚರಣೆಗಳನ್ನು ತಿದ್ದಲು ಪ್ರಯತ್ನಿಸುವುದು, ಸಮಾಜದ ಸ್ವಾಸ್ಥ್ಯವನ್ನು ಕಾಪಾಡಲು ಪ್ರೇರೇಪಿಸುವ ನೀತಿ ಬೋಧಕ ಕೃತಿಗಳು. ಲೌಕಿಕ ಜನರಿಗೆ, ಸಂಸಾರಿಗಳಿಗೆ ಸದಾಚಾರ ಉಪದೇಶದ ಮೂಲಕ ಪಾರಲೌಕಿಕ ಕಡೆಗೆ ಒಲವು ಹುಟ್ಟಿಸುವ ಕೃತಿಗಳು. ಒಂದು ರೀತಿಯಲ್ಲಿ ಜನಸಾಮಾನ್ಯರನ್ನು ಆಧ್ಯಾತ್ಮದತ್ತ ತಿರುಗಿಸುವುದು.

ಇವುಗಳನ್ನು ನಾಡಿನ ಹರಿದಾಸಸಾಹಿತ್ಯದ ಪ್ರಖ್ಯಾತ ವಿದ್ವಾಂಸರು ಸಂಗ್ರಹಿಸಿ ಕೊಟ್ಟಿದ್ದಾರೆ. ಪ್ರತಿಯೊಬ್ಬ ಹರಿದಾಸರ ಕೀರ್ತನೆಗಳ ಮೊದಲು ಆಯಾ ಹರಿದಾಸರ ಸಂಕ್ಷಿಪ್ತ ಪರಿಚಯ, ಅವರ ಸಾಹಿತ್ಯದ ವೈಶಿಷ್ಟ್ಯವನ್ನೂ ಕೊಡಲು ಪ್ರಯತ್ನಿಸಲಾಗಿದೆ.

ಕಳೆದ ಫೆಬ್ರುವರಿ ೨೦೨೦ರಲ್ಲಿ ಭಾಗ–೧ ಪ್ರಕಟವಾಯಿತಷ್ಟೆ ಅದನ್ನು ನೋಡಿದ **ಇನ್‌ಫೋಸಿಸ್ ಪ್ರತಿಷ್ಠಾನದ ಅಧ್ಯಕ್ಷರಾದ ಡಾ. ಸುಧಾಮೂರ್ತಿ** ಅವರು ತಾವಾಗಿಯೇ ಮುಂದೆ ಬಂದು ಉಳಿದ ಸಂಪುಟಗಳ ಪ್ರಕಟನೆಗೆ ಧನಸಹಾಯ ಮಾಡುವುದಾಗಿ ಹೇಳಿದರು. ಅವರಿಗೆ ಹೃತ್ಪೂರ್ವಕ ಕೃತಜ್ಞತೆಗಳು.

ಭಾಗ–೨ರಲ್ಲಿ ವಿಜಯದಾಸರು, ಗೋಪಾಲದಾಸರು, ಮೋಹನದಾಸರು, ಗುರುಗೋಪಾಲದಾಸರು, ವಾಸುದೇವವಿಠಲರು, ಜಗನ್ನಾಥದಾಸರು, ಪ್ರಾಣೇಶದಾಸರು, ಶ್ರೀದವಿಠಲರು, ಹೆಳವನಕಟ್ಟೆ ಗಿರಿಯಮ್ಮ, ನೆಕ್ಕಾರು ಕೃಷ್ಣದಾಸರು, ಹೆನ್ನರಂಗದಾಸರು, ಪರಮದೇವ ಹೀಗೆ ೧೩ ದಾಸರ ೧೯೬ ಕೀರ್ತನೆಗಳನ್ನು ಪ್ರಕಟಿಸಲಾಗಿದೆ. ಇದನ್ನು ಸಂಪಾದಿಸಿದವರು ಡಾ. ಗೋಕುಲನಾಥರು.

ಭಾಗ–೩ರಲ್ಲಿ ಕ್ರಿ.ಶ.೧೮೦೧ ರಿಂದ ೧೯೦೦ರ ವರೆಗೆ ಬಾಳಿ–ಬದುಕಿದ ೨೬ ಹರಿದಾಸರ ೧೯೧ ಸಮಾಜಮುಖಿ ಕೀರ್ತನೆಗಳನ್ನು ಕೊಡಲಾಗಿದೆ. ಇವುಗಳನ್ನು ಸಂಪಾದಿಸಿದ ಕಲಬುರ್ಗಿಯ ಡಾ. ಸ್ವಾಮಿರಾವ ಕುಲಕರ್ಣಿ ಅವರಿಗೆ ಕೃತಜ್ಞತೆಗಳು.

ಭಾಗ ೪ರಲ್ಲಿ ಕ್ರಿ.ಶ.೧೯೦೧ ರಿಂದ ೧೯೪೦ರ ವರೆಗೆ ಬಾಳಿ ಬದುಕಿದ ೩೮ ಹರಿದಾಸರ ೨೨೨ ಸಮಾಜಮುಖಿ ಕೀರ್ತನೆಗಳನ್ನು ಕೊಡಲಾಗಿದೆ. ಇವುಗಳನ್ನು ಸಂಪಾದಿಸಿದ ಪ್ರೊ. ಜಿ.ಅಶ್ವತ್ಥ ನಾರಾಯಣ ಮತ್ತು ಡಾ. ನಾ.ಗೀತಾಚಾರ್ಯರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

ಈ ಕೃತಿಗಳನ್ನು ಸಂಗ್ರಹಿಸಿಕೊಟ್ಟ ವಿದ್ವಾಂಸರು ಮತ್ತು ಸಂಪಾದಕ ಮಂಡಳಿಯ ಎಲ್ಲ ಸದಸ್ಯರಿಗೂ ನಮ್ಮ ಕೃತಜ್ಞತೆಗಳು.

ಮುಖಪುಟ ವಿನ್ಯಾಸ ಮಾಡಿದ ಆತ್ಮೀಯ ಕಲಾವಿದ ಕೆ.ಕೆ.ಮಕಾಳಿ ಅವರಿಗೂ ಅಚ್ಚುಕಟ್ಟಾಗಿ ಮುದ್ರಿಸಿದ ಪ್ರೀತಿಯ ಬಿ.ಸಿ.ಪಾಟೀಲ (ಹೆಬ್ಬಾಳ) ಅವರಿಗೂ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

–ಡಾ. ಕೃಷ್ಣ ಕೊಲ್ಹಾರಕುಲಕರ್ಣಿ

–ಡಾ. ಸುಭಾಸ ಕಾಖಂಡಕಿ

❖❖

ಸಂಪುಟ ಸಂಪಾದಕೀಯ

ಕನ್ನಡ ಶಾರದೆಯ ಎರಡು ಕಣ್ಣುಗಳು ಶರಣ ಸಾಹಿತ್ಯ ಮತ್ತು ದಾಸಸಾಹಿತ್ಯ. ವಿಶ್ವಸಾಹಿತ್ಯಕ್ಕೆ ಕನ್ನಡನಾಡು ಕನ್ನಡ ಸಂಸ್ಕೃತಿ ಕೊಟ್ಟ ವಿಶಿಷ್ಟ ಕೊಡುಗೆ ದಾಸಸಾಹಿತ್ಯ ಅರ್ಥಾತ್ ಕೀರ್ತನ ಸಾಹಿತ್ಯ, ಮತ್ತು ವಚನಸಾಹಿತ್ಯ ಇವುಗಳು ವಿಶೇಷವಾಗಿ ಸಮಾಜದ ಕೆಳವರ್ಗದ ಜನರುದ್ಧಾರಕ್ಕೆ ಶ್ರಮಿಸಿವೆ. ವಚನಸಾಹಿತ್ಯ ವೀರಶೈವಕ್ಕೆ ಸೀಮಿತವಲ್ಲ. ದಾಸಸಾಹಿತ್ಯ ಬ್ರಾಹ್ಮಣವರ್ಗಕ್ಕೆ ಕಟ್ಟಿಬಿದ್ದಲ್ಲ. ಇವೆರಡರಲ್ಲೂ ಇರುವ ಸಮಾಜೋದ್ಧಾರ ವಚನ – ಕೀರ್ತನೆಗಳು ಇಡೀ ಮಾನವ ಸಮಾಜದ ಉದ್ಧಾರಕ್ಕೆ ಮೀಸಲಾಗಿದೆ. ಆದರೆ ವಚನಸಾಹಿತ್ಯದಲ್ಲಿ ಆದಂತೆ ದಾಸಸಾಹಿತ್ಯದಲ್ಲಿ ಜೀವನಮೌಲ್ಯಗಳನ್ನು ಸಾರುವ; ವಿಶ್ವಸಾಹಿತ್ಯಕ್ಕೆ ಕೊಡುಗೆಯೆನಿಸುವ ಕೀರ್ತನೆಗಳನ್ನು ಹೆಕ್ಕಿ ಜನಕ್ಕೆ ಕೊಡುವ ಕೆಲಸ ಸಾಕಷ್ಟು ಆಗಿಲ್ಲ.

ಈ ದಿಶೆಯಲ್ಲಿ ಹರಿದಾಸರ ಸಮಾಜಮುಖಿ ಕೀರ್ತನೆಗಳನ್ನು ಆಯ್ದು ನಾಲ್ಕು ಸಂಪುಟಗಳಲ್ಲಿ ಪ್ರಕಟಿಸುವುದೆಂದು ನಿರ್ಧರಿಸಿತು. ಇದು ನಾಲ್ಕನೆಯ ಕೊನೆಯ ಸಂಪುಟ. ಇದರಲ್ಲಿ ೧೯೦೧ ರಿಂದ ೧೯೪೦ರ ವರೆಗಿನ ಹರಿದಾಸರ ಕೀರ್ತನೆಗಳನ್ನು ಸಂಗ್ರಹಿಸಲಾಗಿದೆ.

ಈ ಸಂಗ್ರಹವನ್ನು ಅತ್ಯಲ್ಪ ಅವಧಿಯಲ್ಲಿ ಸಿದ್ಧಪಡಿಸಿದೆ ಹೀಗಾಗಿ ಕ್ಷೇತ್ರಕಾರ್ಯ ಮಾಡಿ ಹತ್ತಾರು ಕೀರ್ತನಕಾರರ ಕೃತಿಗಳನ್ನು ಇಲ್ಲಿ ಸೇರಿಸಲಾಗದ್ದಕ್ಕೆ ವಿಷಾದಿಸುತ್ತೇವೆ. ಸಮಾಜಮುಖಿ ಕೀರ್ತನಕಾರರಿಗೆ ಮತ್ತು ದಾಸಸಾಹಿತ್ಯ, ಗ್ರಂಥಕಾರರಿಗೆ, ನಾವು ಚಿರಋಣಿಗಳು. ವಿಶೇಷವಾಗಿ ಸಮಗ್ರ ದಾಸ ಸಂಪುಟಗಳು ಶ್ರೀಮತಿರಾವ್ ಮತ್ತು ಹೆಚ್.ಎಸ್.ಶಾಂತಾ, ಶ್ರೀನಿವಾಸ ಹಾವನೂರ ಗ್ರಂಥಗಳಿಂದ ತುಂಬಾ ನೆರವು ದೊರೆತಿದೆ. ಅವರಿಗೆ ನಾವು ಆಭಾರಿಗಳಾಗಿದ್ದೇವೆ. ೨೦ನೇ ಶತಮಾನದ ದಾಸಸಾಹಿತ್ಯ ಸೂಚಿ ಮೊದಲು ಸಿದ್ಧವಾಗಬೇಕಾಗಿದೆ. ದಾಸಸಾಹಿತ್ಯ ಪೀಳಿಗೆ ವಿವರಗಳಲ್ಲಿ ಪ್ರತಿಯೊಬ್ಬರ ಜೀವಿತಾವಧಿ ಸಮಾದು ಆಗಬೇಕಾಗಿದೆ. ಕಾಲನಿರ್ದೇಶವಿಲ್ಲದೆ ೨೦ನೇ ಶತಮಾನದ ಕೀರ್ತನೆಕಾರರೇ ಆಗಿದ್ದರೂ ನಿರ್ಣಯಿಸಲು ಆಧಾರವಿಲ್ಲದೆ ಹಲವರ ಕೀರ್ತನೆಗಳು ದೊರೆತಿದ್ದರೂ ಜೀವನ ವಿವರವಿಲ್ಲದೆ ಕೈಬಿಟ್ಟಿದ್ದೇವೆ. ಅಪೂರ್ಣ ಮಾಹಿತಿಯನ್ನು ಒಳಗೊಂಡಿದ್ದರೂ ಜನನ ದಿನಾಂಕ ದೊರೆತವರ ಕೀರ್ತನೆಗಳನ್ನಷ್ಟೇ

ಆಯ್ಕೆ ಮಾಡಿದ್ದೇವೆ. ಜೀವಂತವಿರುವ ಅನೇಕ ಕೀರ್ತನಕಾರರಲ್ಲಿ ಅನೇಕರ ವಿಳಾಸ ವಿವರ ನಮಗೆ ದೊರೆತಿಲ್ಲ. ವಿವರ ವಿಳಾಸ ಸಿಕ್ಕ ಸಮಕಾಲೀನ ಕೀರ್ತನಕಾರರೆಲ್ಲ ಸಂತೋಷದಿಂದ ತಮ್ಮ ಅನುಮತಿ ನೀಡಿ ಸಂತೋಷ ವ್ಯಕ್ತಪಡಿಸಿದ್ದಾರೆ.

೨೦ನೇ ಶತಮಾನದ ಕೀರ್ತನೆಗಳಲ್ಲಿ ವೈವಿಧ್ಯ ಹೆಚ್ಚಾಗಿದೆ. ರೈಲು, ಸ್ಕೂಟರ್‌ಗಳನ್ನು ಆಧ್ಯಾತ್ಮಕ್ಕೆ ನಿದರ್ಶನಗಳಾಗಿ ಬಳಸಿದ್ದಾರೆ. ೧೯ನೇ ಶತಮಾನದವರೆಗೆ ನೂರಾರು ಜನ ಹರಿದಾಸಿಯರು ಗಲಿಗಲಿ ಅವ್ವ, ಹರಪನಹಳ್ಳಿ ಭೀಮವ್ವ, ಹೆಳವನಕಟ್ಟೆ ಗಿರಿಯಮ್ಮ, ನಂಜನಗೂಡು ತಿರುಮಲಾಂಬ ಮಧುಗಿರಿಯಮ್ಮ ಮುಂತಾದವರು. ವಿದ್ವಾಂಸರ, ಹರಿದಾಸಸಾಹಿತ್ಯ ಚರಿತ್ರಕಾರರ ಕಣ್ಣಿಗೆ ಬಿದ್ದಿದ್ದಾರೆ. ಶರಣ ಸಾಹಿತ್ಯದಲ್ಲಿ ಕಂಡು ಬರುವಷ್ಟು ಮಹಿಳೆಯರು ಇಲ್ಲಿಲ್ಲ. ಆದರೆ ೨೦ನೇ ಶತಮಾನದಲ್ಲಿ ೫೦ಕ್ಕೂ ಹೆಚ್ಚಿನ ದಾಸ ಸಾಹಿತ್ಯ ಹಾಗೂ ಕೀರ್ತನಸಾಹಿತ್ಯ ರಚಿಸಿದವರು ಕಂಡುಬರುತ್ತಾರೆ. ಆ ರಚನೆಗಳಲ್ಲಿ ಪರಂಪರೆಯ ಅನುಕರಣೆ ಕೀರ್ತನೆಗಳೂ ಇವೆ. ನಾವೀನ್ಯದ ಸಮಕಾಲದ ಸಮಾಜದ ಬದುಕಿನ ಚಿತ್ರಣದ ಕೀರ್ತನೆಗಳೂ ಇವೆ. ಮಹಿಳಾ ಹರಿದಾಸಿಯರಲ್ಲಿ ೩೦೦೦ ಕೀರ್ತನೆ ಬರೆದವರಿದ್ದಾರೆ. ಕನಕದಾಸರ ನಂತರ ಮುಂಡಿಗೆಗಳನ್ನು ಅಧಿಕ ಸಂಖ್ಯೆಯಲ್ಲಿ ರಚಿಸಿದ ಏಕೈಕ ಲೇಖಕಿ ರತ್ನಾಮೂರ್ತಿ ಇದ್ದಾರೆ. ಬಹಿರಂಗದಲ್ಲಿ ಲೌಕಿಕ ಜೀವನದಲ್ಲಿ ಮುಳುಗಿದ್ದರೂ ಅಂತರಂಗದಲ್ಲಿ ಹರಿದಾಸತ್ವ ಹೊಂದಿದವರು. ಅನೇಕರಿದ್ದಾರೆ. ಹೀಗಾಗಿ ಅಂಥವರನ್ನು ಗುರುತಿಸುವುದೇ ಕಷ್ಟವಾಗಿದೆ. ಈಗ ಹರಿದಾಸ ವೃತ್ತಿ ಕೈಗೊಂಡವರು. ದಾಸವೇಷಧಾರಿಗಳು ಸಾಂಪ್ರದಾಯಿಕ ಅಂಕಿತೋಪದೇಶ ಪಡೆದವರು ೨೦ನೇ ಶತಮಾನದ ಪ್ರಾರಂಭದಲ್ಲಿದ್ದಷ್ಟು ಈಗಿಲ್ಲ. ಎಷ್ಟೋ ಜನ ಗುಪ್ತ ಸಾಧಕರಾಗಿದ್ದಾರೆ. ನೂರಕ್ಕೆ ತೊಂಬತ್ತರಷ್ಟು ಭಜನಾ ನಿರತಾಗಿದ್ದು ತಾರತಮ್ಯ ಪದ್ಧತಿಯಿಂದ ಹೊರಬಂದಿಲ್ಲ. ಬಹುದೇವತೋಪಾಸಕರು. ಕೀರ್ತನ ರಚಕರು ಹೆಚ್ಚಿಲ್ಲ. ೨೦ನೇ ಶತಮಾನದಲ್ಲಿ ಸಾವಿರಕ್ಕೂ ಮೀರಿ ದಾಸಸಾಹಿತ್ಯಕ್ಕೆ ಸಂಬಂಧಿಸಿದ ಕೃತಿಗಳು ರಚಿತವಾಗಿದ್ದರೂ ಅವೆಲ್ಲಾ ಒಂದು ಕಡೆ ಯಾರ ಬಳಿಯೂ ಇಲ್ಲ. ನಮ್ಮಲ್ಲಿರುವ ಮಠಾಧಿಪತಿಗಳು ಮನಸ್ಸು ಮಾಡಿದಲ್ಲಿ ಸಮಗ್ರ ದಾಸಸಾಹಿತ್ಯ ಲೈಬ್ರರಿ ಮಾಡಲು ಶಕ್ಯ. ಏಕೆಂದರೆ ಅದಕ್ಕೆ ಕಟ್ಟಡ, ಸಿಬ್ಬಂದಿ ನಿರ್ವಹಣೆ ವೆಚ್ಚ ಪುಸ್ತಕ ಕೊಂಡು ಸಂಗ್ರಹಿಸಲು ಅಪಾರ ಹಣ ಬೇಕು ಇದನ್ನು ಯಾರೇ ವ್ಯಕ್ತಿ ಸಂಘ ಸಂಸ್ಥೆ ಮಾಡಲು ಸಾಧ್ಯವಿಲ್ಲ. ಆ ಕಾಲ ಎಂದು ಬಂದೀತೋ ಕಾಯಬೇಕಾಗಿದೆ. ಅಲ್ಲಿಯವರೆಗೆ ದಾಸಸಾಹಿತ್ಯ ಅಪೂರ್ಣ ಮಾಹಿತಿಗಳಿಂದ ಪ್ರಕಟವಾಗುತ್ತಿರುತ್ತವೆ. ಮುನ್ನುಡಿಯನ್ನು ಬರೆದುಕೊಟ್ಟ ಡಾ.ಎಂ.ಎಸ್.ಮದಭಾವಿ ಅವರಿಗೆ ನಮ್ಮ ಕೃತಜ್ಞತೆಗಳು. ಇದನ್ನು ಸಂಪಾಟಸಿ ಕೊಡಲು ಕೇಳಿದ ಸಂಪಾದಕ ಮಂಡಳಿಯ ಸದಸ್ಯರನ್ನು ನೆನೆಯುತ್ತೇವೆ.

–ಪ್ರೊ. ಜಿ.ಅಶ್ವತ್ಥ ನಾರಾಯಣ

–ಡಾ. ನಾ.ಗೀತಾಚಾರ್ಯ

❖❖



ಪೂಜ್ಯ ಶ್ರೀ ಮ.ನಿ.ಪ್ರ. ಡಾ. ಬಸವಲಿಂಗ ಪಟ್ಟದ್ದೇವರು

POOJYA SHRI Dr. BASAVALINGA PATTADEVARU

Hiremath Samsthan, BHALKI - Tq. [illegible] - Dist. Bidar - Karnataka State

Ph.: [illegible] - Cell : [illegible] - Email : [illegible]@gmail.com



[illegible] ದಿನಾಂಕ [illegible]

ಡಾ.ಕೃಷ್ಣ ಕೊಲ್ಹಾರ ಕುಲಕರ್ಣಿ
[illegible] - 586109
ಮೊ: 9342018470

ಅವರಿಗೆ ಶರಣಾರ್ಥಿಗಳು,

ತಾವು ಕಳುಹಿಸಿದ "ಹರಿದಾಸರ ಸಮಾಜಮುಖಿ ಕೀರ್ತನೆಗಳು" ಗ್ರಂಥ ಇಂದೇ ತಲುಪಿತು. ಸುಂದರ ಮುಖಪುಟ ಕೀರ್ತನೆ ನೋಡಿ ಸಂತಸವಾಯಿತು. ಕಣ್ಣಿಗೆ ಸ್ಪರ್ಶಮಾಡಿಕೊಂಡು ತಲೆಯ ಮೇಲೆ ಹೊತ್ತುಕೊಂಡು ಶರಣು ಸಲ್ಲಿಸಿ, ಅವಲೋಕನ ಮಾಡಿದೆ. ಅಮೂಲ್ಯವಾದ ಕೀರ್ತನೆಗಳು. ಜಾತಿ-ಮತ-ಭೇದವಿಲ್ಲದೆ ಸರ್ವರಿಗೂ ಬೆಳಕು ನೀಡುವ ಕೀರ್ತನೆಗಳಾಗಿವೆ. ಎರಡು+ಎರಡು ಕೂಡಿಸಿದರೆ ನಾಲ್ಕು ಆಗುತ್ತದೆ. ಗಣಿತದ ಪ್ರಕಾರ ವಿಶ್ವಮಾನ್ಯ ಸತ್ಯವಾಗಿದೆ. ಎಲ್ಲಾ ದೇಶಗಳಲ್ಲಿಯೂ ನಾಲ್ಕೆ ಆಗುತ್ತದೆ. ಅದೇ ರೀತಿ ಸಮಾಜಮುಖಿ ಕೀರ್ತನೆಗಳು ಅವರು ಇವರು ಎಲ್ಲರೂ, ಅಲ್ಲಿ ಇಲ್ಲಿ ಎಲ್ಲಾ ಕಡೆ ಒಪ್ಪುವ ನಿತ್ಯ ಸತ್ಯವಾದ ಕೀರ್ತನೆಗಳಾಗಿವೆ ಎಂದು ಹೆಮ್ಮೆಯಿಂದ ಸಂತಸದಿಂದ ಹೇಳಬಯಸುವೆ. ಶರಣರ ವಚನ, ದಾಸರ ಕೀರ್ತನೆಗಳು ಕನ್ನಡ ಸಾಹಿತ್ಯದ ಎರಡು ಕಣ್ಣುಗಳು. ಇಂದು ಮಾನವ ಹೊರಗೆ ಸಾಕಷ್ಟು ಸಂಶೋಧನ ನಡೆಸಿದ್ದಾನೆ. ಹೊರಗಿನ ಅದ್ಭುತ ವಿಕಾಸ ನಡೆದಿದೆ. ಅಂತರಂಗ ಬಡವಾಗಿದೆ. ಹೃದಯ ಸಂಕುಚಿತವಾಗಿಬಿಟ್ಟಿದೆ. ಕೀರ್ತನೆಗಳು ಹೆಚ್ಚು ಹೆಚ್ಚು ಪ್ರಚಾರವಾದಲ್ಲಿ ಹೃದಯ ವಿಶಾಲವಾಗುತ್ತದೆ. ಭಾರತ ನಿಜವಾದ ಶ್ರೀಮಂತಿಕೆಯ ಭಾರತವಾಗುತ್ತದೆ.

ಅಮೂಲ್ಯವಾದ ರಾಶಿ ರಾಶಿ ಕೀರ್ತನೆಗಳಿಂದ ಆಪ್ತವಾದ ಅಣುಗಳಂತೆ ಶಕ್ತಿದಾಯಕ ಕೀರ್ತನೆಗಳು ಸಂಪಾದಿಸಿಕೊಟ್ಟಿದ್ದೀರಿ. ಸಮಯವಕಾಶ ಮಾಡಿಕೊಂಡು ಓದುತ್ತೇನೆ. ಮುಂದಿನ ಭಾಗಗಳು ಬೇಗ ಬರಲಿ ಎಂದು ಹಾರೈಸುವೆ.

ತಮ್ಮ ಅಮೂಲ್ಯವಾದ ಗ್ರಂಥ ಲಿಂಗಹಸ್ತದಿಂದ ಸಂಪಾದಿಸಿ ಜನರ ಹೃದಯಾಂತರಾಳಕ್ಕೆ ನೀಡಿದ್ದಕ್ಕಾಗಿ ತಮಗೆ ಅನಂತ ಶರಣು ಶರಣಾರ್ಥಿಗಳು. ನಮಗೆ ನೆನಪಿನಿಂದ ಕಳುಹಿಸಿಕೊಟ್ಟದ್ದಕ್ಕೆ ಧನ್ಯವಾದಗಳು. ತಮ್ಮ ಲಿಂಗಹಸ್ತದಿಂದ ಇನ್ನೂ ಅನೇಕ ಮೌಲಿಕ ಕೃತಿಗಳು ಮೂಡಿಬರಲಿ ಎಂದು ಹೃದಯಪೂರ್ವಕ ಹಾರೈಸುತ್ತೇವೆ.

ಇತಿ ಶರಣು.

(ಪೂಜ್ಯ ಶ್ರೀ ಡಾ.ಬಸವಲಿಂಗ ಪಟ್ಟದ್ದೇವರು)

Poojya Shree Prabhusarangadev Shivacharyaru
M.A., Dip. in Basava Studies
Sarangamath,
SINDGI - 586 128.
Dist. Bijapur
Karnataka State
S.T.D. 08488
☎ : 621319

Ref. No.________________ Date 11-03-2020.

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ.
633, ಮಹಿಮಾ, ಕೀರ್ತಿನಗರ
ವಿಜಯಪುರ - 586109. ಇವರಿಗೆ -

ಶುಭಾಶಯಗಳು,

ತಾವು ಪ್ರೀತಿ-ವಿಶ್ವಾಸಪೂರ್ವಕವಾಗಿ ಕಳುಹಿಸಿದ 'ಹರಿದಾಸರ ಸಮಾಜಮುಖಿ ಕೀರ್ತನೆಗಳು' ಸಂಪಾದಿತ ಗ್ರಂಥ ಬಂದು ತಲುಪಿತು. ಇಂದಿನ ದಿನಮಾನ ಪ್ರಸ್ತುತ ದಿನಗಳಲ್ಲಿ ಭಕ್ತಿಪ್ರಧಾನವಾದ ಗ್ರಂಥಗಳು ಹೊರಬರುವುದು ವಿರಳ. ಅದರಲ್ಲಿ ತಾವು ಇಂತಹ ಹರಿದಾಸರ ಸಮಾಜಮುಖಿ ಎಂಬ ಭಕ್ತಿಪ್ರಧಾನವಾದ ಕೀರ್ತನೆಗಳ ಗ್ರಂಥವು ತಮ್ಮ ಹಾಗೂ ಡಾ. ಸುಭಾಸ ಕಾಖಂಡಕಿ ಅವರ ಸಂಪಾದಕತ್ವದಲ್ಲಿ ಪ್ರಕಟಗೊಂಡಿದ್ದು ನಮಗೆ ಸಂತೋಷವನ್ನುಂಟು ಮಾಡಿದೆ.

ತಮ್ಮ ಈ ಸಂಪಾದಿತ ಕೃತಿ ಓದಿ ನೋಡಿದಾಗ ನಮ್ಮಂಥ ಸ್ವಾಮಿಗಳಿಗೆ ಸಭೆ-ಸಮಾರಂಭದಲ್ಲಿ ಮಾತನಾಡುವಾಗ ತಾವು ಸಂಪಾದಿಸಿದ ಈ ಕೃತಿಯು ಬಹಳ ಉಪಯುಕ್ತವಾಗುತ್ತದೆ ಎಂದು ಅನಿಸಿತು.

ಡಾ. ಸುಭಾಸ ಕಾಖಂಡಕಿ ಹಾಗೂ ತಮಗೂ ತಮ್ಮ ಕುಟುಂಬದವರಿಗೂ ದೇವರು ಆಯುರಾರೋಗ್ಯ ಭಾಗ್ಯ ಕೊಟ್ಟು ಕರುಣಿಸಲಿ ಎಂದು ಪ್ರಾರ್ಥಿಸುತ್ತೇವೆ.

ಆಶೀ
ಪ್ರಭುಸಾರಂಗದೇವ ಶಿವಾಚಾರ್ಯರು

ಕಾಯಕವೇ ಕೈಲಾಸ

ಶ್ರೀ ಶ್ರೀ ಸಿದ್ಧಲಿಂಗಸ್ವಾಮಿಗಳು
ಅಧ್ಯಕ್ಷರು, ಶ್ರೀ ಸಿದ್ಧಗಂಗಾಮಠ,
ತುಮಕೂರು ಜಿಲ್ಲೆ –572 104, ಕರ್ನಾಟಕ ರಾಜ್ಯ.

0816-2282211
0816-2285133
E-mail : ssmath_swamigalu@yahoo.in

ಕ್ರ. ಸಂಖ್ಯೆ : ೧೩೨೩/೨೦೧೯-೨೦

ದಿನಾಂಕ : ೧೧/೦೮/೨೦೨೦

ಡಾ॥ ಕೃಷ್ಣ ಕೊಲ್ಹಾರಕುಲಕರ್ಣಿರವರಿಗೆ

ನೀವು ಅಭಿಮಾನವಿಟ್ಟು ಕಳುಹಿಸಿದ "ಹರಿದಾಸರ ಸಮಾಜ ಮುಖಿ ಕೀರ್ತನೆಗಳು" ಪುಸ್ತಕವು ತಲುಪಿರುತ್ತೆ. ಶ್ರೀ ಶ್ರೀ ಪಾದರಾಯರಿಂದ ಶ್ರೀ ಪ್ರಸನ್ನ ವೆಂಕಟದಾಸರವರೆಗಿನ ಒಂಭತ್ತು ಮಹಾನುಭಾವರ ಕೀರ್ತನೆಗಳನ್ನು ಸಂಗ್ರಹಿಸಿ ವಿಜಯ ಪ್ರಕಾಶನದ ಮೂಲಕ ಪ್ರಕಟಿಸಿರುವುದು ಸಂತೋಷದ ಸಂಗತಿ. ಶರಣರು ಹಾಗು ದಾಸವರೇಣ್ಯರು ನಮ್ಮ ನಾಡಿನ ಎರಡು ಕಣ್ಣುಗಳಿದ್ದಂತೆ. ಅವರ ಆಧ್ಯಾತ್ಮದ ಚಿಂತನ ಜೊತೆಯಲ್ಲಿಯೇ ಸಮಾಜಮುಖಿ ಚಿಂತನೆಗೆ ಒತ್ತುಕೊಟ್ಟಿರುವುದು ವಿಶೇಷವಾದುದಾಗಿದೆ. ಅವರ ಚಿಂತನೆಗಳು ಕಾಲಾತೀತ ಹಾಗೂ ಸಾರ್ವಕಾಲಿಕವಾದುವುಗಳು. ಉತ್ತಮ ಬದುಕಿಗೆ ಶ್ರೇಷ್ಠ ಮಾರ್ಗದರ್ಶನ ಮಾಡುವ ದಿಕ್ಸೂಚಿಗಳಾಗಿವೆ. ಮತ್ತೊಮ್ಮೆ ನಿಮಗೆ ಅಭಿನಂದನೆಗಳು

(ಶ್ರೀ ಸಿದ್ಧಲಿಂಗಸ್ವಾಮಿಗಳು)
ಶ್ರೀ ಸಿದ್ಧಗಂಗಾ ಮಠ

ಡಾ॥ ಕೃಷ್ಣ ಕೊಲ್ಹಾರಕುಲಕರ್ಣಿ ರವರಿಗೆ
633 ಮಹಿಪತಿ, ಕೀರ್ತಿನಗರ,
ವಿಜಯಪುರ 586 109
ಮೊ॥ ೯೩೪೨೦೧೫೪೭೦

NBJ SKS.K I P.NO 72/2019



ಡಾ॥ ಶ್ರೀ ಶಿವಮೂರ್ತಿ ಮುರುಘಾ ಶರಣರು



ದಿನಾಂಕ : 10-03-2020

ಡಾ. ಕೃಷ್ಣ ಕೋಲ್ಹಾರ ಕುಲಕರ್ಣಿ
ನಂ. 633, ಮಹಿಪತಿ
ಕೀರ್ತಿ ನಗರ
ವಿಜಯಪುರ - 586109 ಇವರಿಗೆ, ಶರಣು

ಮಾನ್ಯರೆ,


ನೀವು ಅಭಿಮಾನಪೂರ್ವಕವಾಗಿ ಕಳುಹಿಸಿದ **"ಹರಿದಾಸರ ಸಮಾಜಮುಖಿ ಕೀರ್ತನೆಗಳು"** ಕೃತಿ ತಲುಪಿದೆ. ಧನ್ಯವಾದಗಳು.

ಶ್ರೀಮಠದ ಮೇಲಿನ ಅಭಿಮಾನ ಸದಾ ಇರಲಿ. ನಿಮಗೆ ಒಳ್ಳೆಯದಾಗಲಿ.

ಬಸವ ಪ್ರೇರಣೆಗಳೊಂದಿಗೆ,

(ಡಾ. ಶಿವಮೂರ್ತಿ ಮುರುಘಾ ಶರಣರು)

ಬಸವಕೇಂದ್ರ, ಶ್ರೀ ಮುರುಘಾಮಠ, ಚಿತ್ರದುರ್ಗ - ೫೭೭ ೫೦೨ ದೂರವಾಣಿ : ೦೮೧೯೪ - ೨೨೨೫೫೦
e-mail : basavakendra@gmail.com / web : www.sjmmath.in


POST CARD
633

ಸಂಪಾದಕ ಮಂಡಳಿ

೧) ಡಾ. ಕೃಷ್ಣ ಕೊಲ್ಹಾರಕುಲಕರ್ಣಿ, ವಿಜಯಪುರ

೨) ಡಾ. ಸುಭಾಷ್ ಕಾಖಂಡಕಿ, ಬೆಂಗಳೂರು

೩) ಡಾ. ಅರಳುಮಲ್ಲಿಗೆ ಪಾರ್ಥಸಾರಥಿ, ಬೆಂಗಳೂರು

೪) ಡಾ. ಕೆ.ಗೋಕುಲನಾಥ ಬೆಂಗಳೂರು

೫) ವಿದ್ವಾನ್. ಹೆಚ್.ಬಿ.ಲಕ್ಷ್ಮೀನಾರಾಯಣ, ಬೆಂಗಳೂರು

೬) ಡಾ. ಸ್ವಾಮಿರಾವ್ ಕುಲಕರ್ಣಿ, ಕಲಬುರ್ಗಿ

೭) ಡಾ. ಕೃಷ್ಣಕಟ್ಟಿ, ಯಲಗೂರ

೮) ಡಾ. ಜಯಲಕ್ಷ್ಮೀ ಮಂಗಳಮೂರ್ತಿ, ರಾಯಚೂರು

೯) ಡಾ. ಶೀಲಾದಾಸ್ ರಾಯಚೂರು

೧೦) ಡಾ. ರಾಜಶ್ರೀ ಕಲ್ಲೂರಕರ, ಬೆಂಗಳೂರು

೧೧) ಡಾ. ಮಧುಮತಿ ದೇಶಪಾಂಡೆ, ಸಿಂಧನೂರು

೧೨) ಶ್ರೀಮತಿ ರೇಖಾ ಕಾಖಂಡಕಿ

೧೩) ಡಾ. ಪರಶುರಾಮ ಬೆಟಗೇರಿ, ಬೆಂಗಳೂರು

೧೪) ಡಾ. ನಾ.ಗೀತಾಚಾರ್ಯ, ಬೆಂಗಳೂರು

೧೫) ಡಾ. ವಿದ್ಯಾ ಕಸಬೆ, ಬೆಂಗಳೂರು

೧೬) ಡಾ. ಎ. ಕುಮುದಾ, ಬೆಂಗಳೂರು

೧೭) ಡಾ. ಪ್ರಮೋದ ಪುರೋಹಿತ, ಜಮಖಂಡಿ

೧೮) ಡಾ. ಶ್ರೀ ರವೀಂದ್ರ ಲಾಂಜವಾಡಕರ, ಬೀದರ

೧೯) ಶ್ರೀ ಭೀಮಸೇನ ಬಡಿಗೇರ, ಹುಬ್ಬಳ್ಳಿ

೨೦) ಪ್ರೊ. ಜಿ.ಅಶ್ವತ್ಥನಾರಾಯಣ, ಬೆಂಗಳೂರು

ಪರಿವಿಡಿ

❖❖

ಈ ಸಂಪುಟದ ಹರಿದಾಸರು

೧. ನಿತ್ಯಾನಂದ ವಿಠಲ (ಶೇಷಗಿರಿಯಾಚಾರ್)
೨. ಸಂಪತ್ತೈಯಂಗಾರ್ ಶೆಲ್ವ
೩. ಕೆ.ವಿ.ಕೃಷ್ಣಯ್ಯಂಗಾರ್
೪. ಅಂಬಾಬಾಯಿ
೫. ಕಳಸದ ಸುಂದರಮ್ಮ (ಕಾಳಿಮರ್ದನ ಕೃಷ್ಣ)
೬ ವೈ.ಎಸ್.ಗುಂಡಪ್ಪ (ಚಂಪಕಧಾಮ)
೭ ಚಳ್ಳಕರೆ ಕೃಷ್ಣರಾವ್ (ಶ್ರೀ ರಮಾಕಾಂತ ವಿಠಲ)
೮. ಕೆ. ಗೋಪಾಲಕೃಷ್ಣರಾವ್ (ಗೋಪ)
೯. ಉಳ್ಳೂರು ಮೂಕಾಂಬಿಕಾ ಅಮ್ಮ (ಮೂಕಜ್ಜಿ)
೧೦. ವಿಠೋಬಾಚಾರ್ಯವೈದ್ಯ (ವಿಠಲೇಶ)
೧೧. ಪದ್ಮಾವತಿಬಾಯಿ (ರುಕ್ಕುಮೇಶ/ರುಕ್ಮೀಶ ವಿಠಲ)
೧೨. ಬೆಳ್ಳೆ ಸೀತಾರತ್ನಮ್ಮ
೧೩. ಕಳಸದ ಶ್ರೀನಿವಾಸಾರ್ಯ (ತಂದೆ ವರದ ವಿಠಲ)
೧೪. ನಾರಾಯಣ ಶರ್ಮ('ಜಾಜಿಪುರೀಶ')
೧೫. ಗಮಕಿ ಎಂ. ರಾಘವೇಂದ್ರರಾವ್ ('ರಘುವರ')
೧೬. ಪ್ರೊ. ಆರ್.ಎನ್.ದೊರೆಸ್ವಾಮಿ ('ಲಕ್ಷ್ಮೀರಮಣ')
೧೭. ತಲೆಖಾನ ಭೀಮಸೇನರಾವ್ ಕುಲಕರ್ಣಿ (ಶಿರಪುರ ಭೀಮೇಶ)
೧೮. ಎಚ್. ನಾರಾಯಣಸ್ವಾಮಿ

೧೯. ದೊಡ್ಡಿ ಸುಧಾಬಾಯಿ ('ಕಪಿಲನಾಯಕ')

೨೦. ಇಂದಿರಾಬಾಯಿ ಶೇಷಗಿರಿರಾವ್ ('ಇಂದಿರಾರಮಣ')

೨೧. ಆರ್.ವಿ.ಗವಾಯ್‌ಶೇಷಾದ್ರಿ ('ಉರಗಾಚಲ')

೨೨. ಗಂಜಗಂಟಿ ನರಸಿಂಹಮೂರ್ತಿ – ('ಗಂಜಿಗುಂಟೆನರಹರಿ')

೨೩. ಗಿರಿಮಾಜಿ ರುಕ್ಮಿಣಿ 'ರುಕ್ಮಿಣಿವರದ'

೨೪. ಸುಧಾಬಾಯಿ ಹೊಸೂರು ಶ್ರೀ ವೆಂಕಟೇಶ

೨೫. ಶ್ರೀ ವಿದ್ಯಾಸಾಗರ ಮಾಧವತೀರ್ಥರು ('ಜ್ಞಾನಸಾಗರ ಮಾಧವ')

೨೬. ಕೋ.ಸು.ಸಂಪುಟಾಣಿ ('ಸಂತಾವಿಠಲ')

೨೭. ವಿಠಲ ಶೇಷೋ ಝುಂಜರವಾಡ– (ವರಹವಿಠಲ)

೨೮. ಶಾರದಮ್ಮ (ಶಾರದಾದಾಸಿ)

೨೯. ಉಡುಪಿ ಯಶೋದಮ್ಮ ('ಯಶೋದೇಶಕೃಷ್ಣ')

೩೦. ಸಂತಭದ್ರಗಿರಿ ಅಚ್ಯುತದಾಸರು (ಮೂಲನಾರಾಯಣ)

೩೧. ಮಂಜುಳಾ ಸುಬ್ಬರಾವ್ ('ಅಜವಿಠಲ')

೩೨. ಸುಶೀಲಾಬಾಯಿ ಶಿರಿವಾರ (ಶಿರವಾರದೊಡೆಯ)

೩೩. ಭದ್ರಗಿರಿ ಕೇಶವ ದಾಸರು ('ದಾಸಕೇಶವನುತ')

೩೪. ಸಿ.ಕೆ.ವಿಠ್ಠಲ (ಕಾಂತೇಶಪ್ರಿಯ ವಿಠಲ)

೩೫. ಉಡುಪಿ ಶ್ರೀಶದಾಸರು

೩೬. ಇ.ಡಿ.ನರಹರಿ ('ಕರಿಗಿರಿನರಹರಿ')

೩೭. ನಳಿನಿರಾವ್ ('ವೆಂಕಟಪತಿ/ಗುರುವೆಂಕಟ')

೩೮. ಜಲಜಾ ಗಂಗೂರ ('ವಾರಿಧೀಶ')

❖❖

ಕೀರ್ತನೆಗಳ ಅಕಾರಾದಿ

೩೦. ಸಂತಭದ್ರಗಿರಿ ಅಚ್ಯುತದಾಸರು (ಮೂಲನಾರಾಯಣ-೧೯೩೧)

೩೧. ಮಂಜುಳಾ ಸುಬ್ಬರಾವ್ ('ತಜವಿಠಲ-೧೯೩೩-೨೦೧೦)

೩೨. ಸುಶೀಲಾಬಾಯಿ ಶಿರಿವಾರ (ಶಿರವಾರದೊಡೆಯ-೧೯೩೪-೨೦೧೪)

೩೩. ಭದ್ರಗಿರಿಕೇಶವ ದಾಸರು ('ದಾಸಕೇಶವನುತ-೧೯೩೪-೧೯೯೭)

❖❖

ನಿತ್ಯಾನಂದವಿಠಲ ಅಂಕಿತದ ಕೀರ್ತನೆಗಳು (೧-೧೩)

(ಶೇಷಗಿರಿಯಾಚಾರ್ ೧೯೦೧-೧೯೮೨)

ಜೀವನ :

ವೆಂಕಣ್ಣಾಚಾರ್ಯ ತಮ್ಮಣ್ಣಾಚಾರ್ಯರು ಅಣ್ಣತಮ್ಮಂದಿರು. ಅಣ್ಣನಿಗೆ ೪ ಜನ ಮಕ್ಕಳು. ಅವರಲ್ಲಿ ಕೊನೆ ಮಗ ಶೇಷಗಿರಿ. ವೆಂಕಣ್ಣಾಚಾರ್ಯ-ರಮಾಬಾಯಿ ದಂಪತಿಗಳು ಅಣ್ಣನ ಮಗ ಶೇಷಗಿರಿಯನ್ನು ದತ್ತು ತೆಗೆದುಕೊಂಡರು. ಹಾಗಾಗಿ ಅವರು ಶೇಷಗಿರಿ ಅವರ ಪೂರ್ಣನಾಮ "ಶೇಷಗಿರಿಯಾಚಾರ್ ವೆಂಕಣ್ಣಾಚಾರ್ ಹರಿದಾಸ್" ಜನಿಸಿದ್ದು ೧೮-೧೨-೧೯೦೧ರಲ್ಲಿ. ಹರಿದಾಸ ಎಂಬ ವಂಶನಾಮ ಇವರಿಗೆ ಪೂರ್ವಜರಿಂದ ಬಂದದ್ದು. ಪೂರ್ವಜರಲ್ಲಿ ಒಬ್ಬರಾದ ತಮ್ಮಣ್ಣಾಚಾರ್ಯ ಮೈಸೂರು ಮಹಾರಾಜರ ಬಳಿ ಹರಿಕಥೆದಾಸರೂ ಗಾಯಕರೂ ಆಗಿದ್ದರಿಂದ ಹರಿದಾಸಾಚಾರ್ಯ ಎನಿಸಿಕೊಂಡಿದ್ದರು. ದತ್ತು ತಾಯಿತಂದೆಗಳನ್ನು ಬಾಲ್ಯದಲ್ಲೇ ಕಳೆದುಕೊಂಡ ಶೇಷಗಿರಿ, ಅಕ್ಕ ಭಾವರ ಆಶ್ರಯದಲ್ಲಿದ್ದು ಶಾಲಾ ವಿದ್ಯಾಭ್ಯಾಸ ಮುಗಿಸಿದರು. ಅಗ್ರಿಕಲ್ಚರ್ ಡಿಪ್ಲೋಮಾ ಮಾಡಿ ವ್ಯವಸಾಯದ ಇಲಾಖೆಯಲ್ಲಿ ಉದ್ಯೋಗಿಗಳಾದರು. ಡೆಪ್ಯೂಟಿ ಡೈರೆಕ್ಟರ್ ಹುದ್ದೆಗೇರಿ ೧೯೬೦ರಲ್ಲಿ ನಿವೃತ್ತರಾದರು. ೧೯೩೨ರಲ್ಲಿ ತಂದೆ ಮುದ್ದುಮೋಹನದಾಸರಿಂದ ನಿತ್ಯಾನಂದವಿಠಲ ಅಂಕಿತಪಡೆದು ಹರಿದಾಸದೀಕ್ಷೆ ಪಡೆದರು. ಯಾಯೀವಾರವನ್ನು ಮಾಡತೊಡಗಿದರು. ಸುಮಾರು ೧೧೦ ಕೀರ್ತನೆಗಳನ್ನು ೨೫ ಉಗಾಭೋಗಗಳನ್ನು ರಚಿಸಿರುವ ಇವರು ೧೯೮೨ ರಂದು ನಿಧನರಾದರು.

ಇವರ ಮನೆತನದಲ್ಲಿ ಗೋಪಾಲಕೃಷ್ಣ ವಿಠಲಾಂಕಿತ ಅಂಬಾಬಾಯಿ, ರಮಾಕಾಂತವಿಠಲಾಂಕಿತ ಕೃಷ್ಣರಾಯರು, ಸೀತಾಪತಿ ಅಂಕಿತದ ರುಕ್ಮಿಣಿಬಾಯಿ, ಯಾದವೇಂದ್ರ ವಿಠಲಾಂಕಿತ ಎಂಕಮ್ಮ. ಮೊದಲಾದವರು ಪ್ರಸಿದ್ಧರಾದ ಹರಿದಾಸರಾಗಿದ್ದಾರೆ. ಸಂಗೀತ, ಸಾಹಿತ್ಯ ಧಾರ್ಮಿಕ ವಾತಾವರಣದಲ್ಲಿ ಬೆಳೆದ ನಿತ್ಯಾನಂದ ವಿಠಲರ ಪುತ್ರಿ, ಶಾಂತಾನಾಗರಾಜ್ ಅವರು ಪ್ರಸಿದ್ಧ ಲೇಖಕಿಯಾಗಿದ್ದಾರೆ. ಸಮಾಜ ಸೇವೆಯಲ್ಲಿ ಬೆಂಗಳೂರಿನಲ್ಲಿ ನಿರತರಾಗಿದ್ದಾರೆ.

೧

ಅರವಿಂದಾಲಯದೊಳಗಾಡುವ ಹರಿಯೆ

ಅರವಿಂದಾಲಯದೊಳಗಾಡುವ ಹರಿಯೇ
ಶರಣು ಹೊಕ್ಕೆನು ಪೊರೆಯೋ ॥ ಪ ॥

ಕರುಣಾಕರನೆಂದು ಮೊರೆಹೊಕ್ಕೆ ನಾನಿನ್ನ
ಪೊರೆಯೋ ಎನ್ನ ದೊರೆಯೇ ॥ ಅ.ಪ.॥

ಆರು ಶತ್ರುಗಳ ಮನೆಯಹುದಯ್ಯ
ಆರ ಮಾತು ಕೇಳರು ಎನ್ನಯ್ಯ
ಆರೇನು ಮಾಳ್ಪರು ಸಾಗಿಗಂತಾಗಲೆನೆ
ನೀರಜಾಕ್ಷ ನಿನ್ನ ಸ್ಮರಣೆ ತಪ್ಪಿಪರಯ್ಯ ॥ ೧ ॥

ಕಳ್ಳತನ ಹೇಳುವರಿವರು
ಸುಳ್ಳು ಹೇಳುವರು ಒಳ್ಳೆಯವರಿವರಲ್ಲ
ಕೊಳ್ಳೆ ಹೋದಮೇಲೆ ಏನಿದ್ದರೇನಯ್ಯ
ಒಳ್ಳೆತನ ಕಲಿಸು ಆಚಾರವನಿವರಿಗೆ ॥ ೨ ॥

ನಿತ್ಯ ನಿಗಮಾತೀತ ದೋಷದೂರನೆಂದು
ನಿತ್ಯ ಸ್ತುತಿಯು ಇಲ್ಲವೋ
ಹೊತ್ತು ಹೋಗುತಲಿದೆ ಚಿತ್ತವಿಡಯ್ಯ
ನಿತ್ಯಾನಂದ ವಿಠಲಸ್ವಾಮಿ ಸರ್ವೇಶ ॥ ೩ ॥

೨

ನಾ ಮಾಡಿದಪರಾಧ ಏನ ಹೇಳಲೊ ರಂಗ

ನಾ ಮಾಡಿದಪರಾಧ ಏನ ಹೇಳಲೊ ರಂಗ
ಹೀನವೃತ್ತಿಯ ಬಿಡಿಸೊ ಅನಂತಶಯನ ॥ ಪ ॥

ನಾನು ನನ್ನದು ಎಂಬ ಮಾಯ ಹರಿಯಲಿಲ್ಲೊ
ಜ್ಞಾನಿಗಳಿಗೆರಗಲಿಲ್ಲ ಹೇ ದೇವ ದೇವಾ ॥ ಅ.ಪ.॥

ಜ್ಞಾನಿಗಳ ಕಂಡೊಡೆ ಮಣಿಯದೆನ್ನಯ ಶಿರವು
ಜಾಣತನದ ಹರಟೆಗಳ ಆಡುತಿಹೆನೊ
ಮೌನದಿಂದಲಿ ಹರಿ ಗುರುಗಳಿಗೆ ಎರಗದಲೆ
ಶ್ವಾನನಂತಾದೆನಲ್ಲೊ ಸ್ವಾಮಿ ॥ ೧ ॥

ಜ್ಞಾನ ಭಕುತಿಗಳಿಲ್ಲ ಹೀನ ವಿಷಯಗಳನ್ನು
ಮಾನಸದಲಿ ನಿತ್ಯ ಬಯಸಿ ಬಯಸಿ
ಜ್ಞಾನಿ ನಾನೆಂತೆಂಬ ಹಮ್ಮಿನಿಂದಲಿ ಮೆರೆದೆ
ಮಾನಸದಿ ನೀ ಪೊಳೆವುದೆಂತೊ ದೇವ ॥ ೨ ॥

ನಿಷ್ಕಾಮ ಕರ್ಮಗಳ ಒಂದು ದಿನವು ಮಾಡಲಿಲ್ಲ
ವಿಷಯ ಸುಖದಲಿ ಮೈಯ ಮರೆತೆ ದೇವಾ
ವಿಷಚಿತ್ತನಾಗಿ ಸಜ್ಜನರ ದೂಷಿಸಿದೆ
ವಿಷಕಂಠನುತ ನಿತ್ಯಾನಂದವಿಠಲ ಪೊರೆಯೋ ॥ ೩ ॥

೩

ಯಾಕಿಷ್ಟು ನಿರ್ದಯವೊ ಶ್ರೀಕಾಂತನೆ ಪೇಳೊ

ಯಾಕಿಷ್ಟು ನಿರ್ದಯವೊ ಶ್ರೀ ಕಾಂತನೆ ಪೇಳೊ
ಸಾಕಲಾರದೆ ಸೋತೆಯಾ ॥ ಪ ॥

ಬೇಕೆಂದು ನಿನ್ನ ಪದ ನಾ ಕಾಣಲ್ಹಂಬಲಿಸಿ ಪ-
ರಾಕು ಮಾಡುವೆನೊ ಸ್ವಾಮಿ ॥ ಅ.ಪ.॥

ಸತಿಸುತ ಧನದಾಸೆ ರಥ ವಾಹನದ ಆಸೆ
ಗತಿಗೆಡಿಸುವಿಂದ್ರಿಯದ ಆಸೆ ಬೇಕೆ
ಜತನವಿಲ್ಲದ ದೇಹಕತಿ ಆಸೆಪಟ್ಟು ನಾ
ಪತಿತನಾದೆನಲ್ಲೋ ದೊರೆಯೇ ॥ ೧ ॥

ಮದ ಮಾತ್ಸರ್ಯಗಳು ಬಂಧಿಸಿಹವೆನ್ನನು
ಪದುಮನಾಭನೆ ಕೇಳೆಲೋ
ಹೃದಯ ಮಧ್ಯದಿ ಈಗ ಮದ್ಗುರು ಸಹಿತದಲಿ
ವದಗಿ ಬಾರಯ್ಯ ಇಂದಿರೇಶಾ ॥ ೨ ॥

ಎಳ್ಳಷ್ಟು ಕಾಲವನು ಒಳಿತಾಗಿ ಕಳೆಯದೆ
ಪೊಳ್ಳು ಹರಟೆಲಿ ಬಿದ್ದೆನೋ
ಬಲ್ಲಿದ ನಿತ್ಯಾನಂದ ವಿಠ್ಠಲರಾಯ
ಸೊಲ್ಲನಾಲಿಸಿ ಪೊರೆಯೋ ಎಲ್ಲ ದೇವರಗಂಡ ॥ ೩ ॥

೪

ಯಾಕೆನ್ನ ಪುಟ್ಟಸಿದೊ ಶ್ರೀಕಾಂತನೇ ಪೇಳೊ

ಯಾಕೆನ್ನ ಪುಟ್ಟಸಿದೊ ಶ್ರೀಕಾಂತನೇ ಪೇಳೊ
ಬೇಕೆಂದು ನಾ ಬಂದೆನೇನೋ ॥ ಪ ॥

ಕಾಕುಲಾತಿಗೆ ಸಿಗಿಸಿ ಸಿಕ್ಕಂತೆ ತಿರುಗಿಸಲು
ಬೇಕೆಂದು ನೂಕಿದೆಯ ಮಾಕಳತ್ರನೆ ಕೇಳೊ ॥ ಅ.ಪ.॥

ಹುಟ್ಟು ಕುರುಡನಂತೆ ಪುಟ್ಟದೆ ಜ್ಞಾನಾದಿಗಳು
ಹೊಟ್ಟೆಗಾಗಿ ತಿರುಗಿದೆನೋ
ಗುಟ್ಟವೊಂದನು ಬಿಡದೆ ಗಟ್ಯಾಗಿ ಕೂಗಿದರು
ದಿಟ್ಟ ಮನಸಿಗೆ ಬಾರದೆ ಶಿಷ್ಟ ಶ್ರೀನಿವಾಸ ॥ ೧ ॥

ತಡೆಯಲಾರೆನೊ ದೇವ ಮದಗಳ ಕಾಟವನು
ಪದುಮನಾಭನೆ ಕರುಣಿಸೋ
ಒದಗುವ ಸಮಯಕ್ಕೆ ಒದಗದಿದ್ದರೆ ನೀನು
ಹದಗೆಡುವುದೋ ಬದುಕು ಮಂದರೋದ್ಧಾರಿ ॥ ೨ ॥

ಅನ್ಯರಾ ಪೊರೆದಂತೆ ಎನ್ನನೂ ಪೊರೆಯದಲೆ
ಬನ್ನಬಡಿಸುವುದು ನ್ಯಾಯವೇ
ಅನ್ನಗೋಸುಗ ನಾನು ಇನ್ನೂ ಕಾಲವ ಕಳೆಯೆ
ನಿನ್ನ ಕಾಣುವುದೆಂದೊ ಚನ್ನನಿತ್ಯಾನಂದವಿಠಲ ॥ ೩ ॥

೫

ಯಾಕೆ ನೀಯೆನ್ನ ಮಾಯಾಪಾಶದಿಂ ಬಿಗಿದೆಯೋ ಹರಿಯೇ ॥ ಪ ॥

ಸಾಕು ಸಾಕು ಬಿಡೋ ನಿನ್ನೇಕಾಂತ ಭಕ್ತರೊಳಿಡೊ ದೇವಾ ॥ ಅ.ಪ. ॥

ಕಾಮಿನಿಯರ ಬಯಸಿ ಕಾಮಕ್ರೋಧಕೆ ಸಿಲುಕಿ
ಕಾಮಜನಕನೆ ನಿನ್ನ ನಾನು ಸ್ಮರಿಸಲಿಲ್ಲ
ಪ್ರೇಮಗುರುಗಳ ಪಾದಕಮಲಗಳಿಗೊಂದಿಸದೆ
ಪಾಮರಾಗ್ರಣಿಯಾದೆ ಕಮಲನಾಭದೇವ ॥ ೧ ॥

ನಾನು ನಾನೆನ್ನುತಲಿ ನನ್ನದೇ ಎಂದೆನುತ
ಸಾನುರಾಗದಿ ದೇವ ನಿನ್ನ ದಾಸರಿಗೆರಗದೆ
ಸನ್ಮುಖದಿ ವಲಿಯುತ್ತ ಎನ್ನ ಸ್ತುತಿಸುವವರಿಗೆ
ಚಿನ್ಮಯನೆ ಅಹಂಕಾರ ಬಲೆಯೊಳಗೆ ಬಿದ್ದೆ ॥ ೨ ॥

ಅಷ್ಟಮದ ಮಾತ್ಸರ್ಯ ಕೆಟ್ಟಹಂಕಾರದಿ ತುಂಬಿ
ಭ್ರಷ್ಟನಾದೆನೊ ನಾನು ಶ್ರೇಷ್ಠಮೂರುತಿಯೆ
ಸೃಷ್ಟೀಶ ನಿತ್ಯಾನಂದವಿಠಲರಾಯ ನಿ–
ನ್ನಿಷ್ಟ ಪರಿಮಳರ ಶ್ರೇಷ್ಠ ಕೃಪೆಯೊಳಗಿರಿಸೊ ॥ ೩ ॥

೬

ವ್ಯರ್ಥ ಹೋಯಿತಲ್ಲ । ಕಾಲ । ವ್ಯರ್ಥಕ್ಕೆ ಹೋಯಿತಲ್ಲ ॥ ಪ ॥

ಚಿತ್ತಜಪಿತನ ನಾಮಸ್ಮರಣೆಯ
ಅರ್ಥಿಯಂ ಭಜಿಸದೆ ಕೆಟ್ಟುಹೋದೆನಲ್ಲ ॥ ಅ.ಪ.॥

ಲೀಲೆಗಳಲ್ಲೇ ಬಾಲ್ಯವ ಕಳೆದೆನು
ಕಾಲದ ಬೆಲೆಯೇ ಇಲ್ಲ
ವ್ಯಾಳಶಯನನೆ ಹಾಳು ಹರಟೆಗಳಲಿ
ಖೂಳನಾದೆ ನಾ ಪಾಲಿಸು ಜೀಯಾ ॥ ೧ ॥

ಯವ್ವನ ಬಂದಿತಯ್ಯಾ । ಎನಗೆ
ಹೆಮ್ಮೆಲಿ ಮೆರೆದೆನಯ್ಯ

ಸವ್ಯಸಾಚಿಯ ಪೊರೆದ ದೇವದೇವೋತ್ತಮ
ಕಾವಕರುಣಿಯೆಂದು ಸೇವೆಯ ಮಾಡದೆ ॥ ೨ ॥

ಜರೆಬಂದ ಮೇಲಿನ್ನು ಪರಿಪರಿ ರೋಗಗಳು
ಹರಿನಾಮವ ಪಾಡಿ ಸವೆಯದೆ
ನರಕುರಿಯಂತೆ ತಿರುಗಿದೆ ಪಾಲಿಸೊ
ಶಿರಿ ನಿತ್ಯಾನಂದ ವಿಠ್ಠಲರೇಯ ॥ ೩ ॥

೬

ಸ್ಥಿರವಾರದೊಡೆಯನೆ ಕೇಳೋ

ಸ್ಥಿರವಾರದೊಡೆಯನೆ ಕೇಳೋ ಅ-
ಸ್ಥಿರ ದೇಹ ನಂಬದ ತೆರಮಾಡೋ ॥ ಪ ॥

ಕರುಣಿ ಎಂದು ನಿನ್ನ ಮೊರೆ ಹೊಕ್ಕೆನೊ ತಂದೆ
ಪರಿಪಾಲಿಸೆನ್ನನು ಉರಗಾದ್ರಿವಾಸ ॥ ಅ.ಪ.॥

ಸಡಲಿದ ದಂತಗಳಾಯ್ತು ಒಡೆದವು ಬಿಳಿಯಕೇಶ
ಒಡಲಿನುದ್ಯೋಗ ಘನವಾಯ್ತು
ಬಿಡಲಾರೆನಲ್ಲೊ ಲೋಕದವಾರ್ತೆಯ ನಾನು
ಸಡಗರಭವದಾಸೆಯಾ ॥ ೧ ॥

ಕೆಡಕು ಯುಕುತಿಗಳೆಲ್ಲ ಅಡಕವಾಗಿರುತಿರೆ
ಹುಡುಕಿದರಿಲ್ಲವೊ ಭಕ್ತಿ
ತಡೆಯಲಾರೆನೊ ದೇವ ಹೆರರವೃದ್ಧಿಯ ಕಂಡು
ಬಡಿದು ಓಡಿಸೊ ಕೆಡಕು ಮನವ ॥ ೨ ॥

ತೊಳಲಿಪುದಜ್ಞಾನ ಶುಭವಲ್ಲ ಭವಯಾತ್ರೆ
ಕುಲಗುರುಗಳು ಲಭಿಸಿಹರು
ಲೋಲ ನಿತ್ಯಾನಂದವಿತಲ ಪಾಲಿಸಬೇಕೆನ್ನ
ಶೀಲ ಹರಿಗುರುಗಳ ಪೊಗಳ್ವ ಭಿಕ್ಷೆಯನಿತ್ತು ॥ ೩ ॥

೮
(ಉಗಾಭೋಗ)

ಎಲ್ಲಿ ಕೂತಲ್ಲಿ ಹರಿಸ್ಮರಣೆ

ಎಲ್ಲ ಮಾತುಗಳಲ್ಲಿ ಹರಿಸ್ಮರಣೆ
ಎಲ್ಲ ಕಾರ್ಯಗಳಲ್ಲಿ ಹರಿಸ್ಮರಣೆ
ಎಲ್ಲೆಲ್ಲು ನೀನಿರಲು ಇದನೇಕೆ ಕೊಡ
ಲೊಲ್ಲೆ ನಿತ್ಯಾನಂದ ವಿಠಲ

೯
(ಉಗಾಭೋಗ)

ದಾಸರಾಯರೆ ನಿಮ್ಮ ಪದಪಿಡಿದು ಬೇಡುವೆನು
ದಾಸಾನುದಾಸ ನಾನೆಂದು ತಿಳಿದು
ಲೇಸಾಗಿ ನಿತ್ಯಾನಂದ ವಿಠಲನ ಹೃದಯಾ
ಕಾಶದಲಿ ತೋರಿರೆಂದು ಕಾಡಿ ಬೇಡುವೆನು

೧೦
(ಉಗಾಭೋಗ)

ನೂರಾರು ಬಹಿರಂಗ ಅರ್ಚನೆಯ ಫಲವೇನು
ಪಾರುಗಾಣದ ಕರ್ಮ ಮಾಡಿದ ಫಲವೇನು ?
ಧಾರುಣಿಯೊಳು ದೇಹ ಬಳಸಿದರೇನು?
ಕರುಣಾಕರ ರಂಗ ಮೆಚ್ಚಿದಿದ್ದ ಮೇಲೆ
ಅರಘಳಿಗೆಯಾದರೂ ಹರಿ ಹರಿ ಹರಿ ಎನ್ನು
ಗುರುಗಳಂತರ್ಯಾಮಿ ಮರುತಾಂತರ್ಗತನ
ನೆರೆನಂಬು ಮನುಜಾ ಘನಕರ್ಮಗಳೆಲ್ಲ
ಹರಿದು ಹೋಗಲಿ ಇನ್ನು, ಆದಷ್ಟೇ ಕರ್ಮವು
ಗುರುಗಳರುಹಿ ಜ್ಞಾನ ಪಥವ ಪಿಡಿಯೋ
ಮರುತಾಂತರ್ಯಾಮಿಯಾದ ಪರಮಪುರುಷ,
ಉರುಗಶಯನ ನಮ್ಮ ನಿತ್ಯಾನಂದವಿಠಲ
ಕರೆದುಕೊಡುವ ಮುಕುತಿ

೧೧

(ಉಗಾಭೋಗ)

ಬಡವನೆಂದು ಕಡು ದರಿದ್ರನೆಂದು
ಕಡೆಗಣಿಸದಿರೆನ್ನ ದೇವ
ಒಡೆಯನೀ ದೇಹವನು ತೊರೆದರೆ
ಸುಡುವರೋ ಅಗ್ನಿಯಲಿ ದೇಹ
ಒಡೆಯ ಮಾಡಿಕೊಳ್ಳೊ ನಿನ್ನ
ಅಡಿಗಳಲ್ಲಿ ಎನ್ನ
ಪೊಡವಿಪಾಲಕ ನಿತ್ಯಾನಂದವಿಠಲ

೧೨

(ಉಗಾಭೋಗ)

ಮಾಡುವ ಕೆಲಸಗಳೆಲ್ಲ ಹರಿಸೇವೆ
ಆಡುವ ಮಾತುಗಳಲ್ಲಿ ಹರಿಮಂತ್ರ
ಕೂಡಾಡುವುದೆಲ್ಲ ಹರಿಪೂಜೆ
ಒಡೆಯ ನೀನೊಲಿದವರಿಗೆ ಇಂಥಾ
ಸಡಗರವಿಲ್ಲದಿನ್ನೇನು
ಒಡೆಯ ನಿತ್ಯಾನಂದ ವಿಠಲ

೧೩

(ಉಗಾಭೋಗ)

ರೋಗ ನೀ ಹರಿಯದಿದ್ದೊಡೆ ಅರೋಗಿ ನಾ ಹೇಗೋ?
ಪೋಗದಿರೆ ಅಹಂಮಮತೆ ವೈರಾಗ್ಯವೆಂತಹುದೋ
ಭಾಗವತರ ಒಡನಾಡದಲೆ ಜ್ಞಾನ ಪುಟ್ಟುವುದೆಂತೊ
ಕೂಗು ಕೇಳದೆ ನಿನಗೆ ನಿತ್ಯಾನಂದ ವಿಠಲರೇಯ
ಪೋಗಿ ಮದಗರ್ವಗಳು ಮನ ಚೆನ್ನಾಗಿ
ಬಾಗುವಂದದಿ ಮಾಡಯ್ಯ ಭಾಗ್ಯನಿಧಿಯೆ

❖❖

ಸಂಪತ್ತೈಯ್ಯಂಗಾರ್ (೧೯೦೧ – ೧೯೮೩)

ಸಂಸ್ಕೃತವಿದ್ವಾಂಸರೂ, ಸರಕಾರಿ ಸಂಸ್ಕೃತಕಾಲೇಜುಗಳ ಪ್ರಾಚಾರ್ಯರೂ ಆಗಿದ್ದ ಎಸ್.ಸಂಪತ್ತೈಯ್ಯಂಗಾರ್ ಅವರು ಹತ್ತಾರು ಕನ್ನಡ–ಸಂಸ್ಕೃತ ಮೌಲಿಕ ಕೃತಿಗಳನ್ನು ರಚಿಸಿರುವುದರ ಜೊತೆಗೆ ಹತ್ತಾರು ಕೀರ್ತನೆಗಳನ್ನು ರಚಿಸಿ ಕೀರ್ತನಕಾರರೆನಿಸಿದ್ದಾರೆ.

ವಿಶಿಷ್ಟಾದ್ವೈತ ತತ್ತ್ವವಿದರಾಗಿದ್ದ ಮೈಸೂರಿನ ಶ್ರೀ ರಂಗಾಚಾರ್ ಅವರ ಎರಡನೇ ಪುತ್ರರಾಗಿ ಎಸ್. ಸಂಪತ್ತೈಯ್ಯಂಗಾರ್ ಮೈಸೂರಿನಲ್ಲಿ ೧೭–೧–೧೯೦೦ರಲ್ಲಿ ಜನಿಸಿದರು. ಬಾಲ್ಯ ವಿದ್ಯಾಭ್ಯಾಸ ಮೈಸೂರಿನಲ್ಲೇ ಮುಗಿಸಿ ೧೬ನೇ ವಯಸ್ಸಿಗೆಲ್ಲ ಸಂಸ್ಕೃತ, ಇಂಗ್ಲಿಷ್, ಕನ್ನಡಗಳಲ್ಲಿ ಅಪಾರಪಾಂಡಿತ್ಯ ಸಂಪಾದಿಸಿದ್ದ ಸಂಪತ್ ಅಯ್ಯಂಗಾರರಿಗೆ ಉಪಾಧ್ಯಾಯ ವೃತ್ತಿ ಒಲಿದುಬಂದು ಸಂಸ್ಕೃತ ಎಂ.ಎ.ಯ ಆಧಾರದ ಮೇಲೆ ಮುಂದೆ ಸರ್ಕಾರಿ ಸಂಸ್ಕೃತ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ಪ್ರಾಚಾರ್ಯರಾಗಿ ಸೇವೆ ಸಲ್ಲಿಸಿದ್ದಾರೆ. ೧೯೬೫ರಲ್ಲಿ ಸಿದ್ಧಗಂಗಾ ಸಂಸ್ಕೃತ ಕಾಲೇಜಿನಲ್ಲಿದ್ದಾಗ ನಿವೃತ್ತರಾದ ಮೇಲೆ ಸಂಪೂರ್ಣವಾಗಿ ಆಧ್ಯಾತ್ಮದ ಕಡೆ ಒಲಿದು ಧ್ಯಾನ, ಅಧ್ಯಯನಗಳಲ್ಲಿ ತೊಡಗಿ ಹತ್ತಾರು ಧಾರ್ಮಿಕಗ್ರಂಥಗಳನ್ನು ಕನ್ನಡ ತಮಿಳಿನಲ್ಲಿ ಕೀರ್ತನೆಗಳನ್ನು ರಚಿಸಿದ್ದಾರೆ. ಸೇವೆಯಲ್ಲಿದ್ದಾಗಲೆ ಇವರು ರಚಿಸಿದ್ದ ಸಂಸ್ಕೃತಸಾಹಿತ್ಯ ಚರಿತ್ರೆ ಒಂದು ಆಚಾರ್ಯಕೃತಿಯಾಗಿದೆ. ೧೬–೫–೧೯೮೩ರಲ್ಲಿ ವೈಕುಂಠ ವಾಸಿಗಳಾದ ಅಯ್ಯಂಗಾರರು ಭಗವಂತನ ಅಂತರಂಗ ಭಕ್ತರಾಗಿ ಸಂಪ್ರದಾಯದ ವಿಶಿಷ್ಟಾದ್ವೈತ ಧರ್ಮದ ಶರಣಾಗತಿ ಭಕ್ತಿಯಲ್ಲಿ ಮುಳುಗಿದ್ದ ಪರಮಭಕ್ತರಾಗಿದ್ದರು. 'ತಿರುಪ್ಪಾವೈ ಹೃದಯ' ಇವರ ಪ್ರಮುಖ ಧಾರ್ಮಿಕ ಗ್ರಂಥ.

ಪ್ರಸ್ತುತ ಕೀರ್ತನೆಗಳಲ್ಲಿ ಕಂಡುಬರುವ ಸಾಮಾಜಿಕ ಚಿಂತನೆ ಅನನ್ಯವಾಗಿದೆ ಮತ್ತು ಮಾರ್ಮಿಕವಾಗಿದೆ.

೧೪

ಇಲ್ಲಿಗೇಕೆ ಬಂದೆಯೊ ಮಾನವ
ಇಲ್ಲಿರಲು ಶಾಶ್ವತ ಸಾಧ್ಯವೇ ಹೇಳೋ ॥ ಪ ॥

ಬಗಲಿಲ್ಲ ಕೇಳಿ ನೀನು ಹೇಳಿ ಹೋಗುವನಲ್ಲ
ಇರಲು ಇಲ್ಲಿ ನಿನಗೇಕೆ ಚಿಂತೆ ಕಾಡುತಿಹುದಯ್ಯ ॥ ಅ.ಪ.॥

ಜವನು ನಿನ್ನ ಬೇಡನೆಂದರು ಒಯ್ಯುವನಯ್ಯ
ಅವನ ಪಾಲಿಗೆ ನೀನು ಅನ್ನವಾಗಿ ನಿಂತಿರುವ
ದೈವ ಕಮಲಾಕ್ಷನಿಗೆ ಅವನು ಉಪ್ಪಿನಕಾಯಿ
ಅವನ ಚರಣ ಪಿಡಿದು ಬರುವುದೇನಿದೆ ನೋಡೊ ॥ ೧ ॥

ನಂಬು ರಾಮನ ನೂತನು ಕೃಷ್ಣಾ ಹಾಡಿದ ಹಾಡನು
ನಂಬಿ ಬಾಳಯ್ಯ ನೀನು ಪದುಮನಾಭನ ಚರಣ
ತಂಬಿ ಕೇಳೋ ಧರಣಿನಾಥನೆ ಕರುಣೆಸಾಗರನಯ್ಯ
ನಂಬು ಶೆಲ್ವರಾಯನೆ ದೇವ ಮುಕುತಿದಾತನು ಅವನೆ ॥ ೨ ॥

೧೫

ಕೂಡಿ ಬನ್ನಿರಯ್ಯ ನೀವು ಬಂದು ನೋಡಿರಯ್ಯ
ಓಡಿಬಂದು ಹಿಂದೆ ಮುಖಕೆ ಮಸಿಯ ಬಳಿದನಯ್ಯ ॥ ಪ ॥

ಆಟವಾಯಿತವಗೆ ನೋಡಿ ಪಾಪವಾಯಿತೆನಗೆ ಇಲ್ಲಿ
ಬಿಟ್ಟರೆಮಗೆ ನೀವು ಸಾಕ್ಷಿ ಪೇಳ್ವರಾರು ಹೇಳಿರಯ್ಯ ॥ ಅ.ಪ.॥

ಇದ್ದುದನ್ನು ಹೇಳಿ ನೀವು ಮರೆಯಬೇಡಿರಯ್ಯ
ಪೇಳ್ದೆನಯ್ಯ ತಪ್ಪು ನಾನು ಕೆನ್ನೆ ಬಡಿಯಿರಯ್ಯ ॥ ೧ ॥

ಮಸಿಯ ಕೊಟ್ಟು ಮುಂದೆ ಅವನು ಮುಗುಳಿನಕ್ಕಿ ಹೋದ
ಹುಸಿಯಲಾರದೆನ್ನ ಮುಖಕೆ ಹಚ್ಚಿಕೊಂಡೆನಯ್ಯ ॥ ೨ ॥

ಅಣ್ಣನ ಬೈಯ್ಯಬೇಡಿರಯ್ಯ ತಪ್ಪು ನನ್ನದಯ್ಯ
ಕಣ್ಣು ಕಪ್ಪು ಹಚ್ಚಿ ತನ್ನ ನೋಡು ಎಂದ ಅವನು ॥ ೩ ॥

ಮುಚ್ಚಿ ಕೊಟ್ಟನಯ್ಯ ಕಣ್ಣು ಬಿಚ್ಚಿಕೊಳ್ಳಲಿಲ್ಲ ನಾನು
ಪೆಚ್ಚುಹೋದೆ ಶೆಲ್ವ ಶರಣು ತಿಳಿಸಿ ಸಲಹಿರಯ್ಯ ನೀವು ॥ ೪ ॥

❖❖

ಕೆ.ವಿ.ಕೃಷ್ಣಯ್ಯಂಗಾರ್
ಅಂಕಿತ : ಜಲವಾಸುದೇವ

ನಾಟಕಕಾರರೂ ಕವಿಗಳೂ ಕೀರ್ತನಕಾರರೂ ಆಗಿದ್ದ ಕೆ.ವಿ.ಕೃಷ್ಣಯ್ಯಂಗಾರ್ ಚಾಮರಾಜನಗರ ತಾ ॥ ಕುಲಗಣಂ ಅಗ್ರಹಾರದ ಕೀಳಲಿಪುರದ ಶ್ಯಾನುಭೋಗರಾಗಿದ್ದ ವೆಂಕಟರಾಮ ಶ್ಯಾನುಅಯ್ಯಂಗಾರ್ ಮತ್ತು ಸಾಕಮ್ಮಾಳ್ ಅವರ ಪುತ್ರರು. ಪಂಕಜಮ್ಮಾಳ್‌ರೊಂದಿಗೆ ವಿವಾಹವಾಗಿ ಶ್ಯಾನುಭೋಗಿಕೆಯನ್ನು ಮುಂದುವರಿಸುತ್ತಲೇ ಕವಿಗಳಾಗಿ, ಕಲಾವಿದರಾಗಿ ಜನಮಾನಸದಲ್ಲಿ ನಿಂತಿದ್ದ ಕೃಷ್ಣಯ್ಯಂಗಾರ್ 'ಪಣ್ಣದ ಹಳ್ಳಿ ಕೃಷ್ಣ' ಎಂದೇ ಸುಪರಿಚಿತರಾಗಿದ್ದರು. ಬಾಲ್ಯದಿಂದಲೇ ವೇದಾಧ್ಯಯನ ಮಾಡಿ ಪೌರೋಹಿತ್ಯ. ಜ್ಯೋತಿಷ್ಯ, ಶಾಸ್ತ್ರಗಳಲ್ಲೂ ಪರಿಣಿತರಾಗಿ ಸುತ್ತಲಿನ ಸಮಾಜಕ್ಕೆ ಸೇವೆಸಲ್ಲಿಸಿದ್ದಾರೆ. ಕವಿ, ಗಮಕಿ, ವ್ಯಾಖ್ಯಾನಕಾರ ಹರಿಕಥಾಕಾರ, ನಾಟಕಕಾರ, ನಟ ಹೀಗೆ ಹತ್ತು ಹಲವು ರಂಗಗಳಲ್ಲಿ ಬೆಳೆದಿದ್ದ ಕೃಷ್ಣಯ್ಯಂಗಾರರು ಹತ್ತಾರು ಕೃತಿಗಳನ್ನು ರಚಿಸಿದ್ದಾರೆ. ಆದರೆ ಅವು ಯಾವುವೂ ಲಭ್ಯವಿಲ್ಲ.

ಬಾಲ್ಯದಿಂದಲೇ ಆಧ್ಯಾತ್ಮಧ್ಯಾನದಲ್ಲಿದ್ದ ಕವಿಗಳು ಗ್ರಾಮದ ಆರಾಧ್ಯದೈವ 'ಜಲವಾಸುದೇವ'ನನ್ನು ಅಂಕಿತವಾಗಿ ಸ್ವೀಕರಿಸಿ ನೂರಾರು ಕೀರ್ತನೆಗಳನ್ನು ರಚಿಸಿದ್ದಾರೆ. ಮನೆತನದಿಂದ ಬಂದ ಸಂಪ್ರದಾಯವಾದ ಶ್ರೀವೈಷ್ಣವ ಭಕ್ತಿಸಿದ್ಧಾಂತದಲ್ಲಿ ಇವರ ಕೀರ್ತನೆಗಳಿದ್ದು ಶರಣಾಗತಿ ಭಕ್ತಿಯ ಪ್ರತಿಪಾದಕವಾಗಿವೆ. ೭೫ ಕೀರ್ತನೆಗಳ ಒಂದು ಪುಸ್ತಕ ೨೦೦೮ರಲ್ಲಿ ಪ್ರಕಟವಾಗಿದ್ದು ಅದರಿಂದ ಇಲ್ಲಿನ ೨ ಸಾಮಾಜಿಕ ಕೀರ್ತನೆಗಳನ್ನು ಕೊಟ್ಟಿದೆ. 'ನಂಬಿಕೆ' ಭಾವವನ್ನೇ ಒಂದು ಕೀರ್ತನೆಯಲ್ಲಿ ಕೇಂದ್ರವಾಗಿಸಿಕೊಂಡು ಮನುಷ್ಯನಿಗೆ 'ನಂಬಿಕೆ' ಎಷ್ಟು ಮುಖ್ಯ ಎಂಬುದನ್ನು ಮಾರ್ಮಿಕವಾಗಿ ಹೇಳಿದ್ದಾರೆ. ಇನ್ನೊಂದರಲ್ಲಿ ಇಸ್ಪೀಟಾಟವನ್ನೆ ಕೇಂದ್ರವಾಗಿಸಿ ಬದುಕಿನ ಸಾರವನ್ನು ಕಟ್ಟಿಕೊಟ್ಟಿದ್ದಾರೆ.

೧೬

ರಾಗ : ಕಲ್ಯಾಣಿ **ತಾಳ : ರೂಪಕ**

ಘಾನ್ಸು (ನೀ ಕೊಡೆ ನಾ ಬೀಡೆ)

ನಂಬಿದೆ ನಂಬಿದೆ ಗೋವಿಂದ । ನಿನ್ನ ।
ನಂಬಿದೆ ನಂಬಿದೆ ನಲವಿಂದ ॥ ಪ ॥

ನಂಬಿದವರಮಿಗೆ । ನಂಬಿಗೆಯಿಂದಲಿ ।
ಬೆಂಬಿಡದೇ ಸಲುಹುವನೆಂದೂ ।
ನಂಬಿದವರು ಪೇಳೆ, ನಂಬಿದೇ ಮಾಧವ ।
ನಂಬಿಗೆಗೇ ಸ್ಥಳ ಕೊಡುದೇವ ॥ ಅ ॥

ಹಿಡಿಯಲಾಗದು ಮನ ಕಡುಚಂಚಲವವು ।
ಕೊಡುಸ್ಥಿರ ಬುದ್ಧಿ ಬಿಡಿಸಿದೆನು
ಕೆಡುಗರೈವರು ಯೆನ್ನ ಬಿಡದೆ ಕಾಡುತಲಿಹರು ।
ಕೊಡದಿರು ಭಕ್ತನದುರಳರಿಗೆ ॥ ೧ ॥

ಬೆನ್ನಬಿಡದೆ ನೆರೆದುನ್ನತ ಕರ್ಮವು
ಯನ್ನೊಳು ಸೇರುತಲಿಹುದಯ್ಯ
ಪನ್ನಗಶಯನವೆ ತಪ್ಪಿಸುಬಂಧ
ವನ್ನು ಚಿದಾನಂದಕೃಪೆಯಿಂದ ॥ ೨ ॥

ಶ್ರೀಶನೇ ಫಲಭವ ರಾಶಿಯೊಳು ದಿಸುತ
ಘಾಸಿಯಾದೆ ನಿನ್ನಧ್ಯಾನಿಸಿದೆ
ದೋಷವಹರಿಸುತ ದಾಸನವೊರೆ ಜಲ
ವಾಸುದೇವನೆ ಗೋವಿಂದಾ ॥ ೩ ॥

ರಾಗ : ತಾಳ :

ಛಾಪು (ನನಿನಂದನಾನೆಂಬಂತೆ)

ಸತ್ಪುರುಷರು ಇಸ್ಪೈಟಾಡಲು ಬೇಕು ॥ ಪ ॥

ತಪ್ಪದೆ ಇಹಪರ ವೆರಡರೊಳುನಡೆದು
ತಪ್ಪಿಸುತ್ತಲಿಮಿಗೆ ಯೊಪ್ಪುವೆರಡನೆಬಂಧ ॥ ಅ. ಪ॥

ತಿಳಿದುತ್ರಿಗುಣವನ್ನು ಚರಿಸುತ್ತಲಿ
ಬಳಿಕ ಮೂರನೆಬಂಧ ತಿಳಿದು ಕೊರೆಯುತ್ತಲಿ
ಫಲಪುರುಷಾರ್ಥ ತುಷ್ಟಯದಿಂದಲಿ
ತೊಳೆವ ನಾಲ್ಕನೆ ಬಂಧವನು ಗೈಯುತ್ತಲಿ ॥ ೧ ॥

ಮೆರೆವ ಪಂಚೇಂದ್ರಿಯ ಪರಿಯನ್ನರಿತು
ತೊರೆದಾ ಪ್ರಿದನೇ ಬಂದನು ಬಂಧಿಸು
ಅಂತು ಷಡ್ವೈರಿಗಳ ತೆರೆನನು ಮನದಲಿ
ನಿರುತಕಳಿಯುತ್ತಲಿ ಆರನೇ ಬಂಧ ॥ ೨ ॥

ಕಳೆದು ಸಪ್ತವ್ಯಸನ ಎಂಬ ಏಳನೆಬಂಧ
ಉಳಿದಷ್ಟ ಮದವೆಂಬ ಎಂಟನೆಬಂಧ
ತಿಳಿದು ಒಂಬತ್ತನೆ ಬಂಧು ಎಂದೆನ್ನುವ
ಲಲಿತರೂಪದನವ ವಿಧಭಕ್ತಿಯಿಂದ ॥ ೩ ॥

ಎಸೆವೆಹತ್ತನೆಯ ಬಂಧ ಎನ್ನುವ
ದಶಯಿಂದ್ರಿಯಾಗಳನು ಬಂಧಿಸುತ್ತಲಿಮಿಗೆ
ನಸಿನದಿಂದಗುಲಾಮ ನಿಸುವಚತುರ್ಮುಖ ಬ್ರಹ್ಮ
ಮಿಸುಪರಾಣಿಯೆಂಬ ಮೂಲ ಪ್ರಕೃತಿಯಿಂದು ॥ ೪ ॥

ರಾಜನೆಂದೆಂಬ ಸಗುಣಬ್ರಂಹ
ತೇಜವತಿಳಿಯುತ ಹಾಸೆಂದೆನುವ
ಸೋಜಿಗಪರಬ್ರಹ್ಮ ಶ್ರೀ ಜಲವಾಸುದೇವನ
ರಾಜಿತಪರಮಪಾದವ ಸೇರಲೋಸುಗ ॥ ೫ ॥

ಗೋಪಾಲಕೃಷ್ಣ ವಿಠಲ ಅಂಕಿತದ ಕೀರ್ತನೆಗಳು (೧೮-೩೩)

ಅಂಬಾಬಾಯಿ ಕೀರ್ತನೆಗಳು (೧೯೦೨-೧೯೪೩)

ತಂದೆ ಮುದ್ದುಮೋಹನದಾಸರಿಂದ ಅಂಕಿತ ಪಡೆದವರಲ್ಲಿ ಪ್ರಸಿದ್ಧ ಹರಿದಾಸಿ ಅಂಬಾಬಾಯಿ ಭೀಮಸೇನರಾಯ - ಭಾರತೀಬಾಯಿ (ವೆಂಕಮ್ಮ) ದಂಪತಿಗಳಿಗೆ ೧೯೦೨ರಲ್ಲಿ ಜನಿಸಿದರು. ೪ನೇ ತರಗತಿವರೆಗೆ ಓದಿದ ಅಂಬಾಬಾಯಿ ಅವರಿಗೆ ೧೧ನೇ ವರ್ಷಕ್ಕೆ ಗೋಪಾಲಪುರದ ಹನುಮಂತಾಚಾರ್ಯ ಎಂಬ ಬಾಲಕನೊಂದಿಗೆ ವಿವಾಹವಾಯಿತು. ೧೨ನೇ ವಯಸ್ಸಿನಲ್ಲಿ ತಂದೆಯನ್ನೂ ಗಂಡನನ್ನೂ ಒಂದೇ ದಿನದಲ್ಲಿ ಪ್ಲೇಗ್ ಮಾರಿಯ ಕಾರಣದಿಂದ ಕಳೆದುಕೊಂಡ ಅಂಬಾಬಾಯಿ ಸಂಕಷ್ಟಗಳ ಸರಮಾಲೆಗೆ ಒಳಗಾದಳು. ಗಂಡನ ಮನೆಯಿಂದ ದೂಡಲ್ಪಟ್ಟ ಅಂಬಾಬಾಯಿ ತಂಗಿ, ತಮ್ಮನ ಮನೆಗಳಲ್ಲಿ ೧೬ ವರ್ಷ ಬದುಕನ್ನು ಸವೆಸಿದರು. ಅಲ್ಲಿ ಮನೆಗೆಲಸ, ಮಕ್ಕಳ ಆರೈಕೆ, ಬಾಣಂತಿತನ ಮಾಡುವುದರ ಜತೆಗೆ ಪೂಜೆ ಉಪವಾಸ ವ್ರತ. ಅಧ್ಯಯನ ಮೊದಲಾದ ಧಾರ್ಮಿಕ ಆಚರಣೆಗಳಲ್ಲಿ ನಿರತರಾಗಿದ್ದ ಅಂಬಾಬಾಯಿ ೧೯೩೧ರಲ್ಲಿ ತಂದೆ ಮುದ್ದುಮೋಹನದಾಸರಿಂದ ಗೋಪಾಲಕೃಷ್ಣವಿಠ್ಠಲ ಎಂಬ ಅಂಕಿತ ಪಡೆದು ಕೀರ್ತನೆಗಳನ್ನು ರಚಿಸಿ ಹರಿದಾಸಿ ಆದರು. ಕಾಲಿಗೆ ಗೆಜ್ಜೆ ಕಟ್ಟಿ ಕೈಯಲ್ಲಿ ತಾಳ ಬಾರಿಸುತ್ತ ಬದಲಿಗೆ ತಂಬೂರಿ ಹಿಡಿದು ಜೋಳಿಗೆ, ತುಳಸೀಮಾಲೆ ಧರಿಸಿ ಕಾವಿಸೀರೆ ಉಟ್ಟು ಮಧುಕರಿ ವೃತ್ತಿಯಲ್ಲಿ ಜೀವಿಸುತ್ತ ತೀರ್ಥಕ್ಷೇತ್ರಗಳಲ್ಲಿ ಚರಿಸುತ್ತ ಕೀರ್ತನೆ, ಕಾವ್ಯ ರಚಿಸಿ ಹಾಡುತ್ತಾ ದಾಸಸಾಹಿತ್ಯ ಪ್ರಚಾರ ಮಾಡಿದ ವಾಗ್ಗೇಯಕಾರ್ತಿ ಅಂಬಾಬಾಯಿ ಒಬ್ಬರೇ. ಅಂಕಿತ ಪಡೆದು ಕೀರ್ತನೆ ರಚಿಸಿದ ಕವಿಯತ್ರಿಯರಾದ ಹರಿದಾಸಿಯರು ಬೇಕಾದಷ್ಟು ಜನ ಇದ್ದಾರೆ. ಆದರೆ ೨೦ನೇ ಶತಮಾನದಲ್ಲಿ ಹರಿದಾಸಿಯಾಗಿ ದಾಸ ವೇಷದಲ್ಲಿ ಮಧುಕರಿವೃತ್ತಿ ಮಾಡಿದ ಹರಿದಾಸಿ ಅಂಬಾಬಾಯಿ ವಿಶಿಷ್ಟ ವ್ಯಕ್ತಿಯಾಗಿದ್ದಾರೆ. ರಾಮಾಯಣ ಕಾವ್ಯ ಬರೆದ ಅಂಬಾಬಾಯಿ ತಮ್ಮ ಕಾವ್ಯದ ಸುಂದರಕಾಂಡದ ಪ್ರವಚನಗಳಿಂದ ಸುಂದರಕಾಂಡದ ಅಂಬಾಬಾಯಿ ಎಂದೇ ಪ್ರಸಿದ್ಧರಾಗಿದ್ದರು. ೩೦೦ಕ್ಕೂ ಹೆಚ್ಚು ಕೀರ್ತನೆ, ಉಗಾಭೋಗಗಳನ್ನು ರಚಿಸಿರುವ ಅಂಬಾಬಾಯಿ ಅವರು ೧೯೪೫ರಲ್ಲಿ ೪೧ನೇ

ವಯಸ್ಸಿನಲ್ಲಿ ತೀರ್ಥಕ್ಷೇತ್ರ ಯಾತ್ರೆಯಲ್ಲಿಯೇ ನಿಧನರಾದರು. ತಮ್ಮ ದಿನಚರಿಯನ್ನು ಬರೆದಿಟ್ಟಿರುವ ಅಂಬಾಬಾಯಿ ಚಾರಿತ್ರಿಕ ದೃಷ್ಟಿಯ ಹರಿದಾಸಿ ಆಗಿದ್ದರು.

೨೦ನೇ ಶತಮಾನದಲ್ಲಿ ಕುವೆಂಪು ಅವರಿಗಿಂತ ಮುಂಚಿತವಾಗಿ ರಾಮಾಯಣ ಮಹಾಕಾವ್ಯವನ್ನು ಕನ್ನಡದಲ್ಲಿ ಬರೆದ ಕೀರ್ತಿ ಅಂಬಾಬಾಯಿಗೆ ಸಲ್ಲುತ್ತದೆ.

ಗೋಪಾಲಕೃಷ್ಣ ವಿಠಲ ಅಂಕಿತದ ಕೀರ್ತನೆಗಳು (೧೮-೩೪)
(ಅಂಬಾಬಾಯಿ ೧೯೦೨-೧೯೪೫)

೧೮

ಎಷ್ಟು ದಿವಸ ಹೀಗೆ ಕಳೆಯಲೊ ಗೋಪಾಲಕೃಷ್ಣ
ಎಷ್ಟು ದಿವಸ ಹೀಗೆ ಕಳೆಯಲೊ ॥ ಪ ॥

ಎಷ್ಟು ದಿವಸ ಹೀಗೆ ಎನ್ನ ಸೃಷ್ಟಿಗೊಡೆಯ ಬಳಲಿಸುವೆಯೊ
ಕಷ್ಟಪಡಲಾರೆ ಭವದಿ ದೃಷ್ಟಿಯಿಂದ ನೋಡಿ ಸಲಹೋ ॥ ಅ.ಪ.॥
ನಾನಾ ಜನ್ಮದಿ ತೊಳಲಿಸಿ ಎನ್ನನು

ನೀನೆ ತಂದೆಯೊ ಮಾನವತ್ವದಿ
ನಾನು ಎಂಬುದು ಬಿಡಿಸಿ ಈಗ
ನೀನೆ ಕರ್ತನೆನಿಸಿ ಕಾಯೋ ॥ ೧ ॥

ದೇಹಸ್ಥನೆಂದೆನಿಸಿ ಎನ್ನ
ದೇಹ ಮಧ್ಯದಿ ಕಾಣದಿಹರೆ
ದೇಹಗಳನು ಧರಿಸಲಾರೆ
ದೇಹ ಮೋಹ ಬಿಡಿಸದಿದ್ದರೆ ॥ ೨ ॥

ಭೃತ್ಯವತ್ಸಲನೆಂದು ನಿನ್ನ
ಭಕ್ತರೆಲ್ಲರು ಕರೆಯತಿಹರೊ
ಪೊತ್ತ ಬಿರುದು ಬಿಡುವರೇನೊ
ಭೃತ್ಯಳೆಂದು ಎನ್ನ ಸಲಹೊ ॥ ೩ ॥

ಹೋಗುತಿದೆ ದಿವಸ ನೋಡು
ಬೇಗಬೇಗನೆ ದಯವ ಮಾಡು

ಭೋಗದಲಿ ವೈರಾಗ್ಯ ನೀಡು
ಭಾಗವತರ ಸಂಗ ಕೊಡು ॥ ೪ ॥

ಕರ್ಮದಲಿ ಶ್ರದ್ಧೆಯಿಲ್ಲ
ಧರ್ಮದಲ್ಲಿ ಬುದ್ಧಿಯಿಲ್ಲ
ನಿರ್ಮಲದ ಜ್ಞಾನವಿಲ್ಲ
ನಿರ್ಮಲಾತ್ಮ ಬಲ್ಲೆಯಲ್ಲ ॥ ೫ ॥

ಅಂಧಕಾರದಿ ಎನ್ನನಿರಿಸಿ
ಚಂದವೇನೋ ಹೀಗೆ ಮಾಳ್ಪುದು
ದ್ವಂದ್ವ ಕರ್ಮ ಸ್ವೀಕರಿಸಿ
ಮುಂದೆ ಕರ್ಮವಿಡದೆ ಸಲಹೋ ॥ ೬ ॥

ಅಪಾರ ಜನುಮದಲ್ಲಿನ
ಪಾಪ ಸಮೂಹಗಳ ತರಿದು
ಶ್ರೀಪಾದಸ್ಮರಣೆ ನೀಡೋ
ಗೋಪಾಲಕೃಷ್ಣ ವಿಠ್ಠಲ ॥ ೭ ॥

೧೯

ಗುರು ಪೇಳಿದ ಸದ್ಗುಣಗಳೆ ಪಾದಾಭರಣ
ಗುರುವಿನ್ವಾತ್ಸಲ್ಯವೆ ಪರಿಮಳ ದ್ರವ್ಯ
ಗುರು ಅನುಗ್ರಹವೆಂಬೊ ಮಂಗಳ ದ್ರವ್ಯಗಳು
ಗುರುಮಾತೆ ಎನ್ನ ಪೋಷಿಸಿ ಹರಿಗೆ ಕೊಡಲು ॥ ೫ ॥

ಹೃದಯವೆ ಲಗ್ನಮಂಟಪ ದಿವ್ಯ ಶೃಂಗಾರ
ಪದುಮಭವ ಸುರರೆ ನೆರೆದಿಹ ಬಂಧುಬಳಗ
ಒದಗಿಬಹ ಸುಜ್ಞಾನ ಸಂಭಾರ ಸಲಕರಣೆ
ಮದನಪಿತನೆದುರಿಗೆ ನಿಲಿಸಿ ಧಾರೆಯನೆರೆಯೆ ॥ ೬ ॥

ಗುರುವೆ ಜನನಿ ಜನಕ ಗುರುವೆ ಪುರೋಹಿತರು
ಗುರುವಚನವೆಂಬ ಅಕ್ಷತೆ ಎರಚುತಿರಲು
ಪರಮ ಜೀವಚ್ಛಾದಿ ಕದ ಪರದೆ ತೆಗೆಯುತಿರೆ

ಹರಿಗೆ ಗುಣನಾಮ ಜೀರಿಗೆ ಬೆಲ್ಲ ಎರಚೆ
ಸುಮನೋವೃತ್ತಿಗಳೆಂಬ ಕಮಲದ್ಹಾರವನಾಕಿ
ಕಮಲನಾಭನ ಪದಕೆರಗಿನಿಲಲೂ
ಕಮಲಹಸ್ತವ ಶಿರದ ಮೇಲಿಟ್ಟ ಶ್ರೀ ಕೃಷ್ಣ

೨೦

ಗುರುವೆ ನಿಮ್ಮನು ನಾ ಮೊರೆಹೊಕ್ಕೆನಲ್ಲದೆ
ಅರಿಯೆ ಅನ್ಯರನಿನ್ನು ಪೊರೆಯಿರೀಗ ॥ ಪ ॥

ಸಿರಿಯರಸನ ತೋರಿ ಗುರುವೆ ಕರುಣಿಸಿರಿ
ತರತಮ್ಯ ತಿಳಿಸುತ ಹರಿಸಿರಿ ಭವದುಃಖ ॥ ಅ.ಪ.॥

ಬಂದೆನು ಭವದೊಳು ನಿಂದೆನು ತಾಪದಿ । ಹಿಂದು ಮುಂದರಿಯದೆ ಕುಂದಿದೆನು॥
ಬಂದು ಕರುಣದಿ ಆನಂದವ ನೀಡುತ । ನಂದಕಂದನ ಲೀಲೆಯಿಂದ ರಕ್ಷಿಸಿದಿರಿ ॥ ೧ ॥

ಮುಸುಕಿದ ಅಜ್ಞಾನ ಹಸನಾಗಿ ತೊಲಗಿಸಿ । ಕುಶಲದ ಮತಿಯಿತ್ತು ಪಾಲಿಸುತ।
ಬಿಸಜಾಕ್ಷನು ದಯ ಎಸೆವ ಕರುಣದಿಯಿತ್ತು । ಘಸಣೆಗೊಳಿಸದಲೆ
ವಸುಮತಿಯೊಳು ಪೊರೆವ ॥ ೨ ॥

ಕಷ್ಟಪಡಲಾರೆ ಸೃಷ್ಟಿಯೊಳಗಿನ್ನು। ತಟ್ಟದೆ ಎನ್ನ ಮೊರೆ ಮನಸಿಗೀಗ
ಕೊಟ್ಟು ಅಭಯವನು ಘಟ್ಯಾಗಿ ಪೊರೆಯಿರಿ । ಕೆಟ್ಟ ಕಲ್ಮಷ ಕಳೆದು
ಸೃಷ್ಟಿಗೊಡೆಯನ ತೋರಿ ॥ ೩ ॥

ತಲ್ಲಣಿಸುತಿಹ ಕ್ಷುಲ್ಲದೇಹದಿ ಬಂದು । ಒಲ್ಲೆನು ಈ ದುಃಖಭವ
ಎಲ್ಲಮನಸು ನಿಮ್ಮ ಪಾದದಲಿರುವುದು । ತಲ್ಲಣಗೊಳಿಸದೆ ಪೊರೆಯಿರಿ
ಗುರುದೇವ ॥ ೪ ॥

ತಂದೆ ಮುದ್ದು ಮೋಹನ ವಿಠ್ಠಲನೆಂಬೊ । ಇಂದಿರೇಶನ ಅಂಕಿತದಿ ಮೆರೆವೊ
ಸುಂದರ ಗೋಪಾಲಕೃಷ್ಣ ವಿಠ್ಠಲನ । ಎಂದೆಂದಿಗೂ ಮನ ಮಂದಿರದಲಿ
ಕಾಂಬ ॥ ೫ ॥

೨೧

ಚಿಂತಾರಹಿತ ಮೂರ್ತಿ ಚಿನ್ಮಯಾತ್ಮಕರೂಪ
ಸಂತತದಿ ನೆನೆವವರ ಸಲಹೋ ಕರುಣಿ ॥ ಪ ॥

ಚಿಂತೆಯಲಿ ಜಗವೆಲ್ಲ ತಾ ತುಂಬಿ ಇರುತಿಹುದು
ಎಂತು ನಿನ್ನಾಟ ಪೇಳ್ ನಿಗಮವೇದ್ಯ
ಚಿಂತೆ ಎನಗೊಂದಿಲ್ಲ ಅಂತರಂಗದಿ ನೆಲೆಸಿ
ಸಂತರದಿ ನಿನ ಧ್ಯಾನ ನೀಡೆಂಬೆನೊ ॥ ೧ ॥

ದೇಶಾಧಿಪತಿಗಳಿಗೆ ಕೋಶ ತುಂಬದ ಚಿಂತೆ
ದೇಶ ತಿರುಗುವನಿಗೆ ಹಣದ ಚಿಂತೆ
ದೇಶಸ್ಥನಾದವಗೆ ರಾಜಭಟರಾ ಚಿಂತೆ
ಕಾಶಿಯಲ್ಲಿರುವವಗೆ ಮನೆಯ ಚಿಂತೆ ॥ ೨ ॥

ಜಾರಿಣಿಗೆ ವಿಟನೊಬ್ಬ ಬಾರದಿರುವ ಚಿಂತೆ
ಚೋರನಿಗೆ ರವಿ ಮುಳುಗದಿರುವ ಚಿಂತೆ
ಮಾರನಿಗೆ ಯೋಗಿಗಳ ಹೃದಯ ಭೇದಿಪ ಚಿಂತೆ
ನಾರಿಗೆ ಪತಿ ಒಲುಮೆ ಪಡೆವ ಚಿಂತೆ ॥ ೩ ॥

ಕರ್ಮತತ್ಪರರಿಗೆ ಹರಿಮರ್ಮವರಿಯದ ಚಿಂತೆ
ಧರ್ಮ ಪುರುಷಗೆ ಕಲಿಬಾಧೆಯ ಚಿಂತೆ
ವೇದಶಾಸ್ತ್ರಜ್ಞನಿಗೆ ವಾದಿಯ ಭಯಚಿಂತೆ
ಹಾದಿ ನಡೆವಗೆ ದುಷ್ಟಜನರ ಚಿಂತೆ ॥ ೪ ॥

ಸಾಧು ಸಜ್ಜನರಿಗೆ ಬಾಧೆ ಕೊಡುವರ ಚಿಂತೆ
ಹಾದಿ ತಪ್ಪಿದ ಪಾಡಿಗೆ ಯಮನ ಚಿಂತೆ
ವಾಣಿಜ್ಯತನದವಗೆ ಹಣವ ಗಳಿಸುವ ಚಿಂತೆ
ಮಾನವಂತರಿಗೂನ ನುಡಿಯ ಚಿಂತೆ ॥ ೫ ॥

ಇಂತೆಲ್ಲರಾ ಚಿಂತೆ ಇರಲಿ ಕೇಳ್ ಹರಿಯೆ
ಚಿಂತೆ ಬಿಡಿಸೆನಗೆ ನೀನೊಲಿದು ದೊರೆಯೆ

ಚಿಂತನೆಗೆ ಸಿಗದಿಹುದು ನಿನಗೆ ಸರಿಯೆ
ಚಿಂತಿಪರಿಗೊಲಿವಂಥ ಸಿರಿಕಾಂತ ಹರಿಯೆ ॥ ೬ ॥

೨೨

ದಾಸರೆಂದು ಕರೆದ ಮಾತ್ರದಿ ಈಗ ಎಮ್ಮ
ದೋಷರಾಶಿ ನಾಶವಾಯಿತು ॥ ಪ ॥

ಶ್ರೀಶ ತಾನು ಗುರುಗಳಿಂದ । ಈ ಶರೀರಕೀ ಜನ್ಮದಲಿ ।
ದಾಸತನದ ಪೆಸರನಿಟ್ಟು । ವಾಸುದೇವ ಕಾಯ್ದ ಎನ್ನ ॥ ಅ.ಪ.॥

ಏಸುಜನ್ಮ ಯತ್ನಗೈಯಲು । ಭೃತ್ಯಭಾವ
ಪಾಶ ದುರ್ಲಭವು ಸುಜನಕ
ಶ್ರೀಶನುಗ್ರಹದ ಬಲದಿ
ಈಸು ನಾಮ ದೊರೆಯಬೇಕು
ಆಶಪಾಶ ತೊಲಗಿ ಭವ
ಕ್ಲೇಶ ಕೊನೆಗಾಣಿಸುವುದು ॥ ೧ ॥

ಪಂಡಿತನೆಂದೆನಿಸಿ ಮೆರೆಯಲು । ಜಗದೊಳಗೆ
ಕಂಡಮಾತ್ರ ಗರ್ವ ಕಾರಣ
ಮಂಡೆ ಬಾಗಿ ಹರಿಗೆ ನಿನ್ನ
ತೊಂಡನೆಂದು ನಮಿಸೆ ನಲಿದು
ಪುಂಡರೀಕಾಕ್ಷ ತಾನು
ತಂಡ ತಂಡ ಪಾಪ ಕಳೆವ ॥ ೨ ॥

ಹರಿಯದಾಸರೆಂದೆನಿಸಲು । ಧರೆಯೊಳಗೆ
ಸುರರು ಬಯಸಿ ಬರುತಲಿದ್ದರಲಪ್ಪರು
ಸರ್ವದೇವತೆಗಳು ಬಂದು
ಹರಿಯದಾಸರೆನಿಸಿ ಮೆರೆದು
ಪರಿಪರಿಯ ತತ್ತ್ವ ತಿಳುಹಿ
ಹರಿಯ ಪುರಕೆ ತೆರಳಲಿಲ್ಲೆ ॥ ೩ ॥

ದಾಸತನಕೆ ಅಧಿಕ ವಿಲ್ಲವು । ಸಾಧನವು
ದಾಸತನವು । ಗರ್ವವಳಿವಳಿವುದು
ದಾಸದಾಸದಾಸ ನಿನಗೆ
ವಾಸುದೇವ ಸಲಹೋ ಎನಲು
ದೋಷನಾಶಗೈಸಿ ಹರಿಯು
ದಾಸ ಜನರ ಕಾಯ್ದ ದಯದಿ ॥ ೪ ॥

ಅಷ್ಟು ಭಾಗ್ಯಕಧಿಕಲಾಭವು । ದಾಸತನವು
ಶ್ರೇಷ್ಠ ಗುರುಗಳಿಂದ ದೊರಕಿತು
ಇಷ್ಟವೆನಗೆ ದಾಸ ಹೆಸರು
ಶಿಷ್ಯರೆಲ್ಲ ಕಳೆ ಕರೆಯಲೀಗ
ತುಷ್ಟಿಪಕುಡುವೆ ಶ್ರೀ ಗೋಪಾಲ
ಕೃಷ್ಣವಿಠ್ಠಲ ಸಲಹೊ ಎಂದು ॥ ೫ ॥

೨೩

ನಗಬೇಡಿ ನಗಬೇಡಿ ನೀವ್
ನಗಬೇಡಿ ನಗಬೇಡಿ ॥ ಪ ॥

ನಿಗಮನುತನ ಭಜಿಸುವ ನಿಜದಾಸರ ॥ ಅ.ಪ.॥

ಬಗೆಯರಿಯದೆ ಬಿನ್ನಾಣದಿಂದ ನೀವ್
ಹರಿಸರ್ವೊತ್ತಮ ಹೌದ್ದಾದೆಂಬುವ
ಹರಿದಾಸರ ಲಕ್ಷಣಗಳ ತಿಳಿಯದೆ ॥ ೧ ॥

ಸ್ಥಿರವಲ್ಲದ ತನುಭ್ರಾಂತಿಯ ಪೊಂದುತ
ಗುರುಚರಣ ನಂಬಿದ ದಾಸರ ಕಂಡು ॥ ೨ ॥

ಲಜ್ಜೆಯ ತೊರೆಯುತ ಮೂರ್ಜಗದೊಡೆಯನ
ಘರ್ಜಿಸಿ ಪಾಡುವ ಸಜ್ಜನರನೆ ಕಂಡು ॥ ೩ ॥

ಲೋಕವಿಲಕ್ಷಣ ಚರ್ಯೆಯ ಧರಿಸುತ
ಶ್ರೀಕಾಂತನ ಧ್ಯಾನಿಪರಿವರನರಿಯದೆ ॥ ೪ ॥

ಗೋಪಾಲಕೃಷ್ಣ ವಿಠ್ಠಲನಂಘ್ರಿಗಳನು
ಭೋ! ಪರಿ ನಂಬಿದ ನಿಜದಾಸರ ಕಂಡು ॥ ೫ ॥

೨೪

ಬಡಿ ಜಾಗಟೆ ಹೊಡಿನಗಾರಿ ಪಿಡಿತುತ್ತೂರಿಯನು
ನಡಿಮುಂದೆ ಅಡಿ ಇಡು ಹೆದರದೆ ನುಡಿ ಹರಿಯನಾಮ ॥ ಪ ॥

ಬಿಗಿ ನಡುವನು ಮುಗಿ ಕೈಯ್ಯನು ಒಗಿ ದುರಭಿಮಾನ
ಚಿಗಿ ಭಕ್ತಿರಸ ಮುಖದಲಿ ನಗಿ ತೋರು ನಯದಿ ॥ ೧ ॥

ಸರಿ ಇಲ್ಲವೀ ಪರಿ ದಾಸಕೂಟ ಪರಿ ಎನ್ನುವ ಜನರ
ಕರಿ, ಕುಣಿಸು, ಕಾಲ್ಕಿರಿ, ಗೆಜ್ಜೆಭರ ಧರಿಯಲಿ ಮೆಟ್ಟೆ ॥ ೨ ॥

ಗಟ್ಟಿ ಮಾಡಿ ಮನತಟ್ಟಿ ಚಪ್ಪಾಳೆ ಮೆಟ್ಟಿ ಖಳರ ಎದೆಯ
ಶ್ರೇಷ್ಠ ಮಧ್ವಮತಗುಟ್ಟು ದಾಸತ್ವವು ದುಷ್ಟರರಿಯರೆಂದು ॥ ೩ ॥

ಶುದ್ಧ ಗುರುವು ತಂದೆ ಮುದ್ದು ಮೋಹನರು ಉದ್ಧಾರವನೆ ಮಾಡಿ
ವಿದ್ಯಾನಾಮ ಅನಿರುದ್ಧಾಂಕಿತಗಳ ಬದ್ಧಾಗೀವರೆಂದು ॥ ೪ ॥

ಶ್ರೇಷ್ಠ ಗೋಪಾಲಕೃಷ್ಣ ವಿಠ್ಠಲನ ಮುಟ್ಟಿ ಮನದಿ ಭಜಿಸೆ
ಕೆಟ್ಟ ಕರ್ಮಗಳ ಕಟ್ಟು ಹರಿದು ಮುಕ್ತಿಕೊಟ್ಟು ಪೊರೆವೆನೆಂದು ॥ ೫ ॥

೨೫

ಭಕ್ತಿದಾಯಕ ಕೇಳೊ ನಿನ್ನ ಒಲಿಸಲು
ಶಕ್ತಿ ಎನಗೆ ಇಲ್ಲ ಸರ್ವೇಶ್ವರ
ಬಕ್ತಿಪಾಶದಿ ನಿನ್ನನುಕ್ತಿಯಿಂದಲಿ ಬಿಗಿವೆ
ಮುಕ್ತಿಗೊಡೆಯ ಹೃದಯಮಧ್ಯದಿ ಬಂಧಿಸುವೆ

ಶಕ್ತಿ ನಿನಗಿಲ್ಲ ಬಿಡಿಸಿಕೊಳ್ಳಲು ಇನ್ನು
ಯುಕ್ತಾಯುಕ್ತ ತಿಳಿಸಿ ಉದ್ಧರಿಸಬೇಕಿನ್ನು
ಶಕ್ತನಿಲ್ಲವೊ ನಿನಗೆ ಸರಿ ಜಗದೊಳು ಮಹ
ಶಕ್ತನವುದೊ ಸಿರಿ ಗೋಪಾಲಕೃಷ್ಣವಿಠಲಾ

೨೬

ಭಜನೆ ಭಾಗ್ಯ ಒಂದೇ ಸಾಲದೇ । ಹರೀ ॥ ಪ ॥

ಭಜಕರಾದವರಿಗೆ ಹಗಲು ಇರುಳು ಮಾಳ್ಪಾ
ಭಜನೆ ಭಾಗ್ಯ ಒಂದೇ ಸಾಲದೇ? ॥ ಅ.ಪ.॥

ಭಕ್ತರೆಲ್ಲರು ಕೂಡೀ ಮುಕ್ತಿಗೊಡೆಯನ ಪಾಡಿ
ಭಕ್ತಿ ಭಾಗ್ಯವ ಬೇಡಿ ನೃತ್ಯವ ಗೈಯುವಾ ॥ ೧ ॥

ತಾಳ ತಂಬೂರಿ ಗೆಜ್ಜೆ ಮೇಳನದಿಂದಲೀ
ತೋಳುಗಳೆತ್ತಿ ಪಾಡೀ ವೇಳೆಯ ಕಳೆವಂಥಾ ॥ ೨ ॥

ಹಿಂದೆ ಮುಂದಾಡುವಾ ನಿಂದಕರಾ ನುಡಿ
ಒಂದು ತಾರದೆ ಮನಕಾನಂದವ ಬೀರುವಾ ॥ ೩ ॥

ಕಟಳೆ ಮೀರದೆ ಬಿಟ್ಟು ಬಿಡದೆ ನಿತ್ಯ
ನಿಷ್ಠೆಯಿಂದಲಿ ಗುರು ಕೊಟ್ಟ ಆಜ್ಞೆ ಎಂಬಾ ॥ ೪ ॥

ಕಂತುಪಿತನ ಮೂರ್ತಿ ನಿಂತು ಒಳಗೆ ಹೊರಗೆ
ಸಂತಸಪಡಿಸೆ ಏಕಾಂತ ಭಕ್ತರು ಮಾಳ್ಪ ॥ ೫ ॥

ಸಾಸಿರ ಸತ್ಕರ್ಮ ಮೀಸಲು ಫಲಗಳೂ
ಶ್ರೀಶನ ಧ್ಯಾನಕೆ ತ್ರಾಸಿಗೇರದೆಂಬ ॥ ೬ ॥

ಪದ್ಧತಿಯಂತೆ ತಂದೆ ಮುದ್ದುಮೋಹನ್ನ ಗುರು
ಪದ್ಮಪಾದಕೆ ಸೇರಿ ಪೊದ್ದಿದ ದಾಸ್ಯದ ॥ ೭ ॥

ತ್ರಿಗುಣದ ಕಲ್ಮಷವಗೆದು ದೂರಕೆಮನ
ಮಿಗಿಲಾಗಿ ಹರಿಪದ ತಗಲಿಕೊಂಬುದಕ್ಕೆ ॥ ೮ ॥

ನರ್ತನಗೈಯ್ಯುತ ಸುತ್ತಿ ಪ್ರದಕ್ಷಿಣೆ
ಎತ್ತಿ ಸ್ವರವ ಹರಿಮೂರ್ತಿಯಾ ಪಾಡುವಾ ॥ ೯ ॥

ಶ್ರೇಷ್ಠ ಶ್ರೀ ಗೋಪಾಲಕೃಷ್ಣ ವಿಠ್ಠಲನನು
ಇಟ್ಟು ಹೃತ್ಕಮಲದಿ ಮುಟ್ಟುವೋ ಹರಿಪುರ ॥ ೧೦॥

೨೭

ಮುತ್ತೈದೆಯಾದೆ ನಾ ಮುರವೈರಿ ದಯದಿ
ನಿತ್ಯ ತೃಪ್ತನು ಎನ್ನ ನಿಜಕರವ ಪಿಡಿಯೇ ॥ ಪ ॥

ಗುರುಗಳುಪದೇಶಾಂಬುಧಿಯಲಿ ಪುಟ್ಟಿದ ಎನ್ನ
ಕರೆದರು ಕಮಲಾಭಿಧಾನದಿಂದ
ವರುಷವೆಂಟಾಗೆ ಗುರುಜನಕ ಎನ್ನನು ದಯದಿ
ಸಿರಿವರನೆ ಪೊರೆ ಎಂದು ಒಪ್ಪಿಸಿದ ಕತದಿಂ ॥ ೧ ॥

ಗುರು ಕೊಟ್ಟ ಅಂಕಿತವೆ ಮಾಂಗಲ್ಯವಾಯ್ತೆನಗೆ
ಗುರುವಿಟ್ಟ ನಾಮವೆ ತಿಲಕವಾಯ್ತು
ಗುರುಕರುಣವೆಂಬ ಕವಚವ ತೊಟ್ಟೆ ಹರುಷದಲಿ
ಗುರುಪ್ರೀತಿ ಎಂಬ ವಸನವನುಟ್ಟು ಮುದದಿ ॥ ೨ ॥

ಗುರುವು ಬೋಧಿಸಿದ ಭಕ್ತಿ ಜ್ಞಾನ ವೈರಾಗ್ಯ
ಸರಿಮಾಡಿ ಮೂರು ಕಾಲಿನ ಜಡೆಯನು
ಪರಿಪರಿಯ ತತ್ವಗಳೆ ಚೌರಿ ರಾಗಟೆ ಗೊಂಡ್ಯ
ಗುರುವಾಜ್ಞೆ ಎಂಬ ಪುಷ್ಪವ ಧರಿಸಿ ಶಿರದಿ ॥ ೩ ॥

ಗುರುವಾಕ್ಯ ಶ್ರವಣವೆ ಕರ್ಣಕುಂಡಲವಾಯ್ತು
ಗುರುವಿನ ನಿರ್ಮಲ್ಯವೇ ನಾಸಿಕಾಭರಣ
ಗುರುನಾಮಗಳೆ ರತ್ನ ಪರಿಪರಿಯ ಹಾರಗಳು
ಗುರುಭಕ್ತಿ ಎಂಬ ನಡು ಒಡ್ಯಾಣ ಧರಿಸಿ ॥ ೪ ॥

೨೮

ಮೋದದಲಿರಬೇಕಮ್ಮ । ಸುಮ್ಮನೆ ನೀನು
ಮೋದದಲಿರಬೇಕಮ್ಮ ॥ ಪ ॥

ಮೋದ ಶ್ರೀ ಗುರುಗಳ ಚರಣಕಮಲವನ್ನು
ಮೋದದಿಂದಾಶ್ರಯಿಸಿ ಸುಖದಲಿರಬೇಕು
ಲೋಕದ ಜನಗಳ ನುಡಿಗಳ ಲೆಕ್ಕಿಸದೆ
ಲೋಕವಂದ್ಯನ ಚರಣ ಕಮಲವ ಸ್ಮರಿಸುತ ॥ ಅ.ಪ.॥

ಪರಮಾತ್ಮನ ಕೃಪೆಗೆ ಕಾರಣವಿದು । ಗುರುಕರುಣದ ಬಲವು ।
ಅರಿಯದ ಮನುಜರ ಬಿರುನುಡಿಗೆ ಮನ । ಕೊರಗಿಸದಂದದಿ ಹರುಷಪಡಲಿ
ಬೇಕು ॥ ೧ ॥

ಎಚ್ಚೆತ್ತು ನಡಿಯಬೇಕು । ಶ್ರೀ ಗುರುಸೇವೆ । ಇಚ್ಛೆಯಿಂ ಮಾಡಬೇಕು
ತುಚ್ಛ ಮಾತುಗಳಿಗೆ ಮನ ಕೊಡದೆ ಹರಿ । ಮೆಚ್ಚುವಂದದಿ ಗುರು
ಇಚ್ಛೆಯನರಿತು ನಡೆದು ॥ ೨ ॥

ವಂದನೆ ನಿಂದ್ಯಗಳ । ಮೋಕ್ಷಾರ್ಥಿಯಂ । ಒಂದಾಗಿ ಭಾವಿಸುತ
ಮಂದರೋದ್ಧರನ ಮಾಯಕೆ ಮನದಿ ಮೋದಿಸುತ । ಮಂದರಂದದಿ
ಮನುಜರಿಗೆ ತೋರುತಲಿದ್ದು ॥೩॥

ಸಾಧನಲೋಕವಮ್ಮ । ಮಾನವಜನ್ಮ ಸಾಧನ ಜನ್ಮವಮ್ಮ
ಸಾಧಾರಣವಲ್ಲ ಸಾಧು ಸಜ್ಜನ ಸಂಗ । ಸಾಧಿಸಿ ದುಷ್ಕರ್ಮ ಭೇದಿಸಬೇಕಮ್ಮ ॥೪ ॥

ಚಿಂತೆಯನಳಿಯಬೇಕು । ಶ್ರೀ ಗುರುಚರಣ । ಅವರ ತಿಳಿಯಬೇಕು
ಸಂತರ ಗೋಪಾಲಕೃಷ್ಣ ವಿಠ್ಠಲನ । ಅಂತರಂಗದಿ ಭಜಿಸಿ ಮುಕ್ತಿ ಸಾಧಿಸಬೇಕು
॥ ೫ ॥

೨೯

ಯಾಕೆನಗೆ ವೈರಾಗ್ಯ ಪುಟ್ಟಲಿಲ್ಲವೊ ದೇವ
ಏನು ಪಾಪಿಯೊ ಜಗದಲಿ ॥ ಪ ॥

ಸಾಕು ಸಾಕೀ ವಿಷಯ ಚಿಂತನೆಯ ಬಿಡಿಸಿನ್ನು
ಲೋಕನಾಯಕನೆ ಸ್ವಾಮಿ ॥ಅ.ಪ.॥

ಅಸನವಸನಗಳಿಗೆ ಆಲ್ಪರಿದಂ ಅನ್ಯರಿಗೆ
ಬಿಸಜನಯನನೆ ಕಾಲಹರಣೆಯನೆ ಗೈದೆ
ವಸುದೇವ ಸುತ ನಿನ್ನ ಅರಘಳಿಗೆ ನೆನೆಯದಲೆ
ಹಸಿವು ತೃಷೆಯಿಂ ಬಳಲಿ ಬೆಂಡಾದೆನಯ್ಯಾ ॥ ೧ ॥

ಇಂದ್ರಿಯಗಳೆಲ್ಲವನು ಬಂಧನದೊಳಗೆ ಇರಿಸಿ
ಇಂದಿರೇಶನೆ ನಿನ್ನ ಧ್ಯಾನಿಸದಲೆ
ಮಂದಮತಿಯಿಂದ ನಾ ಮಮಕಾರದಲಿ ಬಿದ್ದು
ಮಂದಜನರೊಡನಾಡಿ ಮಾಯಕೊಳಗಾದೆ ॥ ೨ ॥

ಭಕ್ತಿಮಾರ್ಗವ ಕಾಣೆ ಜ್ಞಾನ ಮೊದಲೆ ಅರಿಯೆ
ಮುಕ್ತಿಗೊಡೆಯನೆ ಎನ್ನ ಮುದದಿಂದ ಸಲಹೊ
ಯುಕ್ತಯುಕ್ತಿಗಳರಿಯೆ ಸುತ್ತುತಿಪ್ಪೆನೊ ಭವದಿ
ಶಕ್ತ ನೀ ಒಳಗಿದ್ದು ಎನ್ನ ಕಾಡುವರೆ ॥ ೩ ॥

ಕರ್ಮಮಾರ್ಗವ ತೊರೆದು ನಿರ್ಮಲದಲಿ ನಿನ್ನ
ಒಮ್ಮೆಗಾದರೂ ಮನದಿ ನೆನೆಯೆಲಿಲ್ಲ
ರಮೆಯರಸನೆ ಶ್ರೀ ಗುರುಗಳಂತರ್ಯಾಮಿ
ಕರ್ಮತ್ರಯಗಳ ಕಡಿದು ಕರುಣದಲಿ ಕಾಯೊ ॥ ೪ ॥

ಪಾಪರಹಿತನೆ ಎನ್ನ ಪಾಪಕರ್ಮಗಳೆಲ್ಲ
ಈ ಪರಿ ನುಡಿದೆ ನೀ ಪರಿಹರಿಸಿ ಕಾಯೋ
ಗೋಪಾಲಕೃಷ್ಣ ವಿಠಲನೆ ನೀನಲ್ಲದಲೆ
ಈಪಾಪಿಯನು ಕಾಯ್ವರಾರೊ ಶ್ರೀ ಹರಿಯೆ ॥ ೫ ॥

೩೦

ಯಾಕೆನ್ನನಿಲ್ಲಿಗೆ ಎಳೆತಂದ್ಯೊ ತಪ್ಪನೇನೆಸಗಿದನೊ ॥ ಪ ॥

ಜೋಕೆಯಿಂದಲಿ ಎನ್ನ ಕಾಯಬೇಕಲ್ಲದೆ
ನೂಕಿದರೆನ್ನನು ಸಾಕುವರ್‍ಯಾರೊ ದೊರಿ ॥ ಅ.ಪ. ॥

ಯಾರಿಗೇನೆಸಗಿದೆ ಆರ ನಾ ದೂಷಿಸಿದೆ
ಆರನಾ ನಿಂದಿಸಿದೆನೊ
ಆರ ನಾ ವಂಚಿಸಿದೆ ಆರನು ನಾನಹಂ
ಕಾರದಿ ನೋಡಿದೆನೊ ಈ ರೀತಿ ನೊಂದೆನು ॥ ೧ ॥

ಪದದಿಂದ ಚ್ಯುತಿಪೊಂದಿ ವಿಧಿ ಬರಹದೊಳಿನ್ನು
ವಿಧಿ ಪಿತ ನಿನ್ನ ಕಾಣಲಿಲ್ಲ
ಮದಗರ್ವ ಬಿಡಿಸೆನ್ನ ಸದಮಲ ಹೃದಯದಿ
ಪದ ಪದುಮವ ತೋರಿ ಉದ್ಧರಿಸೆನ್ನನು ॥ ೨ ॥

ಸೃಷ್ಟಿಕರ್ತನೆ ಕೇಳೊ ಕಷ್ಟವ ಪಡಲಾರೆ
ದೃಷ್ಟಿಲಿ ನೋಡಿ ಕಾಯೊ
ಎಷ್ಟು ಬೇಡಲೊ ನಾನು ಬೆಟ್ಟದೊಡೆಯ ಹರಿ
ವೃಷ್ಣೀಶ ಗೋಪಾಲಕೃಷ್ಣವಿಠ್ಠಲ ದೊರಿ ॥ ೩ ॥

೩೧

ಶಾಂತಿ ಮಾರುತಿ ಪರಮ ಕರುಣಾಳುವೆನ್ನುತಲಿ
ಎಂತೆಂತೊ ಸಜ್ಜನರು ಸ್ತುತಿಪರನು ಕೇಳುತಲಿ
ಇಂತು ನಿನ ಪದವನಾಸ್ಥಾರ್‍ೈಸಿ ಬಂದರೂ
ನಿಂತರೂ ಎದುರಲ್ಲಿ ನೀನೊಲಿಯಲಿಲ್ಲ ॥ ೭ ॥

ಕರ ಮುಗಿದು ಎರಗಿದರೂ ಶಿರನಾಗಿ ನಮಿಸಿದರೂ
ಚರಣದಲಿ ತನುಮನ ಒಪ್ಪಿಸಿದರೂ
ಕರಗಲಿಲ್ಲವು ಮನಸು ಕರುಣಪುಟ್ಟಲು ಕಾಣೆ
ಭರವಸೆಯು ನಿನ್ನಲ್ಲಿ ಮೂಡಲಿಲ್ಲ ॥ ೮ ॥

ಶಿರದಿ ಕರವಿಡಲಿಲ್ಲ ತೊರೆದೆಯೊ ಜರಿದೆಯೊ
ವರಭಕ್ತಿ ಸಾಲದು ಗುರುವಿಕೆಯೊ ದೊರೆತನವೊ

ಅರೆಹೊಟ್ಟೆ ಜೀವಿಸುತ ಅರಿಯದೆ ಮತ್ತೊಂದು
ಇರುಳು ಹಗಲಾಲ್ಪರಿವ ತೆರವು ತೋರದೊ ಮನಕೆ ॥ ೯ ॥

ಸರಿಯಲ್ಲ ಸರಿಯಲ್ಲ ಕರುಣಾಳುವೆಂಬುವೋ
ಬಿರುದುಳಿದ ತೆರವಿಲ್ಲ ಬಿಂಕಪಟ್ಟರೆ ಈಗ
ಕರೆದು ಮನ್ನಿಸೊ ಪಾಂಡುರಂಗವಿಠ್ಠಲ ದೇವ
ವರ ಮಂಡಲೀಕಗೆ ಒಲಿದಿದ್ದು ನಿಜವಾಗೆ ॥೧೦ ॥

ಪರಿಪರಿಯ ಭಕ್ತರನು ಪೊರೆದದ್ದು ನಿಜವಾಗೆ
ಹರಿದಾಸ ಸಂತತಿಗೆ ಮನೆದೈವ ನಿಜವಾಗೆ
ಸರಿಯಿಲ್ಲದಾ ದೈವ ನೀನೆಂದು ನಿಜವಾಗೆ
ಹೊರವೊಳಗೆ ಒಂದಾಗಿ ಕರಪಿಡಿದು ಸಲಹಿನ್ನು ॥೧೧ ॥

ಗುರುಕೊಟ್ಟ ವರಬಲದಿ ಶರಣು ಪೊಂದಿದೆ ನಿನಗೆ
ಚರಣದಲಿ ಬಿದ್ದಿರುವೆ ಪರಮ ಪುರುಷನೆ ದೇವ
ಸ್ಮರಪಿತನೆ ಗೋಪಾಲಕೃಷ್ಣ ವಿಠ್ಠಲ ನಿನ್ನ
ಸ್ಮರಣೆ ಮಾಡಿದ ಮೇಲೆ ಭವದ ಭಯ ಉಂಟೆ? ॥೧೨ ॥

೩೨
(ಉಗಾಭೋಗ)

ಹಿಂದಿನ ಊರಿಗೆ ಹಿಂತಿರುಗುವುದಿಲ್ಲ
ಮುಂದಿನ ಊರಿನಾನಂದವ ಕಾಡಿಲ್ಲ
ಇದ್ದಿದ್ದ ಊರೊಳು ಇರುವ ಹಾಗೆ ಇಲ್ಲ
ನಂದ್ಯಾವ ಊರೆಂಬೋದನ್ಯರಿಗಳವಲ್ಲ
ಸಂದಿಗ್ಧವಾದಂಥ ಇದರ ಅರ್ಥಗಳನು
ತಂದೆ ಮುದ್ದು ಮೋಹನ ಬಿಂಬ ಶ್ರೀ
ಸುಂದರ ಗೋಪಾಲಕೃಷ್ಣ ವಿಠ್ಠಲ ಬಲ್ಲ

೩೩

ಹೊಟ್ಟೆಪಾಡಿನ ಕೃತ್ಯವಲ್ಲವಿದು ವಿಠ್ಠಲನ ಸೇವೆ ॥ ಪ ॥

ಶ್ರೇಷ್ಠ ಗುರುವಿನ ಆಜ್ಞೆಯಿಂದ ಮನ
ಮುಟ್ಟಿ ನಡೆಸುವ ದಾಸವೃತ್ತಿಯು ॥ಅ.ಪ. ॥

ವಂದನೆ ನಿಂದ್ಯಗಳನು ಗಮನಿಸದೆ ಇಂದಿರೇಶನ ಪದಕರ್ಪಿಸುತ
ಮಂದ ಭಾಗ್ಯರ ಮಾತನೆ ಗಣಿಸದೆ ಬಂದ ಭಯಗಳ ದೂರೋಡಿಸುತಲಿ॥೧॥

ಆಶಾಪಾಶಗಳ ನಾಶಗೈಸಿ ಮನ । ಕ್ಲೇಶಪಡದೆ ಸಂತೋಷಿಸುತ
ವಾಸುದೇವ ಆನಂದ ಪೂರ್ಣ ಸ। ರ್ವೇಶ ನಿನಗೆ ನಾ ದಾಸನೆಂತೆಂಬುದು॥೨॥

ಗೆಜ್ಜೆ ಕಾಲಿಗೆ ಕಟ್ಟಿ ತಾಳವ । ಲಜ್ಜೆಯ ತೊರೆದು ಬಾರಿಸುತ
ಮೂರ್ಜಗದೊಡೆಯ ಜಗಜ್ಜನ್ಮಾದಿಕಾರಣನೆಂದು । ಘರ್ಜಿಸುತಲಿ ಸಂಚಾರ
ಮಾಳ್ಪುದೆ ॥ ೩ ॥

ಇಂದು ನಾಳೆಗೆಂಬೋ ಮಂದಬುದ್ಧಿಯ ಬಿಟ್ಟು । ಬಂದದರಿಂದಾನಂದಿಸುತ
ತಂದೆ ಮುದ್ದುಮೋಹನದಾಸರ ಪದ ॥ ದ್ವಂದ್ವವ ಭಜಿಸುತ ಮುಂದೆ
ಸಾಗುವುದು ॥ ೪ ॥

ಗುರುಗಳ ಕರುಣದಿ ಅಂಕಿತ ಪಡೆಯಲು । ದೊರೆವುದು ದಾಸತ್ವದ ಸಿದ್ಧಿ
ಅರಿಯದೆ ವೇಷವ ಧರಿಸಿ ಮೆರೆದರೆ । ಸಿರಿವರ ಮೆಚ್ಚನು ಗುರುವು
ಒಲಿಯನು ॥ ೫ ॥

ಉಚಿತ ಧರ್ಮಕರ್ಮಗಳನೆ ಮಾಡುತ । ಖಚಿತ ಜ್ಞಾನ ಮನದಲಿ ತಿಳಿದು
ವಚನದಿ ಹರಿನಾಮಗಳ ನುಡಿಯುತ । ಶುಚಿಭೂರ್ತರಾಗಿ ಆನಂದಪಡೆವುದು
॥ ೬ ॥

ದುಷ್ಟರ ತೊರೆದು ಶಿಷ್ಟರೊಳಾಡುತ । ಶ್ರೇಷ್ಠರಾದ ದಾಸತ್ವದಲಿ
ಬಿಟ್ಟು ಪ್ರಪಂಚವ ಸೃಷ್ಟೀಶ ಗೋಪಾಲ । ಕೃಷ್ಣ ವಿಠ್ಠಲನ ಶ್ರೇಷ್ಠದಿ ಭಜಿಪುದು
॥ ೭ ॥

ಕಾಳಿಮರ್ದನ ಕೃಷ್ಣ ಅಂಕಿತದ ಕೀರ್ತನೆಗಳು (೩೪)

ಕಳಶದ ಸುಂದರಮ್ಮ (೧೯೦೨-೧೯೪೨)

ಧಾರವಾಡ ಜಿಲ್ಲೆ - ಸಿಗ್ಗಾವಿಯ ಕಳಶಗ್ರಾಮ

ಜನನ : ಧಾರವಾಡದ ಸಿಗ್ಗಾವಿ ತಾಲ್ಲೂಕಿನ ಕಳಶ ಗ್ರಾಮದ ನರಸಿಂಹೇಗೌಡ-ಕಮಲಾಬಾಯಿ ದಂಪತಿಗಳಿಗೆ ೧೯೦೨ರಲ್ಲಿ ಜನಿಸಿದ ಮಗಳೇ ಸುಂದರಿ ನಾಮಾಂಕಿತಳು.

ವಿವಾಹ : ಸುಂದರಿಗೆ ಪದವೀಧರನೂ ಸಂಸ್ಕೃತ ವಿದ್ವಾಂಸನೂ ಆದ ತನ್ನ ತಮ್ಮನನ್ನು ತಾಯಿ ಕಾಶಿಯಲ್ಲಿ ವಾಯಿಕೃಷ್ಣಾಚಾರ್ಯನಿಗೆ ೧೯೧೨ರಲ್ಲಿ ಮದುವೆ ಮಾಡಿದಳು.

ಅಂಕಿತ-ದೀಕ್ಷೆ: ಗೃಹಿಣಿ ಆದಮೇಲೆ ಉಡುಪಿಯ ಪುತ್ತಿಗೆ ಮಠದ ಹಿರೇಸ್ವಾಮಿಗಳಿಂದ ಕಾಳಿಮರ್ದನಕೃಷ್ಣ ಎಂಬ ಸ್ವಪ್ನಾಂಕಿತ ಪಡೆದರು. ೨೩ ಕೀರ್ತನೆಗಳನ್ನು ರಚಿಸಿದರು.

ಧಾರವಾಡದ ಗೃಹಸ್ಥರೊಬ್ಬರಿಗೆ ಸುಂದರಮ್ಮ ಗುರುಕಾಳಿಮರ್ದನ ಕೃಷ್ಣ ಎಂಬ ಅಂಕಿತ ಪ್ರದಾನ ಮಾಡಿದರು. (ಈ ಅಂಕಿತದ ೨ ಕೀರ್ತನೆಗಳನ್ನು ಶ್ರೀಮತಿರಾವ್ ಬಿ.ಕೆ. ಅವರ ಮಹಿಳಾ ಹರಿದಾಸ ದರ್ಪಣದಲ್ಲಿ (-೮೩-೮೫) ನೋಡಬಹುದು.

ಕಾಳೀಮದೇವಕೃಷ್ಣ ಅಂಕಿತದ ಸುಂದರಮ್ಮನವರ ೭ ಕೀರ್ತನೆಗಳನ್ನು ಶಾಂತಾ ಅವರ ದಾಸಸಾಹಿತ್ಯದಲ್ಲಿ ವನಿತೆಯರು (ಪು-೨೦೫-೨೧೧) ಗ್ರಂಥದಲ್ಲಿ ನೋಡಬಹುದು.

ನಿಧನ : ೧೯೪೨ರಲ್ಲಿ ಮೈಸೂರಿನಲ್ಲಿ ನಿಧನರಾದರು.

ಕೃತಿಗಳು : ೨೩ ಕೀರ್ತನೆಗಳು ಗುರುಸ್ತುತಿ ಹರಿಸ್ತುತಿ ಆತ್ಮನಿವೇದನೆ ವಸ್ತುವನ್ನು ಒಳಗೊಂಡಿದೆ.

ಸಾಧನದ ಚಿಂತೆ ಎನಗ್ಯಾಕೋ ಹರಿಯೆ ॥ ಪ ॥

ಮಾಧವ ನೀಯೆನ್ನ ಮನಸಿನಲಿದ್ದು ಮಾಡಿಸುವಿ ದೊರಿಯೆ ॥ ಅ.ಪ.॥

ಹಿಂದೇಸು ಜನ್ಮಗಳು ಬಂದು ಹೋದವು
ಒಂದು ತೃಣವಾದರೂ ನಾ ಗಳಿಸಲಿಲ್ಲ
ಮುಂದಿನ ಗತಿಯು ತಿಳಿಯದು । ಬಿಂದುಮಾಧವ ಯಾದವಾ

ನಿನ್ನ ಹೊರತು ಎನಗೆ ಮನ್ನಿಸುವರು ಯಾರೋ
ಬೇರೆ ಗತಿ ಕಾಣೆ ಪುಸಿಯಲ್ಲ ಯೆನ್ನಾಣೆ
ಪಾದಸ್ಮರಣೆ ಮಾಡಿಸು ಬಾರಾ । ಉದಾರ ಭಕ್ತರಾಧಾರಾ

ಯೆಷ್ಟು ಪೊಗಳಿದರೂ ನಿನ್ನ ಕರುಣಕೆ ಇನ್ನು ಕೇಡುಂಟೆ ಸ್ವಾಮಿ
ದಯಾದೃಷ್ಟಿಯಿಂದಲಿ ನೋಡು ಪ್ರೇಮಿ । ದುಷ್ಟ ಅಘರಾಶಿ ದೂರ ಮಾಡೊ
ಕಣ್ತೆರೆದು ನೋಡೋ ಕಾಳಿಮರ್ದನ ಕೃಷ್ಣನೆ ಮಧ್ವಮುನಿಪ್ರಿಯನೆ.

❖❖

ಚಂಪಕಧಾಮ ಅಂಕಿತದ ಕೀರ್ತನೆಗಳು (೩೫-೪೯)

ವೈ.ಎಸ್.ಗುಂಡಪ್ಪ (೧೯೦೫ – ೧೯೯೮)

ಕುಟುಂಬ : ವೈ.ಎಸ್.ಗುಂಡಪ್ಪನವರು (ವೈ.ಎಸ್.ಜಿ.=ಯಲಹಂಕದ ಸುಬ್ರಹ್ಮಣ್ಯ ಗುಂಡಪ್ಪ) ಸುಬ್ರಹ್ಮಣ್ಯ ಗೌರಮ್ಮ ದಂಪತಿಗಳಿಗೆ ೧೨-೬-೧೯೦೫ರಂದು ಆನೇಕಲ್‌ನಲ್ಲಿ ಜನಿಸಿದರು. ೧೯೧೩ರಲ್ಲಿ ಅವರ ಕುಟುಂಬ ಬೆಂಗಳೂರಿಗೆ ಬಂದಿತು. ಶಾಲಾ ವಿದ್ಯಾಭ್ಯಾಸ ಬೆಂಗಳೂರು ಕೋಟೆ ಮಿಡ್ಲ್‌ಸ್ಕೂಲ್‌ನಲ್ಲಿ ನಡೆಯಿತು. ಮಲ್ಲೇಶ್ವರಂ ಹೈಸ್ಕೂಲಿನಲ್ಲಿ ಎಸ್.ಎಸ್.ಎಲ್.ಸಿ. ಪಾಸಾಗಿ ಎಂಟ್ರೆನ್ಸ್ ಪರೀಕ್ಷೆಗೆ ಓದುತ್ತಿದ್ದರು ಪೂರ್ತಿಯಾಗಲಿಲ್ಲ.

ಹೊಸಕೋಟೆ ತಾಲ್ಲೂಕು ಕಚೇರಿಯಲ್ಲಿ ೨೫ ರೂ ಗುಮಾಸ್ತೆ ಕೆಲಸ ಸಿಕ್ಕಿದರೂ ಅದನ್ನು ಬಿಟ್ಟು ಶಿಕ್ಷಣ ಪ್ರೇಮದಿಂದ ೧೫ ರೂ ವೇತನದ ಪ್ರೈಮರಿ ಸ್ಕೂಲಿನ ಉಪಾಧ್ಯಾಯರಾದರು. ಶ್ರೇಷ್ಠ ಶಿಕ್ಷಕರೆಂದು ರಾಷ್ಟ್ರಪತಿಗಳಿಂದ ರಾಷ್ಟ್ರಪ್ರಶಸ್ತಿಯನ್ನು ೧೯೬೩ರಲ್ಲಿ ಪಡೆದರು.

೧೯೬೬ರಲ್ಲಿ ರಾಜ್ಯ ಪುರಸ್ಕಾರ, ರೋಟರಿ ಲಯನ್ಸ್ ಕ್ಲಬ್ ಮುಂತಾದ ಸಂಸ್ಥೆಗಳಿಂದ ಸನ್ಮಾನಿತರಾದರು. ಕೋಟೆ ಶಾಲೆಯ ಬಾಲಕರ ಭಜನೆ ಸಂಘ, ಕೋಲಾರದ ಕರ್ನಾಟಕ ಸಂಘ, ಮಕ್ಕಳ ಕೂಟ, ಬ್ರಾಹ್ಮಣಸಂಘ, ಸೋದರಿ ಸಮಾಜ, ಕಲಾ ಸಂಘ, ಸ್ಕೌಟ್ ಸಂಸ್ಥೆ, ಶಿಕ್ಷಕರ ಸಂಘ ಮೊದಲಾದ ಸಂಘಸಂಸ್ಥೆಗಳಲ್ಲಿ ಅಮೂಲ್ಯಸೇವೆ ಸಲ್ಲಿಸಿದ್ದಾರೆ.

೧೨-೪-೧೯೪೮ರಲ್ಲಿ ಸಾಹಿತ್ಯ ಕೂಟವೆಂಬ ವ್ಯಾಸಂಗ ಗೋಷ್ಠಿಯ ಸಂಸ್ಥೆಯನ್ನು ಸ್ಥಾಪಿಸಿ ತಮ್ಮ ಅಂತ್ಯಕಾಲದವರೆಗೆ ತಪ್ಪದೆ ಪ್ರತಿ ಶನಿವಾರ ಕಾರ್ಯಕ್ರಮವನ್ನು ನಡೆಸಿಕೊಂಡು ಬಂದರು. ಈ ಕಾರ್ಯಕ್ರಮದಲ್ಲಿ ಸಮಯ ಪರಿಪಾಲನೆ ಎಲ್ಲರ ಮೆಚ್ಚಿಗೆಗಳಿಸಿತ್ತು. ಶ್ರೀಯುತರು ನಾಟಕ, ಕಥೆ, ಮಕ್ಕಳ ಸಾಹಿತ್ಯ ರಚಿಸಿದ್ದಾರೆ. ಗಾನರಸಾಯನ (೧೯೨೫) ಸದ್ಗುರು ಗೀತೆ (೧೯೫೦) ಮೊದಲಾದ ಭಕ್ತಿಗೀತೆಗಳ ಸಂಗ್ರಹವನ್ನು ಪ್ರಕಟಿಸಿದ್ದಾರೆ. ಚಂಪಕಧಾಮ ಇವರ ಅಂಕಿತ. ಸಮಾಜಮುಖಿ

ಕೀರ್ತನೆಗಳನ್ನು ಇತರ ಕವಿತೆಗಳನ್ನು ರಚಿಸಿದ್ದಾರೆ. ೧೮-೦೬-೧೯೯೮ರಲ್ಲಿ ನಿಧನರಾದರು. ಬ್ರಹ್ಮಚೈತನ್ಯರ ಆರಾಧಕರಾಗಿದ್ದರು. ಅವರನ್ನು ಕುರಿತು ಗೀತೆಗಳನ್ನು ರಚಿಸಿದ್ದಾರೆ. ದೇಶಭಕ್ತಿಗೀತೆಗಳು, ಭಕ್ತಿಗೀತೆಗಳು, ಮಕ್ಕಳಹಾಡು, ನಾಟಕಗಳನ್ನು ರಚಿಸುವುದರಲ್ಲಿ ಸಿದ್ಧಹಸ್ತರಾಗಿದ್ದರು. ಕವಿತೆಗಳಿಗೆ ಶ್ರೀ ರವಿಶಂಕರ ಅವರ ಕಾವ್ಯನಾಮ ಆಗಿತ್ತು. ಕೀರ್ತನೆಗಳ ಅಂಕಿತ ಚಂಪಕಧಾಮ.

೩೫

ರಾಗ : ಮಾಂಡ್ ತಾಳ : ಅಟ್ಟ

ಆರೂ ಕಾಯುವರಿಲ್ಲ - ಶ್ರೀರಾಮನಲ್ಲದೆ ॥ ಪ ॥

ತೋರುವವರನು ಕಾಣೆ — ಧಾರಿಣಿಯೊಳು ॥ಅ.ಪ. ॥

ಕೆಲವರು ವಿಪ್ರರ ಕೇಳೆ -- ತೊಲಗು ತೊಲಗೆಂಬರು
ಕೆಲರನಂತ್ಯಜರೆಂದು - ಹಳಿಯುವರು
ಕೆಲರು ಬುಧರು ಹರಿಯ ನೆಲೆಯನು ಕಾಣಲು
ಚಲಿಸದೆ ಪುಸ್ತಕಂ — ಗಳನೋದ ಹೇಳ್ವರು ॥ ೧ ॥

ಗುಡಿಯಲ್ಲಿ ದೇವನ-ಹುಡುಕ ಹೋಗಲು, ಶುದ್ಧ
ಮಡಿಯೆಂದು ಬಿಡದೆನ್ನ ತಡೆಯುವರು
ಗುಡಿಯ ಶಿಲೆಯಲ್ಲಿಹನೋ ನುಡಿವ ನರರಲ್ಲಿಹನೋ
ಪೊಡವಿಗೊಡೆಯನಿರುವ ಎಡೆಯನು ಕಾಣೆನೊ ॥ ೨ ॥

ನಾಮರೂಪ ರಹಿತ - ಸ್ವಾಮಿ ತಾನಾದರೂ
ಪ್ರೇಮವ ತೋರಲು ಭೂಮಿಯೊಳು
ರಾಮ ಶ್ರೀ ಚಂಪಕಧಾಮನಾಗಿ, ಪೊರೆಯೆ
ಕಾಮಿತಾರ್ಥವ ಪಡೆಯೆ ನೇಮದಿಂ ಭಜಿಸುವ ॥ ೩ ॥

೩೬

ರಾಗ : ದೇಶಿತೋಡಿ, ತಾಳ : ಝಂಪೆ

ಆವ ಮುಖದಲಿ ನಿನ್ನ ಪೊರೆಯೆಂದು ಬೇಡಲಿ ॥ ಪ ॥

ದೇವಾ! ನಿನ್ನೆಡೆ ಎನ್ನ ಮನವಿರಿಸದೆ ನಾನದಾವ ಮುಖದಲಿ॥ ಅ.ಪ. ॥

ನಿನೊನ್ನಂದು ಕ್ಷಣವು ಕುರಿತು ಧ್ಯಾನಿಸಲಿಲ್ಲ
ನಿನ್ನದಾಸರ ಸೇವೆಯನು ಕಂಡಿಲ್ಲ
ನಿನ್ನ ನಾಮಸ್ಮರಣೆಯನು ಮೊದಲೆ ಮಾಡಿಲ್ಲ
ನಿನ್ನ ಬೇಡುವ ಸೊಲ್ಲದೊಂದೆ ಎನಗಿಹುದಲ್ಲ ॥ ೧ ॥

ಸಂಕಟಮೊದಗೆ ಮಾತ್ರ ಬಿಂಕವನುಳಿದು
ನಿನ್ನ ವೆಂಕಟರಮಣ ರಕ್ಷಿಸೆಂದು
ಮಂಕುತನವನು ಬಿಡಿಸಿ ಮರೆಯದೆ ನಿನ್ನಪದ ।
ಪಂಕಜ ನೆನೆವ ಸನ್ಮತಿಯ ಕರುಣಿಸಿ ಕಾಯೋ ॥ ೨ ॥

ಮಾತೆ ಸುತರಿಂ ತನ್ನ ಸ್ತೋತ್ರವ ನಿರೀಕ್ಷಿಸದೆ
ನೀತಿ ಬಾಹಿರರೆಂದು ಬಿಡದೆ ಪೊರೆವಂತೆ
ಪಾತಕವ ಪರಿಹರಿಸಿ ನೀತಿಮಾರ್ಗದೊಳಿರಿಸಿ
ಪ್ರೀತಿಯಲಿ ಪಾಲಿಪುದು ಪತಿತ ಪಾವನ ಸ್ವಾಮಿ ॥ ೩ ॥

ಆವ ಸಂಭ್ರಮದಿ ಮುನಿಸತಿಯನುದ್ಧರಿಸಿದೆಯೋ ।
ಆವ ದಯೆಯಿಂದ ಕಾಕಾಸುರನ ಕಾಯ್ದೆಯೋ
ಆವ ಮನದಿಂ ವಿಭೀಷಣನನು ಗ್ರಹಿಸಿದೆಯೋ ।
ಆವಿಧದಿ ಕನಿಕರಿಸಿ ಬಂದು ಕಾಪಾಡೋ ॥ ೪ ॥

ಹಿರಿಯರಾಚಾರವನು ಬದಿಗಿರಿಸಿ ಮರೆತೆ ನಾ
ಪರಕೀಯರನಡತೆ ಬಂದಾಯಿತು ದೇವಾ
ಶರಧಿಯಾ ನೌಕೆಯಂದದಿ ತೊಳಲುತಿರುವೆನಗೆ
ಸ್ಥಿರಮನವದಿರುವ ಪರಿ ಸಲಹು ಚಂಪಕಧಾಮ ॥ ೫ ॥

೩೭

ಗುರುದೇವನೇ ನಮ್ಮ ಡಾಕ್ಟರ್ ಶ್ರೀ ॥ ಪ ॥

ಗುರು ಬ್ರಹ್ಮಚೈತನ್ಯ ಭವರೋಗ ವೈದ್ಯ ॥ಅ.ಪ ॥

ಧರೆಯಲಿ ಮೋಸ ವಂಚನೆಯ ಈ
ಜ್ವರಕೆ ಸುಳ್ಳಿನ ಚಳಿ ಚಳಿ ನೆಗಡಿಗೆ
ಗುರುಮಂದಿರವೇ ನಮ್ಮಾಸ್ಪತ್ರೆ ಶ್ರೀ । ಇಲ್ಲಿ ।
ದೊರಕುವುದು ಗುರುಭಕ್ತಿ ಇಂಜಕ್ಷನ್ನು ॥ ೧ ॥

ಕೊಳಕು ಶ್ವಪಚತನ ವ್ಯಾಧಿ
ಗಳಿಗೆ ಸತ್ಸಂಗವೇ ಸರಿಯಾದ ಮದ್ದು
ಗಳಿಸುವ ಶ್ರೀಮಂದಿರದಲಿ – ನಾವು
ಸುಲಭದಿ ಸಿಗುವುದು ಸೌಖ್ಯದಾನಂದವು ॥ ೨ ॥

ಕಾಮಾದಿರೋಗಗಳೆಲ್ಲಾ ಬೇಗ
ನಿರ್ಮೂಲವಾಗಲು ಭಕ್ತರಿಗೆಲ್ಲಾ
ರಾಮ ಶ್ರೀ ಚಂಪಕಧಾಮ ಸ್ವಾಮಿ
ನಾಮಸ್ಮರಣೆಯೊಂದೆ ಪರಮ ಸಿದ್ಧೌಷಧ ॥ ೩ ॥

೩೮

ರಾಗ : ಕಮಾಚ್ ತಾಳ : ಅಟ್ಟ

ಕಾಯ್ವೆ ಶ್ರೀ ಬ್ರಹ್ಮಚೈತನ್ಯ ಸನ್ಮಾನ್ಯ ನೀ ॥ ಪ ॥

ಮಾಯಾ ಮೋಹಾತೀತ ದೇವಾ ಸಮರ್ಥಗುರು
ರಾಯಾ ಶುಭಕಾಯಾ ಮಹನೀಯಾ ಜೀಯಾ ॥ಅ.ಪ. ॥

ಪ್ರಾರಬ್ಧ ಕರ್ಮಾನುಸಾರವೀ ಜನ್ಮದಿ
ಸೇರಿಯಪಾರ ಸಂಸಾರಾಬ್ಧಿಯೊಳ್
ಮೀರಿ ತೊಳಲಿ ಮುಂದೆ ದಾರಿ ಕಾಣದಾದೆ
ಸಾರಿ ಬೇಡುವೆನು ಉದ್ಧಾರಮಾಡ್ವೆ ನೀ ॥ ೧ ॥

ಧನಮಿರ್ದೊಡೆ ಬಂಧು ಜನರೋಲೈಸುವರಿಂದು
ಧನಮಿಲ್ಲದಿರೆ ದೂರವಿರಿಸುವರೋ
ಧನಹೀನ ದೀನಗೆ ನಿಜಬಂಧು ನೀನಾಗೆ
ಮನಕೆ ತೃಪ್ತಿಯನಿತ್ತು ಕೃಪೆ ತೋರಿಸ್ವೆ ನೀ ॥ ೨ ॥

ಸಾಧು ಜನರ ಸಂಗ ಭೇದಭಾವದ ಭಂಗ
ಶುದ್ಧಾಂತರಂಗವನಿತ್ತು ನಿನ್ನ
ಪಾದ ಪದ್ಮಭೃಂಗವನ್ನಾಗಿಸಿ ಎನ್ನ
ಮೈದೋರಿ ಆತೇನಾದವನಾಲಿಸೈ ನೀ ॥ ೩ ॥

ಧರೆಗೆ ಬಂದಾಯ್ತು ಪರಿಪರಿ ನಾನು ಮೆರೆದಾಯ್ತು
ಭರದಿಂದನಾಯಾಸದಿಂ ದೇಹವ
ನೆರೆ ಶಾಂತಿಯಲಿ ಪಂಚಭೂತಂಗಳಲ್ಲಿರಿಸಿ
ಪರಮಪದವ ಕಾಂಬ ಪರಿ ಎನ್ನನು ನೀ ॥ ೪ ॥

ರಾಮ ಚಂಪಕಧಾಮ ನಾನಾಮೃತಪಾನ
ಪ್ರೇಮಾನ್ವಿತನ ಗೈದು ನೀ ಪಾಲಿಸು
ಭೂತಮಿಲದಿ ಭಕ್ತಸ್ತೋಮಂಗಳಿಗೆ ನಿತ್ಯ
ಕ್ಷೇಮಾಭ್ಯುದಯವನ್ನೇ ನೀಡೈ ಪ್ರಭು ನೀ ॥ ೫ ॥

೩೯

ರಾಗ – ಮಾಂಡ್ ತಾಳ : ಆದಿ

ಕಾಲ ಮುಂದುವರಿಯುತಿದೆ । ಬಾಳುವೆ ಕೊನೆಗಾಣುತಿದೆ ॥ ಪ ॥

ಪಾಲಿಸೆನ್ನ ಗುರುವೆ ದಯಾ । ಶೀಲ ಬ್ರಹ್ಮ ಚೈತನ್ಯ ॥ಅ.ಪ. ॥

ಎಷ್ಟು ಜನ್ಮ ಕಳೆದುದೊ ।ಇ
ನ್ನೆಷ್ಟು ಮುಂದೆ ಕಾದಿಹುದೋ ॥
ಇಷ್ಟರಲ್ಲಿ ಎನಗೆ – ಸಂ
ತುಷ್ಟಿಯನ್ನೇ ನೀಡುವುದು ॥ ೧ ॥

ಅರ್ಥವ ಸಂಪಾದಿಸಲು
ವ್ಯರ್ಥಕಾಲ ಕಳೆದಿಹೆನು
ಸ್ವಾರ್ಥತೆ ತುಂಬಿರಲು ನಿನ್ನ
ಪ್ರಾರ್ಥನೆಯನೆ ಮರೆತಿಹೆನು ॥ ೨ ॥

ಪರನಿಂದನೆ ಪರಪೀಡಾ
ನಿರತನಾಗಿ ಮೆರೆಯುತಿಹೆ
ದುರಿತರಿಗಳ ಪರಿಹರಿಸು
ಪರಮ ಶಾಂತಿಯನ್ನಿರಿಸು ॥ ೩ ॥

ನರೆಕೂದಲು ಕರಿದಾಗದು
ಮರಳಿ ಬರದು ಜವ್ವನವು
ಪರಮ ಪುರುಷನನ್ನರಿವ
ಪರಿಯ ಮನವನನುಗೊಳಿಸು ॥ ೪ ॥

ಮಾಯಾಮೃತ ಮುಸುಕಿನಲಿ
ಆಯುಷ್ಯವು ಜಾರುತಿದೆ
ಕಾಯಕ್ಲೇಶಮೊದಗುತಿದೆ
ಕಾಯೋಸ್ವಾಮಿ ! ನೀನಿಂದೆ ॥ ೫ ॥

ಬಂದೆನಿಳೆಗೆ ಹಗುರಾಗಿ
ನಿಂದೆ ಪಥವು ಮರೆಯಾಗಿ
ನೊಂದೆ ಪಾಪ ಹೊರೆಯಾಗಿ
ತಂದೆ ಸಲಹು ತ್ವರೆಯಾಗಿ ॥ ೬ ॥

ವರಶ್ರೀ ಚಂಪಕಧಾಮ
ಸ್ಮರಣೆಯಲಿ ಸದಾಪ್ರೇಮ
ಇರುವಂದದಿ ಕರುಣಿಸುತ
ಪೊರೆವುದು ಗುರುವರ ಸತತ ॥ ೭ ॥

೪೦

ರಾಗ : ಹಿಂದೂಸ್ತಾನಿ ಕಾಪಿ ತಾಳ : ಝಂಪೆ

ಜೀವವಿದು ಶಾಶ್ವತವು ದೇಹವಲ್ಲ ॥ ಪ ॥

ಸಾವು ನೋವುಗಳೆಲ್ಲ ನಮ್ಮ ಕರ್ಮಾಧೀನ ॥ಅ.ಪ. ॥

ತನ್ನ ಹಿಂದಿನ ಕರ್ಮ–ವನ್ನನುಸರಿಸಿ ಜೀವ
ಮುನ್ನ ನಾನಾ ಜನ್ಮ–ವನ್ನರಿತು ಬಹನೋ
ಸನ್ನುತಾಂಗನ ಮರೆತು–ನನ್ನಿದೆಂಬುದ ಕಲಿತು
ಕಣ್ಣಿದ್ದರೂ ಪಾಪ–ವನ್ನೆ ತಾ ಗೈವನೋ ॥ ೧ ॥

ಸಾಧು ಸಂಗವ ಮಾಡಿ –ಭೇದವನೆ ಪೋಗಾಡಿ
ಮೋದದಲಿ ತಾಯ್ನುಡಿಯ–ನಾದರಿಸಿ, ಮೆರೆಸಿ
ಮೇದಿನೀ ಸುತೆಯೊಡೆಯ–ನಾದ ಚಂಪಕಧಾಮ
ನಾ ದಿವ್ಯ ಮೂರ್ತಿಯ–ಪಾದವನೆ ನೆಲೆವ

೪೧

ರಾಗ : ಮಾಂಡ್ ತಾಳ : ಆದಿ

ಜೀವಿಗಳಲಿ ಶ್ರೀ
ದೇವನಿರಲು ಸಮ
ಭಾವನೆಯಿಂದಿರು ಎಲೆ ಮನವೆ ॥ ಪ ॥

ಪಾವನ ಮೂರ್ತಿಯ
ದಿವ್ಯ ಸೇವೆಯ
ಗೈವ ಮತಿಯ ನೀ ತಳೆಮನವೆ ॥ಅ.ಪ. ॥

ಮೇಲು ಬೀಳೆನುವ । ಕೀಳು ಭಾವನೆಯ
ಬಾಳನು ತ್ಯಜಿಪುದು ಎಲೆ ಮನವೇ
ತಾಳು ಜನರಲಿ ವಿಶಾಲ ಹೃದಯವ ಶ್ರೀ
ಲೋಲನು ಮೆಚ್ಚುವ ಎಲೆ ಮನವೆ ॥ ೧ ॥

ಕಾಮಾದಿ ರಿಪುಸ್ತೋಮನ ಜಯಸಿ
ಪ್ರೇಮಧನವನುರೆ ಪಡೆ ಮನವೇ
ಕ್ಷೇಮವ ಪೊಂದಲು । ಕಾಮಶ್ರೀ ಚಂಪಕ
ಧಾಮನ ಸಂತರ ನೆನೆ ಮನವೇ ॥ ೨ ॥

೪೨

ರಾಗ : ಮುಖಾರಿ ಅಥವಾ ಸಾರಂಗ ತಾಳ : ಝಂಪೆ

ದೇಹಾಭಿಮಾನವೇ ಧರ್ಮದ್ರುಮಕೆ ಕುಠಾರ ॥ ಪ ॥

ಮೋಹ ಮನುಕಾರಗಳೆ – ಶೋಕನಿಕರಾಗಾರ ॥ಅ.ಪ. ॥

ಕ್ರೋಧವೆಂಬುದೆ ಯಮನು–ಕಾಮನೇ ವೈತರಣಿ
ಭೇದಭಾವನೆ ಮತ್ತೆ–ಲೋಭಗರ್ವಂಗಳು
ಮೇದಿನಿಯೊಳಿವುಗಳೇ–ಘೋರನರಕಂಗಳು
ಶ್ರೀಧರನ ಭಜನೆಯೇ–ಸ್ವರ್ಗದಾನಂದ ಸುಖ ॥ ೧ ॥

ದುರುಳರಾ ಸಹವಾಸ–ಕ್ರೂರತರ ಯಮಪಾಶ
ಪರವನಿತೆಯರ ಮೋಹ–ಹಾಲಾಹಲ ವಿಷ
ಪರದೂಷಣೆಯೆ ಪಾಪ–ಕರ್ಮಂಗಳಿಗೆ ಮೂಲ
ಪರರ ಮನವನು ನೋಯಿಪುದು–ಸರ್ವನಾಶ ॥ ೨ ॥

ನಿರುತ ಸತ್ಯವೆ ತಪವು–ಧರ್ಮಕಾರ್ಯವೆ ಜಪವು
ಪರರಿಂಗುಪಕೃತಿ ಗೈವುದದೆ–ಘನತರದ ಪೂಜೆ
ಪರಹಿತವ ಬಯಸುವುದೆ–ಜ್ಞಾನಮಾರ್ಗವು ಜಗದಿ
ವರದ ಚಂಪಕಧಾಮ–ಸ್ಮರಣೆ ಮೋಕ್ಷಪ್ರದವು ॥ ೩ ॥

೪೩

ಯಾತರ ಮಡಿ ನಮ್ಮದು । ರಘು
ನಾಥನ ನೆನೆಯದೇ ಜೀವನ ವ್ಯರ್ಥವು ॥ ಪ ॥

ಪರಮ ಪದವನಂದು ಪಡೆಯಲಜಾಮಿಳ
ನಿರುತವಾಚರಿಸಿದ ಮಡಿಯಾವುದು ?
ಪರಮಪುರುಷನಿಗೆ ಫಲವಿತ್ತ ಶಬರಿಯು
ಹರುಷದಿ ಕೈಗೊಂಡ ಮಡಿ ಯಾವುದು ? ॥ ೧ ॥

ಮೊಸಳೆಗಳಿರುವ ಕೊಳದ ಪರಿಯಲಿ
ವಿಷವದು ಮನದಲಿ ತುಂಬಿರಲು
ರಸನೆಯೊಳು ದಿವ್ಯಮಧುವನು ತೋರುತ
ಎಸಗುವ ಕಾರ್ಯವು ವ್ಯರ್ಥವದಲ್ಲವೆ ? ॥ ೨ ॥

ಭರದಿ ಮನವನು ಪರಿಶುದ್ಧಗೊಳಿಸಿ
ಪರರಿಗೆ ಹಿತವನು ಬಯಸುತಲೀ
ಧರಣಿಜೆಯರಸ ಶ್ರೀ ಚಂಪಕಧಾಮನ
ಸ್ಮರಿಸುವುದೇ ಶುದ್ಧ ಮಡಿಯೆನಿಸುವುದು ॥ ೩ ॥

೪೪

ಶುಭವ ನೀಡು ಶ್ರೀ ಬ್ರಹ್ಮಚೈತನ್ಯ
ಅಭಿನಮಿಪೆವು ಸದ್ಗುರುವರೇಣ್ಯ – ನೆರೆ ॥ ಪ ॥

ಮನದಿ ಸದ್ವಿಚಾರಂಗಳು ಮೂಡಿ
ವಿನಯ ಮೇಣ್ ವಿವೇಕವು ಮೈಗೂಡಿ
ವಿನುತ ಸಾಧು ಸಂತರನೊಡಗೂಡಿ
ಜನತೆಯಲಿ ಬೆರೆವ ಸನ್ಮತಿಯ ನೀಡಿ ॥ ೧ ॥

ಕಾಲಕಾಲಕೆ ಸುವೃಷ್ಟಿಯ ಸುರಿಸಿ
ಮೇಲೆನಿಸುವ ಸಸ್ಯಾಳಿಯ ಬೆಳೆಸಿ
ಲೀಲೆಯಿಂ ಜಗದಿ ಶಾಂತಿಯನಿರಿಸಿ
ಪಾಲಿಸೆಮ್ಮ ಪರಮೇಶ್ವರ ತೋರಿಸಿ ॥ ೨ ॥

ಕ್ಷಾಮ ಡಾಮರಾದಿಗಳಿಲ್ಲದೆ –ಸು
ಕ್ಷೇಮದಿಂದಲೀ ಲೋಕವ ರಕ್ಷಿಸಿ
ರಾಮ ಶ್ರೀ ಚಂಪಕಧಾಮನನೊಲಿಸುವ
ನೇಮವ ನೀಡಿ ನಿರಂತರ ಸಲಹುತೆ ॥ ೩ ॥

೪೫

ಸಂಘಬೇಕು ಸಾಧುಸಂಗಬೇಕು
ಸಂಘದಿಂದ ಭವಭಂಗವದಾಗಬೇಕು ॥ ಪ ॥

ಸಹೃದಯತೆಯು ಬೇಕು । ಸಹನೆ ತುಂಬಿರಬೇಕು
ಅಹಿತರಲ್ಲಿಯೂ ಸ್ನೇಹ । ಬಹಳ ಬೆಳಸುವಂಥ ॥ ೧ ॥
ವ್ಯಕ್ತಿ ಪ್ರತಿಷ್ಠೆ ಬಿಟ್ಟು । ಭಕ್ತಿಗೆ ಸ್ಥಳಕೊಟ್ಟು ।
ಮುಕ್ತಿ ಮಾರ್ಗವ ತೋರ್ವ । ಸೂಕ್ತಿ ಕಾಣಿಸುವಂಥ ॥ ೨ ॥

ಹಗೆಯ ಹೆಸರಳಿಸಿ ಗೆಳೆತನವ ಬಯಸಿ
ಸುಲಭದಿ ಭಕ್ತಿಯ ಗಳಿಸಿ ಕೊಡಿಸುವಂಥ ॥ ೩ ॥

ನಾನೆಂಬ ದುರಭಿಮಾನ ತ್ಯಜಿಸಿ
ಜ್ಞಾನಾರ್ಜನೆಯ ಸಹಾನುಭೂತಿಯುಳ್ಳ ॥ ೪ ॥

ಪ್ರೇಮದಿಂದ ಲೋಕಕ್ಷೇಮ ನೀಡುವ
ರಾಮ ಶ್ರೀ ಚಂಪಕಧಾಮನ ಭಜಿಸುವ ॥ ೫ ॥

೪೬

ರಾಗ : ಭೈರವಿ ತಾಳ : ಝಂಪೆ

ಸುಕೃತವೋ ದುಷ್ಕೃತವೋ ಆ ಕೃತ್ಯಗಳ ಫಲವೊ ॥ ಪ ॥

ಪ್ರಕೃತಿಯೊಳಗೆನಗಿರಲು ಪರಮಾತ್ಮ ಏಂಗೈವೆ ॥ಅ.ಪ. ॥

ಧರಣಿಜೇಶನ ನಾಮಸ್ಮರಣೆ ಸದ್ಗುರುವರನ
ಚರಣ ಸೇವಾಭಾಗ್ಯ — ದೊರಕಿರುವುದೇ ಸುಕೃತ
ಪರಮ ಭಕ್ತವೃಂದ ದಿಂದ ಬಾಹಿರನಾಗಿ
ಪರನಿಂದೆಯೊಳಿರುವುದೇ ಪಾಪಕರ ದುಷ್ಕೃತವು ॥ ೧ ॥

ಸತ್ಯದಾ ನುಡಿ ಸುಕೃತ–ಮಿಥ್ಯಯೇ ದುಷ್ಕೃತವು
ನಿತ್ಯ ತೃಪ್ತಿಯ ಸುಕೃತ – ಲೋಭವದು ದುಷ್ಕೃತವು

ಸತ್ಸಂಗವೇ ಸುಕೃತ – ದುಷ್ಟನೆರ ದುಷ್ಕೃತವು
ಮತ್ತೆ ಶಾಂತಿಯೆ ಸುಕೃತ – ಭ್ರಾಂತಿಯದು ದುಷ್ಕೃತವು ॥ ೨ ॥

ನಾನು ನಾನೆಂಬುದನು ತ್ಯಜಿಸುವುದತಿ ಸುಕೃತವು
ನಾನೆಂಬಹಂಕೃತಿಯೆ ಘೋರತರ ದುಷ್ಕೃತವು
ದಾನಧರ್ಮದ ಮರ್ಮವನ್ನರಿವುದು ಸುಕೃತವು
ದೀನ ಜನರನು ಕಡೆಗಣಿಸುವುದು ದುಷ್ಕೃತವು ॥ ೩ ॥

ಒಳ್ಳೆಯದನೀಕ್ಷಿಸುವುದೊಳ್ಳೆಯದನಾಲಿಪುದು
ಒಳ್ಳಿತುದ ಚಿಂತಿಸುವುದು ಸುಯೋಗವದು ಸುಕೃತ
ಒಳಿತಲ್ಲದ ಭಾವನೆಗೆ ಮನವನಿತ್ತು ಶ್ರೀ
ವಲ್ಲಭನ ಮರೆಯುವುದು ಧರೆಯೊಳತಿ ದುಷ್ಕೃತವು ॥ ೪ ॥

ಮನ್ಮನೋರಾಜ್ಯದಲಿ ಕಾಮಾದಿರಿಪುವಳಿದು
ಸಮ್ಮೋದ ಸಾತ್ತ್ವಿಕವೆ ವಾತಾವರಣವುಳಿದು
ಸನ್ಮತಿಯ ಸುಕೃತ ಮಾತ್ರವನಾಗಿಸುತ ಸಲಹು
ಚಿನ್ಮಯಾನಂದ ಶ್ರೀರಾಮ ಚಂಪಕಧಾಮ ॥ ೫ ॥

೪೭

ರಾಗ : ಸಾರಂಗ ತಾಳ : ಝಂಪೆ

ಹರಿಭಜನೆಯನು ನಿರುತ ಮಾಳ್ಪುದೇ ಆನಂದ ॥ ಪ ॥

ಹರಿ ನಾಮವನು ಮನದಿ ನುಡಿವುದೇ ಆನಂದ ॥ ಅ.ಪ. ।

ಹರಿನಿರ್ಮಾಲ್ಯವ ಧರಿಸೆ ಶಿರಕಾನಂದ
ಹರಿರೂಪು ನೋಡುವುದೇ ಕಂಗಳಿಗೆ ಆನಂದ
ಹರಿನಾಮ ಕೇಳುವುದೇ ಕರ್ಣಂಗಳಿಗಾನಂದ
ಹರಿಮಾಲ್ಯ ಗಂಧವದು ಮೂಗಿಗೇ ಆನಂದ ॥ ೧ ॥

ಹರಿನಾಮ ನುಡಿಯುವುದೇ ರಸನೆಗೇ ಆನಂದ
ಹರಿಪೂಜೆ ಗೈವುದೇ ಕರಗಳಿಗೆ ಆನಂದ

ಹರಿಯಾಲಯಕೆ ಪೋಗುವುದೇ ಚರಣಕಾನಂದ
ವರದ ಚಂಪಕಧಾಮ ಸ್ಮರಣೆ ಮನದಾನಂದ ॥ ೨ ॥

೪ಲ

ಹೇಗಿರಬೇಕಯ್ಯಾ? ನಾವು
ಹೇಗಿರಬೇಕಯ್ಯಾ ॥ ಪ ॥

ಹೇಗಾದರೂ ಸರಿ-ಲೋಗರಿಂಗೆ ಉಪ
ಯೋಗವಾಗುವಂತಿರಬೇಕಯ್ಯಾ ॥ಅ.ಪ ॥

ಬೆಳಗಾಗುತಲೆ ಜಳಕವ ಮುಗಿಸಿ
ಬೆಳಗುವ ರವಿಯನು ನೋಡುತ ನಮಿಸಿ
ಕುಲದೇವರನೇ ಮೊದಲು ಪೂಜಿಸಿ
ಕೆಲಸಗಳನಾರಂಭಿಸಬೇಕು ॥ ೧ ॥

ಮಾಡುವ ಕೆಲಸದಿ ಕ್ರಮವಿರಬೇಕು ।
ಬೇಡುವುದನ್ನು ಕೈ ಬಿಡಬೇಕು ।
ಆಡಿದಂತೆ ನಡೆಯುತ್ತಿರಬೇಕು ।
ಕೂಡಬೇಕು ಸುಜನರ ಸಂಗವನು ॥ ೨ ॥

ಕಚ್ಚಬಾರದು ಹಣ್ಣುಗಳನ್ನು
ಕೊಚ್ಚಬಾರದು ತನ್ನನು ತಾನು
ಚುಚ್ಚಬಾರದು ನಾಣ್ನುಡಿಗಳನು
ಬಿಚ್ಚಿಬಾರದು ನಾಣ್ಯಗಳನ್ನು ॥ ೩ ॥

ಗುರುಹಿರಿಯರ ಗೌರವಿಸಲು ಬೇಕು ।
ಕರಣಂಗಳು ಶುಚಿಯಾಗಿರಬೇಕು ।
ಕರುಬುತನವ ಕೊನಗಾಣಿಸಬೇಕು ।
ಸರಸದಿ ನಗುಮುಖದಿಂದರಬೇಕು ॥ ೪ ॥

ಮನವನು ನಿತ್ಯ ಪರೀಕ್ಷಿಸಬೇಕು
ವಿನಯ ಗುಣವನೇ ವರ್ಧಿಸಬೇಕು

ನೆನೆಯಲಿ ಬೇಕು ಶ್ರೀರಘುರಾಮನ
ಜನಕಜೆಯರಸನ ಚಂಪಕಧಾಮನ ॥ ೫ ॥

೪೯

ಹೇಳಿದ್ದೇ ಹೇಳಿದರೆ-ಕೇಳಿದರೆ ಬೇಸರವೆ ॥ ಪ ॥

ಶ್ರೀಲೋಲ ! ನಿನ್ನ ಘನ-ಲೀಲಾಮಯ ಪದಗಳ ॥ ಅ.ಪ. ॥

ನಿತ್ಯ ನೋಡುವ ರವಿಯ ಮತ್ತೆ ಕಾಣುವ ಶಶಿಯ
ರಾತ್ರಿ ದಿನದಿನವೂ ಪೊಳೆವ ತಾರೆಯ
ವ್ಯತ್ಯಾಸಮಿರದೆ ನೋಡುತ್ತಿಲ್ಲವೊ ದೇವ
ಸ್ತೋತ್ರಪಾಠವ ಮಾಡಿ ನುತಿಸಿಲಾಲಸ್ಯವೇ ॥ ೧ ॥

ಒಂದಿನಿತು ಬಿಡುವಿಲ್ಲದಂದದಲಿ ತಿಂದುದನೆ
ತಿಂದು ನಿದ್ರಿಪುದು ಬೇಸರವಲ್ಲವೆ ?
ಒಂದು ಸಲ ಶ್ರೀರಾಮಚಂದ್ರ ಗುಣಸಾಂದ್ರ
ಎಂದೆನ್ನುತಿರಲೆಮಗೆ ಕುಂದುಂಟೆ? ಕೀರ್ತನೆಯ ॥ ೨ ॥

ನಿನ್ನ ಮೂರ್ತಿಯ ನೋಡಿ ನಿನ್ನ ಪದಗಳ ಹಾಡಿ
ನಿನ್ನ ದಾಸರ ಸೇವೆಯನ್ನೆ ಮಾಡಿ
ನಿನ್ನ ನಾಮಸ್ಮರಣೆಯನ್ನು ಗೈವಂದದಲಿ
ಮುನ್ನ ಕರುಣಿಸಿ ಕಾವುದೆನ್ನ ಚಂಪಕಧಾಮ ॥ ೩ ॥

❖❖

ಶ್ರೀ ರಮಾಕಾಂತ ವಿಠಲದಾಸರ ಕೀರ್ತನೆಗಳು

ಚಳ್ಳಕೆರೆ ಕೃಷ್ಣರಾವ್ (ಕ್ರಿ.ಶ. ೧೯೦೬-೧೯೮೩)

ಜೀವನ : ಚಳ್ಳಕೆರೆ ಕೃಷ್ಣರಾಯರೆಂದೇ ಹೆಸರಾದ ಶ್ರೀ ರಮಾಕಾಂತ ವಿಠಲದಾಸರು ಚಳ್ಳಕೆರೆಯಲ್ಲಿ ಭೀಮಸೇನರಾವ್ ಮತ್ತು ಭಾರತೀಬಾಯಿ ದಂಪತಿಗಳ ಸುಪುತ್ರರಾಗಿ ೧೯೦೬ರಲ್ಲಿ ಜನಿಸಿದರು. ಅಜ್ಜಿ ರುಕ್ಮಿಣಿಬಾಯಿ ರಾಮಾಯಣ ಭಾರತ ಭಾಗವತ ಇತ್ಯಾದಿ ಧಾರ್ಮಿಕ ಗ್ರಂಥಗಳನ್ನು ಅಜ್ಜಿಗೆ ಓದಿ ಹೇಳುತ್ತಿದ್ದರು. ಅಜ್ಜಿಗೆ ಪುಣ್ಯಶ್ರವಣ ಮೊಮ್ಮಗನಿಗೆ ಸತ್ ಸಂಸ್ಕಾರ.

೮ನೇ ವಯಸ್ಸಿನಲ್ಲಿ ಉಪನಯನವಾದನಂತರ ಸಂಧ್ಯಾವಂದನೆ ದೇವರಪೂಜೆ ಇತ್ಯಾದಿ ನಿತ್ಯ ಕರ್ಮಗಳನ್ನು ಏಕಾದಶಿವ್ರತವನ್ನು ಕಲಿತು ತಮ್ಮ ಅಂತ್ಯಕಾಲದವರೆಗೂ ಆಚರಿಸಿದರು. ೨೮-೧-೧೯೮೩ರಲ್ಲಿ ಹರಿಪಾದ ಸೇರಿದರು.

ತಂದೆ ಮುದ್ದು ಮೋಹನದಾಸರೆಂದು ಖ್ಯಾತರಾದ ಪರಮಪ್ರಿಯ ಸುಬ್ಬರಾಯದಾಸರು ಕೃಷ್ಣರಾಯರ ಅಕ್ಕ ಅಂಬಾಬಾಯಿ ಅವರಿಗೆ ಗೋಪಾಲಕೃಷ್ಣ ವಿಠ್ಠಲ ಅಂಕಿತವನ್ನು ೧೯೨೮ರಲ್ಲಿ ಕೃಷ್ಣರಾಯರಿಗೆ ರಮಾಕಾಂತ ವಿಠಲ ಎಂಬ ಅಂಕಿತೋಪದೇಶ ಮಾಡಿದರು. ಪತ್ನಿ ಸುಂದರಮ್ಮನವರಿಗೂ ಸುರೇಶವಿಠಲ ಅಂಕಿತ ನೀಡಿದರು. ಕೃಷ್ಣರಾಯರು ರೈಲ್ವೆ ಇಲಾಖೆಯಲ್ಲಿ ನೌಕರರಾಗಿ ಕಾರ್ಯ ನಿರ್ವಹಿಸುತ್ತಾ ಊರೂರು ಸುತ್ತಿದರು.

ಕೃತಿಗಳು :೧) ಕೀರ್ತನೆಗಳು ಸುಮಾರು ೩೦೦

೧) ಹರಿದಾಸದರ್ಪಣ ೧೯೩೭ ಪದ್ಯಗಳ ಭಾಮಿನಿಷಟ್ಪದಿ ಕಾವ್ಯ

೨) ತಂದೆ ಮುದ್ದುಮೋಹನದಾಸರ ಚರಿತ್ರೆ (ಗುರು ಗೋವಿಂದದಾಸರು ಸಹಲೇಖಕರು)

೩) ಹರಿಕಥಾಮೃತಸಾರ ಸಂಗ್ರಹ

೫೦

ಅನುಭವಕೆ ತಂದಿತ್ತೆ ಅನಿಮಿಷೇಶ ॥ ಪ ॥

ತನುವಿನಾ ಬಾಂಧವರು ಋಣರೂಪರೆಂಬುದನು ॥ ಅ.ಪ. ॥

ಅನುಸರಿಸಿ ಆದರಿಸಿ ಉಪಚರಿಸುತಿರೆ ಅವರು
ಅನುಮೋದಿಸುತ್ತ ಬಲುಹರುಷ ತಾಳುವರು
ಅನುವು ತಪ್ಪಿದ ಕ್ಷಣವೆ ಬಿನುಗು ಮಾತುಗಳಿಂದ
ಗುಣಹೀನರಂತಾಡಿಕೊಳುತ ದೂರಾಗುವರು ॥ ೧ ॥

ಧನಕನಕವಸ್ತುಗಳು ಅನುಕೂಲವಿದ್ದಾಗ
ಗುಣಿಸುವರು ಬಾಂಧವ್ಯ ಘನಪ್ರೀತಿಯಿಂದಾ
ವಿನಯದಿಂ ಸೇರುವರು ತನ್ನಿಮಿತ್ತವು ತೊಲಗೆ
ಕ್ಷಣ ನಿಲ್ಲದಾ ಪ್ರೀತಿ ತೃಣಕೆ ಸಮ ಕಾಣುವರು ॥ ೨ ॥

ಜನುಮ ಜನುಮಗಳಿಂದ ಅನುಸರಿಸಿ ಬಂದಿಹರು
ಜನುಮ ಹಲವನು ಪೊತ್ತೆ ಇವರಿಗಾಗಿ
ಋಣದ ನೆಲೆಗೇ ಇನ್ನೂ ಎಣೆಗಾಣೆನೋ ದೇವ
ಸೆಣಸುತಿಹ ಋಣಬಾಧೆ ಪರಿಹರಿಸಿ ಕಾಯೋ ॥ ೩ ॥

ನಾನೊಲ್ಲೆ ನಾನೊಲ್ಲೆ ಈ ಬಂಧು ಬಳಗ ಸಖ
ಕಾಣದಾಯಿತಿದರೊಳಗೆ ತಿಲಮಾತ್ರ ಹರುಷ
ಸ್ವಾನುಭವದಿಂದೆಮ್ಮ ಹಿರಿಯರಾಡಿದ ವಚನ
ಜ್ಞಾನಗೋಚರವಾಯ್ತೊ ಮಾನನಿಧಿಯೇ ॥ ೪ ॥

ಚಿಂತೆಮಾಡಲಿಯೇಕೆ? ಜನನಿ ಜನರನು ನೀನೆ
ಕಂತುಪಿತ ನಿನ್ನವರೆ ಬಂಧುವರ್ಗ
ಎಂತೆಂಬ ಚಿಂತನೆಯ ಸಂತತದಿ ಎನ್ನುತ್ತ
ದಂತಿವರದಾ ರಮಾಕಾಂತ ವಿಠ್ಠಲ ಸಲಹೋ ॥ ೫ ॥

೫೧

ಜನಿಸಲಾರೆನೊ ಭವದಿ । ನಾನಾ ಜನುಮವ ಪೊತ್ತು
ಜನನಿಗರ್ಭದ ಕೂಪದೊಳು ಸಿಲುಕಿ ಸಿಲುಕೀ ॥ ಪ ॥

ಎಣಿಸಲಾಗದ ವಿವಿಧ ಯೋನಿಯೊಳು ತಿರುಗಿಸದೆ
ಅನುನಯದಿ ಕಡೆಹಾಯ್ಸಿ ಕೈಪಿಡಿಯೋ ದೇವಾ ॥ ಅ.ಪ. ॥

ಕಲುಷಭಾಜನನಾಗಿ ಕಳೆದೆ ಕಾಲವ ನಾನು ।
ಹಲವು ಪಾಪವ ಗೈದು ಹಲುಬಿ ಹಲುಬೀ ॥
ನೆಲೆಗಾಣದಲೆ ನಿನ್ನಬಳಿಗೆ ಸಾರಿದೆನಯ್ಯ ।
ಘಳಿಗೆ ಯುಗವಾಗುತಿದೆ ಛಲವೇಕೆ ಸ್ವಾಮಿ ॥ ೧ ॥

ಧ್ಯಾನವಿಲ್ಲದ ಮೌನ । ಜ್ಞಾನವಿಲ್ಲದ ಭಕುತಿ
ಹೀನವೈರಾಗ್ಯ ಕರ್ಮವು ವ್ಯರ್ಥ ವ್ಯರ್ಥ
ದೀನವತ್ಸಲ ತಂದೆ ಪ್ರಾಣಪತಿ ನೀನೊಲಿದು
ಜ್ಞಾನ ಸದ್ಭಕ್ತಿ ವೈರಾಗ್ಯ ಭಾಗ್ಯವ ನೀಡು ॥ ೨ ॥

ಬಂದು ನೊಂದೆನೊ ಭವದಿ ತಂದೆ ನೀ ತಂದುದಕೆ
ಮುಂದೆ ಸಲಹುವ ಭಾರ ನಿಂದೇ ನಿನ್ನದೇ ।
ಕಂದಿ ಕುಂದಿದೆನು ಈ ಬಂಧನವ ಕಡೆಮಾಡು
ನಂದನಂದನ ರಮಾಕಾಂತವಿಠಲ ಪ್ರಭುವೇ ॥ ೩ ॥

೫೨

ರಾಗ : ಮಧ್ಯಮಾವತಿ ತಾಳ : ಆದಿತಾಳ

ನೊಂದು ಬೆಂದೆನೊ ಭವದಿ । ಬಹುವಿಧದ ಬಂಧನ
ದಿಂದ ತೊಳಲುತ ಮನದಿ । ಸಲೆ ಸುಖವು ವೊಂದಲು
ಬಂದು ಕಾಣದೆ ಜಗದೀ । ಇರುವ ಕಾರಣದಿಂದೇ
ಇಂದಿರೇಶನೆ ಪೊಂದಿದೆನೊ ನಿನ್ನ । ಕಂದನಿವನೆಂತೆಂದು ಪೊರೆವುದು॥ ಪ ॥

ಬಂಧು ತೆರದಲಿ ನಿಂದು । ನೀಯೆನ್ನ
ಮಂದಭಾಗ್ಯವ ಮಾಡಲಾಗದು ॥ಅ.ಪ. ॥

ಪುಟ್ಟಿದಾರಭ್ಯದಿಂದ ದೈನ್ಯದಲಿ ಗೇಣಿನ
ಹೊಟ್ಟೆಗಾಗಿ ಗೋವಿಂದ ನಾನಾ ಪ್ರಕಾರದ
ಕಷ್ಟದಾರ್ಜನೆಯಿಂದ ಸಾಲದಲೆ ಕೊಂಡು ನಾ
ಕೊಟ್ಟ ಋಣಮುಖದಿಂದಾ ಅನುಸರಿಸಿ ಬಂದಾ ॥ ೧ ॥

ಇಷ್ಟ ಬಳಗದ ಕೂಡುತಲಿ ಅವ
ರಿಷ್ಟ ಸಲಿಸುತ ಬಯಸಿ ಪ್ರೀತಿಯ
ಎಷ್ಟು ಉಪಚರಿಸುತಿರ್ದರು ಸಂ
ತುಷ್ಟರಾಗದೆ ಜ್ಯೋತಿಯಂದದಿ
ನಷ್ಟವಾಗಲು ತೈಲ ಪ್ರಣತಿಯೊಳ್
ಬಿಟ್ಟು ಹೋಗುವ ತೆರದಿ ಎನ್ನ ಕ
ನಿಷ್ಟನಾಗೆಣಿಸಿದುದರಿಂದ ಕಂ
ಗೆಟ್ಟು ಕೃಷ್ಣಾ ನಿನ್ನ ಸೇರಿದೆ ॥ ೧ ॥

ಸರುವ ರೀತಿಯೊಳೆನ್ನಾ ಪ್ರಾರಬ್ಧ ಕರ್ಮಕೆ
ಗುರಿಯ ಮಾಡುತ ಮುನ್ನಾ । ಕರೆಕರೆಯ ಮಧ್ಯದಿ
ಹೊರಳಿ ಬಡಿಸುತ ಬನ್ನಾ । ಎನತು ನಿನಗಿದು
ಸರಿಯೋ ಜೀವವರೇಣ್ಯಾ । ನಂಬಿದೆನೊ ನಿನ್ನ
ನಿರುತ ಹೃತ್ಸರಸಿಜದಿ ನೆಲಸಿ ನೀ
ಚರಿಸಿದಂದದಿ ಚರಿಪನಲ್ಲದೆ
ಬರಿದೆ ಎನ್ನನು ದುರಿತಕ್ಲೇಶಕೆ
ಎರವು ಮಾಡುವುದುಚಿತವೇ ಹರಿ
ಅರಿವು ಇದರಿಂದಾಯ್ತು ಇನ್ನೀ
ಪರಿಯ ದುಃಖವನೊಲ್ಲೆನೆಂದಿಗು
ಕರುಣಿ ನಿನ್ನದು ಮೊರೆಯ ಹೊಕ್ಕೆನೊ
ಕರವ ಪಿಡಿದೆನ್ನ ಕರೆಯೊ ಮುಂದಕೆ ॥ ೨ ॥

ಜನುಮ ಜನುಮದಿ ನೀನೇ । ತನುವಿತ್ತು ಪೊರೆದಿಹೆ
ಘನನಿನಗೊಬ್ಬರ ಕಾಣೆ । ಮನಮುಟ್ಟಿ ಪೇಳುವೆ
ಜನನಿ ಜನಕನು ನೀನೇ । ನೆನೆಯೆ ನಾನನ್ಯರ

ಕನಸಿನಲ್ಲಾದರೆನ್ನಾಣೆ । ಪ್ರಣತ ಕಾಮದನೇ
ಮಣಿದು ಬೇಡುವೆ ನಿನ್ನ ಸೇವೆಗೆ । ಅನುವು ಆಗದ ಮನುಜರೆಲ್ಲರು
ತನುಸಂಬಂಧಿಗಳೆನಿಸಿದಾಗ್ಯೂ । ಎನಗೆ ಅನುಚಿತ ವನಜನಾಭನೆ
ನೆನೆವೆ ಅನಿಮಿತ್ತಾಪ್ತ ನೀನೆ । ಅನಿಮಿಷರೆ ಎನ್ನವರು ಬಿಡದಲೆ ।
ಕ್ಷಣಕ್ಷಣದಿ ಪೊರೆವಂತೆ । ಕರುಣಿಸೋ । ಅನಘ ಶ್ರೀ ರಮಾಕಾಂತ ವಿಠಲ ॥೩॥

೫೩

ರಾಗ : ಹಂಸಾನಂದಿ ತಾಳ : ಝಂಪೆ

ಪಾಠ ಕಲಿತೆನೊ ರಂಗ ನಿನ್ನಾಟದೊಳು ಸಿಲುಕಿ ॥ ಪ ॥

ಪಾಟುಪಡಿಸುವ ಹೀನಕೋಟಲೆಯು ಸಾಕಿನ್ನು ॥ಅ.ಪ. ॥

ಹಂದಿನಾಯಿಗಳಂತೆ ತಿಂದು ಕಾಲ್ಕಚ್ಚುವಾ
ಮಂದಿಗಳ ಒಡನಾಟವಾಡಿ ನೊಂದೇ
ಬಂದಕಾರ್ಯವ ಮರೆತು ಮಂದಬುದ್ಧಿಯಲಿಂದ
ಬೆಂದೆ ನಾ ಬವಣೆಯಲಿ ಅರಿವಾಯ್ತು ಎನಗೀಗ ॥ ೧ ॥

ದುರ್ಜನಕೆ ಸಾಧನವು ಸಾಧುಗಳ ಹಿಂಸಿಪುದು
ಸಜ್ಜನರ ಪಾಪಕ್ಷಯ ಇದರಿಂದಲೀ
ಲಜ್ಜೆಯಿಲ್ಲದ ಇಂಥ ಕುಟಿಲ ಕಂಟಕರನ್ನು
ಹೆಜ್ಜೆಮುಳ್ಳುಗಳಂತೆ ಒಗೆದು ಬಿಸುಡುವುದೊಳಿತು ॥ ೨ ॥

ಸುಳ್ಳು ನಿಜವನೆ ಮಾಳ್ಪ ಅನ್ಯಾಯಕಾರಿಗಳು
ಎಳ್ಳಷ್ಟು ಪಾಪಪುಣ್ಯದ ಭೀತಿ ಇರದಾ
ಕ್ಷುಲ್ಲಕರು ಬಲ್ಲಿದರ ಮಾನಗಳ್ಳರು ಇವರು
ಸಲ್ಲದಾ ನಾಣ್ಯದಂತಿವರ ಲೆಕ್ಕಿಸಬೇಕು ॥ ೩ ॥

ಕಲಿಯುಗದಿ ಪಾಪಗಳಿಗಾಯುಸ್ಸು ಚಿರಕಾಲ
ಇಳೆಗೆ ಭಾರವು ಭೂಮಿತಾಯಿ ಸೈರಿಸಳು
ಕುಲ ಹೀನರಳಿಯುವರು ಪಿಡಿಲೆರಗಿ ಬಂದಂತೆ
ಇಳೆಯರಸ ಶಿಷ್ಟಜನ ಪರಿಪಾಲನಿಚ್ಛೆ ಇದು ॥ ೪ ॥

ಚಪಲ ಮರೆಯಲಿ ಭವದ ವಿಪಿನವನು
ನಾಪೊಕ್ಕೆ ವಿಫಲವಾಯಿತು ಎನ್ನ ಬಯಕೆ ಎಲ್ಲಾ
ಕಪಟಿಗಳು ತೊಲಗಿದರು ಉಪಕಾರ ಸ್ಮರಿಸದಲೆ
ಕೃಪಣವತ್ಸಲ ನಿನ್ನ ಕೃಪೆಯೊಂದು ಎನಗಿರಲಿ ॥ ೫ ॥

ಬಂದು ಭೂಮಿಯ ಮೇಲೆ ಸಂದಿತರವತ್ತೊರುಷ
ಕಂದಿ ಕುಂದಿದೆ ಬಂಧು ಬಳಗದವರಿಂದಾ
ಎಂದಾದರೊಂದು ದಿನ ಬಿಟ್ಟು ಹೋಗುವರವರು
ಇಂದೆ ತೊಲಗಿದರಿಂದ ಮನವು ಹಗುರಾಯ್ತು ॥ ೬ ॥

ಎನ್ನ ಚಿಂತೆಯೊಳಿದ್ದು ಬನ್ನ ಬಡಿಸುವ ಭವದಿ
ಬೆನ್ನುತಾಕದ ಪರಿಯೊಳಿನ್ನು ನಾನಿರಲು
ಕುನ್ನಿಗಳು ಪರಿಹಾಸ್ಯ ಬೊಗಳಿದರೆ ಕುಂದೇನು?
ಖಿನ್ನಪಡಲ್ಯಾಕಿನ್ನು ಮನ್ನಣೆಯೆ ಅದು ಎಂಬ ॥ ೭ ॥

ಅಟ್ಟ ಅಡಿಗೆಯ ತಾನು ಉಣಲೊಲ್ಲೆನೆಂದರೆ
ಬಿಟ್ಟು ಬಿಡುವುದೆ ವಿಧಿಯು ಉಣಲೀಸದೇ
ಶಿಷ್ಟರಿಗೆ ಎಚ್ಚರಿಕೆ ದುಷ್ಟರಿಗೆ ಮನೆಹಾಳು
ಸೃಷ್ಟೀಶನೇ ನಿನ್ನ ಕಟ್ಟಾಜ್ಞೆ ಹೀಗೆಂಬ ॥ ೮ ॥

ಇಷ್ಟಾದರೂ ನಿನ್ನ ಮೊರೆಹೊಕ್ಕಿ ಕಡೆ ಬೀಳ್ದ
ಶಿಷ್ಟ ಮಾರ್ಗವ ತೋರಿ ಸಂತವಿಟ್ಟು
ಇಷ್ಟಾರ್ಥವನು ಸಲಿಸಿ ಕಾಯುವಾ ರಮಾಕಾಂತ
ವಿಠ್ಠಲನು ಒಬ್ಬನೇ ಆಪ್ತಬಂಧುವು ಎಂಬ ॥ ೯ ॥

❖❖

ಗೋಪ ಅಂಕಿತದ ಕೀರ್ತನೆಗಳು

(ಕೆ. ಗೋಪಾಲಕೃಷ್ಣರಾವ್ ೧೯೦೬-೧೯೬೭)

ಕೆ. ಗೋಪಾಲಕೃಷ್ಣರಾಯರು ಬೆಂಗಳೂರಿನಲ್ಲಿ ೧೯೦೬ರಲ್ಲಿ ಜನಿಸಿದರು. ನ್ಯಾಷನಲ್ ಹೈಸ್ಕೂಲ್ ಸೆಂಟ್ರಲ್ ಕಾಲೇಜುಗಳಲ್ಲಿ ಓದಿ ಪದವೀಧರರಾದರು. ಅಠಾರಾ ಕಚೇರಿಯಲ್ಲಿ ಗುಮಾಸ್ತರಾಗಿ ವೃತ್ತಿಜೀವನ ಪ್ರಾರಂಭಿಸಿದರು. ಕೆ. ಹನುಮಂತಯ್ಯನವರು ಮುಖ್ಯ ಮಂತ್ರಿಗಳಾಗಿದ್ದಾಗ ಅವರ ಆಪ್ತಕಾರ್ಯದರ್ಶಿಗಳಾಗಿ ಕೆಲಸ ಮಾಡಿದರು. ವಿದ್ಯಾರ್ಥಿಯಾಗಿದ್ದಾಗ ಸೆಂಟ್ರಲ್ ಕಾಲೇಜಿನ ನಾಟಕಸಂಘದ ಕಾರ್ಯದರ್ಶಿಗಳಾಗಿದ್ದರು. ಬೆಂಗಳೂರಿನಲ್ಲಿ ಸಾಹಿತಿಗಳಸಂಘ ಸ್ಥಾಪಿಸಿ ಸಾಹಿತ್ಯಿಕ ಚರ್ಚೆಗಳಿಗೆ ವೇದಿಕೆ ಒದಗಿಸಿದ್ದಲ್ಲದೆ ಸಣ್ಣ ಕತೆಗಾರರ ೩ ಸಮ್ಮೇಳನಗಳನ್ನು ನಡೆಸಿದರು. ಕನ್ನಡಸಾಹಿತ್ಯಪರಿಷತ್ತಿಗೆ (೧೯೫೬-೬೧) ಗೌರವಕಾರ್ಯದರ್ಶಿಗಳಾಗಿದ್ದರು. ಕನ್ನಡದ ಪ್ರಸಿದ್ಧ ಕತೆಗಾರರ ಪೈಕಿ ಇವರೊಬ್ಬರು. ಉಡುಗೊರೆ, ಬಂಗಾರದ ಡಾಬು, ನಟಿ, ಸೋತು ಗೆದ್ದವಳು ಎಂಬ ಕಥಾಸಂಗ್ರಹಗಳು ಕೆನ್ಸಿಂಗ್‌ಟನ್ ಪಾರ್ಕ್, ಹರಿದಾಸಸಾಹಿತ್ಯ ಎಂಬ ಎರಡು ಪ್ರಬಂಧ ಸಂಕಲನಗಳು. ಕುಮಾರವ್ಯಾಸ, ಗುರುಗೀತೆ ಎಂಬ ಎರಡು ಕವನಸಂಕಲನಗಳೂ ಪ್ರಕಟವಾಗಿವೆ. ಹಲವು ಏಕಾಂಕ ನಾಟಕಗಳನ್ನೂ ಬರೆದಿದ್ದಾರೆ. ಕುಮಾರಕೃಪ ಕವನಸಂಕಲನದಲ್ಲಿ ಕೆಲವು ದಾಸಕೀರ್ತನೆಗಳನ್ನು ರಚಿಸಿದ್ದಾರೆ. ೧೯೬೭ ಅಕ್ಟೋಬರ್ ೮ ರಂದು ನಿಧನರಾದರು. ಬೇಂದ್ರೆ ಮಾಸ್ತಿ ಮುಂತಾದ ಸಾಹಿತಿಗಳಿಗೆ ತುಂಬಾ ಆಪ್ತರಾಗಿದ್ದರು. (ಟಿಎಸ್‌ವೆಂ-ಎಆರ್‌ಕೃ)

ಗೋಪ ಅಂಕಿತದ ಕೀರ್ತನೆಗಳು

೫೪

ರಾಗ : ಸುರಟಿ **ತಾಳ : ಆದಿ**

ಅಂಜಿಕೆ ಪಡಬೇಡ ಮನದಲಿ
ಚಿಂತಿಸಿ ಕೆಡಬೇಡ ॥ ಪ ॥

ನಡೆವ ಕಾಲ್ಗಳಾಗೆ ಅವುಗಳು
ಎಡಹದಿರ್ಪದೇನೊ? ॥ಅ.ಪ. ॥

ತಪ್ಪು ಇಲ್ಲದಿಲ್ಲ, ಬಾಳಿನೊ-ಳೊಪ್ಪ ತೋರದೆಲ್ಲ
ತಪ್ಪುಗೈಯೆ ನೀನೊಪ್ಪಿಕೊಂಡರಾ
ಪತ್ತು ಹರಿದು ಸಂಪತ್ತು ದೊರಕುವುದೊ ॥ ೧ ॥

ಅರ್ಥಮೋಹ ಬೇಡ, ಬಾಳನು
ವ್ಯರ್ಥಗೊಳಿಸಬೇಡ
ಸ್ವಾರ್ಥವಳಿದು ನಿಃ
ಸ್ವಾರ್ಥಿಯಾಗೆ ಸತ್
ಕಾರ್ಯದಲ್ಲಿ ಮನಸಕ್ತವಾಗುವುದೊ ॥ ೨ ॥

ಸತ್ಯಕೆಂದು ಜಯವೊ ತಿಳಿ ಅ
ಸತ್ಯಕೆ ಅಪಜಯವೊ
ಸತ್ಯವ ಪರಿಕಿಪ
ಚಿತ್ತವೃತ್ತಿ ಬರೆ
ನಿತ್ಯ ಜೀವನವು
ಉತ್ತಮಗೊಳ್ವುದೊ ॥ ೩ ॥

ಹರಿಯೊಳಿರಲು ಭಕ್ತಿ ಬರುವುದು
ಧರುಮದೊಳಾಸಕ್ತಿ
ಸರ್ವಜನರ ಹಿತ
ವಾಗೆ ನಿನ್ನ ಮತ
ಸರ್ವ ಮಂಗಳವ
ನೀವನು ಗೋಪನು ॥ ೪ ॥

೫೫

ರಾಗ : ಪಂತುವರಾಳಿ ತಾಳ : ಝಂಪೆ

ಆದುದಾಯಿತು ಅದಕೆ ದುಗುಡ ಪಡಲೇಕೆ
ಆದುದೆಲ್ಲವು ನಿನ್ನ ಹಿತಕೆ ಎಚ್ಚರಿಕೆ ॥ ಪ ॥

ಜಗದೊಳೆಲ್ಲರ ನಂಬಿ ಮೋಸಹೋಗಲು ಬೇಡ
ಹೊಗಳುವರ ಹತ್ತಿರಕೆ ಸುಳಿಸಬೇಡ
ನಗುತ ಬೆನ್ನೊಳು ಇರಿವ ನೇಹಿಗರ ಜೊತೆಬೇಡ
ಸೊಗಸುಗಾರ್ತಿಯರೊಡನೆ ಸಲ್ಲಾಪಬೇಡ ॥ ೧ ॥

ನಿನ್ನ ಬುದ್ಧಿಯು ನಿರುತ ನಿನ್ನ ಕೈಯೊಳಗಿರಲಿ
ಅನ್ಯರಾಶ್ರಯವಿನಿತು ಹಂಬಲಿಸದಿರಲಿ
ಉನ್ನತಾದರ್ಶವಿರಲಯ್ಯ ಜೀವನದಲ್ಲಿ
ಮಾನ್ಯತೆಯ ಪಡೆಯಲಿ ಮಧುರ ಭಾವನೆಯಲಿ ॥ ೨ ॥

ಅದು ಇದೂ ಯಾವುದೂ ಯಾರ ಕೈಯೊಳಗಿಲ್ಲ
ಅದು ಇದರ ಯತ್ನವೆಲ್ಲರೊಳು ಇಹುದೊ
ಅದರ ಫಲ ಬಯಸದೆಯೆ ಹಿಡಿದು ದುಡಿದಂತೆಲ್ಲ
ಬದುಕು ಹುಲುಸಾಗುವುದೊ ಫಲವು ಫಲಿಸುವುದೊ ॥ ೩ ॥

ಇದನೆ ಗೋಪನು ನಿತ್ಯ ನಿನಗೆ ತೋರುತಲಿಹನೊ
ಹದಗೊಳಿಸು ನಿನ್ನ ಮನವೆಂದೆಂಬನೊ
ಪದವಿ ಸಂಪದ ಕೀರ್ತಿಯೊಡನೆ ಬರಲಿ ವಿರಕ್ತಿ
ಹೃದಯಶುದ್ಧತೆಯೊಡನೆ ನಿಲಲಿ ನಿಜಭಕ್ತಿ ॥ ೪ ॥

೫೬

ರಾಗ : ಆನಂದ ಭೈರವಿ **ತಾಳ : ಝಂಪೆ**

ಎನಗೆ ಹಿತವಾವುದೆಂಬುದನು ನಾನರಿಯೆನೈ
ಘನಮಹಿಮ ನೀನಿತ್ತುದನೆ ಹಿತವು ಎನುವೆ ॥ ಪ ॥

ಮನೆ ಮಠವು ಮಕ್ಕಳೈಸಿರಿ ಭೋಗ ಬಯಸಿದರೆ
ಕೊನೆಯಿಲ್ಲದಂತಾಯ್ತು ರೋಗ ರುಜಿನಕ್ಕೆ
ಜನರೊಳುನ್ನತ ಪದವಿಯಧಿಕಾರವನು ಬಯಸೆ
ಅನುಗೊಂಡಿತದರೊಡನಸೂಯೆ ಚಿಂತೆ ॥ ೧ ॥

ಆಸೆಯೊಡ್ಡಿತು ದುಃಖಲೇಶ ಸುಖತರಲಿಲ್ಲ
ಗಾಸಿಗೊಂಡಿತು ಮನವು ಅದನಿದನು ಬಯಸಿ
ಮೋಸವಾಯಿತೊ ಮನಕೆ ಪರಿಮಿತಿಯು ನಿಲುಕದೆಯೆ
ಆಸೆಯಲೆ ಆಯಸ್ಸು ಕ್ಷೀಣಗೊಳುತಿಹುದೊ ॥ ೨ ॥

ನೀನಿತ್ತುದಕೆ ತೃಪ್ತಿಗೊಳುವ ಪ್ರತಿ ಪತ್ರಿಯನು
ಶ್ರೀನಿವಾಸಾ ಎನ್ನ ಮನದಿ ನಿಲಿಸೋ
ಸಾನುರಾಗಾನಂದವೊಂದನೇ ಹೃದಯದಲಿ
ದೀನ ಗೋಪನೊಳೊಲಿದು ಹೊರಹೊಮ್ಮಿಸೊ ॥ ೩ ॥

೫೭

ರಾಗ : ಸಾವೇರಿ **ತಾಳ : ಝಂಪೆ**

ಎರಡು ದಿನದೀ ಭೋಗಕೇಕೆ ಹಿಗ್ಗುವೆ ಮನುಜ?
ಸ್ಥಿರವಲ್ಲವೋ ಪದವಿ ಸ್ಥಿರವಲ್ಲವೊ ॥ ಪ ॥

ಹೊನ್ನು ಹೆಣ್ಣು ಮಣ್ಣು ಕೊನೆಗೆ ಮಣ್ಣಿನ ಪಾಲು
ಚೆನ್ನೆನುವ ಸಂಸಾರ ಬಿಸಿಲ ನೀಹಾರ
ಅಣ್ಣಾವರೆಂದು ನಿನ್ನನು ಕರೆವ ಜನರೆ ಕಡೆ
ಗಣ್ಣಿಂದ ನೋಡುವರೊ ಪದವಿ ಪೋದೊಡನೆ ॥ ೧ ॥

ಹತ್ತು ಜನಕಾಗಿ ನೀ ದುಡಿದೆಯೆನೆ ಜನರು ಕೈ
ಯೆತ್ತಿ ಕೊಂಡಾಡುವರೊ ನಿನ್ನ ಸೇವೆಯನು
ಸ್ವಾರ್ಥತೆಗೆ ಇನಿತಾದರೆಡೆಯ ನೀನಿತ್ತೆಯೆನೆ
ಸತ್ತೆಯೋ ನೀ ತಿಳಿಯೊ ಜನರ ಕಣ್ಣಿನೊಲು ॥ ೨ ॥

ಅಧಿಕಾರದಲ್ಲಿರಲು ಉಪಕಾರವನು ಮಾಡು
ಬದುಕು ಹುಲಸಾಗಿಸುವ ದಾರಿತೋರು
ಹೃದಯಶುದ್ಧಿಯು ಆಗೆ ತನು ತಾನೆ ಬೆಳಗುವುದು
ಸದಯಗೋಪನ ಕೃಪೆಯು ನಿನಗಪ್ಪುದು ॥ ೩ ॥

ರಾಗ : ಆಭೋಗಿ ತಾಳ : ತ್ರಿಶ್ರರೂಪಕ

ಎಲ್ಲರಾರಾಧಿಸುವ ಸರ್ವೇಶನೊಬ್ಬನೇ
ಅಲ್ಲಾನು ಈಶ್ವರನು ಜಲ್ಯಾಸ ಜಗದೀಶ
ಸಲ್ಲಿಪರು ಪೂಜೆಯನು ಹಲವಾರು ವಿಧಗಳಲಿ
ನಿಲ್ಲಿಸುತ ಚಿತ್ತವನ್ನಾದಿ ಶಕ್ತಿಯಲಿ ॥ ೧ ॥

ಪರಮ ಪಾವನಮೂರ್ತಿ ಪರಂಜ್ಯೋತಿಯು ಅವನೆ
ಹರಿಯವನೆ ಹರನವನೆ ಪರಬ್ರಹ್ಮನೂ
ಕರೆಯುವರೊ ಪರಿಪರಿಯ ನಾಮಗಳೊಳವನನ್ನೆ
ಪುರುಷನೆಂಬರೊ ಪರಾಶಕ್ತಿಯೆನ್ನುವರೋ ॥ ೨ ॥

ಅಣುರೇಣು ತೃಣಕಾಷ್ಟದೊಳಗವನೆ ನಿಂತಿಹನೊ
ಅಣುವಿನೊಳಗಮಿತ ಶಕ್ತಿಯ ತೋರುತಿಹನೊ
ಕಣಕಣಗಳೂ ಚಲಿಸಲವನೆ ಚಾಲಕನಾಗಿ
ಅಣುವಿಂದ ಬ್ರಹ್ಮಾಂಡವೆಲ್ಲ ತುಂಬುವನೊ ॥ ೩ ॥

ಏಕಾಂತದೊಳು ನಿಂತು ಏಕಾಗ್ರ ಚಿತ್ತದೊಳು
ವ್ಯಾಕುಲತೆಯಿಂದವನ ಕರೆದು ಮೊರೆಯಿಡಲು
ಸಾಕಾರದೊಳು ತಾನೆ ಗೋಚರಿಪನವನಯ್ಯ
ಬೇಕಾದ ಶಾಂತಿಯನ್ನೀವ ಗೋಪಯ್ಯ ॥ ೪ ॥

೫೯

ರಾಗ : ಅಠಾಣ ತಾಳ : ಝಂಪೆ

ಕ್ಷುದ್ರರಾಡಿದ ನುಡಿಗೆ ಉದ್ರೇಕಗೊಳಲೇಕೆ?
ರೌದ್ರಾವತಾರವನು ತಾಳಲೇಕೆ? ॥ ಪ ॥

ಎದ್ದು ತೋರುವ ಮನದ ದೌರ್ಬಲ್ಯವನು ತೊರೆದು
ಸಿದ್ಧನಾಗೈ ಹೃದಯಶುದ್ಧಿಯನು ಪಡೆದು ॥ಅ.ಪ. ॥

ನೀನು ನುಡಿದಂತೆಲ್ಲ ಜನರೇಕೆ ನಡೆಯುವರು
ನಿನ್ನಾಣತಿಯೆ ವೇದವಾಕ್ಯವೇನು ?
ಊನಗೊಳ್ಳಲು ಮಾನವಿಯರು ಬೀಳುವರಯ್ಯ
ನಿನ್ನ ಚಿಂತನೆಯರಿಯೆ ಸಮಯವೆಲ್ಲಯ್ಯ ? ॥ ೧ ॥

ಸೇವೆಕೈಕೊಳುವಲ್ಲಿ ಹಮ್ಮಿಗೆಡೆಯಿಲ್ಲಯ್ಯ
ದಾಸಾನುದಾಸ ನೀನೆಂದು ತಿಳಿಯಯ್ಯ
ಯಾವಕಾಲಕು ಸಂಸ್ಥೆ ಹಿರಿದು; ವ್ಯಕ್ತಿಯು ಅಲ್ಲ
ಈಶ ಸೇವೆಯು ಸಂಘ ಸೇವೆಯೊಳಗಯ್ಯ ॥ ೨ ॥

ಸ್ಮಿತವದನನಾಗಿ ನೀನೆಲ್ಲರೊಳು ಬೆರೆಯಯ್ಯ
ಸತತ ಸಂಪ್ರೀತಿ ಗಾಂಭೀರ್ಯದಿರಲಯ್ಯ
ಮಿತಭಾಷಿಯಾಗಿ ವ್ಯವಹಾರವನು ನಡೆಸಯ್ಯ
ಹಿತ ಬಯಸುತೆಲ್ಲರನು ಒಲಿಸಿಕೊಳ್ಳಯ್ಯ ॥ ೩ ॥

ಒಂದಲ್ಲವೊಂದು ದಿನ ಜನರರಿಯುವರು ನಿನ್ನ
ಒಂದು ಋಜುಮಾರ್ಗವನು ನೀನು ಹಿಡಿಯೆ
ಬಂದ ಎಡರುಗಳೆಲ್ಲ ಮಂಜಿನೊಲು ಚದರುವುವು
ಕಂದರ್ಪಪಿತ ನಿನ್ನ ಕಾವ ಗೋಪಯ್ಯ ॥ ೪ ॥

೬೦

ರಾಗ : ಪಂತುವರಾಳಿ **ತಾಳ – ಝಂಪೆ**

ಚಿಂತೆಯನು ತೊಡೆಯುತ್ತ ಚಿಂತನೆಯ ನಡೆಸುತ್ತ
ಅಂತರಂಗವ ಶುದ್ಧಿಗೊಳಿಸಿ ಸದ್ಗತಿಗಳಿಸೊ ॥ ಪ ॥
ಚಿಂತೆ ಮನುಜನ ದೇಹಬಲವ ಕುಗ್ಗಿಪುದಯ್ಯ
ಚಿಂತೆಯೊಳು ಮನಮುಗುಳು ಸೊರಗಿ ಬಾಡುವುದೊ
ಚಿಂತೆಯನು ಹೊರಮಾಡಿ ಚಿತ್ತದಾರ್ಢ್ಯವ ಪಡೆಯೆ
ಸಂತಸದೊಳರಳುವುದೊ ಮನ ತೇಜಗೊಂಡು ॥ ೧ ॥

ಚಿಂತನೆಯ ನಡೆದಿರಲಿ ಮನದೊಳೆಡಬಿಡದೆಯೆ ನಿ–
ರಂತರವು ಸದ್ಭಾವ ಸ್ಫುರಿಸುತಿರಲಿ

ಮಂತು ಮಜ್ಜಿಗೆ ಕಡೆಯೆ ಬೆಣ್ಣೆ ಮೇಲೆದ್ದು ಬರು-
ವಂತೆ ಆನಂದ ನಿನ್ನಲಿ ಮೂಡಿಬರಲಿ ॥ ೨ ॥

ಜೀವನದೊಳೇರಿಳಿತ ವಿಲ್ಲದೊಂದೆಡೆಯಿಲ್ಲ
ಸಾವು ನೋವೆಲ್ಲರೊಳು ಸಂಭವಿಪುದೊ
ಯಾವುದನು ಲೆಕ್ಕಿಸದೆ ಋಜುಮಾರ್ಗದಲಿ ನಡೆಯೆ
ಕಾವನೈ ಗೋಪಯ್ಯ ಚಿಂತೆಯೇಕಯ್ಯ ॥ ೩ ॥

೬೧

ರಾಗ : ಆನಂದ ಭೈರವಿ ತಾಳ : ಝಂಪೆ

ದೀನರಕ್ಷಕ ಭಾನುಕೋಟಿಪ್ರಕಾಶ
ನೀನೆ ಎಲ್ಲರ ನಡೆಸಿ ಸಲಹಬೇಕಯ್ಯ ॥ ಪ ॥

ನಾ ವರಿಯದಂತೆನಿತು ಇರುವೆಗಳ ತುಳಿಯುವೆವೊ
ಜೀವ ಜಂತುಗಳನ್ನು ಹಿಂಸಿಸುತ್ತಿಹೆವೊ
ಆವಾವ ಕಾರ್ಯದೊಳಗಾರಮನ ನೋಯಿಪೆವೊ
ದೇವ ನೀನೆಚ್ಚರಿಸಿ ನಡೆಸಬೇಕಯ್ಯ ॥ ೧ ॥

ಧ್ಯೇಯವೊಂದನು ಹಿಡಿದು ಕಾರ್ಯ ಸಾಧಿಪೆವೆನಲು
ನ್ಯಾಯದೆಲ್ಲೆಯನೆಲ್ಲ ಮೆಟ್ಟಿ ಹೊರಳುವೆವೊ
ಮಾಯೆಯೆಮ್ಮನು ಮುಸುಕೆ ಮದಿಸಿ ಮುಗ್ಗಲಿಸುವೆವೊ
ಜೀಯ ನೀನೆಲ್ಲರನು ಎತ್ತಿ ಸಲಹಯ್ಯ ॥ ೨ ॥

ಮಾನವರ ಬುದ್ಧಿ ಪ್ರಚೋದನೆಗು ಮಿತಿಯಿಹುದೊ
ಜ್ಞಾನಿಗಳು ನಾವೆನಲು ಎಡಹುತಿಹೆವೊ
ದೀನತೆಯ ಕಂಡು ನೆರೆನಂಬಿ ನಡೆದಿಹೆವಯ್ಯ
ಭಾನು ತೇಜೋಮೂರ್ತಿ ಸಲಹೊ ಗೋಪಯ್ಯ ॥ ೩ ॥

೭೨

ರಾಗ : ಹಿಂದೋಳ ತಾಳ : ಝಂಪೆ

ನಂಬಿದವರನು ದೇವನೆಂದಿಗೂ ಕೈಬಿಡನೊ
ತುಂಬಿ ಧೈರ್ಯವ ತಾನೆ ಮುಂದೆ ನಡೆಸುವನೊ ॥ ಪ ॥

ಕಷ್ಟದಲಿ ಸುಖದಲ್ಲಿ ಸಂದಿಗ್ಧ ಸಮಯದಲಿ
ನಿಷ್ಠೆಯಿಂದಲಿ ಹರಿಯ ನಂಬಿ ಸೇವಿಸಲು
ಕಷ್ಟಗಳ ಕಡೆಹಾಯ್ಸಿ ನಿರ್ದಿಷ್ಟಗುರಿ ತೋರಿ
ಇಷ್ಟಾರ್ಥ ಸಲ್ಲಿಸುವನದಕೆ ಸಂಶಯವಿಲ್ಲ ॥ ೧ ॥

ಭಾರತದಿ ಪಾಂಡವರ ಬೆನ್ನಿನಲಿ ತಾ ನಿಂತು
ನೂರಾರು ಸಮಯದಲಿ ಧೈರ್ಯ ತುಂಬಿ
ಪಾರುಗೊಳಿಸಿದ ಯುದ್ಧರಂಗದಲಿ ಗೀತೆಯನು
ಸಾರಿ ತೋರಿದನಿಳೆಗೆ ನಂಬಿದರ ಬಿಡೆನೆಂದು ॥ ೨ ॥

ಎಲ್ಲದೇಶಂಗಳೊಳಗೆಲ್ಲ ಕಾಲದೊಳು
ಎಲ್ಲ ಧರ್ಮಂಗಳೊಳಗೆಲ್ಲ ಶಾಸ್ತ್ರದೊಳು
ಬಲ್ಲವರು ನುಡಿದಿಹರು ನಂಬಿದರನೆಡೆಬಿಡನು
ಎಲ್ಲರನು ಸಲಹುವನು ನಂಬಿ ಬಾಳೆಂದು ॥ ೩ ॥

ಎನ್ನ ಜೀವನದಲ್ಲಿ ಕಷ್ಟದಲಿ ಸುಖದಲ್ಲಿ
ಸನ್ನುತನ ನೆರೆನಂಬಿ ನಡೆದು ಬಂದಿರಲು
ಎನ್ನ ನೆರವಿಗೆ ನಿಂತು ಬಾಳ ಬೆಳಗಿಸಿದಾತ
ನಿನ್ನನೂ ಸಲಹುವನೊ ಗೋಪ ನಂಬಯ್ಯ ॥ ೪ ॥

೭೩

ರಾಗ : ಬಿಲಹರಿ ತಾಳ : ಝಂಪೆ

ನಾ ನಿನ್ನ ಮುರಲಿ
ಕೃಪೆಯೆನ್ನೊಳಿರಲಿ ॥ ಪ ॥

ನೀ ನುಡಿಸೆ ನಾ ನುಡಿವೆ
ನೀ ಬಿಸುಡೆ ನಾ ಬರಿಕೊಳವೆ ॥ಅ.ಪ. ॥

ಹರಿ ನೀನು ನುಡಿಸುತಿರೆ
ಹರಿಯುವುದೊ ರಾಗಸುಧೆ
ಸರಿಗಪದಸಸ
ಸನಿ ದಪ ಮಗ ರಿಗ ಪದ ॥ ೧ ॥

ನೀನೆ ವಾದನಶಕ್ತಿ
ನಾನೊಂದು ವಾದ್ಯ
ನೀನೊಲಿದು ನುಡಿಸದಿರೆ
ಏನುಂಟು ಸಾಧ್ಯ ॥ ೨ ॥

ಎನ್ನ ನೀ ಪಿಡಿದೆತ್ತಿ
ನಿನ್ನಧರಗಳಿಗೊತ್ತಿ
ಸನ್ನುತನೆ ನುಡಿಯಿಸುತ
ಮುನ್ನ ಪೊರೆ ಗೋಪಯ್ಯ ॥ ೩ ॥

೬೪

ರಾಗ : ಕಾನಡಾ ತಾಳ : ಆದಿ

ಬಿನ್ನಹವಿದನೀನಾಲಿಪುದೊ
ಎನ್ನಯ ಕರಗಳ ಜೋಡಿಸಿ ಬೇಡುವೆ ॥ ಪ ॥

ದೇವನೆ ನಿನ್ನನು ಬಿಟ್ಟಿನ್ನಾರಿಗು
ದೇಹವ ಬಾಗಿಸಿ ಕರ ಜೋಡಿಸದೆ
ಜೀವನ ನಡೆಸುವ ಸಾಮರ್ಥ್ಯವನು
ಶ್ರೀ ಹರಿಯೆನ್ನೊಳು ನೀ ದಯಪಾಲಿಸೊ ॥ ೧ ॥

ಎನಗೀ ಜೀವನದಲಿ ನಿಯಮಿಸಿದ
ದಿನವ್ಯಾಪಾರಂಗಳ ಮುಗಿಯಿಸುತ
ಮನದೊಳಗಿನಿತಾದರೂ ಅಳುಕಿಲ್ಲದೆ
ಮನೆಯನು ಮುಟ್ಟುವ ಮನವನುಗೊಳಿಸೊ ॥ ೨ ॥

ಅನ್ನಕೆ ದುಡಿಯುವ ಜೀವವವೊಂದನೆ
ಎನ್ನೊಳು ನಿಲಿಸದೆ ರಸದನುಭವಕೆ
ಸನ್ನುತ ಮನವ ಪ್ರಚೋದನೆಗೊಳಿಸುತ
ಮುನ್ನಡಿಯಿಡಿಸುತಲೆನ್ನನು ನಡೆಸೊ ॥ ೩ ॥

ಹತ್ತು ಜನರ ಹಿತಬಯಸುತ ದುಡಿಯುವ
ಚಿತ್ತವೃತ್ತಿಯ ಎನ್ನೊಳಗಿತ್ತು
ಉತ್ತಮ ಜೀವನ ನಡೆಯಿಸುವಂತೆ
ವೃತ್ತಿ ಶುದ್ಧಿಯನು ಸಂತತ ನಿಲಿಸೊ ॥ ೪ ॥

ಭಕ್ತಿಪಥವನವಲಂಬಿಸಿ ನಿನ್ನನು–
ರಕ್ತಿಯಿಂದ ಬಾಳನು ಬೆಳಗಿಸಿ
ಮುಕ್ತಕಂಠದೊಳು ನಿನ್ನನು ಪಾಡುವ
ಶಕ್ತಿಯನಿತ್ತೀ ಗೋಪನ ಸಲಹೊ ॥ ೫ ॥

೬೫

ರಾಗ : ಸಾರಂಗ ತಾಳ : ಝಂಪೆ

ಬೇಡುವೊಡೆ ನೀ ಬೇಡು ಜಗದೊಡೆಯ ಶ್ರೀನಿಧಿಯ
ನೀಡುವನು ನಿನಗೆ ನಿಜ ಸಂಪದಭ್ಯುದಯ ॥ ಪ ॥

ಬೇಡದಿರು ಧನಿಕರೆಂದೆಣಿಸಿ ಮೆರೆಯುವ ಜನರ
ಬೇಡವೈ ನಿನಗೆ ಯಾಚಿಪ ಚಿತ್ತವೃತ್ತಿ ॥ಅ.ಪ. ॥

ಮಾನವನನುಸರಿಸಿ ಯಾಚನೆಯ ನೀ ಗೈಯೆ
ಕಾಣುವನು ನಿಕೃಷ್ಟನೆಂದು ನಿನ್ನ
ದಾನಿಯೆಂದೆನಿಸಿಕೊಳೆ ಭಿಕ್ಷೆ ನೀಡುವನಯ್ಯ
ಗಾಣದೆತ್ತನು ಸುತ್ತಿಸುವ ತೆರದೊಳಲೆಸಿ ॥ ೧ ॥

ಮಾರುದ್ದ ದೇಹವನು ಗೇಣುದ್ದ ಗೈದು ನೀ
ದಾರಿಯಲಿ ನಿಂತೇಕೆ ಧನಿಕನಿಗೆ ಮಣಿವೆ

ನೇರಾಗಿ ಶ್ರೀನಿಧಿಯನರ್ತಿಯಲಿ ಪ್ರಾರ್ಥಿಸಲು
ಪಾರುಗಾಣಿಪ ನಿನ್ನ ಕಷ್ಟಗಳನೆಲ್ಲ ॥ ೨ ॥

ಸೃಷ್ಟಿಸಿದ ದೇವ ತಾ ಹೊಟ್ಟೆಗೊದಗಿಸದಿಹನೆ
ಇಷ್ಟು ಅತ್ತರು ಸಾಕು ತಾಯೆತ್ತಿಕೊಳಳೆ
ಇಷ್ಟು ಮನವನು ಶ್ರೀನಿವಾಸನಲಿ ಮೊರೆಯಿಡಲು
ಇಷ್ಟಾರ್ಥ ಸಲ್ಲಿಸುವನದಕೆ ಸಂಶಯವೆ? ॥ ೩ ॥

ಬೇಡುವೊಡೆ ನೀ ಬೇಡು ಶಾಶ್ವತವ ಸಂಪದವ
ಬೇಡದಿರು ಕನಸಿನಂದದ ಕ್ಷಣಿಕ ಸುಖವ
ನೋಡದಿಳೆಯ ಭೋಗಗಳಾವುವೂ ಸ್ಥಿರವಲ್ಲ
ಬೇಡು ಗೋಪನ ಸಚ್ಚಿದಾನಂದ ಮಧುವ ॥ ೪ ॥

೬೬

ರಾಗ : ಮುಖಾರಿ ತಾಳ : ಝಂಪೆ

ಮೃದುವಾಗಿ ಮಾತಾಡು ಮೊದಲು ನಿನ್ನಾಶ್ರಿತರ
ಹೃದಯತಂತಿಯ ಮಿಡಿದು ಮುದವನೀಡು ॥ ಪ ॥

ಕಡುಬಡವರಲ್ಲಂಟು ದುಃಖಿಗಳು ಸಾತ್ತ್ವಿಕರು
ಗಡಸು ನುಡಿಗಳ ಸಹಿಸಿ ಎನಿತೊ ನೊಂದಿಹರು ॥ಅ.ಪ. ॥

ರಾಜ್ಯಾಂಗ ನೀತಿಯೊಳಗೆಲ್ಲರಿಗು ಸಮಹಕ್ಕು
ರಾಜ್ಯ ಸೂತ್ರವು ಇಂದು ಪ್ರಜೆಯೊಳಿಹುದು
ರಾಜ್ಯದೊಳಗಧಿಕಾರಿ ಕೃಷಿಗಾರ ಕಾರ್ಮಿಕರು
ರಾಜ್ಯದೇಳಿಗೆ ಬಯಸಿ ದುಡಿಯುತಿಹರು ॥ ೧ ॥

ದೇವನೆದುರೊಳಗೆಲ್ಲ ಮಾನವರು ಸರಿಸಮರು
ಸಾವುನೋವುಗಳಲ್ಲಿ ಇಲ್ಲವಂತರವು
ಜೀವನವ ನಡೆಯಿಸಲು ಓರ್ರೋರ್ವರೊಂದೊಂದು
ಸೇವೆಯನು ಕೈಕೊಂಡು ಶ್ರಮಿಸುತಿಹರು ॥ ೨ ॥

ಎಲ್ಲರೊಳಗಿರುವ ಪರಮಾತ್ಮನೊಬ್ಬನೆ ಎಂದು
ಎಲ್ಲರೊಳು ಸುಖದುಃಖ ಸಮವು ಎಂದು
ನಿಲ್ಲೆ ನಿನ್ನಲಿ ಭಾವವೆಲ್ಲರಲಿ ಸಮದೃಷ್ಟಿ
ಚೆಲ್ಲಿ ಬರೆ ಗೋಪನೊಲಿದೀವ ಶ್ರೇಯವನು ॥ ೩ ॥

❖❖

ಶ್ರೀ ಕೃಷ್ಣ – ಗೋಪಾಲಕೃಷ್ಣ ಅಂಕಿತದ ಕೀರ್ತನೆಗಳು

ಉಳ್ಳೂರು ಮೂಕಾಂಬಿಕಾ ಅಮ್ಮ (ಮೂಕಜ್ಜಿ) (೧೯೦೮–೧೯೯೮)

ಮೂಕಜ್ಜಿ (ಉಳ್ಳೂರಿನ ಮೂಕಾಂಬಿಕಾ ಅಮ್ಮ) ಸರಸ್ವತಿ–ಉಳ್ಳೂರಿನ ನಾಗಪ್ಪಉಡುಪ ದಂಪತಿಗಳಿಗೆ ೨೮–೮–೧೯೦೮ರಲ್ಲಿ ಉಳ್ಳೂರಿನಲ್ಲಿ ಜನಿಸಿದರು. ತಾಯಿ ಸರಸ್ವತಿಗೆ ಕವಿತ್ವದ ರಚನಾಶಕ್ತಿ ಒಲಿದಿತ್ತು. ನಾಗೂರು ನಾರಾಯಣ ಐತಾಳರೊಂದಿಗೆ ಮದುವೆಯಾಗಿ ೧೫ನೇ ವಯಸ್ಸಿನಲ್ಲಿ ರಾಮಕೃಷ್ಣ ಐತಾಳ ಮಗ ಜನಿಸಿದನು. ೧೬ನೇ ವಯಸ್ಸಿನಲ್ಲಿ ಪತಿಯ ಮರಣವಾಗಿ ವಿಧವೆ ಆದರು. ಮೂಕಜ್ಜಿಗೆ ತಾಯಿ ಸರಸ್ವತಿಯಿಂದ ಸಾಹಿತ್ಯಶಿಕ್ಷಣ ಕಠಿಣದುಡಿಮೆಯ ಅಭ್ಯಾಸ ಆಯಿತು. ನಿರಂತರ ಶ್ರಮದಿಂದ ಮನೆಗೆ ದುಡಿದರು. ಸರಳ ಸುಂದರ ಹಾಡುಕತೆಗಳಿಂದ ಜನಮನವನ್ನು ತುಷ್ಟಿಗೊಳಿಸಿದಳು. ಮಹಾತ್ಮ ಗಾಂಧೀಜಿಯವರು ೧೯೩೫ರಲ್ಲಿ ಕುಂದಾಪುರಕ್ಕೆ ಬಂದಾಗ ಅವರನ್ನು ಕಂಡು ಅವರು ಮೆಟ್ಟಿದ ಮಣ್ಣನ್ನು ಶಿರದಲ್ಲಿ ಧರಿಸಿದರು. ಗಾಂದಿ ಬಗ್ಗೆ ಹಾಡುಕಟ್ಟಿದರು. ಹಳ್ಳಿಹೆಂಗಸರಿಗೆ ಕಲಿಸಿದಳು. ದೇಶಭಕ್ತೆ ಮೂಕಾಂಬಿಕೆ ಉಳ್ಳೂರಿನ ಪಂಚಾಯತ್ ಕಚೇರಿಯಲ್ಲಿ ಪಂಚಾಯತ್ ಸದಸ್ಯೆ ಆಗಿದ್ದಳು. ಸಭೆ ಸಮಾಲೋಚನೆಗಳಲ್ಲಿ ಭಾಗವಹಿಸಿದರೂ ರಾಜಕೀಯದ, ಚುನಾವಣೆಯ ಗೋಜಿಗೆ ಹೋಗಲಿಲ್ಲ. ಮೂಕಜ್ಜಿಯ ಭಾಷೆಯೇ ಕವಿತಾಭಾಷೆಯಾಗಿತ್ತು. ಅವಳು ಬರೆದ ಪತ್ರವೂ ಹಾಡಿನ ರೂಪದಲ್ಲಿರುತ್ತಿತ್ತು. ಕುಂದಾಪುರದ ಕನ್ನಡವನ್ನು ತೀರ ಗ್ರಾಮ್ಯರೂಪದಲ್ಲಿ ಮಾತಾಡುವ ಮೂಕಜ್ಜಿಗೆ ಅನೇಕ ಮನ್ನಣೆಗಳು ದೊರೆತಿವೆ. ೧೯೮೩ ಕೋಟದಲ್ಲಿ ನಡೆದ ಜಾನಪದ ಸಮ್ಮೇಳನದಲ್ಲಿ ರಾಜ್ಯಮಟ್ಟದ ಸನ್ಮಾನ. ೧೯೯೩ ಕುಂದಾಪುರ ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸನ್ಮಾನ. ೧೯೯೪ರಲ್ಲಿ ಉಪ್ಪುಂದದಲ್ಲಿ ನಡೆದ ೩ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ, ೧೯೯೬ ಬೆಂಗಳೂರು ದೂರದರ್ಶನದಲ್ಲಿ ಸಿರಿಗಂಧ ಕಾರ್ಯಕ್ರಮದಲ್ಲಿ ಸಂದರ್ಶನ, ೧೯೯೮ರಲ್ಲಿ ಕುಂದಾಪುರ ತಾಲ್ಲೂಕು ರಾಜ್ಯೋತ್ಸವದಲ್ಲಿ ಸನ್ಮಾನ ದೊರೆತಿವೆ. ಶಾಲಾ ಶಿಕ್ಷಣವಿಲ್ಲದಿದ್ದರೂ ಓದುಕಲಿತ ಮೂಕಜ್ಜಿ ವಿಚಾರವಾದಿ ಆಗಿದ್ದಳು. ೧೬–೭–೧೯೯೮ರಲ್ಲಿ ನಿಧನರಾದರು. ಮೂಕಜ್ಜಿ ಸದಾ ಹಾಡುತ್ತಾ ಉಳಿದವರಿಗೆ ಹಾಡು ಕಲಿಸುತ್ತಾ ಇದ್ದುದರಿಂದ ಅವರ ಆಶುಕವಿತ್ವದ

ಹಾಡುಗಳೆಲ್ಲಾ ಅಚ್ಚಾಗಿಲ್ಲ. ಅನೇಕರ ಬಾಯಲ್ಲಿ ಇದೆ. ಸಂಗ್ರಹವಾಗಬೇಕಾಗಿದೆ. ೮೯ ಹಾಡುಗಳ ಸಂಗ್ರಹವೊಂದು ಪ್ರಕಟವಾಗಿದೆ.

ಶ್ರೀ ಕೃಷ್ಣ ಗೋಪಾಲಕೃಷ್ಣ ಅಂಕಿತದ ಕೀರ್ತನೆಗಳು

೬೭

ಏನ ವರ್ಣಿಸಿದನಯ್ಯ ಕವೀಶ್ವರ
ಏನ ವರ್ಣಿಸಿದನಯ್ಯ ॥ ಪ ॥

ಏನ ವರ್ಣಿಸಿದ ಕವೀಶ್ವರ ಸತಿಯರ
ಮಾನಕ್ಕೆ ಹಾನಿ ಮುಕ್ತಿಗೆ ಮೃತ್ಯುವಾದುದ ॥ಅ.ಪ. ॥

ಸಟ್ಟಾದ ಕದಪು ಕನ್ನಡಿ ಎಂದು ನುಡಿದನು
ಬಿಟ್ಟೆಗುರುಳ ತುಂಬೆಗುರುಳೆಂದನು
ನೆಟ್ಟಗಿರುವ ಹುಬ್ಬು ಸ್ಮರನ ಬಿಲ್ಲೆಂದ ಹೂ
ಲಿಟ್ಟ ಮೂಗನು ಸಂಪಿಗೆಯ ಮೊಗ್ಗೆನುತಲಿ ॥ ೧ ॥

ಬೆಳ್ಳುಳ್ಳಿ ಹಲ್ಲ ದಾಳಿಂಬದ ಬಿತ್ತೆಂದ
ಹುಲ್ಲೆಗಣ್ಣೆಂದನು ಸುಲಿಗಣ್ಣನು
ಮಲ್ಲಿಗೆಯಲರೆಂದ ಮುರುಕದ ನಗುವಿಗೆ
ಜೊಲ್ಲು ಸುರಿವದಕಮೃತವೆಂದ ಶಿವಶಿವ ॥ ೨ ॥

ಹಾಳಾದ ಹಣೆಯನ್ನು ಬಿದಿಗೆ ಚಂದ್ರಮನೆಂದ
ನೇಲುವ ತುಟಿಯನ್ನು ತೊಂಡೆ ಹಣ್ಣೆಂದನು
ಕೋಲು ಕುತ್ತಿಗೆಯನ್ನು ಶಂಖ ಕಂಧರವೆಂದ
ಜೋಲಾಡುವಾ ಕೈಯ್ಯ ಕರಿಸುಂಡಿಲೆನುತಲಿ ॥ ೩ ॥

ಉದ್ದವಾಗಿಹ ತನುಸ್ಮರನ ಸಾಯಕವೆಂದ
ಹದ್ದಿನಂತಾ ಮೊಲೆ ಬುಗುರಿಯೆಂದ
ಗುದ್ದೊದರಳನು ಪೋಲ್ವನಡು ಸಿಂಹಕಟಿಯೆಂದ
ದುರ್ಗಂಧದಿಂದ ಚಂದನಗಂಧಿಯೆನುತಲಿ ॥ ೪ ॥

ಹಸಿದೊಗಲಿನ ತೊಡೆ ರಸಬಾಳೆದಿಂಡೆಂದ ।
ಪಿಶುಣತನವನು ಸುಗುಣವೆಂದನು
ವಸಗೆಟ್ಟುನಡೆದರು ಹಂಸದ ನಡೆಯೆನು ।
ತುಸುರಿದ ಕವಿದೊಡ್ಡ ರಸಿಕನೆಂದೆನುತಲಿ ॥ ೫ ॥

ಹಲವು ರೀತಿಯೊಳೊಂದಕೊಂದನು ಹೋಲಿಸಿ ।
ಲಲನೆಯರನು ಪೊಗಳುತಲಿಹರು
ಸುಲಲಿತ ರೂಪ ಚಿದಾತ್ಮಶ್ರೀಕೃಷ್ಣನ।
ಚೆಲುವ ಮೂರ್ತಿಯ ಬಣ್ಣಿಸದೆ ಮೂಢತನದಿಂದೆ ॥ ೬ ॥

೬೮

ನಾನು ನಾನೆಂದುಬ್ಬಬೇಡ ಮನುಜ
ದೀನ ಬಾಂಧವ ಹರಿಯನೆನೆಯೋ ಗತಿ ಸಹಜ

ಧನಪನಿಂ ಮಿಗಿಲು ಸಿರಿಗಾವಾಸವೆನ್ನಮನೆ
ಮನಸಿಗೊಪ್ಪುವ ಸತಿಸುತಾದ್ಯರಿಂದ
ದಿನಪನಂದದಿ ಬೆಳಗುತಿರ್ದನೆಂಬುದೆ ಭ್ರಾಂತಿ
ಬನದ ಬೆಳುದಿಂಗಳಂತೀ ಭಾಗ್ಯವೆಲ್ಲ ॥ ೧ ॥

ಎಲ್ಲರಿಂ ಮೇಲ್ಮೆಯಂ ಪಡೆದು ತಾ ಭೂಲೋಕ
ದಲ್ಲಿ ಮೆರೆಯುತ ಬಂಧುಮಿತ್ರರೊಡನೆ
ಇಲ್ಲಿಯೇ ಸ್ವರ್ಗಸುಖ ಪಡೆವೆನೆಂಬುದು ಕುದಿವ
ಬೆಲ್ಲವನು ಬಾಯ್ಗಿಕ್ಕಿಕೊಂಡ ತೆರವಹುದು ॥ ೨ ॥

ಪುಸಿ ಮೋಸ ಡಂಬ ವಂಚನೆ ಮದ್ಯಪಾನಾದಿ
ಪಿಶುಣಕೃತ್ಯದಿ ಬಸಿರ ತುಂಬಿಸುವಗೆ
ಹಸಿದ ಹುಲಿಯಂತೆ ಬಾಯ್ದೆರೆವ ಕಾಲನ ಭಟರ
ವಸಗೆ ಬರೆ ಭೀತಿಯಲಿ ಕೊಸರಲೆಡೆಗೊಡರು ॥ ೩ ॥

ಎಷ್ಟು ಭೋಗವ ಪಡೆದರೇನು ಕಟುಕರ ಕೈಗೆ
ಕೊಟ್ಟ ಪಶುವಿನ ತೆರದಿ ನರನ ಬಾಳ್ಕೆ

ಬಿಟ್ಟು ಬರಲಾರೆನೆನೆ ಬಿಡರೆ? ಮನ ಬಳಗದವ
ರಟ್ಟಿ ಕೊಂಡೊಯ್ವಾಗ ಬಿಡಿಸುವರುಂಟೆ ? ॥ ೪ ॥

ನೀಡು ಫಲದಾಸೆಯಿಲ್ಲದೆ ಸರ್ವಪ್ರಾಣಿಗಳ
ನೋಡು ಕರುಣಾದೃಷ್ಟಿಯಿಂದಲಿನ್ನು
ಮಾಡು ಕರ್ಮವನು ನಿಷ್ಕಾಮದಿಂ ತನುವ
ನೀಡಾಡು ಸದ್ಭಕ್ತಿಯಲಿ ಶ್ರೀಕೃಷ್ಣನಡಿಗೆ ॥ ೫ ॥

೬೯

ಭ್ರಾಂತನಂತೆ ಮನುಜ ನೀನು ಬಾಳಲ್ಯಾಕೊ
ಶಾಂತಿಯಿಂದ ಆದಷ್ಟೆ ಕಾಲ ಕಳೆಯಬೇಕು

ಸತ್ತವ್ರೆಲ್ಲ ಜಕ್ಕಿಕೊಲೆ ಕುಂತಿಯೆಂದು
ಮೃತ್ಯುವಂತೆ ಬಂದು ಪೀಡೆ ಕೊಡ್ತಾವೆಂದು
ಸ್ವಸ್ತವಕ್ಕು ಪ್ರಶ್ನೆಕೇಳಿ ಬರ್ತೇವೆಂದು
ಮೃತ್ಯುವಿನ ಬಾಯ್ಗೆ ಬಿದ್ದಂತಾಗದೆಂದು ॥ ೧ ॥

ಹಲವು ಮಂತ್ರವಾದಿಗಳುಸಿರು ಸುಳ್ಳಿನ್ಕಂತೆ
ಬಲವಾದ ಮೊಸಳೆ ಚಿಕ್ಕಮೊಸಳೆಯ ನುಂಗುವಂತೆ
ಸುಲಿವುದ್ಹೇಗೆ ಹಣವನೆಂಬುದೊಂದೇ ಚಿಂತೆ
ಬಲವ ಕಂಡು ನುಡಿವರ್ಜನರು ಮೆಚ್ಚುವಂತೆ ॥ ೨ ॥

ದೈವವಾಳಿ ಬರುವುದೆಂದು ಕುಣೀತಾರಲ್ಲಿ
ಸಾವು ನೋವು ತಪ್ಸಿಕ್ ಅವ್ರ್ ಕೈಲಿ ಆಗೋದಿಲ್ಲ
ನೀವು ಸತ್ಯವೆಂದು ನಂಬಿ ಕೊಳ್ತೀರಲ್ಲ
ಕಾವಕರ್ತೃ ಬೇರೆಯೆಂದು ತಿಳಿಯಿರೆಲ್ಲ ॥ ೩ ॥

೭೦

ಮನುಜನಾಗಿ ಜನಿಸಿ ನೀನು ಏನೇನ್ಗೈದಿ
ಮನೆ ಮನೆಯೊಳ್ ಹರಟೆ ಹೊಡ್ದು ಕಾಲಕಳ್ದಿ ॥ ಪ ॥

ದುಡಿದದ್ದೆಲ್ಲಾ ಮೋಟರ್ ಕಾಫಿ ಹೋಟೆಲಿಗಾಯ್ತು
ಮಡದಿ ಮಕ್ಕಳಿಂಗೆ ತಿನ್‌ಲಿಕ್ಕೆ ಸೊನ್ನೆ ಬಿತ್ತು
ಅಡುಗೆ ಕೋಣೆಯೊಳಗೆ ನೊಣಗಳಾಟವಾಯ್ತು
ಕುಡಿದು ತಿಂದು ತೇಗಿ ಎಲ್ಲಾ ಬರಿದಾಗೋಯ್ತು ॥ ೧ ॥

ಬೀಡಿ ಸಿಗ್ರೆಟ್ ಚುಟ್ಟಾಯೆಂಬುದೆಲ್ಲಾ ಬೇಕು
ಒಡಾಡ್ಲಿಕ್ಕೆ ಮೋಟಾರ್ ಸೈಕ್ಲ್ ಆಗ್ಲೇಬೇಕು
ನಾಡಿಗೊಬ್ಬ ಪ್ರಮುಖ ತಾನೆಂದಾಗಬೇಕು
ನೋಡಿದ ಹೊಸವಸ್ತುಗಳನು ತರ್ಲೇಬೇಕು ॥ ೨ ॥

ಹ್ಯಾಟು ಬೂಟು ಹಾಕಿಕೊಂಡು ವಯ್ಯಾರ್ದಿಂದೆ
ಪೇಟೆ ಪಟ್ಣ ತಿರ್ಗಿಕೊಂಡು ಮನೆಗೆ ಬಂದೆ
ಚೋಟು ಮಾತ್ರ ತೊಳೆದುಕೊಂಡು ಗಂಗಾಣ್ಣ ಮುಂದೆ
ಊಟಕ್ಹೋಗಿ ಕುಳಿತು ಬಡಿಸು ಪ್ಯಾರಿ ಎಂದೆ ॥ ೩ ॥

೭೧

ಮರಣ ಸಮೀಪಿಸಿ ಬಂತು ಹರಿ
ಚರಣವ ನೆನೆಯದೆ ದಿನವೆಲ್ಲ ಸಂತು ॥ ಪ ॥

ಅರಿವರ್ಗದವರಿಂದಲಿಂತು ಕಷ್ಟ
ಕರವೆಂಬುದೇನೆಂದು ತಿಳಿಯುತ್ತ ಬಂತು
ಪರಮಾತ್ಮನೊಲಿಯುವನೆಂತು
ಮಾಯಾಶರಧಿಯೊಳಗೆ ಬಿದ್ದು ಮುಳುಗಿದೆನಿಂತು ॥ ೧ ॥

ಮೆಚ್ಚಿದೆ ನೀ ದೇಹದಿಂದ ದೇಹ
ಸ್ವಚ್ಛವೆನ್ನುತ ನಂಬಿಕೊಂಡೆ ಮುಕುಂದ
ಎಚ್ಚರ ತಪ್ಪಿದೆನೆಂದು ಹರಿ
ಅಚ್ಯುತನೆನ್ನದೆ ಕೆಟ್ಟೆ ನಾನಿಂದು ॥ ೨ ॥

ಆಸೆಯೆನ್ನುವ ದೊಡ್ಡ ಪಾಶ ಸರ್ವ
ನಾಶವ ತಂದೊಡ್ಡುವರ ಒಂದು ವೇಷ

ಮೋಸಹೋದೆನು ಜಗದೀಶ ವಿಶ್ವ
ತೋಷನೆ ಶಿಕ್ಷಿಸೊ ಓ ಶ್ರೀನಿವಾಸ ॥ ೩ ॥

ಗೋಪಾಲಕೃಷ್ಣನೆ ಎನ್ನ ನೀನು
ಕಾಪಾಡಬೇಕು ಬಿಡೆಸು ನಾನು ಬೆನ್ನ
ಜ್ಞಾಪಕವಿಲ್ಲದೆ ಮುನ್ನ ಆವ
ಪಾಪಗೈದರೂ ಮನ್ನಿಸೈ ಸುಪ್ರಸನ್ನ ॥ ೪ ॥

೭೨

ಸಂಸಾರದೊಳು ಸುಖವ ಕಾಣೆ ಹರಿಯೆ
ಕಂಸಾರಿ ಸಲಹೆನ್ನ ಕಾರುಣ್ಯನಿಧಿಯೆ ॥ ಪ ॥

ತಂದೆ ತಾಯಿಗಳಾಸೆ ಬಂಧುಬಾಂಧವರಾಸೆ
ಬಂಧಿಪುದು ಧನದಾಸೆ ಕಾಮಿನಿಯರಾಸೆ
ನೊಂದೆ ಬರಿ ಬಯಲಾಸೆಯೆಂದು ತಿಳಿಯೆ ದಿವಿಜ
ವಂದಿತನೆ ನಿನ್ನ ಪಾದವ ಮರೆತೆನಕಟ ! ॥ ೧ ॥

ಬಗೆಬಗೆಯ ಭೋಗತೃಷ್ಣೆಯೊಳ್ ಬಾಯ್ಬಿಟ್ಟೋಡಿ
ಮೃಗಜಲವನರಸಿ ಹಿಮ್ಮೆಟ್ಟುವಂತೆ ಓಡಿ
ಸುಗಮವಲ್ಲಿದು ಬಾಳು ಬದುಕು ನಿರಸಮಾಯೆ
ನಿಗಮಗೋಚರ ನಿತ್ಯ ನೀ ಕಾಯೋ ನಿರುತ ॥ ೨ ॥

ತತ್ತ್ವನಿರಸವೆನ್ನಲಿ ಬತ್ತಿಹೋದುದು ದೇಹ
ವ್ಯರ್ಥನಂಬಿದೆ ನಾನು ಮದಾಂಧಳಾಗಿ
ಕತ್ತಲೆಗೆ ದೀಪವಿಟ್ಟ ತರದಿ ಜ್ಞಾನೋದಯವ
ನಿತ್ತು ತೋರಿಸು ಮುಕ್ತಿ ಪಥವ ಶ್ರೀಕೃಷ್ಣ ॥ ೩ ॥

ವಿಠಲೇಶ ಅಂಕಿತದ ಕೀರ್ತನೆಗಳು

(ವಿಠೋಬಾಚಾರ್ಯ ವೈದ್ಯ ೧೯೦೮-೧೯೮೨)

ವಿಠಲೇಶ ಅಂಕಿತರಾದ ಶ್ರೀ ವಿಠೋಬಾಚಾರ್ಯ ವೈದ್ಯ ಅವರು ಆಂಧ್ರದ ಅನಂತಪುರ ಕಾಲೇಜಿನಲ್ಲಿ ಕ್ರಿ.ಶ. ೧೯೩೩ರಲ್ಲಿ ಮದ್ರಾಸ್ ವಿಶ್ವವಿದ್ಯಾನಿಲಯದಿಂದ ಬಿಎ ಪದವಿಗಳಿಸಿದರು. ಕಲ್ಗೊಂಡವಾಸಿಗಳಾದ ಇವರು ಔರಂಗಾಬಾದಿಗೆ ಬಂದಾಗ ಇವರಿಗೆ ಪ್ರಬಲ ಉದರಶೂಲೆ ಇದ್ದುದರಿಂದ ಉದ್ಯೋಗ ತ್ಯಜಿಸಿದರು. ಮಂತ್ರಾಲಯದಲ್ಲಿ ಗುರುಗಳನ್ನು ಆರಾಧಿಸಿದರು. ಆರೋಗ್ಯವಂತರಾದರು. ಗುರುರಾಘವೇಂದ್ರರನ್ನು ಕುರಿತು ಕವಿತೆ-ಕೀರ್ತನೆಗಳನ್ನು ರಚಿಸಲಾರಂಭಿಸಿದರು. ತಾವು ರಚಿಸಿದ ಶ್ರೀ ಪಾದಮಲ್ಲಿಕಾ ಕೃತಿಗೆ ಮಂತ್ರಾಲಯದ ಪೀಠಸ್ಥರಾದ ಶ್ರೀ ಸುಯಮೀಂದ್ರತೀರ್ಥಶ್ರೀಪಾದರಿಂದ ಸನ್ಮಾನಿತರಾದರು. ಸಂಗೀತ, ಸಿದ್ಧಾಂತ ಸಂಸ್ಕೃತ ಪರಿಚಯ ಇಲ್ಲದ ವಿಠೋಬಾಚಾರ್ಯ ವೈದ್ಯರು ಗುರುಗಳ ಅನುಗ್ರಹದಿಂದ ೭೦೦ ಪದಗಳನ್ನು ರಚಿಸಿದ್ದಾರೆ. ಮಲ್ಕಾಜಗಿರಿ (ಮಲ್ಲಿಕಾರ್ಜುನಗಿರಿ) ಶ್ರೀ ರಾಘವೇಂದ್ರ ಸ್ವಾಮಿಗಳ ವೃಂದಾವನ ಸ್ಥಾಪನೆಯಲ್ಲಿ ವಿಶೇಷವಾಗಿ ನೆರವಾಗಿದ್ದಾರೆ. ಇವರ ಶ್ರೀ ಗುರುರಾಜ ಗೀತಮಾಲಿಕಾ ಗೀತಸಂಗ್ರಹ ೧೯೮೦ರಲ್ಲಿ ಮುದ್ರಿತವಾಗಿದೆ.

೭೩

ಇನ್ನಾದರು ಹರಿಧ್ಯಾನ ಮಾಡೆಲೊ ಮನವೆ
ಘನ್ನ ಪಾಪಗಳನು ಕಳೆವುದಕೆ ॥ ಪ ॥

ಸನ್ನುತ ಗುರು ಮಧ್ವರಾಯರಡಿಗಳಲಿ
ನನ್ನ ತಪ್ಪುಗಳನ್ನು ಒಪ್ಪಿಕೊಳ್ಳೆಲೊ ಮನವೇ ॥ ಅ.ಪ. ॥

ಬಾಲತನದಿ ಬಹುಕಾಲ ಕಳೆದುಹೋಯ್ತು
ಮೇಲೆ ಯೌವ್ವನ ಬಂದು ಮರೆ ಹಾಕಿತು

ಜಾಲಮೋಹದ ಸಂಸಾರದಿ ಸೆರೆಗೊಂಡು
ಝೋಲಿ ತಪ್ಪಿತು ನಿನಗೆ ಏಳು ಎಚ್ಚರಗೊಳ್ಳು ॥ ೧ ॥

ಇನ್ನು ವೃದ್ಧಾಪ್ಯ ಬಂದೊದಗಿತು ದೇಹಕ್ಕೆ
ಅನ್ಯ ಚಿಂತೆಗಳೇಕೆ ಬರಿದು ಮೋಹ
ಪನ್ನಂಗಶಯನನ ಮರೆತ ದೋಷಕೆ ನೀನು
ಇನ್ನು ಪ್ರಾಯಶ್ಚಿತ್ತವನ್ನೆ ಕೊಳ್ಳೆಲೊ ಮನವೆ ॥ ೨ ॥

ಕಲಕಳೆವುದಕೆ ವೇಳೆ ಬಹಳವಿಲ್ಲ
ಕಾಲಯಮನು ಕಾಯ್ದು ಕುಳಿತಿಹನು
ಲೋಲ ಶ್ರೀ ವಿಠಲೇಶನೊಲ್ಮೆ ಪಡೆದು ಭವ
ಜಾಲ ತಪ್ಪಿಸಿಕೊಂಡು ಸುಖಿಯಾಗು ಮನವೆ ॥ ೩ ॥

೭೪

ಕಳ್ಳ ಬಂದನು ಮನೆಗೆ ..... ನಮ್ಮ ಮನೆಗೆ ..... ಕಳ್ಳ ಬಂದನು ಮನೆಗೆ
ಒಳ್ಳೆ ಬುದ್ಧಿಯ ಕೊಡಲು ಸುಳ್ಳು ಸಂಸಾರವ ಚೆಲ್ಲಿಹಾಕಿರಿ ಎಂದು ॥ ಪ ॥

ಧನದ ಮೋಹವ ಬಿಟ್ಟು ಕನಕದಾಸೆಯ ತೊರೆದು
ವನಿತೆರ ಮೋಹವ ಮೊದಲೆ ಬಿಟ್ಟು
ಫಣಿಶಯನನ ಪಾದನಂಬಿ ಬಾಳಿರಿ ಎಂದು
ಕ್ಷಣದಿ ಇದ್ದುದನೆಲ್ಲವ ಹಣಿದು ಕೊಂಡೋಡಿದ ॥ ೧ ॥

ಎಷ್ಟು ವರ್ಣಿಸಲೀ ಕಳ್ಳನುಪಕೃತಿಯ
ಹೊಟ್ಟೆಯೊಳ್ ಈರೇಳು ಜಗವನಿಂಬಿಟ್ಟು
ವಿಠ್ಠಲೇಶನ ಮನಮುಟ್ಟಿ ಭಜಿಪುದಕ್ಕೆ
ಕೊಟ್ಟು ಸದ್ಬುದ್ಧಿಯ ಥಟ್ಟನೆ ಓಡಿದ ॥ ೨ ॥

ಪದ್ಮಾವತಿಬಾಯಿ ಪದಕಿ (೧೯೦೯-೨೦೦೨)

ಅಂಕಿತ : ರುಕುಮೇಶ ವಿಠಲ (ರುಕ್ಮೇಶ ವಿಠಲ)

ರಚನೆ : ಪದ್ಮಾವತಿಬಾಯಿ ಪದಕಿ (೧೯೦೯-೨೦೦೨)

ಸ್ಥಳ : ಬೆಂಗಳೂರು

ಜೀವನ : – ಮೇಲುಕೋಟೆಯ ಸುಬ್ರಹ್ಮಣ್ಯರಾಯರು ಮತ್ತು ಸೀತಾಬಾಯಿ ದಂಪತಿಗಳ ಒಬ್ಬಳೇ ಮಗಳು ಪದ್ಮಾವತಿಬಾಯಿ. ೧೯೦೯ರಲ್ಲಿ ಜನಿಸಿದರು. ೪ನೇ ತರಗತಿವರೆಗೆ ಓದಿದ ಪದ್ಮಾವತಿ ಹಾವೇರಿ ಜಿಲ್ಲೆಯ ತಿರುವಳ್ಳಿ ಗ್ರಾಮದ ಗೋವಿಂದರಾವ್ ಪದಕಿ ಅವರನ್ನು ವಿವಾಹವಾದರು. ಇವರಿಗೆ ೫ ಗಂಡು ೪ ಹೆಣ್ಣು ಮಕ್ಕಳು ಜನಿಸಿದರು. ಪತಿಯ ನಿಧನಾನಂತರ ಬೆಂಗಳೂರಿನಲ್ಲಿ ನೆಲೆಸಿದರು.

ಅಂಕಿತ ದೀಕ್ಷೆ : – ೧೯೫೫ರಲ್ಲಿ ಶ್ರೀ ಗೋಪಾಲದಾಸರ ಆರಾಧನೆ ದಿನದಂದು ಶ್ರೀ ಗುರುಗೋವಿಂದ ವಿಠಲದಾಸರ ಶಿಷ್ಯರಾದ ಶ್ರೀಯುತ ಜಾಂಬವತೀಪ್ರಿಯ ವಿಠಲದಾಸರಿಂದ ರುಕ್ಮೀಶವಿಠಲ ಅಂಕಿತ ದೀಕ್ಷೆ ಪಡೆದರು. ಪ್ರತಿನಿತ್ಯವೂ ಮನೆಯಲ್ಲಿ ತಾರತಮ್ಯೋಕ್ತ ಭಜನೆ ಮಾಡುತ್ತಿದ್ದರು. ೩೫ ಕೀರ್ತನೆಗಳನ್ನು ರಚಿಸಿದ್ದಾರೆ. ಮೊಮ್ಮಗಳ ಮನೆಯಲ್ಲಿ ೯೩ನೇ ವಯಸ್ಸಿನಲ್ಲಿ (೨೦೦೨) ನಿಧನರಾದರು.

೭೫

ಎಂಟು ಎಂಟು ದಿನಕೆ ಬಂದು ನೆಂಟರೆಲ್ಲ ಸೇರುವರು
ಒಂಟಿಯಾಗಿ ಪೋಗುವಾಗ ನೆಂಟ ನೀನೆ ಕಾಯಬೇಕೋ ॥ ಪ ॥

ಹೊತ್ತು ಬೇಗ ಕಳೆಯುತ್ತಿದೆ ನಿತ್ಯಸೇವೆ ಮಾಡಲಿಲ್ಲ
ಭೃತ್ಯಳಾಗಿ ಬಾಳಲಿಲ್ಲ ಮೃತ್ಯು ಬಂದು ಕಾಯುತಿದೆ ॥ ೧ ॥

ಹರಿಸರ್ವೋತ್ತಮನೆಂಬೋ ಜ್ಞಾನನಿರುತ ಬುದ್ಧಿಯನ್ನೇ ಕೊಟ್ಟು
ನರಹರಿಯ ಸ್ಮರಣೆ ಮನದಿ ಸ್ಥಿರವಾಗಿ ಇರುವಂತೆ ॥ ೨ ॥

ಜ್ಞಾನವ ಕೊಡೋ ಸ್ವಾಮಿ. ಅಜ್ಞಾನವ ದೂರಮಾಡೋ

೭೬

ನೀ ಕರುಣಿಸೋ ವಿಠಲಾ । ನಮ್ಮ ಪರಿಪಾಲಿಸೋ ವಿಠಲಾ ॥ ಪ ॥

ಕಾಮವ ಕೊಡಿಸೋ ವಿಠಲಾ । ನಿನ್ನ ನೇಮದಿ ಪೂಜಿಪ
ಕಾಮನೆ ಕೊಡಿಸೋ ವಿಠಲಾ ।
ಕ್ರೋಧವ ಮಾಡಿಸೊ ವಿಠಲಾ । ನಿನ್ನ ದ್ವೇಷಿಗಳಲ್ಲೇ ವಿಠಲಾ ॥ ೧ ॥

ಲೋಭವ ಮಾಡಿಸೋ ವಿಠಲಾ । ನಿನ್ನ ಪದಸೇವೆ
ದ್ವೇಷಿಗೆ ಸಿಗದ್ಹಾಂಗೆ
ಮೋಹವ ಬಿಡಿಸೋ ವಿಠಲಾ । ದೇಹಾಭಿಮಾನ ವಿಠಲಾ ॥ ೨ ॥

ಮದವ ಹೆಚ್ಚಿಸು ವಿಠಲಾ । ನಿನ್ನ ಪದ ಸೇವೆಯ
ಮದ ಹೆಚ್ಚಿಸು ವಿಠಲಾ ।
ಮಾತ್ಸರ್ಯ ಹುಟ್ಟಿಸು ವಿಠಲಾ । ಅದ್ವೈತ ಮತದಲ್ಲಿ ವಿಠಲಾ ॥ ೩ ॥

ಇಂತು ಅರಿಷಡ್ವರ್ಗಗಳ ಕಂತುಜನಕ ನೀ ಕರುಣಿಸಿ
ಅಂತ್ಯ ಕಾಲಕೆ ಎನ್ನಂತರಂಗದಿ । ನಿಂತು ನುಡಿಸೋ ರುಕುಮೇಶವಿಠ್ಠಲಾ ॥೪ ॥

❖❖

ಮುಕ್ತಪುರೇಶ್ವರ ಅಂಕಿತದ ಕೀರ್ತನೆಗಳು

ಬೆಳ್ಳೆ ಸೀತಾರತ್ನಮ್ಮ (೧೯೧೦-೧೯೮೬)

ಜನನ :- ಮಂಗಳೂರಿನಲ್ಲಿ ಕೊಳಾಲು ರಾಮರಾಯ ಹಾಗೂ ಶೃಂಗಾರಮ್ಮ ದಂಪತಿಗಳ ಏಕಮಾತ್ರ ಪುತ್ರಿ ಗುಂಡಮ್ಮ(ಸೀತಾರತ್ನ)ನ ಜನನ ೭-೬-೧೯೧೦ರಲ್ಲಿ ಆಯಿತು.

ಶಿಕ್ಷಣ :- ೭ನೇ ತರಗತಿವರೆಗೆ ಓದಿದ ಗುಂಡಮ್ಮನಿಗೆ ೧೨ನೇ ವಯಸ್ಸಿಗೆ ಪುತ್ತೂರಿನ ವಕೀಲರಾದ ಬೆಳ್ಳೇ ರಾಮಚಂದ್ರರಾಯರೊಂದಿಗೆ ವಿವಾಹವಾಯಿತು. ಅತ್ತೆಮನೆಯಲ್ಲಿ ಸೀತಾರತ್ನವೆಂದು ಹೆಸರಿಟ್ಟರು. ಹೀಗಾಗಿ ಗುಂಡಮ್ಮ ಬೆಳ್ಳೆ ಸೀತಾರತ್ನಮ್ಮ ಆದರು.

ಚಿಕ್ಕಂದಿನಲ್ಲಿ ಸಂಗೀತ ಪಾಠವಾಗಿದ್ದ ಸೀತಾರತ್ನಮ್ಮನವರು ಮುಕ್ತಾಪುರನಿಲಯ / ಮುಕ್ತಾಪುರೇಶ ಮುಂತಾದ ಪರ್ಯಾಯಶಬ್ದಗಳ ಅಂಕಿತದಿಂದ ಕೀರ್ತನೆಗಳನ್ನು ರಚಿಸತೊಡಗಿದರು.

ಕೃತಿಗಳು : ಭಜನಾ ಕಾರ್ಯಕ್ರಮಗಳನ್ನು, ಸಾಹಿತ್ಯಿಕ ಚಟುವಟಿಕೆಗಳನ್ನು ನಡೆಸುತ್ತಿದ್ದ ಸೀತಾರತ್ನಮ್ಮನವರು ತಾಯಿ, ಮೀಸಾ ಮೊದಲಾದ ಸಣ್ಣ ಕತೆಗಳನ್ನು ರಚಿಸಿದರು.

೬೦೦ ಭಾಮಿನಿ ಷಟ್ಪದಿಗಳಲ್ಲಿ ಭಗವದ್ಗೀತೆಯನ್ನು ಸಂಸ್ಕೃತದಿಂದ ಕನ್ನಡಕ್ಕೆ ೭೧ನೇ ವಯಸ್ಸಿನಲ್ಲಿ ಅನುವಾದಿಸಿದ್ದರು. ೧೯೮೧ರಲ್ಲಿ ರಚಿತವಾದ ಈ ಗ್ರಂಥ ೨೦೦೪ರಲ್ಲಿ ಪ್ರಕಟವಾಯಿತು.

ಭಕ್ತಿವಾಹಿನಿ ಎಂಬ ಸುಮಾರು ೧೦೦ ಕೀರ್ತನೆಗಳ ಗ್ರಂಥವನ್ನು ರಚಿಸಿದ್ದಾರೆ.

ನಿಧನ : ೨೬-೭-೧೯೮೬ರಲ್ಲಿ ಮುಂಬಯಿಯಲ್ಲಿ ಮಗಳ ಮನೆಯಲ್ಲಿ ೭೬ನೇ ವಯಸ್ಸಿನಲ್ಲಿ ನಿಧನರಾದರು.

೭೭

ರಾಗ : ಕಾಂಬೋಧಿ ತಾಳ : ಝಂಪೆ

ಮನೆಯೆ ಮಂಗಳ ನಿನಗೆ ಕೇಳು ಕೆಳದಿ ॥ ಪ ॥

ಘನವಾದ ನುಡಿಯೊಂದ ಹೇಳುವೆನು ಕೇಳು ॥ ಅ.ಪ. ॥

ಉಡಲಿಲ್ಲ ಉಣಲಿಲ್ಲ ಇಡಲಿಲ್ಲ ಕೊಡಲಿಲ್ಲ
ದುಡಿದುಡಿದು ಈ ದೇಹ ಬಡವಾಯಿತು
ಸುಡಲಿನ್ನು ಸಂಸಾರ ಸಾಕು ಸಾಕೆನಿಸಬೇಡ
ಕಡಲಶಯನನು ಕೊಟ್ಟ ಭಾಗ್ಯವಿದು ಕೆಳದಿ ॥ ೧ ॥

ಒಂದು ದಿನ ಗಂಗೆಯಲಿ ಮಿಂದು ನಾ ಬರಲಿಲ್ಲ
ಸುಂದರ ಕ್ಷೇತ್ರಗಳ ನೋಡಲಿಲ್ಲ
ಇಂದಿರೆಯ ಪೂಜೆಗೆ ಕ್ಷಣಮಾತ್ರ ಬಿಡುವಿಲ್ಲ
ಮುಂದೇನು ಗತಿಯೆಂದು ಮರುಗದಿರು ಕೆಳದಿ ॥ ೨ ॥

ಪತಿಸುತರನಾದರಿಸು ಪರಿಜನರ ಸಲಹಿಕೊಳು
ಅತಿಥಿಗಳ ಸತ್ಕರಿಸಿಯಾನಂದಿಸು
ಮತಿವಂತೆ ನೀನೆನಿಸಿ ಮನೆಯಲ್ಲಿ ಬಾಳಲದು
ರತಿಪತಿಯ ಜನಕನಿಗೆ ಪೂಜೆ ಕೇಳು ಕೇಳದಿ ॥ ೩ ॥

ಮನೆಗೆಲಸಗಳನೆಲ್ಲ ಕ್ರಮವರಿತು ಮಾಡುತ್ತಾ
ವನಜಸಂಭವಪಿತನ ಮನದಲಿರಿಸಿ
ಘನ ಪತಿವ್ರತೆಯೆನಿಸಿ ಯೋಗತನವ ಮಾಡಿದರೆ
ಜನನಿ ರಮೆಯೊಲಿಯದಿನ್ನೇನ ಮಾಡುವಳು ॥ ೪ ॥

ಗಂಗೋತ್ತಮಾಂಗ ವರಮುಕ್ತನಗರ ನಿವಾಸ
ಅಂಗಜಾರಿಯ ಸಖಿನ ಮನ ಮೆಚ್ಚಿಸಿ
ಮಂಗಳೆಯು ಮನೆಗೆನಿಸಿ ಸಂಸಾರ ಮಾಡಿದರೆ
ಗಂಗಾದಿತೀರ್ಥಗಳು ನಿನ್ನೊಳಗೆ ಕೆಳದಿ ॥ ೫ ॥

ರಾಗ : ಕಾಂಬೋಧಿ ತಾಳ : ಝಂಪೆ

ವಾಸವಾಗಿರುವ ಮನೆ ಶಿಥಿಲಗೊಂಡಿತು ದೇವ ॥ ಪ ॥

ಏಸುದಿನ ಜೀವಿಸಲಿ ಯಿನ್ನು ಯಿದರೊಳಗೆ ॥ ಅ.ಪ. ॥

ಸುತ್ತಲಿನ ಗೋಡೆಗಳು ಬಿರುಕುಬಿಟ್ಟಿಹವಯ್ಯ
ಎತ್ತರದ ಭಾವಣಿಯು ಕುಸಿಯುತಿಹುದು
ಮತ್ತೆ ಕಂಭಗಳೆಲ್ಲ ಮುರಿದು ಬೀಳುತಲಿಹವೋ
ಎತ್ತನೋಡಲು ಮನೆಯು ಜೀರ್ಣವಾಗಿಹುದು ॥ ೧ ॥

ಒಂಬತ್ತು ಬಾಗಿಲ ಮನೆಯ ಚೌಕಟ್ಟು ಮುಂದಿಹುದು
ತುಂಬಿಟ್ಟ ಸಂದಣಿಯು ಕರಗತಿಹುದು
ಅಂಬುಜಾಯತನಯನ ನೀ ಬಂದು ಮೋಡಿ ಎನ್ನ
ನಿಂಬಿಟ್ಟು ಸಲಹಯ್ಯ ಇಂದಿರಾರಮಣ ॥ ೨ ॥

ವಿಷಕಂಠ ಮುಕ್ತಪುರನಿಲಯ ಸನ್ನುತ ಕೃಷ್ಣ
ಕುಸುಮ ಸಾಯಕ ಪಿತನ ಕರುಣಾನಿಧೆ
ವಿಷಧರನ ತಲ್ಪದಲಿ ಯೊರಗಿರುವ ಶ್ರೀಹರಿಯೆ
ಹೊಸಮನೆಯ ಕೊಡಸಿನ್ನು ತಡವೇಕೆ ಪ್ರಭುವೆ ॥ ೩ ॥

❖❖

ತಂದೆ ವರದವಿಠಲರ ಕೀರ್ತನೆಗಳು

(ಕಳಸದ ಶ್ರೀನಿವಾಸಾರ್ಯ ೧೯೧೨-೧೯೪೪)

ತಂದೆ ವರದಗೋಪಾಲವಿಠಲರು (ಪ್ರಹ್ಲಾದಗೌಡ) ಅವರ ಶಿಷ್ಯರು ನರಸಿಂಗರಾಯರು (ಗುರುತಂದೆ ವರದ ಗೋಪಾಲವಿಠಲರು) ಇವರು ಶಿಷ್ಯರು ಶ್ರೀನಿವಾಸರಾವ್ (ತಂದೆ ವರದ ವಿಠಲರು) ಇವರ ಕಾಲ ೧೯೧೨-೧೯೪೪. ಇವರು ೨೦ ಕೀರ್ತನೆಗಳನ್ನು ಬರೆದಿದ್ದಾರೆ. ಡಾ. ಶ್ರೀನಿವಾಸ ಹಾವನೂರ ಅವರು ಮತ್ತು ಶ್ರೀಮತಿ ನಳಿನಿ ವೆಂಕಟೇಶ ಅವರು ಸಂಪಾದಿಸಿದ ಸಮಗ್ರ ದಾಸಸಾಹಿತ್ಯ ಸಂಪುಟ ೨೧ ಭಾಗ ೨ ೩೩ನೇ ಪುಸ್ತಕ ಪುಟ ೪೦-೪೪ರಲ್ಲಿ ಜೀವನ ವಿವರವು ಪ್ರಕಟವಾಗಿದೆ. ಪುಟ ೨೯೪ರಿಂದ ೨೯೮ರವರೆಗೆ ಕೀರ್ತನೆ ಸಂಖ್ಯೆ ೨೯೫ ರಿಂದ ೩೧೪ರವರೆಗೆ ೨೦ ಕೀರ್ತನೆಗಳು ತಂದೆ ವರದ ವಿಠಲರ ಅಂಕಿತದ ಕೀರ್ತನೆಗಳು ಪ್ರಕಟವಾಗಿವೆ. ಕಳಸದ ಶ್ರೀನಿವಾಸರಾಯರೆಂಬ ಹೆಸರಾದ ಇವರು ಗುರುಕಥಾಮೃತ ಸಾರ ಎಂಬ ದೀರ್ಘಸುಳಾದಿ ಬರೆದಿದ್ದು ಅದರಲ್ಲಿ ರುಕ್ಮಿಣಿ – ರಾಘವೇಂದ್ರ ದಂಪತಿಗಳ ಮಗ ಶ್ರೀನಿವಾಸರಾಯರೆಂದು ತಿಳಿಬು ಬರುತ್ತದೆ. ೩೨ನೇ ವಯಸ್ಸಿನಲ್ಲಿ ೭ ದಿನ ಪ್ರಾಯೋಪವೇಶ ಮಾಡಿ ೧೯೪೪ರಲ್ಲಿ ನಿಧನರಾದರು. ಇವರ ಮಗ ಗೋಪಾಲರಾಯರು ಶ್ರೀನಿವಾಸ ಹಾವನೂರಿಗೆ ತಿಳಿಸಿದ ಪ್ರಕಾರ ತಂದೆ ವರದ ವಿಠಲರು ಶಾಸ್ತ್ರೀಯ ಸಂಗೀತಗಾರರಾಗಿದ್ದರು. ಪದ್ಮಾವತಿ ಪರಿಣಯ, ಬಡತನದ ಭೂತ, ಉತ್ತರಭೂಪ ಮುಂತಾದ ಕಂಪನಿನಾಟಕಗಳಲ್ಲಿ ಪಾತ್ರವಹಿಸಿದ್ದರು. ವೇಷಭೂಷಣಗಳಲ್ಲಿ ಆಧುನಿಕರಂತೆ ಕಾಣುತ್ತಿದ್ದರು.

❖❖

ತಂದೆವರದವಿಠಲ ಅಂಕಿತದ ಕೀರ್ತನೆಗಳು

(ಕಳಶದ ಶ್ರೀನಿವಾಸರಾವ್ ೧೯೧೨-೧೯೪೪)

೭೯

ಭಜನೆ ಮಾಡೆಲೊ ಮನವೆ ಭಜನೆ ಮಾಡೆಲೊ ॥ ಪ ॥

ಭಜನೆಯನ್ನು ಮಾಡಿ ಸುಖಿಸೊ । ಭುಜಗಭೂಂಷಣ ಶಿವನೆ ॥ಅ.ಪ. ॥

ನಾನೆ ನಾನೆ ನಾನು ಎಂಬ ಶ್ವಾನಬುದ್ಧಿಯನ್ನು ಬಿಟ್ಟು
ನೀನೆ ನೀನೆ ಗತಿಯೆಂದು ಸಾನುರಾಗದಿಂದ ಮೃಡನ ॥ ೧ ॥

ಕಾಕು ಜನರ ವಾಸಬಿಟ್ಟು ಏಕಭಾವದಿಂದ ಕುಳಿತು
ಸಾಕು ಸಾಕೆನಿಸದಂತೆ ನಾಲ್ಕುಮೊಗದವನ ಸುತನ ॥ ೨ ॥

ತಂದೆ ವರದ ವಿಠಲನು ತಂದೆ ಜಗಕೆಲ್ಲವೆಂದು
ಛಂದಛಂದಾದಿ ಭಜಿಪ ಇಂದುಶೇಖರಭವನ ॥ ೩ ॥

೮೦

ಮಾಡಬಾರದೆ ಹರಿಪಾದಪೂಜೆ ॥ ಪ ॥

ಮಾಡಬಾರದೇನೋ ಕೂಡುತಾ ಸನಾದಿ
ಬೇಡಿದೊಡವನೀವ ಗಾಡಿಕಾರನ ಪೂಜೆ ॥ಅ.ಪ. ॥

ನರಜನ್ಮವು ಬರಿದೆ ಪೋಗುತಿದೆ ಗರುವತನದಿ ನೀ
ಮರೆಯ ಬೇಡೆಲವೋ ಮಾರಜನಕ ಕೃಷ್ಣನನ್ನರಿತು ಪೂಜೆಯನು ॥ ೧ ॥

ಬಲಿಯ ಮೆಟ್ಟಿದಾ ನೆಲವ ಮೂರಡಿ ಮಾಡಿ ಖೂಳ ಶಕಟನನ್ನು
ಕಾಲಲೊದ್ದು ಕೊಂದ, ಶಿಲೆಯಾದಹಲ್ಯೆಯ ಸಲಹಿದ ಪಾದ ॥ ೨ ॥

ಕರುಣಾಸಾಗರ ಕರಿವರದಾ ಕೃಷ್ಣ ದುರಿತಗಳನೆ ಕಳೆದು
ಪರಮ ಪದವನೀವ ಗರುಡಗಮನ ತಂದೆ ವರದ ವಿಠಲನ ಪೂಜೆ ॥ ೩ ॥

❖❖

ನಾರಾಯಣ ಶರ್ಮರು (ಜಾಜಿಪುರೀಶ ಅಂಕಿತ)

(೧೯೧೨-೧೯೯೨)

ನಾರಾಯಣಶರ್ಮರು ವೆಂಕಟರಂಗನ್ - ತಾಯಮ್ಮಾಳ್ ಶ್ರೀ ವೈಷ್ಣವ ದಂಪತಿಗಳಿಗೆ ಎರಡನೇ ಪುತ್ರರಾಗಿ ೨೨-೮-೧೯೧೨ರಂದು ಬೆಂಗಳೂರುಜಿಲ್ಲೆಯ ದೊಡ್ಡಹೆಜ್ಜಾಜಿಯಲ್ಲಿ ಜನಿಸಿದರು. ಅರ್ಚಕವೃತ್ತಿಯಲ್ಲಿದ್ದ ತಂದೆಯವರ ಪ್ರಭಾವದಿಂದ ಧಾರ್ಮಿಕಪ್ರವೃತ್ತಿ ಬೆಳೆಯಿತು. ನಾರಾಯಣಶರ್ಮರು ಎಲ್.ಎಸ್.ವರೆಗೆ (೧೯೩೭) ಓದಿ ಉಪಾಧ್ಯಾಯವೃತ್ತಿಯಲ್ಲಿ ತೊಡಗಿದರು. (೧೯೪೬) ಈ ಮುಂಚೆ ಬೆಂಗಳೂರಿನ ಆರ್.ಪಿ.ಸಂಸ್ಥೆಯಲ್ಲಿ ನೌಕರಿಯಲ್ಲಿದ್ದರು. ನಾರಾಯಣಶರ್ಮರು ೩೦ಕ್ಕೂ ಅಧಿಕ ಕೀರ್ತನೆಗಳನ್ನು ೭ ಧಾರ್ಮಿಕ ಕೃತಿಗಳನ್ನು ರಚಿಸಿದ್ದಾರೆ. ೧೯೯೨ರಲ್ಲಿ ನಿಧನರಾದರು.

ಕೃತಿಗಳು : ೧) ಶ್ರೀ ವೈಷ್ಣವ ಮತ ೨) ಸಂಕ್ಷಿಪ್ತ ಭಗವದಾರಾದನಾ ಕ್ರಮ ೩) ಯಜುರ್ವೇದ ಸಂಧ್ಯಾವಂದನವಿಧಾನ ೪) ಶ್ರೀಮದ್ರರಸ್ಯತ್ರಯಸಾರ ಸಂಗ್ರಹ ೫) ಅಳವಂದಾರ್ ಸ್ತೋತ್ರರತ್ನ ಸಂಗ್ರಹ ೬) ಭಗವದ್ರಾಮಾನುಜ ಅಷ್ಟೋತ್ತರ ಶತನಾಮಾವಳಿ ೭) ೩೦ ಕೀರ್ತನೆಗಳು.

ಪ್ರಸ್ತುತ ಸಾಮಾಜಿಕಕೀರ್ತನೆಗಳಲ್ಲಿ ದೇಹ, ಜೀವನ ಸಮಾಜಗಳನ್ನು ಕುರಿತು ಮಾರ್ಮಿಕವಾಗಿ ಚಿತ್ರಿಸಿದ್ದಾರೆ. ಈಗುಂಟೂ ಆಗುಂಟೂ ಈದೇಹ ಕೀರ್ತನೆಯಲ್ಲಿ ಸಾಮಾಜಿಕಬದ್ಧತೆಗೆ ಸ್ಪಷ್ಟ ನಿದರ್ಶನವಾಗಿದೆ. ಈದೇಹ ಕ್ಷಣಿಕವಾಗಿದ್ದು ಇದು ಬೀಳುವುದರೊಳಗೆ ಮನಸ್ಸನ್ನು ಸ್ವಸ್ಥವಾಗಿಸಿಕೊಳ್ಳಬೇಕು. ನಾಲ್ಕುಜನರಿಗೆ ಉಪಕಾರಿಯಾಗಿ ಬಾಳಬೇಕೆಂಬ ಸಾರ್ವತ್ರಿಕಬೊಂತೆ ಸತ್ಯವಿದೆ. ಕೇಶವಮಾಧವ ಎನಬಾರದೆ ಕೀರ್ತನೆ ಚಿಂತೆಯಯಾದ ಮನುಷ್ಯ ಮನಸ್ಸಿಗೆ ದೇವಸ್ಮರಣೆ ನೆಮ್ಮದಿಯನ್ನು ತಂದುಕೊಡುತ್ತದೆಂಬ ಭಾವವಿದೆ. ಮನದೊಳಗೆ ಮಸಣವನು ತುಂಬಿಕೊಂಡಿರಲು ಮನೆಯ ಚಂದದಿ ಮಾಡಿದರೇನು ಎಂಬ ಕೀರ್ತನೆ ಅತ್ಯಂತ ಅರ್ಥಪೂರ್ಣ ಸಾಮಾಜಿಕ ಕೂಟದ ಕೀರ್ತನೆಯಾಗಿದೆ. ದಾಸರು ಸಮಾಜದ ಜನರಿಗೆ ನಿತ್ಯಜೀವನದ ಸತ್ಯಗಳನ್ನು ಜೀವನಸಾರ್ಥಕ್ಯದ ಸಾಧನೆಗಳನ್ನು ಇಲ್ಲಿಯ ಉಳಿದ ಕೀರ್ತನೆಗಳಲ್ಲಿ ಕಟ್ಟಿಕೊಟ್ಟಿದ್ದಾರೆ. ದೇವರ ನಾಮಸ್ಮರಣೆ ಕೇವಲ ವೈರಾಗ್ಯದ

ದಾರಿಯಲ್ಲ ಬದುಕಿನ ಬವಣೆಯನ್ನು ಸಾಗಿಸುವ ನಿತ್ಯಸಂಜೀವಿನಿ ಎಂಬ ಸರಳಮಾರ್ಗವನ್ನು ತೋರಿಸಿದ್ದಾರೆ.

೮೧

ಈಗುಂಟೋ ಆಗುಂಟೋ ಈ ದೇಹ
ಏಗಬಲ್ಲರು ಯಾರು ಈ ಜಗದ ಗುಂಟ ॥ ಪ ॥

ನಾಲ್ಕು ದಿನ ಇರುವಾಗ ಚೆನ್ನಾಗಿ ಇರಬೇಕು
ನಾಲ್ಕಾರು ಜನರಿಗೆ ಉಪಕಾರ ಮಾಡಬೇಕು
ಬಾಲೆ ಸರಸತಿಗೆ ಪರಧನಕೆ ವಸ್ತುವಿಗೆ ಏಕೆ
ಹಾಳು ಮನವನು ನಿಲಿಸಿ ಕೆಡಿಸಬೇಕು ॥ ೧ ॥

ಹಾರುವ ಮನವನ್ನು ಕಟ್ಟಿ ಹಾಕಬೇಕು
ಹಾರುವನ ಕಂಡರೆ ತಡೆಯಬೇಕು
ಹಾರಲೇಕೆ ಪರರ ಒಡವೆ ಕಂಡೊಡನೆಯೆ
ಬಾರಿಬಾರಿಗೆ ಬರಿದೆ ಕೆಣಕಲೇಕೆ ॥ ೨ ॥

ವಿಚಾರಿಸಿಕೋ ದೇವ ಶಿಷ್ಟರ ಭಂಟ ಊರೊಳಗೆ
ಉಚಾಯಿಸುತಿದ್ದಾರೆ ಐದಾರು ಮಂದಿ
ಎಚ್ಚರಿಕೆ ಹಾಕುತ್ತ ಇದ್ದಾರೆ ದುಷ್ಟ ಮಂದಿ
ಎಚ್ಚರಿಸೊ ಉದ್ಧರಿಸೊ ನೆಂಟ ಜಾಜಿಪುರೀಶ ॥ ೩ ॥

೮೨

ಕೇಶವ ಮಾಧವ ಎನಬಾರದೆ ಜೀವ
ಆಶೆಯ ಬಿಟ್ಟು ಕಿಂಚಿತ್ತು ಕಾಲ ॥ ಪ ॥

ಆಚಿಂತೆ ಈ ಚಿಂತೆ ಎಲ್ಲಾ ಚಿಂತೆಯನು
ಕಿಂಚಿತ್ತು ಹೊತ್ತು ಬಂತೆಯಾದೆ ನಾನು ॥ ಅ.ಪ. ॥

ಪತಿಯ ಚಿಂತೆ ಪರಸತಿಯ ಚಿಂತೆ
ಅತಿಯಾದ ಮೋಹದ ಮಕ್ಕಳ ಚಿಂತೆ

ಪ್ರತಿದಿನ ತುತ್ತಿನ ಚೀಲದ ಚಿಂತೆ
ಮತ್ತೇನು ಅದಕಾಗಿ ಆಸ್ತಿಯ ಚಿಂತೆ ॥ ೧ ॥

ಆಸ್ತಿ ಮಾಡಿದರೆ ಕಾಯುವ ಚಿಂತೆ
ಜಾಸ್ತಿ ಸೇರಿದರೆ ಕನಲುವ ಚಿಂತೆ
ಸುಸ್ತಿ ಬಡ್ಡಿಯಲಿ ಬೇಯುವ ಚಿಂತೆ
ಸುಸ್ತಾಗಿ ಸೊರಗುವ ನೋವಿನ ಚಿಂತೆ ॥ ೨ ॥

ಬದುಕಿದರೂ ಚಿಂತೆ ಬಾಳಿದರೂ ಚಿಂತೆ
ಬದುಕ ಸಹಿಸದ ಮೂಢರಂದ ಚಿಂತೆ
ಮುದದಿ ಕಾಯುವ ಮಾಧವನ ಚಿಂತೆ
ಬಾಧಿಸದಲ್ಲೋ ಕೊಂಚವು ತಂದೆ ॥ ೩ ॥

ಆ ಚಿಂತೆ ಈ ಚಿಂತೆ ಯಾಚಿಂತೆಯೊಳಗಿಂದ
ಆಚೆಗೆ ಎಳೆತಂದು ಮತಿಯನು ನೀಡೋ
ಅಚಿಂತ್ಯ ನಿನ್ನನೆ ಚಿಂತಿಸುವಂತೆನ್ನ
ನಿಶ್ಚಿಂತನನಾಗಿಸೊ ಜಾಜಿಪುರೀಶ ॥ ೪ ॥

೮೩

ಗೋವಿಂದ ಗೋವಿಂದ ಗೋವಿಂದ ಎನಬಾರದೆ
ಈವೊಂದು ಜನ್ಮದಲಿ ಜೀವಂತ ಇರುವರೆಗೆ ॥ ಪ ॥

ಹೊತ್ತಾರೆ ಎದ್ದೊಮ್ಮೆ ಗೋವಿಂದ ಎನಬಾರದೆ
ಬಾಯ್ತೆರೆದು ಆಕಳಿಸೆ ಗೋವಿಂದ ಎನಬಾರದೆ
ನಿತ್ಯ ಸ್ನಾನದಲೊಮ್ಮೊಮ್ಮೆ ಗೋವಿಂದ ಎನಬಾರದೆ
ತುತ್ತು ತುತ್ತಿಗೆ ಒಮ್ಮೆ ಗೋವಿಂದ ಎನಬಾರದೆ ॥ ೧ ॥

ತಿರುಗಾಡುತಿರುವಾಗ ಸುಮ್ಮನೆ ಕುಳಿತಾಗ
ಬರಿ ಮಾತಿರುವಾಗ ಮೌನಂದಿದಿರುವಾಗ
ಸರಸದಿ ನಗುವಾಗ ದುಃಖದಿ ಅಳುವಾಗ
ಹರುಷದಿ ಮಡದಿ ಮಕ್ಕಳೊಡನೆ ಇರುವಾಗ ॥ ೨ ॥

ನೋಟ ನೋಡುತಿರಲಿ ಆಟವಾ ಆಡುತಿರಲಿ
ಪಾಟಿ ಮನೆಗೆಲಸ ಹೊರೆಗೆಲಸದಲ್ಲಿರಲಿ
ಪಾಟೋಪದಲಿ ಕನಲಿ ಕೂಗಾಡುತಿರಲಿ
ಪಾಟಿ ಪರಿಜನರಿಗೆ ನಾಲಗೆ ತೊದಲದಿರಲಿ ॥ ೩ ॥

ಗೋವಿಂದ ಎಂದರೆ ಕಷ್ಟವೊಂದಿಷ್ಟಿರದು
ಗೋವಿಂದನ ನೆನೆದರೆ ಇಚ್ಛೆ ಈಡೇರುವುದು
ಗೋವಿಂದನೆಂದು ಒಮ್ಮೆ ಅಂದರು ಸಾಕು
ಧಾವಿಸಿ ಬಂದು ಕಾಯುವ ನಮ್ಮ ಜಾಜಿಪುರೀಶ ॥ ೪ ॥

೮೪

ಮನದೊಳಗೆ ಮಸಣವನು ತುಂಬಿಕೊಂಡಿರಲು
ಮನೆಯ ಚಂದದಿ ಮಾಡಿದರೇನಯ್ಯ ॥ ಪ ॥

ಮನೆಯೊಡೆಯ ತಾನು ಸನ್ನಡತೆಯಲ್ಲಿರದೆ
ಮನೆಮಂದಿಯನು ದಂಡಿಸಲಾಗದಯ್ಯ
ಮನೆತುಂಬ ಮನತುಂಬ ಜಾಜಿಪುರಿವಾಸನನು
ಅನುದಿನವು ನುತಿಸಲು ಸುಖವುಂಟು ಕೇಳಯ್ಯ ॥ ೧ ॥

ದೇವರು ಧರ್ಮವನು ದಾರಿಯಾಚೆಗೆ ಅಟ್ಟಿ
ದೇವಾಲಯವ ಮನೆಯೊಳಗೆ ಮಾಡಲೇನು
ಅವರಿವರ ನೋಟಕ್ಕೆ ಒಪ್ಪವಾದೀತಷ್ಟೆ
ಯಾವ ಪುರುಷಾರ್ಥವದರಿಂದ ಹೇಳು ॥ ೨ ॥

ಅವ್ವ ಕಷ್ಟವು ಬರಲು ಅವರಿವರು ಬಾರರು
ಆ ವಾಸುದೇವನಲ್ಲದೆ ಮತ್ತೊಬ್ಬರಾಗರು
ಭಾವ, ಮೈದುನ ಗಂಡ ಹೆಂಡತಿ ಮಕ್ಕಳು
ಇವರೆಲ್ಲ ದೇವ ಜಾಜಿಪುರೀಶನೊಕ್ಕಲು ॥ ೩ ॥

೮೫

ರಾಮನ ನಾಮವೆ ನಾನಾಕಾರ ಈ
ನಾಮವನುಳಿದರೆ ಶೂನ್ಯಾಕಾರ ॥ ಪ ॥

ಕಾಮಿಸಿ ಭಜಿಸಿರೆ ಆನಂದಕರ
ರಾಮಾ ರಾಮಾ ಜೈ ಜೈ ರಾಮ ॥ ಅ.ಪ. ॥

ಹಾಡುವ ಭಕ್ತರ ಅನುಮತದಲ್ಲು
ಬೀಡಲಿ ಮೊರೆವ ಶೀಲೆಯರಲ್ಲು
ಸೂಡಿದೆ ನಿನ್ನಯ ರಾಮಾಕಾರ
ರಾಮಾ ರಾಮಾ ಜೈ ಜೈ ರಾಮ ॥ ೧ ॥

ಹೂ ಗಿಡ ಬಳ್ಳಿಗಳಲ್ಲೂ ರಾಮ
ಖಗಮಿಗಗಳ ದನಿ ರಾಮನ ನಾಮ
ರಾಗದಿ ನೋಡಿದರೆಲ್ಲೂ ರಾಮ
ರಾಮಾ ರಾಮಾ ಜೈ ಜೈ ರಾಮ ॥ ೨ ॥

ಪೂಜೆಯ ಹೂವಲು ರಾಮ ರಾಮ
ತೇಜದ ಗಂಧದ ಪರಿಮಳ ರಾಮ
ರಾಜಿಪ ದೇಗುಲವೆಲ್ಲ ರಾಮ
ರಾಮಾ ರಾಮಾ ಜೈ ಜೈ ರಾಮ ॥ ೩ ॥

ಜಾಜಿಪುರೀಶನ ಪಾವನ ನಾಮ
ಸಾಜದಿ ನುತಿಸಿರೊ ರಾಮ ರಾಮ ॥ ೪ ॥

೮೬

ರಾಮನ ನೆನೆಬೇಕು ಶ್ರೀರಾಮನ ನೆನೆಬೇಕು ॥ ಪ ॥

ಪಾಮರರೆಲ್ಲರೂ ಏಕಚಿತ್ತದಿ ರಾಮನ ನೆನೆಬೇಕು ॥ ಅ.ಪ. ॥

ಕೋಲನು ಹಿಡಿದು ಕೂರುವ ಮುನ್ನ
ಎಲ್ಲಾ ಕೂದಲು ನರೆಯುವ ಮುನ್ನ
ಆಲಿಗಳೆರಡೂ ಕಾಣದ ಮುನ್ನ
ಕಾಲು ಕೈಗಳು ಮಾತು ಕೇಳದ ಮುನ್ನ ॥ ೧ ॥

ಅಲ್ಪಾನಂದದಿ ಸುಖದುಃಖವನು ಮರೆಯುತಲಿರಬೇಕು
ಅಲ್ಪರಲೂ ತಾ ಭ್ರಾತೃಪ್ರೇಮವ ಹೊಂದುತಲಿರಬೇಕು
ಸಲ್ಲುವೆಯಾದರೆ ಮಾರುತಿಯಂತುಲಿಬೇಕು
ಕಲ್ಪಿತ ಶ್ರೀ ಜಾಜಿಪುರೀಶನ ಧ್ಯಾನದಲಿರಬೇಕು ॥ ೨ ॥

೮೭

ಸತಿಯಿಲ್ಲ ಸುತರಿಲ್ಲ ಬಂಧು ಬಾಂಧವರಿಲ್ಲ
ನುತ ಕೇಶವನಲ್ಲದೆ ಸದ್ಗತಿ ಎನಗಿಲ್ಲ ॥ ಪ ॥

ಹೆರರನಾಶ್ರಯಿಸಿ ಬದುಕಬೇಕಲ್ಲ
ನರರನನುಸರಿಸಿ ಬಡವಾದೆನಲ್ಲ
ಇರುವ ನಾಲ್ಕು ದಿನದ ಬರಿದೆ ಸುಖಕ್ಕಾಗಿ
ನರನಿಗೆ ನೀಚನಿಗೆ ಈ ಸ್ಥಿತಿ ಒದಗಿತಲ್ಲ ॥ ೧ ॥

ಹರಿನಿನ್ನ ಭಜಿಸದೆ ಬಲು ಬಾಧೆಯಾಗಿದೆ
ಪರಿಪರಿಯ ನೋವನ್ನು ನೀಗುವವರಾರಿಲ್ಲ
ಸಿರಿಸಂಪತ್ತಿರುವರೆಗೆ ಸತಿಸುತರೆಲ್ಲ
ಕರೆದೂ ಬರರಲ್ಲ ಬಾಂಧವರು ಸ್ನೇಹಿತರು ॥ ೨ ॥

ಸುಖದಲಿರುವಾಗ ಮನ್ನಿಪರೋ ಎಲ್ಲ
ಅಖಿಲಗೋತ್ರಜರು ನೆರೆಹೊರೆಯವರು
ಸಖರು ಯಾರಿಲ್ಲ ಸಾವು ಬಂದೆಳೆವಾಗ
ಅಖಂಡ ಒಡೆಯ ಜಾಜಿಪುರೀಶ ಕಾಯಬೇಕಯ್ಯ ॥ ೩ ॥

❖❖

ಗಮಕಿ ಎಂ.ರಾಘವೇಂದ್ರರಾವ್ (೧೯೧೪-೧೯೯೯)
ರಘುವರ ಅಂಕಿತ

ಗಮಕಿ ಎಂ. ರಾಘವೇಂದ್ರರಾಯರು ಕೇವಲ ಪ್ರಸಿದ್ಧ ಗಮಕಿಗಳಷ್ಟೇ ಅಲ್ಲ ಕವಿಗಳೂ ಕೀರ್ತನ ರಚಕರೂ ಗಮಕಶಾಸ್ತ್ರರಚಕರೂ ಆದವರು. ಇವರು ೭-೮-೧೯೧೪ರಲ್ಲಿ ಮಂಡ್ಯ ಜಿಲ್ಲೆಯ ಪಾಂಡವಪುರದಲ್ಲಿ ಮೈಸೂರು ನೀಲಕಂಠ ಕೇಶವರಾವ್ ಮತ್ತು ವೆಂಕಟಲಕ್ಷಮ್ಮ ದಂಪತಿಗಳಿಗೆ ಜನಿಸಿದರು. ಇಂಡರ್‌ಮಿಡಿಯೇಟ್ ಮತ್ತು ಟಿ.ಸಿ.ಎಚ್. ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ವಿದ್ಯಾ ಇಲಾಖೆಯಲ್ಲಿ ಉದ್ಯೋಗಿಗಳಾದರು. ತಂದೆಯವರಿಂದ ಬಾಲ್ಯದಲ್ಲೇ ಗಮಕ ಕಲಾಭ್ಯಾಸಿಗಳಾದ ಇವರು ಮೈಸೂರಿನ ಜವಳಿ ಅಂಗಡಿ ತಮ್ಮಯ್ಯನವರಲ್ಲಿ ಗಮಕ ಶಿಕ್ಷಣ ಪೂರೈಸಿದರು. ಪ್ರಸಿದ್ಧಸಾಹಿತಿ ಕನ್ನಡಪ್ರಾಧ್ಯಾಪಕರಾದ ಕೆ. ವೆಂಕಟರಾಮಪ್ಪ ಅವರು ಹೇಳುವಂತೆ "ರಾಘು ರಾಘಣ್ಣನಾಗಿ ರಾಘವೇಂದ್ರರಾಯನಾಗಿ ಗಮಕಿಯಾಗಿ ಗಮಕಿಗಳಗುರುವಾಗಿ, ಕವಿ ವಾಗ್ಗೇಯಕಾರನೆನಿಸಿದರು". ಕನ್ನಡ ಸಾಹಿತ್ಯಪರಿಷತ್ತಿನಲ್ಲಿ ೧೯೪೭ರಿಂದ ಗಮಕತರಗತಿಗಳನ್ನು ನಡೆಸಿದರು. ೧೯೮೨ರಲ್ಲಿ ಕರ್ನಾಟಕ ಗಮಕಕಲಾಪರಿಷತ್ತನ್ನು ಸ್ಥಾಪಿಸಿದರು. ರಘುವರ ಅಂಕಿತದಲ್ಲಿ ನೂರಾರು ಕೀರ್ತನೆಗಳನ್ನು ಬರೆದಿದ್ದಾರೆ. ಹಲವಾರು ಕಾವ್ಯಗಳನ್ನು ರಚಿಸಿದ್ದಾರೆ. ಗಮಕಿ, ಕಾವ್ಯಗಾಯನ ಕಲಾ ಸಂಗ್ರಹ, ಗಮಕ ಗೀತೆಗಳು, ಗಮಕ ಪ್ರಚಾರ ಬೋಧಿನಿ ಎಂಬ ಗಮಕ ಕಲೆಯ ಗ್ರಂಥಗಳನ್ನು ರಚಿಸಿದ್ದಾರೆ. ಗಮಕ ಪ್ರವೇಶದಾಯಿನಿ ಸತ್ಯದೇವಚರಿತೆ, ವಾಸುದೇವ ವಿಜಯ, ವೆಂಕಟೇಶ ವಿಜಯ ಶ್ರೀ ರಾಘವೇಂದ್ರ ಗುರುಕೀರ್ತನ ಮಾಲಿಕಾ ಮುಂತಾದ ೧೦೮ಕ್ಕೂ ಮಿಕ್ಕು ಕೃತಿಗಳನ್ನು ರಚಿಸಿದ್ದಾರೆ. ೧೯೭೪ರಲ್ಲಿ ಗಮಕಕಲಾಸೇವೆಗಾಗಿ ಕರ್ನಾಟಕ ಸಾಹಿತ್ಯಅಕಾಡೆಮಿ ಪ್ರಶಸ್ತಿ ಪಡೆದಿದ್ದಾರೆ. ೩೦-೧೧-೧೯೯೯ರಲ್ಲಿ ಬೆಂಗಳೂರಿನಲ್ಲಿ ನಿಧನರಾದರು.

೮೮

ಅಂಜದಿರು ಅಂಜದಿರು ಅಂಜದಿರು ಮನವೇ
ಕಂಜದಳ ಲೋಚನನ ಕೃಪೆ ದೊರಕುವುದೆ ನಿನಗೆ ॥ ಪ ॥

ಮಂಜು ಬಿಸಲಿಗೆ ಮಾಯವಾಗುವಂದದಿ ನಿನ್ನ
ಜಂಜಡದ ದುಃಖಗಳು ತಾವಾಗಿ ತೊಲಗುವುವು ॥ ಅ.ಪ. ॥

ಹಿಡಿದ ಕೆಲಸವ ಬಿಡದೆ ಪೂರೈಸು ನಡುವೆ ಬಹ
ಎಡರ ತೊಡರುಗಳ ನೀ ಲೆಕ್ಕಿಸಲು ಬೇಡ
ನಡೆವಿರೆಡವಿದರೇನು ನಡೆಯದೆ ನಿಲ್ಲುವರೆ
ದೃಢಮನದಿ ಸಾಗು ಮುಂದಕೆ ಹೆಜ್ಜೆಯಿಟ್ಟು ॥ ೧ ॥

ಕಾತರಿಪ ಮನ ಬೇಡ; ಹಾ ತೊರೆಯುವುದು ಬೇಡ
ನೀತಿ ಮಾರ್ಗದಿ ವಿಹಿತವರಿತು ನೀ ಹೋಗು
ಪ್ರೀತಿಯೊಂದಿರೆ ನಿನ್ನ ರೀತಿ ರಂಗಕೆ ಜಯವು
ಸಾತಿಶಯ ಕಾರ್ಯಗಳ ಸಾಧಿಸಲು ಬಹುದು ॥ ೨ ॥

ತಾಳುವಿಕೆಯೇ ತಪವು ನಿಶ್ಚಂಚಲದ ಮನದ
ಶೀಲ ಸದ್ಗುಣಗಳೇ ಇದಕೆ ಪೋಷಕವು
ಬಾಳು ಸುಖಮಯವಾಗೆ ಪೇಳಿದೀ ವಿಷಯಗಳ
ಕೇಳಿ ರಘುವರನಂಘ್ರಿ ಸ್ಮರಿಸಿ ಯಶಗಳಿಸು ॥ ೩ ॥

೮೯

ರಾಗ : ಷಣ್ಮುಖಪ್ರಿಯ **ತಾಳ : ತ್ರಿಶ್ರರೂಪಕ**

ಆರೋಗ್ಯ ಭಾಗ್ಯವನು ನೀಡೆನಗೆ ಕೃಷ್ಣ ॥ ಪ ॥

ಆರೋಗ್ಯವಿಲ್ಲದಾಯುಷ್ಯದಿಂದೇನು ಫಲ । ಅ.ಪ. ॥

ಧರ್ಮಪುಣ್ಯಗಳನಾರ್ಜಿಸೆ ತನುವೆ ಮುಖ್ಯ ಸತ್
ಕರ್ಮ ಸಾಧಿಸಬಹುದು ದೇಹದಿಂದ
ಕರ್ಮ ಸಾಕ್ಷಿಯೆ ಕೇಳು ದೇಹದೊಳು ವ್ಯಾಧಿಯಿರೆ
ಧರ್ಮ ಕಾರ್ಯಗಳ ಸಾಧಿಸಲಪ್ಪುದೇ ದೇವ? ॥ ೧ ॥

ರೋಗರುಜಿನದ ಬಾಧೆಯಿಲ್ಲದಿರೆ ದೇಹದಲಿ
ಜಾಗೃತಿಯು ತನುಬಲವು ಹೊಂದಿಕೊಂಡು

ಬೇಗದಲಿ ವಿವಿಧಕರ್ಮವ ಮಾಡಿ ಮುಗಿಸುತಲಿ
ಭೋಗಭಾಗ್ಯಗಳ ಪುಣ್ಯಗಳನಾರ್ಜಿಸಬಹುದು ॥ ೨ ॥

ಜಡಮತಿಯು ನಾನಾಗಿ ಕಾಲವ ಕಳೆಯಲೊಲ್ಲೆ
ಜಡಜಭವಪಿತ ನಿನ್ನ ಅಡಿಯ ಬಿಡಲೊಲ್ಲೆ
ಜಡ ದೇಹದಾರುಜೆಯ ಪರಿಹರಿಸುತೆನ್ನ ಕೈ
ಪಿಡಿದು ರಕ್ಷಿಸಿ ಸೇವೆಸ್ವೀಕರಿಸೋ ರಘುವರನೆ ॥ ೩ ॥

೯೦

ರಾಗ : ಶಹನ(ಸಹನ) ತಾಳ : ರೂಪಕ

ಇನಿತಾದರು ಕರುಣಬಾರದೇಎನ್ನಮೇಲೆ
ಮುನಿದೆಯೇನೊ ಮನಸಿಜಪಿತ — ಅನುನಯದಲಿ ರಕ್ಷಿಸೆನ್ನ ॥ ಪ ॥

ಅನುದಿನದಲಿ ನಿನ್ನ ಪಾದ-ವನಜಗಳನು ನಂಬಿನುತಿಸೆ
ಜನನ ಮರಣ ಮಡುವಿನೊಳಗೆ
ತನುವು ಸಿಲುಕಿ ಸುದತಿ ತನುಜ
ಘನತರ ಜಲಚರ ಬಾಧೆಯನನುಭವಿಪನ ರಕ್ಷಿಸದಿಹೆ ॥ ಅ.ಪ. ॥

ಹಿತವೆಂದೆಣಿಸಿದೆಯೊ ಭವವನತಿಶಯದಲಿ ಸುಖಿಸಲೆಂದು
ಮತಿಹೀನನ ಮುಂದುಗೆಡಿಸಿ-ಗತಿಯ ತೋರದಿರ್ದಪರೇ
ಸತತ ನಿನ್ನ ಧ್ಯಾನವೆ ಸತ್ಪಥವು ಮುಕುತಿಗೆಂದು ನಂಬಿ
ಸತಿಸುತ ಪಿತ ಹಿತಬಾಂಧವ
ತತಿಯನು ಲೆಕ್ಕಿಸದಲೆ ವಸು
ಮತಿಮೋಹವನಿಡದೆ ಜಗತ್ಪತಿ ರಘುವರ ನಿನ್ನ ನೆನೆವೆ ॥ ೧ ॥

೯೧

ರಾಗ : ಶುದ್ಧ ಸಾವೇರಿ ತಾಳ : ತ್ರಿಶ್ರರೂಪಕ

ಎಚ್ಚರಿಕೆ ಎಚ್ಚರಿಕೆ ಎಚ್ಚರಿಕೆ ಮನವೇ
ಚುಚ್ಚಿದರು ಈ ಮಾತು ಬಿಚ್ಚಿ ನುಡಿವೆನು ನಿನಗೆ ॥ ಪ ॥

ಬೆಚ್ಚದಿರು ಬೆದರದಿರು ಸ್ವಚ್ಛ ಮಾನಸನಾಗು
ಉಚ್ಚ ನೀಚವನರಿತು ಹುಚ್ಚನೆನಿಸದೆ ಬಾಳು ॥ ಅ.ಪ. ॥

ಅಸ್ವತಂತ್ರನು ನೀನು ವಿನಯಪರನಾಗು ಪರ
ಮ ಸ್ವಾಮಿಯೊಬ್ಬನಿಹನೆಂದು ನಂಬು
ನಶ್ವರದ ದೇಹಕ್ಕೆ ಗರ್ವಿಸುತ ಮೆರೆಯದಿರು
ಶಾಶ್ವತದ ಸದ್ವಿದ್ಯೆ ಸಾಧಿಸುತ ಸುಖಿಸು ॥ ೧ ॥

ಪರರ ಪೀಡಿಸಬೇಡ ಪರರ ವಂಚಿಸಬೇಡ
ಪರರು ನಿನ್ನವರೆಂದು ತಿಳಿಯುತುಪಕರಿಸು
ಪರಮ ತವ ದೂರದಿರು ಪರಹಿತವ ಮರೆಯದಿರು
ಪರರಿಗೆನ್ನಯ ಬಾಳಿದೆಂಬ ತಿಳಿವಿರಲಿ ॥ ೨ ॥

ಗುಣಕೆ ಮೆಚ್ಚುವನಾಗು ದೋಷಗಳನೊಪ್ಪದಿರು
ಹಣಕೆ ಬಾಯ್ ಬಿಡಬೇಡ ಗುಣಕೆ ಹಣಮಿಗಿಲೆ?
ತನುಮನ ಧನ ಪ್ರಾಣವೆಂಬಿವುಗಳನು ರಘುವ
ರನ ಸೇವೆ ನಾಡು ನುಡಿ ಸೇವೆಗಾಗಿರಿಸು ॥ ೩ ॥

೯೨

ರಾಗ : ಮೋಹನ ತಾಳ : ಝುಂಪೆ

ತಲ್ಲಣಗೊಳಲೇಕೆ ತಪಿಸಿ–ಭವ
ದಲ್ಲಿ ಬಂದುದಕಾಗಿ ಶಪಿಸಿ ॥ ಪ ॥

ಎಲ್ಲೆಲ್ಲಿ ನೋಡಲು ಸುಖದುಃಖಗಳ ಮಿಶ್ರ
ವಿಲ್ಲದಿಲ್ಲವು ಧರೆ ಸ್ವರ್ಗವಿದಲ್ಲವು ॥ ಅ.ಪ. ॥

ಕಷ್ಟಗಳೇನೇನೆ ಬರಲಿ – ನಿನ್ನ
ದೃಷ್ಟಿ ಸನ್ಮಾರ್ಗದೊಳಿರಲಿ
ನಷ್ಟವು ನಿನಗಿನ್ನೆಳ್ಳಷ್ಟಾದರಾಗದು
ಇಷ್ಟಾರ್ಥ ಸಿದ್ಧಿಸುವುದು ದೈವಬಲದಿಂದ ॥ ೧ ॥

ಹಿಡಿದ ಗುರಿಯ ತಪ್ಪಬೇಡ – ಚಿಂತೆ
ಪಡುತ ಕೊರಗುತಿರಬೇಡ
ನಡೆನುಡಿಯಲಿ ಶುದ್ಧನಾಗಿ ನೀ ನಡೆಯೆ ನಿ
ನ್ನೆಡೆಗೆ ಬರ್ಪುದು ಸೌಖ್ಯ ಹುಡುಕುತ ತಾನಾಗಿ ॥ ೨ ॥

ಧೀರನುದಾರನು ಎನಿಸು ನಿನ್ನ
ಕೋರುವವರ ಹಿತವೆಣಿಸು
ಕಾರಣ ನೀನಲ್ಲ ಕಾರ್ಯಗೈವವ ನೀನು
ಸಾರ ಫಲವನೀಯೆ ಶ್ರೀರಮಾವರನಿರ್ಪ ॥ ೩ ॥

ಸಕಲ ಸಂಹಿತೆಸಾರ ಪ್ರೇಮ ಅದು
ನಿಖಿಲ ಜೀವರ ಸೃಷ್ಟಿನೇಮ
ಅಕಳಂಕಮನದಲಿ ತರತಮಭಾವದಿ
ವಿಕಸನಗೊಳ್ಳುತ ಭಕ್ತಿಯೆನಿಸುವುದು ॥ ೪ ॥

ನಡೆನುಡಿಯಲಿ ಪ್ರೇಮವಿರಲಿ ನಿನ್ನ
ಒಡನಾಡಿಗರ ಕ್ಷೇಮ ಸಲಲಿ
ಒಡೆಯ ಶ್ರೀ ರಘುವರ ನಡಿಗಳ ನಂಬಿರೆ
ಕೆಡುವ ಕಾರಣವಿಲ್ಲ ದೃಢಚಿತ್ತದಿಂದಿರು ॥ ೫ ॥

೯೩

ರಾಗ : ಹಿಂದೋಳ ತಾಳ : ತ್ರಿಶ್ರರೂಪಕ

ನರನಾಗಿ ಹುಟ್ಟಿ ವಾನರನಾಗುವುದಕ್ಕಿಂತ
ಮರನಾಗಿ ಹುಟ್ಟುವುದೆ ಸುಕೃತ ಕಾಣೋ ॥ ಪ ॥

ನರನಾದ ಮೇಲೆ ಹರಿನಾಮ ಜಿಹ್ವೆಯ ಮೇಲೆ
ಬರಬೇಕು ಬರದೆ ಪಾಮರನಾದೊಡೇನು ಫಲ ॥ ಅ.ಪ. ॥

ನೆರಳನೀಯುವ ಪಕ್ಷಸಂಕುಲಕೆ ನೆಲೆಯೀವ
ಪರಿಪರಿಯ ಹೂಕಾಯಿ ಹಣ್ಣು ಕೊಡುವ

ಪರರಿಗಾಗಿಯೇ ನನ್ನ ಜೀವನವಿದೆಂದೆನುವ
ಪರಮ ನಿಸ್ವಾರ್ಥತ್ಯಾಗದ ಬಾಳಿದಲ್ಲವೇ ॥ ೧ ॥

ಮರನ ಮಾದರಿಯನನುಸರಿಸಿ ಮನುಜರು ತಾವು
ಪರರಿಗುಪಕಾರವನು ಮಾಡುವುದ ಕಲಿತು
ಪರರ ದೂಷಿಸದೆ ದ್ವೇಷಿಸದೆ ಪರಹಿತಕಾಗಿ
ನರಜನ್ಮ ಸಾಫಲ್ಯ ಸಾಧಿಪುದು ಲೇಸು ॥ ೨ ॥

ಹುಟ್ಟಿನಿಂದಲಿ ಮರಕೆ ಬಂದ ಗುಣವೆಂದು ಗೊಣ
ಗುಟ್ಟದೆಂದಿಗು ಮಂದಮಾನವರ ತೆರದಿ
ಹುಟ್ಟಿದರೆ ನರನಾಗಿ ನೆಟ್ಟಗಿರಬೇಕು ಆ
ಸೃಷ್ಟೀಶ ರಘುವರನ ಕಟ್ಟಲೆಯ ಪಾಲಿಸುತ ॥ ೩ ॥

೯೪

ರಾಗ : ಹಿಂದೋಳ ತಾಳ : ತ್ರಿಶ್ರರೂಪಕ

ಬಾರದಯ್ಯ ನಿನ್ನ ನೆನೆಯಲಿಕೆ ॥ ಪ ॥

ಊರ ಬಾಯ್‌ಮುಚ್ಚಿಸಲು ಚೆನ್ನಾಗಿ ಬಲ್ಲೆ ॥ ಅ.ಪ. ॥

ಯಾರ್‍ಯಾರನೋ ಕೂಗಿ ಕರೆವೆ ಹೆಸರ್ ಹಿಡಿದು
ಯಾರ್‍ಯಾರನೋ ಬೇಡುವೆನೊ ಹಲ್ಲುಕಿರಿದು
ಯಾರ್‍ಯಾರನೋ ನಂಬಿ ಕಟ್ಟಿಹೆವೊ ಹಿರಿದು
ತೋರದಂತಾಯ್ತೆನ್ನ ಮತಿ ನಿನ್ನ ಮರೆದು ॥ ೧ ॥

ಹಾರಿತಾಯುಷ್ಯ ಮಿತಿಮೀರಿತೆನ್ನವಿವೇಕ
ಜಾರಿಹೋಯಿತು ಎನ್ನ ಜೀವಮಾನವಿದು
ಘೋರ ಸಂಸಾರಸಾಗರದ ಮಡುವಿಗೆ ಬಿದ್ದು
ದಾರಿಗೆಟ್ಟಿಹೆ ದೇವ ಇಷ್ಟಾದರೂ ನನಗೆ ॥ ೨ ॥

ಹುಟ್ಟಿದ್ದು ಎಲ್ಲೋ ಬೆಳೆದಿದ್ದು ಇನ್ನೆಲ್ಲೊ ಬಲು
ಕೆಟ್ಟ ಬುದ್ಧಿಯೆ ಬಂದು ಬಾಳು ಮುಗಿಯುತಿದೆ

ಕಟ್ಟಕಡೆಗೀಗೇನೋ ದೃಷ್ಟಿ ನಿನ್ನೊಳು ಬಾಯಿ
ಬಿಟ್ಟು ಕೂಗುತ್ತಿರುವೆ ರಕ್ಷಿಸೋ ರಘುವರನೆ ॥ ೩ ॥

೯೫

ರಾಗ : ಮಾಂಡ್ ತಾಳ : ಝಂಪೆ

ಯಾರಿಗೂ ಕೈಯೊಡ್ಡಬೇಡವೊ –ನಿನ
ಗಾರ ಸಹಾಯವು ಬೇಡವೊ ಮರುಳೆ ॥ ಪ ॥

ಯಾರು ಯಾರಿಗೋ ನೀನು ಅಂಗಲಾಚುವುದೇಕೋ
ಧೀರನಾಗಿ ಬಾಳೊ ನಿರ್ಮಲಮನದಿಂದ ॥ ಅ.ಪ ॥

ತಮ್ಮ ಕಾರ್ಯವಾಗಲೋಸುಗ
ಹಲವರು ಬೆನ್ನುಹತ್ತಿ ನಿನ್ನ ಬೇಡುವರೊ
ತಮ್ಮ ಕೆಲಸವಾದ ಕ್ಷಣದಿಂದ
ನಿನ್ನನುಪೇಕ್ಷೆಯಿಂದ ಕಡೆಗಾಣಿಸುವರೊ ॥ ೧ ॥

ನಡುಬಗ್ಗಿ ದೈನ್ಯತೆಯಿಂದಲಿತರರ
ಕೈಕಾಲುಕಟ್ಟಿ ಹೋಗಲು ಬೇಡವೊ
ಬಡವರೊಡೆಯನಲ್ಲಿ ವರದಿಯೊಪ್ಪಿಸಿ
ಕಷ್ಟಬಿಡಿಸೆಂದು ಪ್ರಾರ್ಥಿಸಲೊ ಮನುಜ ॥ ೨ ॥

ಯಾರಿಗೊರಲಿದರೇನು ಫಲವೊ
ನಿನ್ನಯ ಕಷ್ಟ ನೀನೇ ಸಹಿಸಬೇಕೆಲೊ ಜೀವ
ಯಾರನೋ ನಂಬಿ ನೀ ದಾರಿ
ತಪ್ಪಲು ಬೇಡ ಶ್ರೀಶ ರಘುವರನ ನೆರೆನಂಬೊ ಮರುಳೆ ॥ ೩ ॥

೯೬

ರಾಗ : ಸುರಟಿ ತಾಳ : ರೂಪಕ

ರಾಮ ಸುಗುಣಧಾಮ ಪೊರೆಯೊ ಪ್ರೇಮದೊಳೆನ್ನ
ಕಾಮಿತಂಗಳಿತ್ತು ನಿನ್ನ ನಾಮಸ್ಮರಣೆ ಮಾಡುವಂತೆ ॥ ಪ ॥

ಭೂಮಿಹೇಮ ಕಾಮಿನಿಯರ ಕಾಮದೊಳೇನೊ – ಫಲವು
ಭೂಮಸುತಾರಮಣ ನಿನ್ನ ನಾಮವೆ ಗತಿ – ರಘು ॥ ಅ.ಪ. ॥

ಅನ್ಯರ ನಾ ನೆನೆಯಲೊಲ್ಲೆ
ನಿನ್ನನೇ ನಂಬಿದೆ ನೀ ಬಲ್ಲೆ
ಮನ್ನಿಸೆನ್ನ ಅವಗುಣಗಳ
ಪನ್ನಗಶಯನ ॥ ೧ ॥

ಸನ್ನುತಾಂಗ ರಘುವರ ನಾ
ನಿನ್ನ ಭಕುತನೋ ನಿಜದಿ
ನಿನ್ನಧೀನನು ಪೊರೆವುದು
ನಿನ್ನ ಭಾರವೋ–ಶ್ರೀ ॥ ೨ ॥

೯೭

ರಾಗ : ಮಾಂಡ್ ತಾಳ : ರೂಪಕ

ಸ್ವಾನುಭವ ಜ್ಞಾನವಿರದ ಮಾನವರೀ ಲೋಕದೊಳಗೆ
ಏನೇನನೋ ಮಾಡಹೋಗಿ ಕೋಣವಾದರು ॥ ಪ ॥

ತಾನು ಕೆಡುವುದರಿಲಿ ಮತ್ತೆ ಪರರ ದಿಕ್ಕುಗೆಡಿಸುತಿಹರು
ಜೀವನದಲಿ ನೋವು ಹೆಚ್ಚೆ ಜಗವೆ ಕೆಟ್ಟಿತು ॥ ಅ.ಪ. ॥

ಮಣ್ಣುಮುಕ್ಕುತ್ತಿರುವ ಇವರ ಕಣ್ಣುಬಿಡಿಸುವವರ ಕಾಣೆ
ಹೊನ್ನು ಹೆಣ್ಣು ಮಣ್ಣಿನಾಸೆ ಪ್ರಬಲವಾಯಿತು ॥ ೧ ॥

ಲೋಕಹಿತವ ಬೋಧಿಸುವರನೇಕ ಬುದ್ಧಿವಾದವೆಲ್ಲ
ಸೋಕದಿವರ ಮತಿಗಳಿಗೆ ವಿವೇಕ ನಶಿಸಿತು ॥ ೨ ॥

ಮಂದ ಜನರನಿವರನೇಕ ಕುಂದೆಣಿಸದೆ ಸಲಹೋ ಕೃಷ್ಣ
ಇಂದಿರೇಶ ಶ್ರೀ ರಘುವರ ಪತಿತಪಾವನ ॥ ೩ ॥

೯೮

ರಾಗ : ಮುಖಾರಿ ತಾಳ : ತ್ರಿಶ್ರರೂಪಕ

ಸೇವಿಸುವ ಮನವಿತ್ತು ಸೇವೆ ಕೈಗೊಳ್ಳದಲೆ
ನೋವಪಡಿಸುವುದು ಸರಿಯೇ-ದೊರೆಯೇ ॥ ಪ ॥

ಈ ವಿಧದ ನಡತೆಯಿಂದಾವಲಾಭವೊ ನಿನಗೆ
ದೇವಕೀತನಯ – ದೀನಾವನ ನತಜನಪಾಲ ॥ ಅ.ಪ. ॥

ಶಿಷ್ಟಜನರುಗಳ ಸದಭೀಷ್ಟಗಳ ಸಲಿಸುತಲಿ
ಕಷ್ಟಪಡಿಸದಲವರಿಗಿಷ್ಟವಾಗಿ
ಇಷ್ಟವಾಗಿಹ ಸೇವೆಗಳನವರ ಮುಖದಿಂದ
ಸೃಷ್ಟೀಶ ಸ್ವೀಕರಿಸಿ ಸಂತೋಷಪಡಿಸದಲೆ ॥ ೧ ॥

ಪರಿಪರಿಯ ಕ್ಲೇಶಗಳ ರಘುವರನೆ ಪರಿಹರಿಸೊ
ಕೊರಗುವೆನ್ನಯ ಮನಕೆ ಶಾಂತಿ ಸಲಿಸೊ
ಮೊರೆ ಹೊಕ್ಕನಾಯುರಾರೋಗ್ಯ ಸೌಭಾಗ್ಯಗಳ
ಕರುಣಿಸುತಲೆನ್ನಿಂದ ಸೇವೆಯನು ಬಯಸೊ ॥ ೨ ॥

❖❖

ಪ್ರೊ. ಆರ್.ಎನ್.ದೊರೆಸ್ವಾಮಿ (೧೯೧೬ ಜನನ)
ಲಕ್ಷ್ಮೀರಮಣ ಅಂಕಿತ

ಸಂಗೀತಗಾರರ ನೆಲೆಯಾದ ಹಾಸನದ ರುದ್ರಪಟ್ಟಣದಲ್ಲಿ ನಾಲಾ ವೆಂಕಟರಮಣಯ್ಯ - ಸಾವಿತ್ರಮ್ಮ ದಂಪತಿಗಳಿಗೆ ೧೨-೧೨-೧೯೧೬ರಲ್ಲಿ ಸುಪುತ್ರರಾಗಿ ಆರ್.ಎನ್.ದೊರೆಸ್ವಾಮಿ ಅವರು ಜನಿಸಿದರು. ಬಸವಾಪಟ್ಟಣದಲ್ಲಿ ಪ್ರಾಥಮಿಕಶಾಲಾ ಶಿಕ್ಷಣವನ್ನು ೧೯೨೮ರಲ್ಲಿ ಹೊಳೆನರಸೀಪುರದಲ್ಲಿ ಪ್ರೌಢಶಾಲಾ ಶಿಕ್ಷಣವನ್ನು ಮುಗಿಸಿದರು.೧೯೫೨ರಲ್ಲಿ ಮೈಸೂರು ಮಹಾರಾಣಿ ಕಾಲೇಜಿನಲ್ಲಿ ವೀಣಾ ಅಧ್ಯಾಪಕರಾಗಿ ೧೧ ವರ್ಷ (೧೯೬೩ವರೆಗೆ) ಸೇವೆಸಲ್ಲಿಸಿದರು. ಮೈಸೂರಿನಲ್ಲಿ ೧೯೬೫ರಲ್ಲಿ ಲಲಿತಕಲಾ ಕಾಲೇಜು ಪ್ರಾರಂಭವಾದ ಮೇಲೆ ಅಲ್ಲಿ ಅಧ್ಯಾಪಕರಾಗಿ(೧೯೭೭ರವರೆಗೆ) ಸೇವೆ ಸಲ್ಲಿಸಿದರು. ರಾಜ್ಯಮಟ್ಟದ ಹತ್ತಾರು ಪ್ರಶಸ್ತಿಗಳು ಶ್ರೀಯುತರಿಗೆ ಲಭಿಸಿವೆ. ರಾಜ್ಯಸಂಗೀತನೃತ್ಯ ಅಕಾಡೆಮಿ ಪ್ರಶಸ್ತಿ (೧೯೮೩). ಕರ್ನಾಟಕ ಕಲಾತಿಲಕ, ಗಾನರತ್ನಾಕರ, ವೈಣಿಕ ಕಲ್ಪತರು, ಸಂಗೀತ ಕಲಾರತ್ನ ಮುಂತಾದ ಬಿರುದುಗಳನ್ನು ನಾನಾ ಸಂಸ್ಥೆಗಳು ನೀಡಿ ಗೌರವಿಸಿವೆ. ೧೯೮೫ರಲ್ಲಿ ಮೈಸೂರು ಸಂಗೀತ ಕಲಾಭಿವರ್ಧಿನಿ ನಡೆಸಿದ ವಾಸುದೇವಾಚಾರ್ಯ ಸ್ಮಾರಕ ೩ನೇ ಸಂಗೀತ ಸಮ್ಮೇಳನದ ಅಧ್ಯಕ್ಷತೆ, ೧೯೮೭ರಲ್ಲಿ ಬೆಂಗಳೂರು ಗಾಯನ ಸಮಾಜದ ೧೯ನೇ ಸಂಗೀತಸಮ್ಮೇಳನದ ಅಧ್ಯಕ್ಷತೆ ಇವರದಾಗಿತ್ತು. ಇವರ ವೀಣಾಪಾಂಡಿತ್ಯ ಗಾಯನಸೇವೆ, ಶ್ರೇಷ್ಠ ಅಧ್ಯಾಪನಸೇವೆಗಳನ್ನು ಗುರುತಿಸಿ ಮಹತೀ ಎಂಬ ಗೌರವಗ್ರಂಥವನ್ನು ಮೈಸೂರಿನಲ್ಲಿ ಅರ್ಪಿಸಲಾಯಿತು. ಕುವೆಂಪು ಅವರು ಕೃತಿಗಳನ್ನು ರಚಿಸಬೇಕೆಂದು ಅಪೇಕ್ಷಿಸಿದರಿಂದ ಸ್ಫೂರ್ತಿಗೊಂಡು ಕೀರ್ತನೆಗಳನ್ನು ರಚಿಸತೊಡಗಿದರು. ಲಕ್ಷ್ಮೀರಮಣ ಕೃತಿಮಂಜರಿ ಎಂಬ ೩೭ ಕೃತಿಗಳನ್ನು ಸಂಸ್ಕೃತ, ಕನ್ನಡ ಹಿಂದಿ ತೆಲುಗುಗಳಲ್ಲಿ ರಚಿಸಿದ್ದಾರೆ. ಇವುಗಳಲ್ಲಿ ೧೨ ಕನ್ನಡ ಕೀರ್ತನೆಗಳಾಗಿವೆ. ಇವುಗಳನ್ನು ವಾಗ್ಗೇಯಕಾರರಾಗಿ ರಚಿಸಿದ್ದಾರೆ. ವೀಣೆಯಲ್ಲಿ ನುಡಿಸಿದ್ದಾರೆ. ಹಾಡಿದ್ದಾರೆ. ಸ್ವರಪ್ರಸ್ತಾರ ಹಾಕಿ ಪ್ರಕಟಿಸಿದ್ದಾರೆ. ವೈಣಿಕಪ್ರವೀಣ ಆಸ್ಥಾನವಿದ್ವಾಂಸ ವಿ.ವೆಂಕಟಗಿರಿಯಪ್ಪನವರ ಶಿಷ್ಯರಾದ ಇವರಿಗೆ ಅನೇಕ ಪ್ರಸಿದ್ಧ ವೈಣಿಕ ಶಿಷ್ಯರಿದ್ದಾರೆ.

೯೯

ರಾಗ : ಸಾಮ ತಾಳ : ರೂಪಕ

ಧನ್ಯನಾದೆನೋ ಶ್ರೀ ಹರಿಯ ಸ್ಮರಣೆ – ನಿರುತವಿರಲು ॥ ಪ ॥

ಏನಬೇಡಲೋ ನಾನು – ಎಲ್ಲವನು ಕೊಡುವೆ ನೀನು
ನಿನ್ನ ನಂಬಿಹ – ಎನ್ನ ಕಾಯೋ – ಹರಿಯೇ ನೀ ಬಿಡಲು ಸಲ್ಲ ॥ ಅ.ಪ. ॥

ಜ್ಞಾನಯೋಗ – ಜಪತಪಾದಿ –ಗಳನೊಂದನರಿಯೆ ನಾನು
ಧ್ಯಾನ ಮಾತ್ರ–ದಿಂದ ನಿನ್ನ ಪೂಜಿಸುತಿಹೆನಯ್ಯ ಹರಿಯೆ
ಗಾನಲೋಲ–ಹರಿಸಾರ್ವಭೌಮ ನಿನ್ನ ಭಕುತಿ ಎನಗೆ
ಸಾನುರಾಗ–ದಿಂದ ನೀಡೋ – ಘನ್ನಮಹಿಮ – ಲಕುಮಿರಮಣ

೧೦೦

ರಾಗ : ರೇವತಿ ತಾಳ : ಖಂಡಚಾಪು

ಸಲಹಯ್ಯ ಸಲಹಯ್ಯ ನೀ ಎನ್ನ ತಂದೆ
ಎನ್ನ ಕಷ್ಟಂಗಳನು ಪರಿಹರಿಸು ಇಂದೇ ॥ ಪ ॥

ಎಲ್ಲಿ ಪೋದರು ಅಲ್ಲಿ ನಿನ್ನ ಧ್ಯಾನವೆ ಇರಲಿ
ಎಲ್ಲಿ ನೋಡಿದರಲ್ಲಿ ನಿನ್ನ ದರುಶನವಿರಲಿ ॥ ಅ.ಪ. ॥

ಇಲ್ಲದಿಹ ಸಿರಿತನವ ಬಯಸೆ ನಾನೆಂದು
ಎಲ್ಲವನು ಕರುಣಿಸುವ ದೊರೆಯು ನೀನೆಂದು
ಬಲ್ಲೆನಯ್ಯ ಲಕುಮಿರಮಣ ನಿನಗೆಂದೆಂದು
ಸಲ್ಲಿಸುವೆ ನಮನಗಳ ಕೈಮುಗಿದು ಇಂದು ॥ ೧ ॥

❖❖

ಶಿರಪುರ ಭೀಮೇಶ – ೧೯೧೬ – ೧೯೯೪
(ತಲೇಖಾನ ಭೀಮಸೇನರಾವ ಕುಲಕರ್ಣಿ)

ಸಂಸಾರದೊಳಗಿದ್ದೇ, ಪಾರಮಾರ್ಥಸಾಧನೆಯ ಮಾಡುವದು ದಾಸಮಾರ್ಗದ ವಿಶೇಷ. ಈ ಕಾರಣದಿಂದಾಗಿ ಆಧುನಿಕಕಾಲದಲ್ಲಿ ಅನೇಕದಾಸರು, ಬದುಕಿನೊಂದಿಗೆ ಭಕ್ತಿ, ಭಗವಂತನನ್ನು ಒಪ್ಪಿಕೊಂಡವರು, ಅಪ್ಪಿಕೊಂಡರು, ಅಂತಹ ಹಲವರಲ್ಲಿ ರಾಯಚೂರು ಜಿಲ್ಲೆ, ಲಿಂಗಸೂಗೂರು ತಾಲೂಕಿನ ದಿ. ಭೀಮದೇವರಾವ ಕುಲಕರ್ಣಿಯವರ ದಾಸಸಾಹಿತ್ಯ ಕೃಷಿ ಗಮನಿಸುವಂತಹದು.

ರಾಯಚೂರು ಜಿಲ್ಲೆ ಲಿಂಗಸೂಗೂರು ತಾಲೂಕಾ ಹರಿದಾಸರ ತವರುಮನೆ. ದಾಸಸಾಹಿತ್ಯ ಸಂರಕ್ಷಕ ಗೊರೇಬಾಳ ಹನುಮಂತರಾಯರು. ಶ್ರೀ ವರದೇಂದ್ರರು, ಶ್ರೀ ಪ್ರಾಣೇಶದಾಸರಂತಹ ಹತ್ತಾರು ದಾಸರ ಪುಣ್ಯ ನೆಲ. ಇಂತಹ ಪರಿಸರದಲ್ಲಿ ೧೯೧೬ರಲ್ಲಿ ತಲೇಖಾನ ಗ್ರಾಮದಲ್ಲಿ ಜನಿಸಿದ ಭೀಮಸೇನರಾವ ಓದಿದ್ದು ಏಳನೆಯ ತರಗತಿವರೆಗೆ ಆಗಿನ ಆಡಳಿತದ ಕಾರಣದಿಂದಾಗಿ ಉರ್ದು ಮಾಧ್ಯಮದಲ್ಲಿ ಓದಿದರು. ಕನ್ನಡದ ಬಗ್ಗೆ ಅಪಾರ ಆಸಕ್ತಿ. ಮನೆಯಲ್ಲಿ ಅವರಣ್ಣ, ತಾತನವರು ಓದುತ್ತಿದ್ದ ಕುಮಾರವ್ಯಾಸ ಭಾರತ, ಜೈಮಿನಿ ಭಾರತಗಳ ಪ್ರಭಾವದಿಂದ ಸಾಹಿತ್ಯಾಸಕ್ತಿ ಮೂಡಿತು. ಬದುಕಿಗಾಗಿ ಶಿಕ್ಷಕವೃತ್ತಿ. ೭ರೂಪಾಯಿ ಸಂಬಳ ೭ಜನ ಮಕ್ಕಳು. ಆರಕ್ಕೇರದ ಮೂರಕ್ಕಿಳಿಯದ ಬದುಕು. ಭೀಮಸೇನರಾವ ಕಾಯಕಜೀವಿ. ಸದಾ ಕ್ರಿಯಾಶೀಲರು. ಸಾಹಿತ್ಯ, ಜ್ಯೋತಿಷ, ಆಯುರ್ವೇದ ವಿಷಯಗಳಲ್ಲಿ ನಿಪುಣರು. ವೇದಾಂತ, ತತ್ವಜ್ಞಾನದ ಕಡೆಗೆ ಒಲವು. ಸಮಾಜಮುಖಿ ಚಿಂತನೆ, ಇತರರಿಗೆ ತಮ್ಮಿಂದಾದ ಸಹಾಯಮಾಡುವ ಸ್ವಭಾವ. ಹಣದ ದುರಾಸೆ ಇಲ್ಲದ ಬದುಕು. ಮನೆಯಲ್ಲಿ ದೊಡ್ಡಗ್ರಂಥಾಲಯ, ಸಾವಿರಾರು ಪುಸ್ತಕಗಳು, ಗಳಗನಾಥ, ಅನಕೃ, ಇಂದಿರಾ, ಬೀಚಿ ಭಗವದ್ಗೀತೆ, ಪುರಾಣಗಳು, ಕಾವ್ಯ, ಆಯುರ್ವೇದ, ಜ್ಯೋತಿಷ್ಯ, ಧಾರ್ಮಿಕ ಗ್ರಂಥಗಳು, ಭಜನೆ, ಪುರಾಣ ಹೇಳುವಲ್ಲಿ ಹೆಚ್ಚಿನ ಆಸಕ್ತಿ. ಶಿಕ್ಷಕರಾಗಿ ಶಿಕ್ಷಣದ ಮಹತ್ವದ ಅರಿತಿದ್ದ ಕಾರಣ ಈರ್ವರು ಹೆಣ್ಣುಮಕ್ಕಳು ಸೇರಿ ಏಳುಮಕ್ಕಳಿಗೆ ಶಿಕ್ಷಣದ ಅವಕಾಶ ಒದಗಿಸಿದ್ದು ಇವರ ಶಿಕ್ಷಣಪ್ರೇಮಕ್ಕೆ ಸಾಕ್ಷಿ. ದಾಸಸಾಹಿತ್ಯ

ವಿದ್ವಾಂಸರಾದ ಡಾ. ಸ್ವಾಮಿರಾವ ಕುಲಕರ್ಣಿಯವರು ಇವರ ಪುತ್ರರಲ್ಲಿ ಒಬ್ಬರು. ೧೯೯೪ರಲ್ಲಿ ಕಲಬುರ್ಗಿಯಲ್ಲಿ ಅಗಲಿದರು.

ಸಾಹಿತ್ಯ ಸೇವೆ:೧೯೬೦ರಿಂದಲೇ ಬರವಣಿಗೆಯನ್ನು ಆರಂಭಿಸಿದ ಭೀಮಸೇನರಾವ ಅವರು ೧೯೭೦ರಲ್ಲಿ ಶಿರಪುರ ಭೀಮೇಶ ಅಂಕಿತದಿಂದ ದಾಸರಕೀರ್ತನೆಗಳನ್ನು ರಚಿಸಿದ್ದಾರೆ. ಇವರ ಭಜನಾಸಂಕಲನ. ತಿಳಿದಿತ್ತೆಂದರೆ ತಿಳಿಸಿ ಹೇಳಣ್ಣ – ಕೃತಿಯನ್ನು ೧೯೭೭ರಲ್ಲಿ ಕಲಬುರಗಿಯಲ್ಲಿ ಡಾ. ಶಿವರಾಮ ಕಾರಂತರು ಬಿಡುಗಡೆ ಮಾಡಿದ್ದು ವಿಶೇಷ. ಈವರೆಗೆ ಪ್ರಕಟವಾಗಿರುವ ಕೃತಿಗಳು ೧) ಶ್ರೀ ಸತ್ಯನಾರಾಯಣ ಭರ್ಜ ಶತಾಕ್ಷರ ೨) ತಿಳಿದಿತ್ತೆಂದರೆ ತಿಳಿಸಿ ಹೇಳಣ್ಣ (ಕೀರ್ತನೆಗಳು) ೩) ಚಹಾ ಪುರಾಣ (ಭಾಮಿನೀ ಷಟ್ಪದಿ) ೧೦೮ ನುಡಿಗಳ ಕಾವ್ಯ ೪) ಹನುಮಂತ ಶತಾಕ್ಷರ (ಇದು ಧ್ವನಿಸುರುಳಿಯಾಗಿದೆ.

೧೦೧

ರಾಗ : ಸಾರಂಗ ತಾಳ : ರಾದರಾ

ಕೆಟ್ಟೇ ನಾನು ಕೆಟ್ಟೇ ।
ಕೆಟ್ಟ ಹಣವೇ ನಿನ್ನ ಮನ ಮುಟ್ಟಿ ಪ್ರೀತಿಸಿ ॥ ಪ ॥

ಕೆಟ್ಟೇ ನಾನು ಕೆಟ್ಟೇ ॥ಅ.ಪ. ॥

ಮೆರೆವ ಸಂಪತ್ತಿನ ಧುರದಿ ಮೈ ಮರೆಯುತ ।
ಮರುಳರ ಸಂಗದಿ । ದುರುಳತನವ ಮಾಡಿ ಕೆಟ್ಟೇ ॥ ೧ ॥

ದಾನಧರ್ಮವು ಯನ್ನ । ಧ್ಯಾನಕ್ಕೆ ಬರಲಿಲ್ಲ ।
ಮಾನಹೀನರ ಸಂಗ । ಧ್ಯಾನದಿ ಮುಳುಗುತ । ಕೆಟ್ಟೇ ॥ ೨ ॥

ಬಡವರ ಸೊತ್ತನು । ಬಿಡದೆ ನಾ ನುಂಗಿದೆ ।
ಕಡುಲೋಭಿತನದಿಂದ । ಪಡೆದು ಬಡ್ಡಿಗೆ ಬಡ್ಡಿ । ಕೆಟ್ಟೇ ॥ ೩ ॥

ಪರಸತಿಯರ ತಂದೂ । ಪರಿಪರಿ ಭೋಗಿಸಿ ।
ನಿರುತ ವಿಷಯಸುಖ । ನರಕದೊಳಗೆ ಬಿದ್ದು । ಕೆಟ್ಟೇ ॥ ೪ ॥

ತಂದೆತಾಯಂದಿರ । ಹಂದಿ ಎಂದು ನೂಕಿ ।
ಬಂಧುಗಳಿಗೆ ಬಹು । ಬಂಧನ ನೀಡುತ । ಕೆಟ್ಟೇ ॥ ೫ ॥

ಆಗ ಮಾಡಿದ ಫಲ । ಈಗ ಭೋಗಿಸು ಎಂದು ।
ಬೇಗನೆಮನಾಳ್ಗಳು । ಸಾಗಿ ಬಂದೆಳೆದಾಗ । ಕೆಟ್ಟೇ ॥ ೬ ॥

ಶಿರಪುರ ಭೀಮನು । ಧುರದಿ ಹಣವ ಬಿಟ್ಟು ।
ಹರಿನಾಮ ಸ್ಮರಿಸುವ । ದರಿದರಿತು ಮೈಮರೆದು । ಕೆಟ್ಟೇ ॥ ೭ ॥

೧೦೨

ರಾಗ : ಸಾರಂಗ ತಾಳ : ದೀಪಚಂದ

ಗಂಡ ಬಡಿದಿನ್ಹ್ಯಾಗೆ ಮಾಡಲಿ । ಹೇ ತಾಯಿಗಳಿರಾ ।
ಗಂಡ ಬಡದಿನ್ಹ್ಯಾಗೆ ಮಾಡಲೀ ॥ ಪ ॥

ಗಂಡ ಬಡದಿನ್ಹ್ಯಾಗೆ ಮಾಡಲೀ । ಪುಂಡ ಪೋಕರಿಯಂತೆ ನಾನು ।
ಕಂಡಕಡಿಗೆ ತಿರುಗುತಿರಲು । ಭಂಡುಮಾಡಿಬಿಟ್ಟನವ್ವಾ ॥ಅ.ಪ.॥

ಹೊತ್ತು ಮೀರಿ ಮನೆಗೆ ನಾಬಂದೆ । ಕತ್ತಲೆಯಲ್ಲಿ ।
ಅತ್ತು ಕರೆದು ಬಳಲಿ ನಾ ಕುಳಿತೆ । ಸುತ್ತ ನೋಡುತ ಒಳಗೆ ಹೋಗಿ ।
ಚಿತ್ತಶಾಂತಿಯ ಕಳೆದುಕೊಳುತಲಿ । ಮತ್ತೆ ಹಾಸಿಗಿ ಹಾಸಿಕೊಂಡು ।
ಮೆತ್ತಗೆ ನಾ ಮುದರಿಕೊಂಡೆ ॥ಗಂಡ॥ ॥ ೧ ॥

ಮೂರು ಜನರು ಕರೆಯ ಬಂದರು । ಅವರ್ಹಿಂದೆ ನೋಡಲು ।
ಆರುಮಂದಿ ನಗುತ ನಿಂತಿಹರೂ ಆರು ಮೂರನು ಕೂಡಿಕೊಂಡು ।
ಸರಸವಾಡುತ ತಿರುಗುತಿರಲು ದಾರಿಯಲ್ಲಿ ॥ಗಂಡ॥
ಎಂಟು ಮಂದಿ ಸೆರಗು ಹಿಡಿದು ಜಗ್ಗಿದರು ॥ಗಂಡ॥ ॥ ೨ ॥

ಏನು ಅರಿಯದೆ ನಾನು ಬಂದಿರಲು । ಬಂದಂಥ ಪುಂಡರು । ನಾನು
ತಾನು ಎನುತ ನಿಂತಿರಲು । ಹೀನವೃತ್ತಿಗೆ ಹೇಸಿ ಮನದೊಳು । ಮಾನ
ರಕ್ಷಣೆಗಾಗಿ ಯೋಚಿಸಿ । ದೀನಳಾಗಿ ನಡೆದುಕೊಂಡು । ನಾನೆ ಅವರನು
ಕೂಡಿ ಹೊರಟೆ ॥ ಗಂಡ ॥ ॥ ೩ ॥

ಪುಂಡರೆಲ್ಲರ ಮನೆಗೆ ಕರೆತಂದೆ । ಪತಿ ಇರುವನೆಂದೂ ।
ಹಂಡೆಯೊಳಗೆ ಹೊಗಿಸಿ ಮುಚ್ಚಿದೇ । ಗಂಡ ಕಂಡರು ಕಾಣದಂತೆ ।
ತಂಡತಂಡದ ಮಾತನಾಡುತ । ಹಂಡೆತಳಕೆ ಉರಿಯ ಹಚ್ಚಿ ।
ಪುಂಡರೆಲ್ಲರ ಸುಟ್ಟು ಬಿಟ್ಟಾ ॥ಗಂಡ॥ ॥ ೪ ॥

ದಾರಿ ತಪ್ಪಿದೆ ಹೆಣ್ಣು ನಾನಾದೆ । ಪತಿ ಸಂಗಕಂಜಿ ।
ಸಾರಿ ಶಿರಪುರವನ್ನು ಸೇರಿದೆ । ನಾರಿ ಕೇಳ್ ಪತಿ ಇಲ್ಲದವರಿಗೆ ।
ಯಾರಿಗೂ ಗತಿ ದೊರೆಯದೆನ್ನುವ । ಧೀರ ಭೀಮನ ನುಡಿಯ ನಂಬಿ ।
ಸೇರಿ ಪತಿಯನು ಒಪ್ಪಿಕೊಂಡೆ ॥ಗಂಡ॥ ॥ ೫ ॥

೧೦೩

ರಾಗ : ಭೈರವಿ ತಾಳ : ದೀಪಚಂದ

ಚೇಳು ಕಡಿಯಿತಮ್ಮ ನೋಡಿರೇ । ಸಂಸಾರ ವೆಂಬೊ ।
ಚೇಳು ಕಡಿಯಿತಮ್ಮ ನೋಡಿರೇ ॥ ಪ ॥

ಚೇಳು ಕಡಿಯಿತಮ್ಮ ನೋಡಿರಿ । ತಾಳಲಾರೆನು ಇದರ ಬಾಧೆಯ ।
ಹೇಳಲಿಕೆ ಅಸಾಧ್ಯವಾಗಿದೆ । ಕೇಳುವವರು ದಾರಿಲ್ಲವಮ್ಮ ॥ಅ.ಪ. ॥

ಮದಗಳೆಂಟು ಕಾಲ್ಗಳಾಗಿವೇ । ವ್ಯಸನಂಗಳೇಳು । ಅದರ
ಕೊಂಡಿಯ ಗಂಟಿನಿಂತಿವೆ । ಷಡ್ರಿಪುಗಳದರ । ವಿಧವಿಧದ
ಬಣ್ಣಂಗಳಾಗಿವೇ । ಬಲ್ ಮಾಯೆ ಎಂಬ । ತುದಿಯ ಸೊಂಡಿಯನ್ನು
ಚಾಚಿ। ಕದಲದಂತೆ ಬಿಗಿದು ಹಿಡಿದು । ಹದನವಾದ ಕೊಂಡಿಯಿಂದ ।
ಎದೆಯನುಬ್ಬಿಸಿ ಸೆಟೆದು ನಿಂತೂ । ॥ಚೇಳು॥ ॥ ೧ ॥

ಏನು ಹೇಳಲಿ ಬಾಧೆ ಬಹಳಾಯ್ತು । ಇಳಿಸುವರು ಇಲ್ಲದೆ ।
ದೀನನಾಗಿ ಬಳಲುವಂತಾಯ್ತು । ಕತ್ತಲೆಯಲ್ಲಿ । ನಾನು ನಡೆದಾಡಿದ್ದೆ
ತಪ್ಪಾಯ್ತು । ನಿತ್ರಾಣ ಬಹಳಾಯ್ತು । ಜ್ಞಾನವೆಂಬೋ । ದೀಪಬಿಟ್ಟು ।
ಶ್ವಾನನಂತೆ ತಿರುಗುತಿರಲು । ಹೀನಮತಿ ಇವನೆಂದು ತಿಳಿದು ।
ತಾನೆ ದಾರಿಗೆ ಅಡ್ಡಬಂದೂ । ॥ಚೇಳು॥ ॥ ೨ ॥

೧೦೪

ರಾಗ : ಭೂಪ್ ತಾಳ : ಝಂಪೆ

ತಿಳಿದಿತ್ತೆಂದರೆ ತಿಳಿಸಿ ಹೇಳಣ್ಣ । ಸಿಟ್ಟ್ಯಾಕಣ್ಣ ।
ತಿಳಿದಿತ್ತೆಂದರೆ ತಿಳಿಸಿ ಹೇಳಣ್ಣ ॥ ಪ ॥

ತಿಳಿದಿತ್ತೆಂದರೆ ತಿಳಿಸಿ ಹೇಳಣ್ಣ । ತಿಳಿದಿಲ್ಲೆಂದರೆ
ತಿಳಿವುದು ಮೇಲು । ತಿಳಿಯದ ಮರ್ಮವು ತಿಳಿದಿದೆ
ಎಂದರೆ । ತಿಳಿದವರೆಂದಿಗು ಮೆಚ್ಚರು ನಿನ್ನ । ತಿಳಿ ॥ ಅ.ಪ.॥

ಹಿಂದಿನ ಎಷ್ಟೋ ಜನ್ಮದ ಪಾಪಣ್ಣ । ಈಗಿರುವ ದೇಹಕೆ ।
ಬಂದು ಪರಿಪರಿ ಕಾಡುವದಂತಣ್ಣ । ಹಿಂದಕೆ ಪಾಪವ ಮಾಡಿದ
ದೇಹವು । ಅಂದಿಗೆ ನಾಶನ ಹೊಂದಿ ಹೋಗಿರಲು । ಇಂದಿನ
ಈ ದೇಹಕ್ಕೆ ಅದು ತಾ । ಬಂದು ನಿಲ್ಲುವದೆಂಬುದು ಏಕೆ । ತಿಳಿ ॥ ೧ ॥

ದೇಹನ ಬಲು ಪರಿ ಹಳಿಯುವರ್‍ಯಾಕಣ್ಣ । ಅದು ಇಲ್ಲದೆ
ಹೋದರೆ । ಇಹದಲಿ ಜಿವಿಯ ಸಾಧನವೆಂತಣ್ಣ । ದೇಹದ
ಮುಖದಿಂ ಜಪವು ತಪವು । ದೇಹದಿಂದಲೆ ಯೋಗದ ಸಾಧನ ।
ದೇಹವು ಇಲ್ಲದೆ ಹೋದರೆ ಆಗ । ಮಹಿಯೊಳು ಜೀವನ ಸಾಧನೆ ಏನು ॥೨॥

ನರನು ನಾರಿಯು ಸಮರು ಕಾಣಣ್ಣ । ಶಿರಪುರ ಭೀಮಗೆ ।
ಹರಿಯದ ಮರ್ಮವು ಇದುವೆ ನೋಡಣ್ಣ । ನರಗೆ ಜನ್ಮವ
ನಿತ್ತ ನಾರಿಯ । ದುರಿತ ಮಾಯಾತ್ರಯದಿ ಸೇರಿಸಿ । ಅರುವಿಗೆ
ಎರವನು ಮಾಡುತಲವಳ । ಪರಿ ಪರಿ ಭಂಗಿಸಿ ನುಡಿದರು ಏಕೆ । ತಿಳಿ ॥೩ ॥

೧೦೫

ರಾಗ : ಸಾರಂಗ ತಾಳ : ಕವಾಲಿ

ನ್ಯಾಯ ನೀಡು ಪ್ರಭುವೇ । ಬಲು ಪರಿ । ಭವದಲಿ ಬಳಲಿರುವೆ ॥ ಪ ॥

ಮಾಯಾ ಮೋಹದಿ ಸಿಲುಕಿಸಿ ಯನ್ನನು । ನೋಯಿಸುತಿರುವದ ನಿಲ್ಲಿಸಿ ನೀ
ಗಡ ॥ಅ.ಪ. ॥

ದೇಹವು ಎಲ್ಲಿಯದೋ । ಅದರ । ಜೀವನವೆಲ್ಲಿಯದೋ । ದೇಹ ಜೀವಗಳ
ಜೊತೆಯನು ಸೇರಿಸಿ । ತಾಯಿಯ ಗರ್ಭಕ ನೂಕಿದ ಕೃತಿಗೆ ॥ ೧ ॥

ಕಾಲು ಕೈಗಳಿಂತೂ । ಚಲಿಸುವ । ಮೂಲ ತಿಳಿವುದೆಂತೂ । ಜಾಲರಿ
ಚೀಲದಿ ಸೇರಿಸಿ ಜೀವವ । ಬೈಲಿಗೆ ಬಿಡದಲೆ ನಿಲಿಸಿದ ಕೃತಿಗೆ ॥ನ್ಯಾಯ॥ ॥೨ ॥

ನೀನೆ ರೂಪುಮಾಡಿ । ಅದಕೆ । ನೀನೆ ಜೀವ ನೀಡಿ । ನೀನೆ ನೂಕಿದ
ಗೊಂಬಿಗೆ ನಾನು । ನಾನೆನ್ನುವ ನುಡಿ ಕಲಿಸಿದ ಕೃತಿಗೆ ॥ನ್ಯಾಯ॥ ॥ ೩ ॥

ತಂದೆತಾಯಿ ಎಂದೂ । ನೆಚ್ಚಿನ । ಬಂಧುಬಳಗವೆಂದೂ । ತಂದು ತಂದು
ಇವಗ್ಹೊಂದಿಸಿ ಬಂಧಿಸಿ । ಬಂಧನಪಡಿಸಿದ ಬಲು ಹೀನ ಕೃತಿಗೆ ॥ನ್ಯಾಯ॥
॥ ೪ ॥

ಸತಿ ಸುತರಿವರಂತೆ । ಇವರ । ಜತನಕೆ ನಾನಂತೆ । ಅತಿ ಮೋಹದಿ ಅವ
ರ್ಹಿತವನು ಸಾಧಿಪ । ಮತಿಯ ನೀಡಿ । ಗತಿಗೆಡಿಸಿದ ಕೃತಿಗೆ । ॥ನ್ಯಾಯ॥
॥ ೫ ॥

ನಾನು ನಾನು ಎಂಬೇ । ಎಲ್ಲವ । ನಾನು ನನ್ನದೆಂಬೇ । ನಾನು ನಾನು ಎಂಬ
ನಾನೆಲ್ಲಿರುವೆನು । ನಾನ್ಯಾರೆಂಬುದ ತಿಳಿಸದೆ ಕೃತಿಗೆ । ॥ನ್ಯಾಯ॥ ॥ ೬ ॥

ಅರಿಯದೆ ಬಂದಿರುವೇ । ಯನ್ನಗೆ । ಅರಿವನು ಕೊಡು ದೊರೆಯೆ ।
ಪರಮನೆ ನಿನ್ನನು ಅರಿಯುವ ತವಕದಿ । ಶಿರಪುರದಲ್ಲಿಹ ಭೀಮನ ಬಯಕೆಗೆ
॥ನ್ಯಾಯ॥ ॥ ೭ ॥

೧೦೬

ರಾಗ : ಭೈರವಿ ತಾಳ : ತ್ರಿಕಾಲ

ಸತ್ಯವ್ವಾ ತಂಗಿ ಸತ್ಯವ್ವಾ । ನೀ । ಸತ್ಯ ಬಿಟ್ಟರೆ ಗಡ ಸತ್ತೆವ್ವಾ ॥

ಸತ್ಯದ ಮರ್ಮವ ಅರ್ಥಿಲಿ ತಿಳಿಯುತ । ನಿತ್ಯ ನಡಿಯುವದೆ ಸತ್ಯೆವ್ವಾ॥ಅ.ಪ. ॥

ಸತ್ಯಶರಣರಿಗೆ ಬಾಗವ್ವ । ನೀ । ನಿತ್ಯಮಾಡು ಅವರ ಸಂಗವ್ವಾ ।
ನಿತ್ಯ ನಿತ್ಯ ಸತ್ಯ ಶರಣರ ಸೇವಿಪ । ಶಕ್ತಿಯ ಪಡೆವುದೆ ಸತ್ಯವ್ವಾ ॥ ೧ ॥

ಆಸೆ ನೀಗುವದೆ ಚಂದವ್ವಾ । ಮ । ರಾಶೆಯ ಬಿಡುವದು ಮೇಲವ್ವಾ ।
ಆಸೆಯ ಮನಸಿನ ಘಾಸೆಗೆ ಸಿಲುಕದೆ; ದೋಷ ನೀಗುವದೆ ಸತ್ಯವ್ವಾ ॥ ೨ ॥

ಬಂದಿದಿ ಭವದಲಿ ಮಳ್ಳವ್ವಾ । ನೀ ದ್ವಂದ್ವವ ಕಡಿದ್ಹಾಕಿ ಬಾಳವ್ವಾ ।
ಒಂದೆಮನದಿ ಭವಬಂಧನ ಭೇದಿಸಿ । ಅಂದದಿ ಬಾಳ್ವುದೇ ಸತ್ಯವ್ವಾ ॥ ೩ ॥

ದೃಢಮನದಲಿ ಗುರುಲಿಂಗವ್ವಾ । ಪಡೆ । ಸುಡುವದು ಗಡ ಭವಶೇಷವ್ವಾ ।
ಮೃಡಪಂಚಾಕ್ಷರಿಮಂತ್ರವ ಜಪಿಸಲು । ಒಡನೆ ತೋರುವದತಿ ಸತ್ಯವ್ವಾ ॥ ೪ ॥

ಹರ ಗುರುಧ್ಯಾನವೆ ಶಾಂತವ್ವಾ । ಘನ । ಗುರುಕೃಪೆ ಪಡೆನೀ ಮುತ್ತವ್ವಾ ।
ಶಿರಪುರ ಭೀಮನ ಹೃದಯದಿ ನೆಲಿಸಿದ । ಪರಮ ಪರಂಜ್ಯೋತಿ ಸತ್ಯವ್ವಾ
॥ ೫ ॥

೧೦೭

ಒಂದು ಕಡೆ ಸಂಪನ್ನು ಹೂಡುವ ।
ರೊಂದು ಕಡೆಯುತ್ಸವದಿ ಮೆರೆಯುವ ।
ರೊಂದು ಕಡೆಯಲಿ ಕೊಲೆಯು ಸುಲಿಗೆಯು ಸ್ತ್ರೀಯರಪಹಾರಾ ॥
ಒಂದು ಕಡೆಯಲಿ ಸೆರೆಯು ಸೇಂದಿಯು
ಒಂದು ಕಡೆಯಲಿ ಬ್ರಾಂಡಿ ವಿಸ್ಕಿಯು ।
ಒಂದು ಕಡೆಯಲಿ ಚಹದ ಸೇವನೆ ಪಾರ್ಟಿ ಫಲಹಾರಾ ॥ ೧ ॥

ಹಸಿವು ಹಿಂಗಿತು ಚಹದ ಉಷ್ಣತೆ ।
ಹಸಿವು ಅಳಿಯಲು ರಕ್ತ ಕುದಿಯಿತು ।
ವಿಷವು ರಕ್ತದಿ ಬೆರೆಯಲಾಕ್ಷಣ ಚರ್ಮರೋಗವದೂ ॥
ಇಸಬು ಗಜಕರ್ಣಾದಿ ರೋಗದ ।
ಅಸಮ ಬಾಧೆಯ ತಾಳಲಾರದೆ ।
ಅಶನ ವ್ಯಸನದ ಘಸಣಿಯಲಿ ಶಾವ್ ಮಸಣ ಸೇರಿದರೂ॥ ॥ ೨ ॥

ಟೀಯೆಂಬುದು ಚಹದ ಹೆಸರದು ।
ಕ್ಷಯಕೆ ಟಿ.ಬಿ.ಎಂದು ಕರೆವರು ।
ಟೀಯ ಹಿಂದೆಯೆ ಟಿ.ಬಿ. ಬರುವದಸಾಧ್ಯವೇನಲ್ಲಿ ॥
ಕಾಯದಲಿ ಅತಿ ಉಷ್ಣವಾಗುತ ।
ಕಾಯ್ದು ಸುಡುವವುನರಗಳೆಲ್ಲಾ ।
ಸಾಯದಲೆ ಕೃಶನಾಗಿ ಹೋಗುತ ಟಿ.ಬಿ. ವಶನಹನೂ॥ ॥ ೩ ॥

ಸೂತರ್ಥೇಳಿದ ಮಾತುನಾನತಿ ।
ಪ್ರೀತಿಯಿಂದಿನ್ನೊಮ್ಮೆ ಹೇಳುವೆ ।
ಖ್ಯಾತ ರೋಗಗಳೆಲ್ಲ ಬರುವದು ಚಹದ ದೆಸೆಯಿಂದ ॥
ವಾತರೋಗವು ಕುಷ್ಟರೋಗವು ।
ಘಾತಮಾಡುವ ರಾಜಯಕ್ಷ್ಮವು ।
ಧಾತುನಷ್ಟವ ಮಾಡಿ ನಾಶವಮಾಡ್ವದೀ ಚಹವೂ॥ ॥ ೪ ॥

ನುಡಿದ ಕಥೆ ಕಲ್ಪಿತವು ಇದರಲಿ ।
ಒಡೆದು ಕಾಣುವ ಪಾತ್ರವೆಲ್ಲವ ।
ಜಡಮತಿಗೆ ತಾ ತೋಚಿದಂದದಿ ಸೂತ್ರ ರಚಿಸಿಹೆನೊ ॥
ಮೃಡನು ಗರಳನು ಹರಿಯು ಚಕ್ರವು ।
ಬಿಡದೆ ಬರುತಿಹ ಕಲಿಯು ಗರುಡನು ।
ಮೃಡಸುತನು ನಾರದರು ಎಲ್ಲರೂ ಯನ್ನ ಮನ್ನಿಸಲೀ॥ ॥ ೫ ॥

ನುಡಿಸಿಹನು ಶಿವತಾನೆಯನ್ನಯ ।
ನುಡಿಯೊಳೊದಗುತ ಇಂತಿದೆಲ್ಲವ ।
ನುಡಿಸದಿರೆ ನಾನೇಸರವ ನೀ ಕಥೆಯ ನುಡಿಯಲಿಕೇ ॥
ಬಿಡದಲೋದುವ ಮಾನ್ಯರಿದರಲಿ ।
ಒಡೆದು ಕಾಣುವ ದೋಷವೆಲ್ಲವ ।
ತಡೆಯದಲೆ ತಿದ್ದುವದು ಬಲು ಪರಿಶುದ್ಧಮನದಿಂದಾ॥ ॥ ೬ ॥

❖❖

ಶ್ರೀ ವೆಂಕಟಾದ್ರಿ ವಿಠಲದಾಸರು (೧೯೧೭)

ಜೀವನ : ಶಿವಮೊಗ್ಗದಲ್ಲಿ ಸುಬ್ಬರಾವ್ – ರುಕ್ಮೀಣಿಬಾಯಿ ಅವರ ಮಗ ಹೆಚ್. ನಾರಾಯಣಸ್ವಾಮಿ (ವೆಂಕಟಾದ್ರಿವಿಠಲದಾಸ) ೧೯೧೭ರಲ್ಲಿ ಜನಿಸಿದರು. ಶಿವಮೊಗ್ಗೆಯಲ್ಲಿ ಎಸ್.ಎಸ್.ಎಲ್.ಸಿ.ವರೆಗೆ ಓದಿದನಂತರ ಭದ್ರಾವತಿ ಕಾರ್ಖಾನೆಯಲ್ಲಿ ಉದ್ಯೋಗಿಗಳಾದರು. ಆದರೂ ಸಂಸಾರವನ್ನು ನಿಭಾಯಿಸಲಾಗದೆ ಹೆಂಡತಿ ಮಕ್ಕಳನ್ನು ತೊರೆದು ತಿರುಪತಿಗೆ ಪಲಾಯನಮಾಡಿ ೪೦ ದಿನಗಳವರೆಗೆ ತಿಮ್ಮಪ್ಪನಿಗೆ ಗಂಧತೇಯುವ ಸೇವೆಯಲ್ಲಿ ನಿರತರಾದರು. ೪೫ನೇ ವಯಸ್ಸಿನಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ವರ್ಕ್ ಇನ್ಸ್‌ಪೆಕ್ಟರ್ ಆಗಿ ಕೆಲಸಮಾಡಿ ನಿವೃತ್ತರಾದರು. ಮಂತ್ರಾಲಯಕ್ಕೆ ಕಾಲನಡಿಗೆಯಲ್ಲಿ ಹೋದರು. ಆ ಸಮಯದಲ್ಲಿ ೩೨ ಚಿತ್ರಗಳಲ್ಲಿ ಸಚಿತ್ರ ವೇದಾಂತ ಪರಿಚಯ (ಜ್ಞಾನದ ನೆಲೆಗಟ್ಟು) ಚಿತ್ರಪಟಗಳನ್ನು ರಚಿಸಿದರು. ಪರಮಪ್ರಿಯ ಸುಬ್ಬರಾಯದಾಸರ ಶಿಷ್ಯರಾದ ಗುರುಗೋವಿಂದ ವಿಠಲದಾಸರಿಂದ ವೆಂಕಟಾದ್ರಿವಿಠಲದಾಸರೆಂಬ ಅಂಕಿತ ಹೊಂದಿ ನೂರಾರು ಕೀರ್ತನೆಗಳನ್ನು ರಚಿಸಿದ್ದಾರೆ.

೧೦೮

ರಾಗ : ಬೇಗಡೆ **ತಾಳ : ಖಂಡ ತ್ರಿಪುಟ**

ಒಲವು ಗಳಿಸೆ ನಿನ್ನಾ ಬಲಬೇಕೋ ಸ್ವಾಮಿ ॥ ಪ ॥
ಛಲಮಾಡಿ ಗೆಲುವುದು ಅಸದಳವಯ್ಯಾ

ಛಲಮಾಡಿದ ಬಲಿ ನೆಲದೊಳು ಪೋದ
ಒಲವೇ ಹಿರಿದೆಂದು ತೋರಿದ ಭೀಮ
ಬಲುಹೆಮ್ಮೆ ತೋರಿ ಮಣಿಯಲಿಲ್ಲೇ ಹಿಂದೆ
ಸುಲಲಿತನಾಗಿ ಒಲಿದೇ ಒಲವಿನ ಶಬರಿಗೆ ॥ ೧ ॥

ಕುಲಕುಲವೆಂದೂ ಬಡಿದಾಡಬೇಡ
ಮಲಿನ ಕುಲದೊಳು ಅಮರರು ಪುಟ್ಟರೆ
ಹೊಲೆಯರ ಕುಲದ ಚೇತಗೊಲಿಯಲಿಲ್ಲೇ
ಗೆಲುವಿಗೆ ಕಾರಣ ಬಲ ನಿನ್ನದೋ ಹರೀ ॥ ೨ ॥

ಕಾಪಾಡೋ ಸ್ವಾಮಿ ಶ್ರೀರಾಮಚಂದ್ರ
ಚಾಪಹರ ಶಿವ ಜಾನಕಿರಮಣ ಸಾರಿ
ದೀಪಗುರುವಿನ ಮಡದಿಗೆ ಒಲಿದಾ
ಗೋಪ್ಯದ ಭಕ್ತಿಯಾ ವೆಂಕಟವಿಠಲಾ ॥ ೩ ॥

೧೯

ರಾಗ : ಭೌಳಿ ತಾಳ : ಖಂಡತ್ರಿಪುಟ

ಮಣ್ಣಿಂದ ಬಂದಿಹೆ ಮಾನವ ನೀನು
ಮಣ್ಣೊಳಗೆ ಪೋಗುವೆ ಸತ್ತಾ ಮೇಲೆ ॥ ಪ ॥

ಕಣ್ತೆರೆದು ನೋಡದೆ ಅದರಾ ಮಹಿಮೆ
ಗಣ್ಯವೆ ಮೆರೆವುದು ನಾಲ್ಕು ದಿನದ ಆಟ ॥ ಅ.ಪ. ॥

ಸಿನಿಮಾ ನೋಡಿ ಬರೆ ಬರುವುದು ಏನು?
ಮನಿಪರ್ಸ್ಾ ಹೊಟ್ಟೆ ಖಾಲಿ ತಾನು
ಮನೆ ಒಳಗೆ ನಡೆವುದು ಸಿನಿಮಾ ನಂತರ
ಧ್ವನಿ ಹಿರಿಯರ ಮಾತು ಲೆಖ್ಖಕ್ಕೆ ಇಲ್ಲಾ ॥ ೧ ॥

ಮನೆಯಲ್ಲ ಹಾಳೋ ಹೋಟೆಲ್ಲಾ ಗೀಳು
ಇನಿಯಂಗೆ ಆಳು ಊಟ ತರಲೂ
ವನಿತೆಯರಿಗೆಲ್ಲಾ ಎನಿತು ಕಷ್ಟವಯ್ಯಾ
ಮನೆ ಬಿಟ್ಟು ಹೊರಗೆ ದುಡಿಯುವವರಲ್ಲಾ ॥ ೨ ॥

ಶ್ವಾನನ ಸಾಕೇ ಕಾಯುವುದೇನೋ
ಬೋನಿನವೊಳಗೆ ಬಿದ್ದಿದೆ ಕರ್ಮದಾ
ಊನನು ನೀನೆ ಈಕ್ಷಿಸಿ ನೋಡಲು
ದಾನಧರ್ಮವಲ್ಲೇ ಕಾಯಲು ನಿನ್ನಾ ॥ ೩ ॥

ಹಣವೆ ಹೆಚ್ಚೆಂದು ಕುಣಿದಾಡಬೇಡ
ಮಣಿಯಬೇಕಲ್ಲಾ ರೋಗರುಜಿನ ಬರೆ
ಧಣಿಯೇನೊ ವೈದ್ಯ ಸಾವಿಗೆ ಅಂಜುವ
ಹೆಣವಲ್ಲೆ ಎಲ್ಲಾ ಸತ್ತಾ ಮೇಲೆ ॥ ೪ ॥

ಏನು ಹೇಳಲಿಯಪ್ಪಾ ಕಲಿಕಾಲಮಹಿಮೆ
ಧ್ಯಾನವೆ ಇಲ್ಲಾ ನಿಜಧಣಿ ಹರಿಯಾ
ಗಾನವೊ ಎಲ್ಲೆಡೆ ಸಿನಿಮಾ ಪಟುಗಳ
ಧ್ಯಾನವು ಅವರದ್ದೆ ವೇಂಕಟವಿಠಲಾ ॥ ೫ ॥

❖❖

(ದೊಡ್ಡಿ ಸುಧಾಬಾಯಿ (೧೯೨೩-೨೦೧೬)
ಕಪಿಲನಾಮಕ ಅಂಕಿತದ ಕೀರ್ತನೆಗಳು(೧೨೧-೧೩೪)

ಜೀವನ :ಆಂಧ್ರ ಪ್ರಾಂತ್ಯದ ನೆಲ್ಲೂರಿನ ನಿವಾಸಿ ಶ್ರೀ ಬದರೀನಾರಾಯಣರಾಯರ ಮಗಳು ಕಪಿಲಾಬಾಯಿ. ೧೯೨೩ರಲ್ಲಿ ಜನಿಸಿದರು. ೫ನೇ ತರಗತಿವರೆಗೆ ಓದಿದ ಕಪಿಲಾಬಾಯಿ ಚಿಕ್ಕವಯಸ್ಸಿನಲ್ಲೇ ಬಳ್ಳಾರಿಯ ಪ್ರಸಿದ್ಧ ವಕೀಲರಾಗಿದ್ದ ದೊಡ್ಡಿ ಗುಂಡೂರಾಯರೊಂದಿಗೆ ಮದುವೆಯಾಯಿತು. ಅತ್ತೆಮನೆಯಲ್ಲಿ ದೊಡ್ಡಿ ಸುಧಾಬಾಯಿ ಎಂದು ಹೆಸರು ಬದಲಾಯಿತು. ಅದೇ ಬಳಕೆಗೆ ಬಂದಿತು. ಆಂಧ್ರದಲ್ಲಿ ಓದಿದ ಸುಧಾಬಾಯಿ ಆರಂಭದಲ್ಲಿ ತೆಲುಗಿನಲ್ಲಿ ಕೀರ್ತನೆಗಳನ್ನು ರಚನೆ ಮಾಡುತ್ತಿದ್ದರು. ಅನಂತರ ಕನ್ನಡದಲ್ಲಿ ಹೇರಳ ಸಾಹಿತ್ಯರಚನೆ ಮಾಡಿದ್ದಾರೆ. ಅವರ ಮನೆ ಗುರುಗಳಾದ ಘೂಳಿ ಕೃಷ್ಣಮೂರ್ತಿ ಆಚಾರ್ಯರೆಂಬ ವಿದ್ವಾಂಸರಿಂದ ಕಪಿಲನಾಮಕ ಅಂಕಿತಪಡೆದು ಕನ್ನಡ ಕೀರ್ತನೆಗಳನ್ನು ರಚಿಸಲಾರಂಭಿಸಿದರು.

ಸುಮಾರು ೪೦೦ ಕೀರ್ತನೆಗಳನ್ನು ರಚಿಸಿದ್ದಾರೆ. ೧೩ ಪುಸ್ತಕಗಳನ್ನು ಗದ್ಯ ಪದ್ಯಗಳಲ್ಲಿ ರಚಿಸಿದ್ದಾರೆ. ಕಪಿಲಾಂತರಂಗ ಸುಧಾ ಇವರ ಕೀರ್ತನಸಂಗ್ರಹಕೃತಿ. ಸುಧಾಬಾಯಿ ಅವರಿಗೆ ಹಲವಾರು ಪ್ರಶಸ್ತಿಗಳು ಬಂದಿವೆ. ಸನ್ಮಾನಗಳು ಸಂದಿವೆ. (ಸಂಪ್ರದಾಯ ಕೋವಿದೆ ಪ್ರಶಸ್ತಿ, ಚಾಮರಾಜಪೇಟೆ ಮಾಧ್ವಸಂಘದಿಂದ) ಮಾಧ್ವ ಮಹಿಳಾ ಚೂಡಾಮಣಿ ಪ್ರಶಸ್ತಿ, ಹಂಪಿ ವಿಶ್ವವಿದ್ಯಾಲಯ ಹರಿದಾಸ ಸಾಹಿತ್ಯ ಸಮ್ಮೇಳನದಲ್ಲಿ ಸನ್ಮಾನ ಇತ್ಯಾದಿ ದೊರೆತಿವೆ. ೨೦೧೬ರಲ್ಲಿ ನಿಧನರಾದರು.

೧೧೦

ರಾಗ : ಧನ್ಯಾಸಿ **ತಾಳ : ಆದಿ**

ಕೊಡಲೆಬೇಕು ದಾನಗಳನು ಪಾಪ ಕಡೆವ ಸುಜ್ಞಾನಿಗಳಿಗೆ
ಗುರುಹಿರಿಯರ ಆಶಿಸ್ಸು
ತಡೆಯಬೇಕು ಇಂದ್ರಿಯಗಳ ಮನುಜಾ ॥ ಪ ॥

ಕೊಡಲೆಬೇಕು ಸತ್ಪಾತ್ರರಿಗೆ ದಾನ
ನುಡಿಯಬೇಕು ಸತ್ಯವಾಕ್ಯಗಳನು
ಕೊಟ್ಟದಾನವ ಇತರರಿಗೇಳದೆ
ಗುಟ್ಟಾಗಿ ಹರಿಧ್ಯಾನ ಮಾಡೋ ಮನುಜಾ ॥ ೧ ॥

ಆಡಂಬರ ಅಹಂಕಾರವ ತ್ಯಜಿಸಿ ನಡೆ
ನುಡಿಗಳಲ್ಲಿ ವಿನಯ ವಿಧೇಯಕಗಳ ಕಲಿತರೆ
ಬಿಡದೆ ಬಿಡಿಪಾಪಗಳೆಲ್ಲ
ಅಡಗಿ ದೂರಾಗುವುದು ॥ ೨ ॥

ಕಪಿಲನಾಮಕ ಪರಮಾತ್ಮನ
ನೆನಪಿನಾರಾಧನೆಯನು ಕೂಡಿಸೋ
ಭವಕೂಪದಲಿ ಬಂದು ಬೀಳುವುದು
ಬಿಡಿಸಿ ಕಾಪಾಡು ತಂದೆ ಗೋವಿಂದಾ ॥ ೩ ॥

೧೧೧

ರಾಗ : ತೋಡಿ

ತಪ್ಪುಮಾಡಿಸಬೇಡೋ ರಂಗಯ್ಯ
ತಪ್ಪುಮಾಡದೆ ಇರುವುದಿಲ್ಲ ಜೀವ
ತಪ್ಪುಮಾಡಿದರೂ ಪಶ್ಚಾತ್ತಾಪ ಪಟ್ಟರೆ
ಪಾಪ ಬಿಟ್ಟುಹೋಗೋಹಾಗೆ ಮಾಡಯ್ಯ ರಂಗ ॥ ಪ ॥

ಎಷ್ಟು ಕೊಟ್ಟರು ಮತ್ತಿನ್ನಷ್ಟು ಬೇಡುವರು
ನೀ ಎಷ್ಟು ಮಾಡಿದರೂ ಜೀವಕೆ ತೃಪ್ತಿ ಇಲ್ಲ
ಕೊಟ್ಟಿದ್ದು ಉಂಡು ನೀನಿಟ್ಟಂಗೆ ಇರುವಂತ
ಮಾಡಿಸೋ ಶ್ರೀ ಕೃಷ್ಣಯ್ಯ ॥ ೧ ॥

ಎಲ್ಲವು ನೀ ಕೊಟ್ಟಿದ್ದು ಎನ್ನುವ ಬುದ್ಧಿ
ನಿಲ್ಲೋ ಹಾಗೆ ಮಾಡೊ ರಂಗಯ್ಯ
ಎಲ್ಲವು ನಿನಗೆ ಅರ್ಪಿತ ಎಂಬ ಬುದ್ಧಿ
ಕೊಟ್ಟು ರಕ್ಷಿಸೊ ದೇವ ಮರೆಯಧಾಗೆ ॥ ೨ ॥

ಆಶಾಮೋಹಕ್ಕೆ ಸಿಲುಕಿ ಉಪಾಸನ
ಮರಿಯದಾಗೆ ನಿನ್ನ ವಿಸ್ಮರಣೆ ಕೊಡದೆ
ಕಾಪಾಡು ತಂದೆ ಕಪಿಲನಾಮಕನೆ
ಕೃಪೆಯಿಂದ ಸಲಹೋ ರಂಗಯ್ಯ ॥ ೩ ॥

೧೧೨

ರಾಗ : ಕಾಂಬೋಧಿ

ತಾಳ್ಮೆಯಿಂದಿರುವುದು ಕಲಿಯಬೇಕು
ತಾಳ್ಮೆಗಿಂತಲು ಬೇರೆ ಗುಣ ಒಂದು ಇಲ್ಲ ॥ ಪ ॥

ಕಷ್ಟ ನಿಷ್ಠುರಗಳನು ತಡಕೊಂಡು ಇರಬೇಕು
ನಿಷ್ಠೆಯಿಂದಲಿ ಹರಿಧ್ಯಾನ ಮಾಡಬೇಕು
ಹಗೆಯ ಕುಹಕವ ನಿಷ್ಠುರಗಳ ಮಾಡುವವರ
ಪ್ರೀತಿಸುತ ಸ್ನೇಹದಿಂದಿರಬೇಕು ಮನುಜಾ ॥ ೧ ॥

ಭಕ್ತಿಯಿಂದಲಿ ಹರಿನಾಮ ನಿತ್ಯ
ಸ್ಮರಿಸುತಲಿರುವವರಿಗೆ ಅರ್ಥಿಯಿಂದಲಿ
ಕಾಯ್ವ ಕೃಷ್ಣ ಪರಮಾತ್ಮ
ಹರಿಯಪುರಕೋಗುವ
ಮಾರ್ಗವನ್ನು ತೋರುವ
ಶ್ರೀಹರಿಯನ್ನು ನಂಬಿ ಮುಕ್ತನಾಗು ಮನುಜ ॥ ೨ ॥

ಕಪಿಲನಾಮಕ ಪರಮಾತ್ಮ ಸಕಲ ಸದ್ಭಕ್ತರನು
ಕೃಪೆತೋರಿ ಸಲಹುವ ತನ್ನ ನಂಬಿದವರನು
ದಾನಧರ್ಮ ಸ್ವಧರ್ಮಗಳ ಬಿಡದೆ
ನಿಷ್ಕಾಮ ನಿಸ್ವಾರ್ಥದಿ ಬಾಳುಮನುಜ ॥ ೩ ॥

೧೧೩

ನಗೆಯು ಬರುತಿದೆ ಎನಗೆ ನಗೆಯು ಬರುತಿದೆ
ಸುಗುಣ ಬಿಟ್ಟು ದುರ್ಗುಣವ ಮಾಡಿ ಓಡಾಡ್ಯುವರ ಕಂಡು ॥ ಪ ॥

ಡಂಭಾಚಾರ ಮಾಡುತ ಸ್ವಧರ್ಮವನ್ನು ಬಿಡುತ
ಒಳಗೆ ಇರುವ ಬಿಂಬಮೂರುತಿಯ
ಮರೆತು ಓಡ್ಯಾಡುವವರ ಕಂಡು ॥ ೧ ॥

ತನ್ನ ತಪ್ಪುಗಳನ್ನು ಬಿಟ್ಟು ಪರರ ತಪ್ಪು
ಗಳೆಣಿಸುವರ ಜಗಳ ಹಚ್ಚುವ
ಚಾಡಿಕೋರರರು ಆಡುವ ಮಾತುಗಳ ಕಂಡು ॥ ೨ ॥

ಸತ್ಸಂಗಮಾಡದವರ ಸಜ್ಜನರ ನೋಯಿಸುವವರ
ಸಾಂಪ್ರದಾಯ ಮರೆಯುವವರ
ತಾನೆ ಶ್ರೇಷ್ಠ ಎಂಬುವರ ಕಂಡು ॥ ೩ ॥

ಪರರ ಹಿತವ ಬಯಸದವರ ಫಲಾಪೇಕ್ಷೆ
ಬಯಸುತಲಿ ಪರಮಾತ್ಮನ ಕಾರ್ಯಗಳನ್ನು
ಭಕ್ತಿಯಿಲ್ಲದೆ ಮಾಡುವರ ಕಂಡು ॥ ೪ ॥

ಹುಸಿಯ ಮಾತನ್ನಾಡುವವರ ಪರರ
ಮನವ ನೋಯಿಸುವವರ ಪರೋಪಕಾರ
ಮಾಡದವರ ಶ್ರೀ ಹರಿಯ ಮರೆಯುವವರ ಕಂಡು ॥ ೫ ॥

ಕಪಿಲನಾಮಕ ಪರಮಾತ್ಮನ ಭಕ್ತಿಯಿಂದೆ
ಭಜಿಸಿದರೆ ಮುಕ್ತಿಕೊಟ್ಟು ರಕ್ಷಿಸುವ
ಶ್ರೀಹರಿಯ ನಂಬಿ ಬದುಕಿರೋ ॥ ೬ ॥

೧೧೪

ಸಹೃದಯತೆಯಿಂದೆ ಸತ್ಕಾರ್ಯ ಮಾಡಿ
ಸಾಧುಸಂತರ ಗೌರವಿಸಿ ಸುಖಿಯಾಗು ಮನುಜ ॥ ಪ ॥

ಯಮನ ದೂತರು ಬಂದು ಪ್ರಾಣವನು
ಸೆಳೆದಾಗ ನಮನ ಮಾಡಿ ಲಂಚಕೊಡುವ ಹಾಗಿಲ್ಲ
ಕಾಲನಾಮಕನ ವಶವಾಗದೆ ಮುನ್ನ
ಧರ್ಮವನು ತಪ್ಪದೆ ಬಾಳುವುದು ಕಲಿಮನವೇ ॥ ೭ ॥

ನೆರೆಹೊರೆ, ಮನೆ, ನಮ್ಮೂರು, ನಮ್ಮ ರಾಷ್ಟ್ರ
ನಮ್ಮ ದೇಶ, ಎಂಬ ಅಭಿಮಾನದಿ
ಶ್ರಮಜೀವನ ಸಹ ಬಾಳುವಿಕೆಯಿಂದ
ಶ್ರೀಮದಾನಂದ ತೀರ್ಥರ ಮತವೆ ಸಮ್ಮತವೆಂದು ॥ ೮ ॥

ಹುಟ್ಟು ಬದುಕು ಸಾವು ವಿಧಿ ನಿಯಮವೆಂದರಿತು
ಸಿಟ್ಟು ಬಿಟ್ಟು ನಗುತ ನಗಿಸುತ ಪರರ ಕಪಿಲಾತ್ಮಾಕನ ನಂಬಿ
ಜೀವನ ತೃಪ್ತಿಯಾಗಿ ಕಳೆದು ಭವನೀಗು ಮನುಜ ॥ ೯ ॥

೧೧೫

ರಾಗ : ಕಾಂಬೋಧಿ ತಾಳ :

ಹಿಗ್ಗದಿರು ಕುಗ್ಗದಿರು ಹೇ ಮಾನವಾ
ಹಿಗ್ಗು ಕುಗ್ಗುಗಳೆಲ್ಲ ಸಹಿಸಿಕೊಂಡಿರಬೇಕು ॥ ಪ ॥

ಸುಖ ದುಃಖಗಳೆಲ್ಲ ದೈವಾಧೀನವೆಂದು
ಸಕಲವೆಲ್ಲವು ಹರಿಸಂಕಲ್ಪವೆಂದು
ಜೀವ ಕರ್ತೃತ್ವವೆಲ್ಲ ಹರಿ ಅಧೀನವೆಂದು
ಹರಿ ಇಟ್ಟ ಹಾಂಗಿದ್ದು ಕಾಲಕಳೆ ಮನವೆ ॥ ೧ ॥

ಭೋಗದಾಸೆಗೆ ಬಿದ್ದು ಅಹಂಕಾರ ಮದದಿಂದೆ
ತ್ಯಾಗವನು ಮರೆತು ಪತನವಾದಾಗಲೆ
ನೇಮ ನಿಷ್ಠೆ ನಿರ್ಮನ ನಿರ್ವಿಕಾರಗಳಿಂದೆ
ಸತ್ಯ ಶಾಂತ ಸಹಜ ಶಿಸ್ತಿನಿಂದೆ ಬಾಳು ॥ ೨ ॥

ಎಷ್ಟು ಇದ್ದರು ಮತ್ತಷ್ಟು ಬೇಕೆಂದಾಶಿಸದೆ
ಇಷ್ಟರೊಳಗೆ ಇದ್ದು ತೃಪ್ತಿ ಪಡೆದು
ಪರರಿಗುಪಕಾರ ಮಾಡುತ ಪರರ ನಿಂದಿಸದೆ
ಮಾನವೀಯತೆಯನು ಕಾಪಾಡು ಮನುಜಾ ॥ ೩ ॥

ನಿಷ್ಕಾಮ ನಿಸ್ವಾರ್ಥ ನಿಜಭಕ್ತಿಯಿಂದೆ
ಅಷ್ಟಕರ್ತೃತ್ವದ ಶ್ರೀ ಹರಿಯ ನಂಬಿ

ಸದ್ಭಾವ ಸುಸಂಸ್ಕೃತ ಸನ್ಮಾರ್ಗದಿಂದೆ
ನಾವೆಲ್ಲರು ದೇವರ ಮಕ್ಕಳೆಂದ್ಭಾವಿಸುವೆ ॥ ೪ ॥

ಶಾಶ್ವತವಲ್ಲ ಈ ಪಂಚಭೂತ ದೇಹ
ನಿಶ್ಚಿಂತೆಯಾಗಿರು ಪರಮಾತ್ಮನ ನಂಬಿ
ಎಂಬತ್ನಾಲ್ಕು ಲಕ್ಷ ಯೋನಿಯಿಂದಲಿ ಬಂದು
ಇನ್ನಾದರೂ ತಪ್ಪುಗಳ ಮಾಡದಿರು ಮನವೇ ॥ ೫ ॥

೧೧೬

ಹರಿ ನಿನ್ನ ಭಕ್ತಿಲಿ ಭಜಿಸಲು ಜಪತಪಾನುಷ್ಠಾನವೇಕೆ ?
ಪರಮಪಾವನವಾದ ನಿನ್ನ ಪಾದನಂಬಿ ಬದುಕುವೆ ॥ ಪ ॥

ಘನ್ನಮಹಿಮ ಅನಂತರೂಪ ನಿನ್ನ ನಾಮವೊಂದೆ ಸಾಕು
ಜನ್ಮಜನ್ಮದ ಪಾಪವೆಲ್ಲ ನೀಗಿ ಪೋಗುದು ನಿನ್ನ ಧ್ಯಾನದಿ ॥ ೧ ॥

ನಿರಂತರ ನಿರ್ವಿಕಾರದಿ ದುಶ್ಚರಿತೆಗಳ ಎಲ್ಲ ಬಿಟ್ಟು
ದೃಢವಾದ ಭಕ್ತಿಯಿಂದೆ ಜ್ಞಾನವೈರಾಗ್ಯದಿಂದಿರು ಮನವೆ ॥ ೨ ॥

ಕಪಿಲನಾಮಕ ಪರಮಾತ್ಮನ ಕುಪಿತಬುದ್ಧಿ ತೊರೆದು
ಅಪಾರವಾದ ಭವಬಂಧನ ನೀಗಿ ಮುಕ್ತನಾಗು ಮನವೆ ॥ ೩ ॥

೧೧೭

ಹರಿಯು ಕೊಟ್ಟದ್ದು ಉಟ್ಟು ।
ಹರಿಯು ಕೊಟ್ಟಿದ್ದು ಇಟ್ಟು
ಹರಿಕೊಟ್ಟಿದ್ದು ತಿಂದು ತೃಪ್ತಿಯಲಿ
ಹರಿನಾಮ ಪಾಡುತ ಹರಿಸೇವೆ ಮಾಡುತ
ಹರಿಧ್ಯಾನ ಮಾಡು ಹೇ ಮನವೇ ? ॥ ಪ ॥

ನಾನು ನನ್ನದು ಎಂಬ ಅಹಂಕಾರ ತ್ಯಜಿಸಿ
ಅನುಕ್ಷಣ ಮಾಡುವ ಕಾರ್ಯವೆಲ್ಲ

ಹರಿಪ್ರೀತಿ ಆಗಲೆಂದು ಮನದಿ
ಸಂಕಲ್ಪಿಸಿ ಬಾಳುವುದು ಕಲಿ ಹೇ ಮನುಜ ॥ ೧ ॥

ಅನ್ಯರನು ನೋಯಿಸದೆ ನೀನೊಯ್ಯದಲೆ
ಇದ್ದು ನಿನ್ನಂತೆ ಎಲ್ಲರನು ಬಾಧಿಸುತ
ಇದ್ದದ್ದೆ ಹರಿಪ್ರಸಾದವೆಂದು ತಿಳಿ
ಕಾಲವ ಕಳೆ ಹರಿಯನು ನಂಬಿ ॥ ೨ ॥

ಹರಿಯ ಅನುಗ್ರಹ ಆಗುವತನಕ
ಏನು ಮಾಡಿದರು ಫಲವಿಲ್ಲ
ಜ್ಞಾನಭಕ್ತಿ ವೈರಾಗ್ಯ ತಾಳ್ಮೆಯಿಂದ
ಕಪಿಲನಾಮಕನ ನೆನೆ ಮನವೆ ॥ ೩ ॥

೧೧೮

ಉಗಾಭೋಗ

ಗುರು ಹಿರಿಯರಿಗೆರಗಬೇಕು
ಹಾಳು ಹರಟೆ ಬಿಡಬೇಕು
ಕಾಲಕಾಲಕೆ ದಿವ್ಯ ಹರಿನಾಮ ಕೇಳುತಿರಬೇಕು
ಈ ದೇಹ ಸ್ಥಿರವಲ್ಲ ಗಾಳಿಗಿಕ್ಕಿದ ದೀವಿಗೆಯಂತೆ
ನಾಲಿಗಿದ್ದು ಕಪಿಲನಾಮಕನ ನೆನೆ ಮನವೆ ಬಿಡದೆ

೧೧೯

ಉಗಾಭೋಗ

ಧನದಾಶದಿಂ ಮದಾಂಧರಾಗದೆ ದುಷ್ಟ ಸಂಗವ
ತ್ಯಜಿಸಿ ಪರಸತಿ ಪರಧನಕೆ ಬಂಬಲಿಸದೆ
ಪರರ ಹಿತವನ್ನು ಬಯಸಿ ಪರರ ನೋಯಿಸದೆ
ತಾ ನೊಯ್ಯದಲೆ ಪರಿಪೂರ್ಣ ಗುಣವಾದ ಹರಿಯೆ
ಪರನೆಂದರಿತು ಕಪಿಲನಾಮಕ ಪರಮಾತ್ಮನ ಅನುಗಾಲ ನೆನೆ ಮನವೆ

೧೨೦

ಉಗಾಭೋಗ

ಧನದಿಂದ ಮನೆಯಿಂದ ವನಿತೆಯರಿಂದ
ತನಯದಿಂದ ಮೃಷ್ಟಾನ್ನ ಭೋಜನಗಳಿಂದ
ಬಾಂಧವರಿಂದ ಮಿತ್ರರಿಂದ ಆಗುವ ಸುಖಕ್ಕಿಂತಲು
ನಿನ್ನ ನಾಮದ ಸುಖಕೆ ಎಣೆ ಇಲ್ಲವೋ
ಶ್ರೀ ಕಪಿಲನಾಮಕ ಪರಮಾತ್ಮನೇ

೧೨೧

ರಾಗ : ಕಾಂಬೋಧಿ

ನರಜನ್ಮವೆತ್ತಿ ಪಾತಕಿಯಾಗಿ ಹರಿ ನಿನ್ನ ಸ್ಮರಣೆ ಮರೆತೆನಯ್ಯ
ಆಶಪಾಶಗಳೆಂಬ ಮೋಹಕ್ಕೆ ಸಿಲುಕಿ ಉನ್ಮತ್ತನಾಗಿ ನಿನ್ನ ಧ್ಯಾನಿಸದೆ
ಹೊಟ್ಟೆಗಾಗಿ ಕೆಟ್ಟ ಅಧಮರ ಸೇವಿಸುತ । ಕಷ್ಟಪಡಿಸುತ ತನ್ನ ನಂಬಿದವರ
ಬಿಟ್ಟು ಹೋಗುವಾಗ ಗೇಣುಬಟ್ಟೆ ಕಾಣದು ದೇಹ ನಂಬಿ ಕೆಡಬೇಡಿ ನರಜನ್ಮ
ಸ್ಥಿರವೆಂದು

ಸಾಧನೀಭೂತವಾದ ಶರೀರವಿದನ
ಹಾಳು ಮಾಡಲುಬೇಡಿ ಕೀಳು ಜನರಾ ಸೇರಿ
ಲೋಕದೊಡೆಯನು ಶ್ರೀ ಕಪಿಲಾತ್ಮಕನ ನಂಬಿ
ಧನ್ಯನಾಗು ಮನುಜ ಜಗನ್ಮಾನ್ಯನಾಗು

೧೨೨

ಪರರು ನಿಂದಿಪರೆಂದು ಪರರು ಕೋಪಿಸುವರೆಂದು
ಪರರು ಶಪಿಸುವರೆಂದು ಚಿಂತಿಪಲು ಬೇಡ
ಭಿನ್ನಜೀವಗಳು ಭಿನ್ನಕರ್ಮಗಳು ದೃಢಭಕ್ತಿಯಿದೆ
ಕಪಿಲನಾಮಕನ ದಯಕೆ ಪಾತ್ರನಾಗು ಮನುಜ

ಉಗಾಭೋಗ

ಸತ್ಪಾತ್ರ ದೊರೆತಾಗ ಸದ್ಬುದ್ಧಿ ಇರುವಾಗ
ಸಂಪ್ರದಾಯಾನುಸಾರ ದ್ರವ್ಯಾನುಕೂಲವಿದ್ದಾಗ
ಹಿಂದೆಮುಂದೆ ನೋಡದಲೆ ದಾನ ಮಾಡಿದರೆ
ಕಪಿಲನಾಮಕನು ಮೆಚ್ಚಿ ಮುಕ್ತಿ ಕೊಡುವ

❖❖

ಇಂದಿರಾಬಾಯಿ ಶೇಷಗಿರಿರಾವ್ (ಜ ೧೯೨೪)

ಇಂದಿರಾ ರಮಣ ಅಂಕಿತದ ಕೀರ್ತನೆಗಳು

ಜೀವನ: ಮೈಸೂರು ವಿಶ್ವವಿದ್ಯಾಲಯದಲ್ಲಿ ಆಂಗ್ಲಪ್ರಾಧ್ಯಾಪಕರಾಗಿದ್ದ ಪ್ರೊಫೆಸರ್ ಬೊಬ್ಬರ್‌ಜಂಗ್ ನಾಗೇಶರಾವ ಅವರಿಗೆ ಇಬ್ಬರು ಪತ್ನಿಯರು. ಮೊದಲ ಪತ್ನಿ ಮಗಳು ಕೃಷ್ಣವೇಣಿ (ಪದ್ಮಾಬಾಯಿ ಕೋಲಾರ್ ೧೯೧೮-೧೯೭೨) ನಾಗೇಶ ಶಯನ ಅಂಕಿತದಲ್ಲಿ ಕೀರ್ತನೆಗಳನ್ನು ರಚಿಸಿದ್ದಾರೆ). ಎರಡನೇ ಪತ್ನಿ ಸೀತಾಬಾಯಿ ಅವರಲ್ಲಿ ಇಂದಿರಾಬಾಯಿ (ಕಮಲಾಬಾಯಿ) ೧೯೨೪ರಲ್ಲಿ ಜನಿಸಿದರು. ತಂದೆಯಿಂದ ಇಂದಿರಾರಮಣ ಎಂಬ ಅಂಕಿತ ಪಡೆದರು. ಕಮಲಾಬಾಯಿ ಎಸ್.ಎಸ್.ಎಲ್.ಸಿ.ವರೆಗೆ ಓದಿದರು. ಅನಂತರ ಅವರನ್ನು ಸ್ಟೇಟ್ ಅಕೌಂಟ್ ಇಲಾಖೆಯಲ್ಲಿ ಆಫೀಸರ್ ಆಗಿ ಕೆಲಸಮಾಡುತ್ತಿದ್ದ ಎಲ್.ಶೇಷಗಿರಿರಾವ್ ಅವರಿಗೆ ಕೊಟ್ಟು ಮದುವೆ ಮಾಡಿದರು. ಹೆಚ್.ಸಿ.ಸುಬ್ಬರಾವ್ ಮತ್ತು ಪದ್ಮಾವತಿ ಬಾಯಿ ಇವರ ಅತ್ತೆಮಾವಂದಿರ ಈ ಮನೆಗೆ ಸೊಸೆಯಾಗಿ ಬಂದಮೇಲೆ ಇಂದಿರಾಬಾಯಿ ಎಂದು ಹೆಸರಿಟ್ಟರು.

ಕೃತಿಗಳು : ೨೭ ದೇವರ ನಾಮಗಳುಳ್ಳ ಅರವಿಂದ ಪುಷ್ಪಮಾಲಾ ಎಂಬ ಕೀರ್ತನ ಸಂಗ್ರಹವನ್ನು ೨೦೧೧ರಲ್ಲಿ ಪ್ರಕಟಿಸಿದ್ದಾರೆ. ಮೈಸೂರಿನಲ್ಲಿ ವಾಸವಾಗಿದ್ದಾರೆ. ಈಗ ೯೩ ವರ್ಷ ವಯಸ್ಸು ಮಕ್ಕಳು ಮೊಮ್ಮಕ್ಕಳು ಜತೆಯಲ್ಲಿದ್ದಾರೆ.

೧೨೪

ರಾಗ : ಸಿಂಧುಭೈರವಿ **ತಾಳ : ಆದಿ**

ಕರುಣಾ ಸಾಗರ । ಕಾಪಾಡೆನ್ನನು
ಕಡೆಗಣಿಸದಿರು । ಕರುಣಾನಿಧಿಯೇ ॥ ಪ ॥

ಭವಸಾಗರದಿ । ಬಳಲಿದೆನಯ್ಯಾ
ಭವಬಂಧನವ । ಬಿಡಿಸೋ ಮುರಾರೇ ॥ ಅ.ಪ. ॥

ಕುಜನರ ಸಂಗದಿ । ಮೆರೆದು ಮರೆತೆ ನಿನ್ನ
ಅಜಭವಾದಿಗಳರಸ ಪೊರೆಯೋ ಹರಿಯೇ
ಅಜ್ಞಾನಾಂಧಕಾರದಿ । ಪರಿತಪಿಸಿದೆನೋ
ಜ್ಞಾನಜ್ಯೋತಿಯ ತೋರೋ ಜ್ಞಾನಿಗಳರಸ ॥ ೧ ॥

ಹಿಂದೋಳ ರಾಗ

ಹೆಜ್ಜೆಹೆಜ್ಜೆಗೆ ದಾರಿ । ತಪ್ಪಿದೆನಯ್ಯ । ಸರಿ
ಹೆಜ್ಜೆಯ ತೋರೋ । ಸಜ್ಜನಬಂಧೋ ।
ಮಜ್ಜಿಗೆಕೋಲ ಪಿಡಿದ । ಮುದ್ದು ಮಾರುತಿಯೇ
ಗೆಜ್ಜೆ ಕಾಲ್ಗಡಗದ । ಪಾದವ ತೋರೋ ॥ ೨ ॥

ರಾಗ : ಆನಂದ ಭೈರವಿ

ಹೆತ್ತಮಕ್ಕಳ ತಪ್ಪು । ಎಣಿಸುವರೆ ತಾಯ್ತಂದೆಯರು
ಮತ್ತೆ ಮನ್ನಿಸೋ ಎನ್ನ । ಮದನಜನಕನೆ
ಹತ್ತವತಾರದಿ । ಭಕ್ತರ ಸಲಹುವ
ಮುಕ್ತಿಪ್ರದಾಯಕ ಇಂದಿರಾರಮಣ ॥ ೩ ॥

❖❖

ಆರ್.ವಿ.ಗವಾಯ್‌ಶೇಷಾದ್ರಿ (೧೯೨೪ ಜ)
ಅಂಕಿತ : ಉರಗಾಚಲ

ಆರ್.ವಿ.ಶೇಷಾದ್ರಿ ಗವಾಯಿಗಳು ೧೯೨೪ ಮಾರ್ಚ ೨೧ರಂದು ದಾವಣಗೆರೆಯಲ್ಲಿ ಹುಟ್ಟಿದರು. ತಂದೆ ಆರ್.ವೆಂಕಟಸುಬ್ಬರಾವ್ ಮೈಸೂರು ಸರಕಾರದ ಎಕ್ಸೈಜ್ ಇಲಾಖೆಯಲ್ಲಿ ಅಧಿಕಾರಿಗಳಾಗಿದ್ದರು. ಗವಾಯಿಗಳು ಪ್ರಾರಂಭದಲ್ಲಿ ಸಂಗೀತ ಅಭ್ಯಾಸವನ್ನು ಚನ್ನಬಸವಯ್ಯಾ ಸ್ವಾಮಿ ಕಲ್‌ಕೋಟಿ ಅವರಲ್ಲಿ ಮಾಡಿ ಅನಂತರ ಪಂಚಾಕ್ಷರಿ ಗವಾಯಿಗಳು ಮತ್ತು ಪುಟ್ಟರಾಜು ಗವಾಯಿಗಳ ಬಳಿ ಮುಂದುವರಿಸಿದರು. ೧೯೪೪ರಲ್ಲಿ ಬೆಂಗಳೂರಿನಲ್ಲಿ ಅರವಿಂದ ಸಂಗೀತ ವಿದ್ಯಾಲಯ ಪ್ರಾರಂಭಿಸಿದರು. ಗಾಯನ ಗಂಗಾ ಎಂಬ ಏಕೈಕ ಸಂಗೀತ ದ್ವೈಮಾಸಿಕ ಪತ್ರಿಕೆಯನ್ನು ಪ್ರಾರಂಭಿಸಿ ನಡೆಸಿದರು. ಉರಗಾಚಲ ಅಂಕಿತದಲ್ಲಿ ನೂರಾರು ಕೀರ್ತನೆಗಳನ್ನು ರಚಿಸಿದ್ದಾರೆ.

ಪ್ರಶಸ್ತಿಗಳು : ಇವರು ಬರೆದ ಸಂಗೀತ ಕಲಾರವಿಂದ ಗ್ರಂಥಕ್ಕೆ ಮೈಸೂರು ರಾಜ್ಯ ಸಂಗೀತ ನಾಟಕ ಅಕಾಡೆಮಿಯವರು ಬಹುಮಾನವಿತ್ತಿದ್ದಾರೆ. ಶೇಷಾದ್ರಿಗಳ ಗುರುಗಳಾದ ಪುಟ್ಟರಾಜ ಗವಾಯಿಗಳು ಹಾರ್ಮೋನಿಯಂ ಕಲಾಪ್ರಪೂರ್ಣ ಎಂಬ ಬಿರುದನ್ನು, ನಿಡುಮಾಮಿಡಿ ಜಗದ್ಗುರುಗಳು ವಚನಗಾನ ವಿಭೂಷಣ ಎಂಬ ಪ್ರಶಸ್ತಿಯನ್ನು ಕೊಟ್ಟು ಆಶೀರ್ವದಿಸಿದ್ದಾರೆ. ಕನ್ನಡ ವಾಗ್ಗೇಯಕಾರರಲ್ಲಿ ಗಣ್ಯರಲ್ಲೊಬ್ಬರಾಗಿದ್ದಾರೆ. ಗವಾಯಿ ಶೇಷಾದ್ರಿಗಳು.

೧೨೫

ರಾಗ : ತೋಡಿ **ತಾಳ : ತ್ರಿತಾಲ್**

ಸತಿ ಸುತರು ಹಿತರೆಂದು ಕೆಡದಿರೂ
ಅತಿಯಾದರೆ ಬಲೆಗೆ ಮನವೇ ಸಿಲುಕದಿರು ॥ ಪ ॥

ಪತಿಕ ಪಾವನನಾ ಸತತ ಬಿಡದಿರೂ
ಧೃತಿಗೆಡವಲೆ ಸದ್ಗತಿ ಬಯಸುತಿರೊ
ಮತಿವಂತರ ಕೂಡೊಡನಾಡುತಿರೊ
ಯತಿಗಳ ಕಂಡರೆ ಅತಿವಿನಯದಿರೂ ॥ ೧ ॥

ಜ್ಞಾನ ವಿರತಿಯಲಿ ನಿಶ್ಚಲಮನವಿಡು
ಮಾನಾಪಮಾನಕೆ ಸಮಾನತೆಯ ಕೊಡು
ದಾನಧರ್ಮ ಸತ್ಪಾತ್ರಗೆ ಮಾಡು
ಪ್ರಾಣವಿರುವ ಪರಿ ದಿಟನುಡಿಯಾಡು ॥ ೨ ॥

ಎಷ್ಟಿದ್ದರು ಕೊನೆಗೆಲ್ಲವ ಬಿಡುವೆ
ಕಷ್ಟಪಟ್ಟು ಸುಮ್ಮನೆ ಕೂಡಿಡುವೆ
ಉರಗಾಚಲ ನಾನೊಮ್ಮನದೊರೆವೆ
ಕಾಯ್ವ ಬ್ರಹ್ಮಾನಂದಿನಿ ಗುರುವೆ ॥ ೩ ॥

❖❖

ಗಂಜಿಗುಂಟೆ ನರಸಿಂಹಮೂರ್ತಿ – ೧೯೨೬

ಗಂಜಿಗುಂಟೆ ನರಹರಿ ಅಂಕಿತದ ಕೀರ್ತನೆಗಳು (೧೩೮–)

ಗಂಜಿಗುಂಟೆಯ ನರಸಿಂಹಮೂರ್ತಿಗಳು ೧೯೨೬ರಲ್ಲಿ ಶ್ರೀಶ್ಯಾಮರಾವ್ ಮತ್ತು ಅಚ್ಚಮ್ಮ ದಂಪತಿಗಳ ಪುತ್ರರು. ಸಾಹಿತ್ಯ ಸಂಗೀತ ಮತ್ತು ವೇದಾಂತದರ್ಶನಗಳ ಹಿನ್ನೆಲೆಯ ಕುಟುಂಬದಿಂದವರಾಗಿದ್ದು ಬಾಲ್ಯದಿಂದಲೇ ಸಂಗೀತ, ನಾಟಕ, ಗಮಕ, ಕೀರ್ತನೆಗಳ ಪ್ರಭಾವದಲ್ಲಿ ಬೆಳೆದಿದ್ದಾರೆ. ಹರಿದಾಸ ಸಾಹಿತ್ಯದಲ್ಲಿ ಆಳವಾದಅಧ್ಯಯನ ಮಾಡುತಲೇ ಕುಮಾರವ್ಯಾಸಭಾರತ, ಹರಿಭಕ್ತಸಾರ, ಹನುಮದ್ವಿಲಾಸಗಳಂಥ ಭಕ್ತಿಸಾಹಿತ್ಯವನ್ನು ಕಂಠಸ್ಥಮಾಡಿಕೊಂಡು ಭಕ್ತಿಸಾಮ್ರಾಜ್ಯದಲ್ಲಿ ಮುಳುಗೇಳಿದವರು ನರಸಿಂಹಮೂರ್ತಿಗಳು. ಹರಿದಾಸರ ಹಾಡುಗಳನ್ನು ಭಕ್ತಿಭಾವದಿಂದ ಸುಶ್ರಾವ್ಯವಾಗಿ ಹಾಡುವಕಲೆಯನ್ನೂ ಕರಗತಮಾಡಿಕೊಂಡಿದ್ದರು. ಹಲವುಕಡೆ ಹಾಡುಗಾರಿಕೆ ಕಛೇರಿಗಳನ್ನು ನಡೆಸಿದ್ದಾರೆ. ಹರಿಕಥೆ, ಶಾಸ್ತ್ರೀಯ ಮತ್ತು ಜನಪದೀಯ ಹಾಗೂ ನಾಟಕದ ಮಟ್ಟುಗಳನ್ನು ಸರಾಗವಾಗಿ ಹಾಡಬಲ್ಲವರಾಗಿದ್ದರು. ಗಂಜಿಗುಂಟೆಯ ಲಕ್ಷ್ಮೀನರಸಿಂಹನ ಆರಾಧಕರಾಗಿದ್ದ ನರಸಿಂಹಮೂರ್ತಿಗಳು ಅವನ ಅಂಕಿತವನ್ನೇ ವ್ಯಾಸರಾಜಮಠದ ಶ್ರೀ ವಿದ್ವಾಪಯೋನಿಧಿತೀರ್ಥರಿಂದ ಪ್ರದಾನಮಾಡಿಕೊಂಡು ಸ್ವತಃ ಕೀರ್ತನೆಗಳನ್ನು ರಚಿಸಿದ್ದಾರೆ.

ಕೀರ್ತನ ತರಂಗಿಣಿ ಎಂಬ ಪುಸ್ತಕದಲ್ಲಿ ಇವರ ೮೨ ಕೀರ್ತನೆಗಳಿವೆ. ಈ ಕೀರ್ತನೆಗಳೆಲ್ಲ ಭಕ್ತಿ ಪ್ರಧಾನವಾಗಿದ್ದು ಆತ್ಮನಿವೇದನೆ ಮತ್ತು ಶ್ರೀಹರಿಯಸ್ತುತಿಗಳಿಂದ ಕೂಡಿವೆ. ಇವುಗಳಲ್ಲಿ ೮ ಸಮಾಜಮುಖಿ ಕೀರ್ತನೆಗಳನ್ನು ಗುರುತಿಸಿ ಇಲ್ಲಿ ನೀಡಲಾಗಿದೆ. ಈ ಸಾಮಾಜಿಕಕೀರ್ತನೆಗಳಲ್ಲಿ ಸನ್ನಡತೆಯನ್ನು ಸನ್ಮಾನಗಳಗಳನ್ನು ಸಮಾಜದಲ್ಲಿ ಬಯಸಿದವರಾಗಿ ಅದನ್ನು ದಯಪಾಲಿಸುವ ಪ್ರಭು ಮೂರು ಲೋಕದೊಳಗೆ ನರಹರಿರೂಪದ ಹರಿಯನ್ನು ಕೊಂಡಾಡಿದ್ದಾರೆ. ಭಕ್ತಿ ಭಿಕ್ಷೆಯ ನೀಡಯ್ಯ ಭವರೋಗ ವೈದ್ಯ ಎಂದು ಪ್ರಾರ್ಥಿಸುತ್ತಲೇ ಕೋತಿಮನವನು ಕೊಡೆಂದು ಇಡೀ ಸಮಾಜಕ್ಕೆ ಒಳಿತನ್ನು ಬಯಸುವ ಸಾಮಾಜಿಕರಾಗಿದ್ದಾರೆ.

ಗಂಜಿಗುಂಟೆ ನರಹರಿ

೧೨೬

ರಾಗ : ಹಂಸಾನಂದಿ ತಾಳ : ರೂಪಕ

ಇಂದಿರಾಧವ ನೊಂದೆನ್ನೈ ಭವ
ಬಂಧ ಬಿಡಿಸೆಲೊ ॥ ಪ ॥

ಕಂದನೆಂದು ಕಾಯಬೇಕೊ
ಕುಂದನೆಣಿಸದೆ ॥ ಅ.ಪ. ॥

ಯಾರ ಪಾಡಲಿ ಯಾರ ಬೇಡಲಿ
ಯಾರು ಹಿತವರು
ಮೂರು ಲೋಕದೊಳಗೆ ಅನ್ಯರ
ಯಾರ ಕಾಣೆನೊ ॥ ೧ ॥

ತಂದೆ ನೀನು ತಾಯಿ ನೀನು
ಬಂಧು ನೀನೆಲೊ
ಸಿಂಧುಶಯನ ಸಾರ್ವಭೌಮ
ಬಂದು ಸಲಹೆಲೊ ॥ ೨ ॥

ಮೀರಿಹೋದ ಕಾರ್ಯವನ್ನು
ಮನಕೆತಾರದೆ
ಸಾರಸಾಕ್ಷ ನಾರಸಿಂಹ
ಪಾರಗಾಣಿಸೊ ॥ ೩ ॥

೧೨೭

ರಾಗ : ಭೈರವಿ ತಾಳ : ಝಂಪೆ

ಕಾಲಕಾಲಕ್ಕೆ ದಯಪಾಲಿಸೆನಗಯ್ಯಾ ॥ ಪ ॥

ವ್ಯಾಳಶಯನನೆ ನಿನ್ನ ದಾಸರ ಸಂಗ ॥ ಅ.ಪ. ॥

ಸುಟ್ಟದಾಸನ ಸಂಗ ಸುಡುಗಾಡುದಾಸನ ಸಂಗ
ಕೊಟ್ಟದಾಸನ ಸಂಗ ಕೊಡದವನ ಸಂಗ
ಪುಟ್ಟದಾಸನ ಶರದಲ್ಲಿಟ್ಟ ದಾಸನ ಸಂಗ
ಹೊಟ್ಟೆದಾಸನ ಬಂಡಿ ಹೊಡೆಸಿದನ ಸಂಗ ॥ ೧ ॥

ಪಿತೃದ್ರೋಹಿಯ ಸಂಗ ಕಳತ್ರದ್ರೋಹಿಯ ಸಂಗ
ಭ್ರಾತೃದ್ರೋಹಿಯ ಕಲಹ ಭೋಕ್ತೃವಿನ ಸಂಗ
ಧಾತೃಜನಕನೆ ಲೋಕಧರ್ಮಗಳ ಕಡೆಗಣಿಸಿ ಸ
ರ್ವತ್ರ ನಿನ್ನನು ಕಾಂಬ ಶರಣರ ಸಂಗ ॥ ೨ ॥

ಭಿಕ್ಷುಕನು ಭೂಪತಿಯ ಪಂಕ್ತಿಭೋಜನವನ
ಪೇಕ್ಷಿಸಿದ ತೆರದಿ ನಾ ಪ್ರಾರ್ಥಿಸಿದೆನೊ
ರಾಕ್ಷಸಾಂತಕ ಲಕ್ಷ್ಮೀನರಸಿಂಹ ಕರುಣಾ ಕ
ಟಾಕ್ಷದಿಂದೀಕ್ಷಿಸಿ ಉಪೇಕ್ಷಿಸದೆ ಕಾಯೋ ॥ ೩ ॥

೧೨೮

ರಾಗ : ಮುಖಾರಿ ತಾಳ : ಝಂಪೆ

ಕುಂದನೆಣಿಸದೆ ಕಾಯೋ ಕಂತುಜನಕ ॥ ಪ ॥

ಮಂದಭಾಗ್ಯನ ಕೈಯ್ಯ ನೀಬಿಡದಿರಯ್ಯ ॥ ಅ.ಪ. ॥

ತಂದೆತಾಯ್ಗಳ ಸೇವೆ ಮಾಡಿದವ ನಾನಲ್ಲ
ಬಂದ ಅತಿಥಿಗಳನ್ನು ಆದರಿಸಲಿಲ್ಲ
ಕುಂದದೆ ಗುರುಹಿರಿಯರನ್ನು ಸೇವಿಸಲಿಲ್ಲ
ಇಂದಿರೇಶನ್ನ ಮನಮುಟ್ಟ ಪೂಜಿಸಲಿಲ್ಲ ॥ ೧ ॥

ವ್ರತನೇಮ ಉಪವಾಸ ಮಾಡಿದವ ನಾನಲ್ಲ
ಶ್ರುತಿ ಶಾಸ್ತ್ರ ಪುರಾಣಗಳ ಕೇಳಲಿಲ್ಲ
ಕ್ರತು ಹವನ ಹೋಮ ಯಜ್ಞವೆಂಬುದನರಿಯೆ
ಮತಿಹೀನನನಿಗಿನ್ನು ಗತಿಯಾವುದಯ್ಯ ॥ ೨ ॥

ಪಾಪಿಯಾದಜಮಿಳನು ನಾರಗಾ ಎಂದೆನಲು
ಕೈಪಿಡಿದು ಕಾಯ್ದ ಕೃಪಾಪಯೋಧಿ
ತ್ರಿಪಥಗಾಮಿನಿಜನಕ ನರಸಿಂಹ ನೀ ಎನ್ನ
ಪಾಪರಾಶಿಯ ತರಿದು ಕಾಪಾಡಬೇಕು ॥ ೩ ॥

೧೨೯

ರಾಗ : ಅಮೃತವರ್ಷಿಣಿ ತಾಳ : ಆದಿ

ನರಹರಿಯನು ನಾ ನಂಬಿದೆ ಗುರುಪವನನ ನಾ ನಂಬಿದೆ ॥ ಪ ॥

ದುರಿತದೂರರ ನಾ ನಂಬಿದೆ ದುರಿತಗಳೆಲ್ಲ ಪೋಗಾಡಿದೆ ॥ಅ.ಪ. ॥

ಹರಿಕಥೆಗಳ ನಾ ಕೇಳುವೆ ಹರಿದಾಸರ ಒಡನಾಡುವೆ
ಹರಿನಾಮ ಕೀರ್ತನೆ ಪಾಡುವೆ ಹರಿ ಹರಿ ಎಂದು ಕುಣಿದಾಡುವೆ ॥ ೧ ॥

ಹರಿಚರಿತೆಯ ನಾನೋದುವೆ ಹರಿಯ ಮಹಿಮೆ ಕೊಂಡಾಡುವೆ
ಹರಿಯೆ ಪರನೆಂದು ಸಾರುವೆ ಹರಿಭಕ್ತಿ ಪುಳುಕಿತನಾಗುವೆ ॥ ೨ ॥

ಹರಿಮೂರ್ತಿಗಳ ಪೂಜೆ ಮಾಡುವೆ ಹರಿಯನು ಅವುಗಳಲ್ಲಿ ಕಾಣುವೆ
ಹರಿಚರಣದಿ ಹೊರಳಾಡುವೆ ಪರಮ ಭಕುತಿಯನ್ನು ಬೇಡುವೆ ॥ ೩ ॥

ಭಾಗವತವ ನಾನೋದುವೆ ಭಗವದರ್ಪಣವ ಮಾಡುವೆ
ಭಾಗವತರ ಕೊಂಡಾಡುವೆ ರಾಗಾದಿಗಳ ಪೋಗಾಡುವೆ ॥ ೪ ॥

ವರಗಂಜಿಗುಂಟೆನಿವಾಸ ಹರಿ ಹಯ ಹರರಿಗಧೀಶ ।
ಮರುತ ಹೃದಾಬ್ಜನಿವಾಸ ಶ್ರೀನರಹರಿಯ ಚರಣದಾಸ ॥ ೫ ॥

೧೩೦

ರಾಗ : ರೀತಿಗೌಳ ತಾಳ : ಝಂಪೆ

ನಿನ್ನ ಬಿಟ್ಟರಘಳಿಗೆ ಇರಲಾರೆ ಹರಿಯೆ
ಎನ್ನಬಿಡದಿರು ಎನ್ನದೊರೆಯೆ ನರಹರಿಯೆ ॥ ಪ ॥

ಘನ್ನಮಹಿಮನೆ ಗಂಜಿಗುಂಟಾಖ್ಯಪುರದರಸ
ಪನ್ನಂಗಶಯನ ಪರಿಪಾಹಿ ಶ್ರೀರಮಣ ॥ಅ.ಪ. ॥

ಜಲವ ಬಿಟ್ಟು ಮೀನು ಉಳಿಯಬಲ್ಲುದೆ ದೇವ
ಮಳೆಯಿಲ್ಲದೆ ಸಸ್ಯ ಬದುಕಲಹುದೆ
ಎಳೆಗಂದ ತಾಯ ಬಿಟ್ಟರಲರಿವುದೆ ಸ್ವಾಮಿ
ಚಲಿಸಬಲ್ಲುದೆ ಯಂತ್ರಚಾಲಕನ ಹೊರತು ॥ ೧ ॥

ಪತಿಯಿಲ್ಲದಂಗನೆಗೆ ಸೌಭಾಗ್ಯವುಂಟೆ ಸಂ
ತತಿ ಇಲ್ಲದ ಮನೆಯು ಶೋಭಿಸುವುದೆ
ಶ್ರುತಿ ಇಲ್ಲದ ಗಾನ ಸೊಗಸುವುದೆ ಸ್ವಾಮಿ ಶ್ರೀ
ಪತಿಯ ಬಿಟ್ಟವಗೆ ಸದ್ಗತಿ ಎಂಬುದುಂಟೆ ॥ ೨ ॥

ಗಾಳಿ ಇಲ್ಲದೆ ಜೀವಿ ಜೀವಿಸಲುಬಹುದೆ ಬಿರು
ಗಾಳಿಗೊಡ್ಡಿದ ದೀಪಕುಳಿಗಾಲವುಂಟೆ?
ಕಾಲನಾಳ್ಗಳ ದಾಳಿಗೊಪ್ಪಿಸದೆ ಪ್ರಹ್ಲಾದ
ಪಾಲ ನರಸಿಂಹ ಕೈಪಿಡಿದೆನ್ನ ಕಾಯೋ ॥ ೩ ॥

೧೩೧

ರಾಗ : ಕುರಂಜಿ ತಾಳ : ಆದಿ

ಭಕ್ತಿಭಿಕ್ಷೆಯ ನೀಡಯ್ಯ ಭವರೋಗ ವೈದ್ಯ
ಬಕ್ತಿಭಿಕ್ಷೆಯ ನೀಡಯ್ಯ ॥ ಪ ॥

ಮುಕ್ತಿದಾಯಕನೆ ಮಮತೆಯಿಂದಲಿ ಎನಗೆ ॥ಅ.ಪ. ॥

ದುಷ್ಟ ಇಂದ್ರಿಯಗಳ ಕಟ್ಟಿ ಬಿಗಿದು ಬಲು
ಪಟ್ಟು ಬಿಡದೆ ಮನಮುಟ್ಟಿ ಭಜಿಸುವಂಥ ॥ ೧ ॥

ಕೋತಿಮನವನು ಹತೋಟಿಯೊಳಗೆ ಇಟ್ಟು
ಮಾತುಮಾತಿಗೆ ನಿನ್ನ ಪ್ರೀತಿಯಿಂದಲಿ ನೆನವ ॥ ೨ ॥

ಅರಿಗಳಾರ್ವರ ತರಿದು ವರದ ನರಸಿಂಹನೆ
ಪರಮ ಪುರುಷನೆಂದರಿತು ಭಜಿಸುವಂಥ ॥ ೩ ॥

೧೩೨

ರಾಗ : ಚಕ್ರವಾಕ ತಾಳ : ಝಂಪೆ

ಸರ್ವಾಪರಾಧಗಳ ಕ್ಷಮಿಸಯ್ಯ ಸ್ವಾಮಿ
ಶರ್ವಾದಿ ಸುರವಂದ್ಯ ಸರ್ವಾಂತ್ಯರ್ಯಾಮಿ ॥ ಪ ॥

ದುರ್ವಾರರವಹ ಎನ್ನ ದುರಿತಗಳ ರಾಶಿಗಳು
ಪರ್ವತದ ಪರಿಯಿಹವು ಪತಿತಪಾವನನೆ ॥ ಅ.ಪ. ॥

ಉದರಪೋಷಣೆಗಾಗಿ ಹೃದಯರಹಿತರ ಹೊಗಳಿ
ಬುಧರ ನುಡಿಗಳಿಗೆ ನಾ ಬಧಿರತೆಯ ತಾಳಿ
ಸದಮಲಾಚಾರಗಳ ಸುದ್ದಿಯನೆ ಕೈಬಿಟ್ಟೆ
ಪದುಮನಾಭನ ಪಾದ ಭಜಿಸದೆಲೆ ಕೆಟ್ಟೆ ॥ ೧ ॥

ಚಕ್ಷುಗಳು ಪದುಮಪತ್ರಾಕ್ಷಿಯರ ಚಲುವಿಕೆಯ
ಈಕ್ಷಿಸಿ ದಣಿಯವು ಪಕ್ಷಿವಾಹನನೆ
ಇಕ್ಷುಚಾಪನ ಪ್ರಬಲ ಪುಷ್ಪಬಾಣಂಗಳಿಗೆ
ಲಕ್ಷ್ಯನಾದೆನೊ ಸರ್ವಸಾಕ್ಷಿ ಸಲಹಯ್ಯ ॥ ೨ ॥

ದುಷ್ಟಜನರ ಕೂಡಿ ದುಷ್ಕೃತ್ಯಗಳ ಮಾಡಿ
ಕಷ್ಟಕೊಳಗಾದೆನೊ ಕೃಷ್ಣಮೂರ್ತಿ
ಎಷ್ಟುಪೇಳಲಿ ಎನ್ನದೃಷ್ಕೃತ್ಯಗಳ ಕ್ಷಮಿಸಿ
ಶಿಷ್ಟರೊಳಗಿಡಿಸೊ ಶಿಷ್ಟೇಷ್ಟ ನರಸಿಂಹ ॥ ೩ ॥

❖❖

ಗಿರಿಮಾಜಿ ರುಕ್ಮಿಣಿ (೧೯೨೭-೨೦೧೨)

ರುಕ್ಮಿಣಿವರದ ಅಂಕಿತದ ಕೀರ್ತನೆಗಳು(೧೪೬-೧೫೪)

ಜೀವನ : ಕೋಲಾರದ ಜಯರಾಂ ಗಿರಿಮಾಜಿ ಹಾಗೂ ವೆಂಕಮ್ಮ ದಂಪತಿಗಳ ಸುಪುತ್ರಿ ರುಕ್ಮಿಣಿ ಗಿರಿಮಾಜಿ ೧೯೨೭ರಲ್ಲಿ ಜನಿಸಿದರು. ಆಜನ್ಮ ಬ್ರಹ್ಮಚಾರಿಣಿಯಾಗಿ ಬಾಳ್ವೆ ಬದುಕಿದರು. ಬೆಂಗಳೂರು ಮಹಾರಾಣಿ ಕಾಲೇಜಿನಲ್ಲಿ ಪದವಿಪಡೆದು ಅನಂತರ ಹಿಂದಿ ಎಂ.ಎ. ಪಾಸು ಮಾಡಿದರು. ಉತ್ತರ ಭಾರತದ ಬಾಗಲ್ಪುರದ ವಿಕ್ರಮಶಿಲಾ ವಿದ್ಯಾಪೀಠದಿಂದ. ಕರ್ನಾಟಕ ಹರಿದಾಸರ ಜೀವನ ಮತ್ತು ಕೃತಿಗಳು ಮಹಾಪ್ರಬಂಧಕ್ಕೆ ಪಿ.ಎಚ್.ಡಿ. ಪಡೆದರು. ಹಿಂದಿ, ಪಾಳಿ, ಕನ್ನಡದಲ್ಲಿ ತ್ರಿಭಾಷಾಪಂಡಿತೆಯಾಗಿ ಬೆಂಗಳೂರು ನಗರ ಪಾಲಿಕೆಯ ಹೈಸ್ಕೂಲುಗಳಲ್ಲಿ ಗಾಂಧಿನಗರ ಬಾಲಿಕಾ ಪಾಠಶಾಲೆಯಲ್ಲಿ ೧೫ ವರ್ಷ ಇತರಶಾಲೆಗಳಲ್ಲಿ ೧೫ ವರ್ಷ ಹೀಗೆ ೩೦ ವರ್ಷ ಶಿಕ್ಷಕಿಯಾಗಿ ಸೇವೆ ಸಲ್ಲಿಸಿದ್ದಾರೆ.

ಸಾರ್ವಜನಿಕ ಸೇವೆಯನ್ನು ರೆಡ್‌ಕ್ರಾಸ್ ಸೊಸೈಟಿ, ಬಾಲವಾಡಿ ಅಂಗನವಾಡಿ, ಸಮಾಜ ಕಲ್ಯಾಣ ಇಲಾಖೇ, ಮಾಧ್ವಮಂಡಲಸಂಸ್ಥೆಗಳಲ್ಲಿ ಸಲ್ಲಿಸಿದ್ದಾರೆ. ೧೯೪೬ರಲ್ಲಿ ಗಾಂಧಿಜಿ ಅವರ ಸ್ವಹಸ್ತದಿಂದ ಹಿಂದಿವಿಶಾರದ ಪ್ರಶಸ್ತಿ ಪತ್ರ ಪಡೆದಿದ್ದಾರೆ. ಲೇಡಿ ರಾಮನ್ ಅವರಿಗೆ ಅವರ ೭೦ನೇ ವಯಸ್ಸಿನಲ್ಲಿ ಹಿಂದಿ ಮಾತನಾಡಲು ೬ ತಿಂಗಳಲ್ಲಿ ಕಲಿಸಿದ್ದಾರೆ. ೨೦೧೨ರಲ್ಲಿ ನಿಧನರಾದರು. ಗಿರಿಮಾಜಿ ಅವರಿಗೆ ಅನೇಕ ಪ್ರಶಸ್ತಿಗಳು ಅವರ ಸಂಘಸಂಸ್ಥೆಗಳ ಸೇವಾಕಾರ್ಯಗಳಿಗೆ ದೊರೆತಿವೆ. ಮಾಧ್ವಸಮಾಜಸೇವಾರತ್ನ, ಸಾಹಿತ್ಯ ಸಂಸ್ಕೃತಿ ಪ್ರಚಾರ ಪ್ರವೀಣೆ, ಗುರುಗೋವಿಂದದಾಸ ಪ್ರಶಸ್ತಿ, ವಿದ್ಯಾವಾಚಸ್ಪತಿ, ರೆಡ್‌ಕ್ರಾಸ್ ಪ್ರಶಸ್ತಿ ಇತ್ಯಾದಿ.

ಸಾಹಿತ್ಯ ಸೇವೆ : ಶ್ರೀ ಪಾದರಾಜ ಸಂಪುಟ ಅರಳು ಮಲ್ಲಿಗೆ ಪಾರ್ಥಸಾರತಿ ಅವರ ಕೃತಿ ಮಾಡಿದ್ದಾರೆ. ವಿಶ್ವೇಶತೀರ್ಥರ ಗೀತಾಸಾರೋದ್ಧಾರ ನಿರುಪಮಾ ಅವರ ಕನ್ನಡ ಕಾದಂಬರಿ ಶಿಲಾರವ ಇವುಗಳನ್ನು ಹಿಂದಿಗೆ ಅನುವಾದಿಸಿದ್ದಾರೆ.

ದಾಸಸಾಹಿತ್ಯ : ಗೋಪಾಲದಾಸರು (ಮಕ್ಕಳಿಗಾಗಿ) ಬಳ್ಳಾರಿ ಜಿಲ್ಲೆಯ ಹರಿದಾಸ ಮಹಿಳೆಯರು (ಜೀವನ ಚರಿತ್ರೆ) ಕರ್ನಾಟಕದಿಂದ ಅನುಭಾವಿ ಕವಿಯತ್ರಿಯರು

(ಗಿರಿಯಮ್ಮ, ಭೀಮವ್ವ, ಲಕ್ಷ್ಮೀದೇವಮ್ಮ) ಶ್ರೀ ವೈಷ್ಣವ ಮಹಿಳಾ ಹರಿದಾಸಿಯರು. ರುಕ್ಮೀಣಿವರದ (ಶ್ರೀ ನಿವಾಸವಿಠಲಾಂಕಿತ ೧೦೮ ಕೀರ್ತನೆಗಳು) ಹನುಮದ್ವಿಲಾಸ, ಲಕ್ಷ್ಮೀಶೋಭಾನೆ ಗೀತಾದರ್ಶನ ಇತ್ಯಾದಿ ರಚಿಸಿದ್ದಾರೆ.

ರುಕ್ಮೀಣೀವರದ ಕೀರ್ತನೆಗಳು

೧೩೩

ಎಂದು ಕರೆಸಿಕೊಳ್ವೆಯೆಂಬ ಚಿಂತೆಯೇತಕೆ ?
ಮುಂದೆ ದಾರಿಕಾಣುತಲಿರಲು ಸಂದೇಹವೇತಕೆ ? ॥ ೧ ॥

ದೂರದಾರಿ ಸಾಗಲಾರೆ ಎಂಬ ಭಯವೇತಕೆ ?
ನೇರವಾಗಿ ನಿನ್ನಮನೆಗೆ ಬರಲು ಇತರರೇತಕೆ ? ॥ ೨ ॥

ಕಂಡಕಂಡವರ ಬೆನ್ನುಹತ್ತಿ ಹೋಗಲೇತಕೆ ?
ಸಿಂಧುಶಯನ ಹರಟೆಯಲ್ಲಿ ಹೊತ್ತು ಕಳೆಯಲೇತಕೆ ? ॥ ೩ ॥

ನಂಬಿರಲು ನಿನ್ನ ಶ್ರೀಶ ಸರ್ವಸ್ವನೆಂದು ಜೀವವು
ಬೆಂಬಿಡದೆ ರುಕ್ಮಿಣಿವರದ ಕಾಯಲೇಕೆ ಶೋಕವು? ॥ ೪ ॥

೧೩೪

ಕರುಣಾಳು ನಿನ್ನೊರತು ಕಾಯ್ವರಾರೀ ಜಗವಾ
ಹರಿಸಯ್ಯ ಭಾನುಸ್ವರೂಪಿ ನೀ ಕುಹಕವಾ

ಬಲುನೊಂದಿಹುದು ಭವವು ಚೆಲುವ ನಿನ್ನನು ಮರೆತು
ಬಗೆಗಾಣದೆ ತೊಳಲುತಿದೆ ನಗಧರನೆ ಬೇಗಬಾರಯ್ಯ ॥ ೧ ॥

ಗ್ಲಾನಿಪೊಂದಲು ಧರ್ಮ ಜ್ಞಾನತೇಜದಿ ನೀನು
ಅವತರಿಸಿ ಆಗಾಗ ಬಂದು ಭೂಮಿಯಲಿ
ಆರ್ತರನು ರಕ್ಷಿಸುತ ದುಷ್ಟರನು ಶಿಕ್ಷಿಸುತ
ಕರ್ತವ್ಯವನು ಬೆಳಗಿ ಸ್ಥಿತಿಸ್ಥಾಪನೆ ಗೈವೆ ॥ ೨ ॥

ಅನನ್ಯ ಭಕ್ತಿಯಲಿ ಶರಣಾಗಿ ಬಂದವರ
ಘನ ನೀಲವರ್ಣ ನೀ ಯೋಗಕ್ಷೇಮವ ವಹಿಸಿ
ಸಲಹುವೆನವರನೆಂಬ ನಿನ್ನ ಶಪಥ ಮರೆಯದೆ
ಒಲಿದು ಪಾಲಿಸಲು ಬೇಗ ಬಾ ರುಕ್ಮಿಣಿವರದಾ ॥ ೩ ॥

೧೩೫

ಜಗದ ಜಂಜಡ ಹರಿಸೇ ನಿನ್ನ ಹೊರತಿನ್ಯಾರೂ
ಖಗಪತಿನಾಹನನೇ ನೀ ದಯೆತೋರೋ ತೋರೊ ॥ ಪ ॥

ದೀನಜನ ಬಾಂಧವನೇ ದಾರಿದ್ರ್ಯ ಹರಿಸೊ
ದೀನತೆಯ ಭಾರತದಿ ನೀನೇ ತೊಲಗಿಸೊ
ಯಾರು ಕಾಯವವರಿಲ್ಲ ನೀನಿಲ್ಲದೀ ಇಳೆಗೆ
ಮಾರಪಿತ ಬಾರಯ್ಯ ಜನ ಹೃದಯದೊಳಗೆ ॥ ೧ ॥

ತೋರಿಕೆಯ ಆಚಾರ ಡಂಭವೆಲ್ಲೆಲ್ಲಿಯೂ
ಬಾರರ್‍ಯೆ ನಿನ್ನಂತರಂಗ ಭಕ್ತರು ಹೊರಗೇ
ಎಲ್ಲರಸಬೇಕವರ ಶ್ರೀಶನೀ ಪೇಳೂ
ಎಲ್ಲರಂತಿರುವರೇ ಅವರೆಂಬುದನು ಹೇಳೂ ॥ ೨ ॥

ಹೃದಯದಾರಿದ್ರ್ಯವೊ ಮೇಲೆ ಹಾಹಾಕಾರಾ
ಸದಯಳಿಗೆ ಭಾರತಿಗೆ ಘೋರಪ್ರಹಾರಾ
ಹಿಂದೆಲ್ಲ ಧರಣಿಯನು ಉದ್ಧರಿಸಲಿಲ್ಲವೇ
ಇಂದೇಕೆ ಮೌನವೋ ರುಕ್ಮಿಣಿಯ ವರದಾ ॥ ೩ ॥

೧೩೬

ತವಕಿಸಿ ಬಂದಿಹ ದಾರಿಗನಿಗೆ ನೀ
ದೊರಕಿಸಿ ಕೊಡೆಲೊ ನಿನ್ನ ದೀಪಾ
ಎಂದಿಗು ಆರದ ಎಲ್ಲೆಲ್ಲು ಬೆಳಗುವ
ಸುಂದರಪ್ರಣತಿಯ ನಂದಾದೀಪ ॥ ಪ ॥

ಹಿಂದೆ ಕಾರ್ಗತ್ತಲೆ ಮುಂದೆ ಕತ್ತಲೆ ಬಯಲು
ಇಂದಿರಾರಮಣಾ ಗತಿಯೇನು ಎನಗೆಂದು
ಶೂನ್ಯದಲಿ ದೃಷ್ಟಿಯನ್ನಿಟ್ಟು ಪಾಂಥನು ತಾನು
ಪೂರ್ಣಸ್ವರೂಪನೆ ಶ್ರೀಶ ನಿನ್ನರಸುವನು ॥ ೧ ॥

ದೀಪ ಉರಿಯುತಿದೆ ಹೃದಯಾಂತರಾಳದಿ
ಪಾಪಮುಸುಕಿದೆ ಮಾಯೆಯ ಮುಸುಕು
ತೆಗೆಯಲಶಕ್ತನು ಪಾಂಥನು ಬಂಧಿತನು
ತೆಗೆದೊಗೆಯಲಾರೆಯಾ ರುಕ್ಮಿಣಿವರದನೇ ॥ ೨ ॥

೧೩೭

ನಂಬಿ ಬಂದೆನೋ ಕಾಯೋ ಎನ್ನನೂ
ಬೆಂಬಿಡದೆಲೆ ಶ್ರೀ ಪದ್ಮಿನೀರಮಣಾ ॥ ಪ ॥

ಭವಸಾಗರದಲ್ಲಿ ಬಲುನೊಂದೆನಯ್ಯಾ
ದಿವಿಜರೊಡೆಯನಾ ದಾರಿಯ ಕಾಣದೇ
ಆಸೆ ಆಮಿಷ ಕೋಪ ದ್ವೇಷದ ಸುಳಿಯಲ್ಲಿ
ಈಸಲಾರೆನೊ ನಾ ಘಾಸಿಯುಪಡಲಾರೆ ॥ ೧ ॥

ಶೈಲವಾಸನೇ ಶ್ರೀನಿವಾಸಃ ಶ್ರೀಪತಿ
ಕಾಲನಿರ್ಮಾಪಕ ಕಾಲನ ಬಲೆಯಿಂ
ಶ್ರೀಶನೇ ರಕ್ಷಿಸು ರುಕ್ಮಿಣಿವರದಾ
ವಾಸುದೇವ ಹರಿ ಶರಣಾದೆ ನಿನಗೇ ॥ ೨ ॥

೧೩೮

ಬದ್ಧನಾದೆ ಬದ್ಧನಾದೆ ಭವದ ಮಾಯೆಯೊಳಗೇ
ಬುದ್ಧಿಹೀನನಾದೇ ಈ ಸಾಗರದ ಸುಳಿಯೊಳಗೇ ॥ ಪ ॥

ಸತ್ತ್ವರಜಸ್ತಮದ ಅಹಂಕಾರದಿಂ ಕೂಡೀ
ಸತ್ಯವಾ ತಿಳಿಯದೇ ನಿತ್ಯ ನಿನ್ನನು ಮರೆತೇ

ವಿತ್ತಗಳಿಸುವಾಸೆಯಿಂ ಹೊತ್ತನೂ ನಾ ಕಳೆದೇ
ಮಿತ್ರನೇ ನೀ ಸಕಲಕೆಲ್ಲವೆಂಬುದನು ಮರೆತೇ ॥ ೧ ॥

ಈತಿಭೀತಿಗಳಿಂದ ಮನದಾಕಾಶವನು ಮುಚ್ಚಿ
ಪ್ರೀತಿಸದೆ ಹೋದೇ ನಿನ್ನ ಶರಣರೆಲ್ಲರನೂ
ಕಾಕುಮನುಜರ ಕೂಡಿ ನಿಂದಾನುಡಿಯನಾಡೀ
ಬೇಕುಬೇಕೆನಗಿಷ್ಟು ಭವದಾಸೆಯೆಂದೇ ॥ ೨ ॥

ಜೀವ ದೇವರ ಭೇದ ಲಕುಮಿಪತಿ ನಾ ಮರೆತೇ
ಜೀವಾಂತರ್ಯಾಮಿ ನಿನ್ನ ಗುರುತಿಸದೇ ಹೋದೇ
ಭಾವನೆ, ಕಲ್ಪನೆಯ ಧ್ಯಾನ ಧಾರಣದಲ್ಲಿ
ದೇವ ಶ್ರೀಶನೆ ನಿನ್ನ ಸ್ಮರಣೆ ಕೊಡೊ ರುಕ್ಮಿಣೀವರದಾ ॥ ೩ ॥

೧೩೯

ಬಳಲಿದೆನು ಬಳಲಿದೆನು ಭವದ ಮಾಯೆಯಲ್ಲಿ
ನಳಿನಾಕ್ಷ ನಿನ್ನ ಪದಕಮಲವನು ಸ್ಮರಿಸದೇ ॥ ಪ ॥

ವ್ಯಾಮೋಹ ಸುಳಿಯಲ್ಲಿ ನಿನ್ನ ಪಾದಾರ್ಚನೆಯ
ರಾಮಾ ಮನೋಹರನೆ ನಿರ್ಲಕ್ಷಿಸುತ ನಾ ಬಂದೆ
ಕರ್ಮಮಾಡುವೆನೆಂಬ ಭ್ರಾಂತಿಯಲಿ ಸಿಲುಕೀ
ಮರ್ಮವರಿಯದೆ ಹೋದೆ ಸರ್ವವ್ಯಾಪಕನೆಂಬ ॥ ೧ ॥

ಸಂಸಾರಸಾಗರದ ಬೆರಗು ಬುರುಗುಗಳೆಲ್ಲ
ಕಂಸಾರಿ ನಿಸಾರವೆಂಬರಿವು ದೊರಕಲು ಮತ್ತೆ
ಕಳೆದುದಾಯುಷ್ಯವೂ ಶಕ್ತಿ ಉಡುಗಲು ಮತ್ತೆ
ಉಳಿದ ಕೆಲಘಳಿಗೆಯಲ್ಲಿ ನಿನ್ನನಾಶಿಸುತ್ತಿಹೆನೂ ॥ ೨ ॥

ರಾಮಣೀಯಕವಾದ ನಿನ್ನ ದರ್ಶನ ಕೊಡೋ
ಸ್ವಾಮಿ ಚಿನ್ಮಯರೂಪ ನಿನ್ನನಾಶ್ರಯಿಸಿದೇ
ಬಿಂಬನೀನೇ ಶ್ರೀಶಾ ಅಣು ನಾನು ಪ್ರತಿಬಿಂಬ
ಡಿಂಬದಲ್ಲಿ ನೆಲೆಸಿ ಉದ್ಧರಿಸೊ ರುಕ್ಮಿಣಿ ವರದಾ ॥ ೩ ॥

೧೪೦

ಭವರೋಗಹರ ನಿನ್ನ ನಂಬಿ ಬಂದಿಹೆ ನಾನು
ದಿವಿಜರೊಡೆಯ ಕೃಷ್ಣ ಹರಿ, ರಕ್ಷಿಸೆನ್ನನು ॥ ಪ ॥

ಆದಿವ್ಯಾಧಿಗಳಿಂದ ಬಲು ಬವಣೆಯನು ಜೀವ
ಮಾಧವನೆ ಪಡುತಿರಲು ನೋಡಿ ಕುಳಿತಿರಬಹುದೆ
ಸಾಧುವೇ ನಿನಗಿದೂ ಯದುವಂಶ ಕುಲದೀಪ
ಆದಿಮಧ್ಯಾಂತರಹಿತ ಪೊರೆಯಲಾರೆಯ ಎನ್ನ ॥ ೧ ॥

ಬಹಿರ್ವ್ಯಾಧಿಗಳ ಕಿಚ್ಚು ಅಂತರಂಗವನೀಗ
ದಹಿಸುತಿರೆ ದಳ್ಳುರಿಯು ನಿನ್ನ ನಾಮದ ಜಪವು
ಶೀತಲೋದಕದರಿತೆ ಶಾಂತಗೊಳಿಸುತ್ತಿರಲು
ಭೀತಿ ತೊಲಗಿಸುದೇವ ಭವಭಂಗ ಹಿಂಗಿಸೂ ॥ ೨ ॥

ಮಣಿಮಂತ್ರ ಔಷಧಿಯು ನಿನ್ಹೊರತು ಇನ್ನಿಲ್ಲ
ಅನುರಾಗವೊಂದಿರಲು ಸಾಕೆನಗೆ ನಿನ್ನದು
ಗರುಡರಾಜನ ಬೆನ್ನ ಏರಿ ಬಾ ಶ್ರೀ ನಿಧಿಯೆ
ವರದ ರುಕ್ಮಿಣಿಯಮ್ಮ ಉದ್ಧರಿಸು ಬಾ ಶ್ರೀಶಾ ॥ ೩ ॥

೧೪೧

ಮಾತುಗಳ ಎಣಿಕೆಗೆ ಗೀತಗಳ ನಾದಕ್ಕೆ
ಶಾಸ್ತ್ರ ಸಮ್ಮತಿ ಪುರಾಣೇತಿಹಾಸಗಳಿಗೆ
ನೀತಿ, ನ್ಯಾಯಾನ್ಯಾಯ ತತ್ತ್ವಾರ್ಥಗಳಿಗೆ
ಸೇತುಪತಿ ನಾರಾಯಣನು ದೊರಕಲಾರ ॥ ೧ ॥

ಆಯಾಯ ಕಾಲಕ್ಕೆ ಆಯಾಯ ವೇಷದಲಿ
ಆರ್ಯಜನಗಳು ಬಂದು ತತ್ತ್ವಶಾಸ್ತ್ರವನರುಹೆ
ಮನುಜರೆಲ್ಲರು ಅರಿತು ಹರಿಸರ್ವೇಶನೆಂಬುದನು
ಮನುಮಥನ ಪಿತನನ್ನು ಭಕ್ತಿಯಿಂ ಭಜಿಸಿರೆನಲು ॥ ೨ ॥

ಸತ್ಯವನು ತಿಳಿಯದೆ ಬಳಲಿ ಬೆಂಡಾಗಿ
ತತ್ತ್ವವನ್ನು ಅರಿಯದೆ ಕಡುಮೂರ್ಖರಾಗಿ
ಎಲ್ಲ ಕಾಲದಲಿ ಎಲ್ಲರಲ್ಲಿರುವ ನಿನ್ನ ತಿಳಿಯದೆ
ತೊಳಲುತಿರುವವರನುದ್ಧರಿಸೋ ರುಕ್ಮಿಣೀವರದಾ ॥ ೩ ॥

❖❖

ಶ್ರೀ ವೆಂಕಟೇಶ ಸುಧಾಬಾಯಿ ಹೊಸೂರು (೧೯೨೮)

ಧಾರವಾಡದ ಅಬ್ಬಿಗೆರೆಯ ಪಂಚಮುಖಿ ಮನೆತನಕ್ಕೆ ಸೇರಿದ ಶ್ರೀ ವಿದ್ಯಾರತ್ನಂ ಶ್ರೀ ರಾಘವೇಂದ್ರಾಚಾರ್ಯ ಪಂಚಮುಖಿ ಮತ್ತು ಕಮಲಾಬಾಯಿ ಅವರ ಮಗಳು ಸುಮಿತ್ರಾಬಾಯಿ ಜನಿಸಿದ್ದು ೧೯೨೮ರಲ್ಲಿ, ಮನೆಯಲ್ಲೇ ಶಾಲಾಶಿಕ್ಷಣ ನಂತರ ವಿದ್ಯಾಭ್ಯಾಸ ಮುಂದುವರೆಸಿದರು. ಸಂಸ್ಕೃತ, ಕನ್ನಡ, ತಮಿಳು, ಹಿಂದಿ ಭಾಷೆಗಳಲ್ಲಿ ಪರಿಣಿತಿ, ದಾಸಸಾಹಿತ್ಯ, ಕಾವ್ಯ, ನಾಟಕ ಸಾಹಿತ್ಯಗಳಲ್ಲಿ ಪ್ರೌಢಿಮೆಗಳಿಸಿದರು. ತಾಯಿ-ತಂದೆ ಪ್ರಭಾವದಿಂದ. ಶ್ರೀ ವಿಜಯಾಚಾರ್ಯ ಹೊಸೂರರೊಂದಿಗೆ ವಿವಾಹವಾಗಿ ಸುಧಾಬಾಯಿ ಎಂಬ ನಾಮಾಂಕಿತ ಪಡೆದರು. ವಿವಾಹಾನಂತರ ಕನ್ನಡ ಸಾಹಿತ್ಯಪರಿಷತ್ತಿನ ಕಾವಪರೀಕ್ಷೆಯಲ್ಲಿ ಉತ್ತೀರ್ಣರಾದರು. ಇಳಿವಯಸ್ಸಿನಲ್ಲೂ ಭಜನಾಮಂಡಳಿ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದಾರೆ. ತಂದೆ ಅವರಿಂದ 'ಶ್ರೀ ವೆಂಕಟೇಶ' ಅಂಕಿತ ಪಡೆದರು.

ಕೃತಿಗಳು:೧) ಹರಿಗುರು ಸ್ತವನಾಂಜಲಿ-೨೦೧೨ ೨) ಶ್ಯಮಂತಶೋಪಾಖ್ಯಾನ – ೧೯೫೬ ೩) ಪ್ರಹ್ಲಾದ ಚರಿತ್ರ ರಚನೆ : ಸುಧಾಬಾಯಿ ಹೊಸೂರು.

೧೪೨

ಯಾತಕೆ ತಡ ಮನ ನಡಿ ನಡಿ
ಹರಿಪುರದ ಹಾದಿಯ ಹಿಡಿ ಹಿಡಿ
ಎದುರಿಗೆ ಇದೆ ಮಾರುತಿಯ ಗುಡಿ
ಕರುಣಿಸೆಂದು ಪಾದ ಹಿಡಿಹಿಡಿ ॥ ಪ ॥

ಮನವೆಂಬ ಮರ್ಕಟವ ಹೊಡಿ ಹೊಡಿ
ಸುಜ್ಞಾನವೆಂಬ ದಾರಿಯಲಿ ನಡಿ ನಡಿ
ಹೆಣ್ಣು ಮಣ್ಣಿನಾಸೆಯ ಕಡೀ ಕಡೀ
ಸುಜನರ ಸಂಗವನು ಹಿಡೀ ಹಿಡೀ ॥ ೧ ॥

ಒಂಬತ್ತು ಬಾಗಿಲದ ಮನೆಯಲಿ
ಹತ್ತುಮಂದಿ ಸೈನಿಕರ ವಶದಲಿ
ಸುತ್ತುಮುತ್ತು ಶೆರೆಯಾ ನಿಂತಾರಲ್ಲಿ
ಹುತ್ತಿನಲ್ಲಿಯ ಹಾವಿನಂತೆ ನಿನ್ನ ಪರಿ ॥ ೨ ॥

ಸಂಸಾರದ ಪಾಶಕ್ಕೆ ಸಿಲುಕಬೇಡಾ
ಕಂಸಾರಿಯ ನಾಮವ ಮರೆಯಬೇಡಾ
ಪಂಜರದ ಗಿಣಿಯ ಬಲೆಯಿಂಗ ಬಿಡಿಸಿದಂತೆ
ಶ್ರೀ ವೆಂಕಟೇಶನ ಕಳೆವ ನಿನ್ನ ಭವದ ಚಿಂತೆ ॥ ೩ ॥

೧೪೩

ಹ್ಯಾಂಗ ಮಾಡಲಯ್ಯ ರಂಗ ಹೋಗುತಿದೆ ಆಯು
ತುಂಗವಿಕ್ರಮ ನಿನ್ನಂಗವನೆನೆಯದೆ
ಭಂಗಬಡುತಿಹೆನು ಮಂಗಳಮಹಿಮಾ ॥ ಪ ॥

ನೀ ದಯಮಾಡಿದ ಮನುಷ್ಯ ದೇಹವು । ಬರಿದೆ ಹೋಯಿತಲ್ಲೋ
ಮಾಯಾಪಾಶದ ಬಲೆಯೊಳು ಸಿಲುಕಿ ಘಾಸಿಯಾದೆನಲ್ಲೋ
ಮುಂದಿನಹಾದಿಯ ದಾರಿಕಾಣದೇ ಭಂಗಪಡುತಿಹೆನು ಭಯಹರ ಪ್ರಭುವೇ ॥೧॥

ಮನೆಯು ನನ್ನದು ಮಾಡುನನ್ನದು ಎಂಬ ಮಮತೆಯಿಂದ
ಮದನಾರಿಯನು ಮನದಲಿ ನೆನೆಯದೆ ಮರುಳು ಆದೆನಲ್ಲ
ಬಿನುಗುಮಾನವರ ಮನವನು ಒಲಿಸಲು ಹಗಲು ಇರುಳು ಬರಿದಾಯ್ತಲ್ಲ ॥೨ ॥

ಇನ್ನೆಂತು ಎನ್ನಯ ಪಾಪವ ಉಸುರುವೆ ಪ್ರಾಣದಾತ ಹರಿಯೇ
ನೀನೇ ಎನ್ನಯ ಹೃದಯದಿ ಭಕ್ತಿಯ ಪ್ರೇರಿಸಯ್ಯ ದೊರೆಯೇ
ನಿನ್ನ ಉಪಕಾರವ ಎಂದಿಗೂ ಮರೆಯೆನೋ ಶ್ರೀ ವೆಂಕಟೇಶ ದೊರೆಯೇ ॥೩॥

❖❖

ಶ್ರೀ ವಿದ್ಯಾಸಾಗರ ಮಾಧವತೀರ್ಥರ (ಜ-೧೯೩೦)
ಜ್ಞಾನಸಾಗರ ಮಾಧವ ಅಂಕಿತದ ಕೀರ್ತನೆಗಳು (೧೫೭-೧೫೯)

ಶ್ರೀ ವಿದ್ಯಾಸಾಗರ ಮಾಧವತೀರ್ಥರು (ಕಂಬಾಲೂರು ವೆಂಕಟೇಶಾಚಾರ್ಯ) ಮದ್ರಾಸಿನಲ್ಲಿ ಬಿಎ ಆನರ್ಸ್ ಗಳಿಸಿದ್ದರು. ತಂದೆ ಕಂಬಾಲೂರು ರಾಘವೇಂದ್ರಾಚಾರ್ಯ ತಾಯಿ ನಾಗಮ್ಮ ೧೯೭೬ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಿಂದ ವ್ಯಾಸಭಾರತದ ಅನುವಾದಗಳ ಬಗ್ಗೆ ಪಿಎಚ್.ಡಿ. ಪದವಿ ಗಳಿಸಿದರು. ೩೭ ವರ್ಷ ಅಧ್ಯಾಪಕರಾಗಿ ಕಾರ್ಯ ನಿರ್ವಹಿಸಿದರು. ಆಂಧ್ರದ ಸರ್ಕಾರಿ ಕಲಾಶಾಲಾ ಪ್ರಾಂಶುಪಾಲರಾಗಿ ಕಾರ್ಯನಿರ್ವಹಿಸಿ ನಿವೃತ್ತರಾದರು. ೧೯೮೭ರಲ್ಲಿ ಕರ್ನೂಲಿನ ಅಖಿಲಭಾರತ ತತ್ತ್ವಜ್ಞಾನ ಸಮ್ಮೇಳನದ ಅಧ್ಯಕ್ಷತೆ ವಹಿಸಿದರು. ೭೦ನೇ ವಯಸ್ಸಿನಲ್ಲಿ ೨-೧೨-೨೦೦೧ರಲ್ಲಿ ಸಂನ್ಯಾಸತ್ವ ಸ್ವೀಕರಿಸಿದರು. ೨೫ನೇ ಯತಿಗಳಾಗಿ ಶ್ರೀ ವಿದ್ಯಾಸಾಗರ ಮಾಧವತೀರ್ಥರೆನಿಸಿಕೊಂಡರು. ಶ್ರೀಗಳು ಹತ್ತಾರು ಕೃತಿಗಳನ್ನು ರಚಿಸಿರುವರು ಆಪೈಕಿ ಐದು ತುಳಸೀ ದಳಗಳು, ಅಂತರಂಗ ತಿಳಿಗೀತೆಗಳು, ೩೦ ಅಂಕಣಬರಹಗಳ ಸಂಗ್ರಹಗಳು, ಅಮೃತದರ್ಶನ (೨೦೧೧) ಗ್ರಂಥಗಳು ಪ್ರಸಿದ್ಧವಾಗಿವೆ. ತೆಲಗು. ಕನ್ನಡ ಇಂಗ್ಲಿಷ ೩ ಭಾಷೆಗಳಲ್ಲಿ ಗ್ರಂಥರಚನೆ ಮಾಡಿರುವ ಹಿರಿಮೆ ಇವರದು. ಕಾವ್ಯಗಳನ್ನಷ್ಟೇ ಅಲ್ಲದೆ ಹತ್ತಾರುಕೀರ್ತನೆಗಳನ್ನು ರಚಿಸಿದ್ದಾರೆ. ಆ ಪೈಕಿ ಕೆಲವು ಸಮಾಜಮುಖಿ ಕೀರ್ತನೆಗಳನ್ನು ಇಲ್ಲಿ ಕೊಟ್ಟಿದೆ.

೧೪೪

ದೇವಮಂದಿರ ಈ ದೇಹ ಜೀವದಾಸ
ಜೀವ ಮಾಳ್ಪನು ಸಂಧಾನ ದೇವಪೂಜೆ ॥ ಪ ॥

ಕೇಳಿದು ಅಧ್ಯಾತ್ಮಸಾಧನೆಗೆ ಸುಗಮಪಥ
ಸಪ್ತದಶ ಮೇಲೆರಡು ಸಹಸ್ರಸಿರಿ ಹರಿಯ
ಮೂರ್ತಿಗಳು ನಿತ್ಯ ಪವಮಾನ ಮೂರ್ತಿಗಳಯೊಡನೆ
ನಾಡಿನಾಡಿಗಳಲಿ ನಿಂತು ನಲಿಯುತಿಹವು ॥ ೧ ॥

ಕರಗಳ ಕೆಲಸವವನ ಕೈಂಕರ್ಯ ನಿತ್ಯ
ಪದಗಮನ ಪ್ರದಕ್ಷಿಣೆ ಸದುಮಪತಿಗೆ
ಕಣ್ಣನೋಟ ನೀರಾಜನೆ ಕರುಣನಿಧಿಗೆ
ಮಾತನಾಡುವುದೆಲ್ಲ ನಾಮಜಪ ಕೇಳು ॥ ೨ ॥

ಉಸುರುವುದು ಚಾಮರದ ಸೇನೆ ಉತ್ತಮನಿಗೆ
ಮಡದಿಮಕ್ಕಳ ಪ್ರೀತಿಯೆ ಮಧುರಭಕುತಿ
ಸುಮ್ಮನಿರುವುದೆ ಧ್ಯಾನ, ಅಹಮ್ಮು ತೊರೆದು
ಬಾಳುವುದೇ ಆತ್ಮನೈವೇದ್ಯ ಅಖಿಲಪತಿಗೆ ॥ ೩ ॥

ಉದರಭರಣ ವೈಶ್ವಾನರನೂಟ ಸ್ನಾನ
ಮಾರಮಣನಿಗೆ ಅಭಿಷೇಕ ಜ್ವರದ ತಾಪ
ಉರು ತಪಸ್ಸು ಮರಣ ಮಹದುಪರತಿಯದು
ಅತಿಶಯಪಯಣ ರಥೋತ್ಸವ ಹುತಿಯೆ ಯಜ್ಞ ॥ ೪ ॥

ಅಗ್ನಿಗಿಡುವ ದೇಹ ಪವಿತ್ರ ಯಜ್ಞಕಾಷ್ಠ
ಕಷ್ಟವಿಲ್ಲದೆ ಅನುನಿತ್ಯ ಇಷ್ಟು ನೆನೆಯ
ಜ್ಞಾನಸಾಗರ ಮಾಧವ ತಾನೆ ಒಲಿದು
ಜನನ ಮರಣವಿಲ್ಲದ ತನ್ನ ಸ್ಥಾನಕೊಡುವ ॥ ೫ ॥

೧೪೫

ಭಾರವಾಯಿತೀ ಪಂಜರವಾಸ ಸ್ವಾಮಿ ॥ ಪ ॥

ಬಂಧನದ ಬದುಕಿದು ಬಲು ಬಾಧಿಸುತಿದೆ
ಹಾರಿ ಹೋಗಲು ಕಾಣೆನೋ ದಾರಿಯೆಲ್ಲೋ
ಪಂಜರದ ಕದ ಒಡೆದು ಎನ್ನಬಂಧ ಬಿಡಿಸೋ
ವೀರರಾಮ ವೀರರಾಮ ವೀರರಾಮ ॥ ೧ ॥

ಬಾರಿಬಾರಿಗು ಪುಂಡರು ಆರುಮಂದಿ
ಹೆಂಡಕುಡುಕರು ಬಿಡದೆನ್ನ ಹಿಂಸಿಸುವರು
ಮೂರುಕಡೆ ಬೀಸುತಿಹ ಬಿಸಿಮಾರುತಕ್ಕೆ
ಆರು ಗೇಣಿನ ದೇಹ ಮೂರಾಯಿತಯ್ಯ ॥ ೨ ॥

ಸುತ್ತಮುತ್ತ ಕಚ್ಚುತಿಹವು ಕತ್ತಲಲ್ಲಿ
ಎತ್ತಣದ ಕೀಟಗಳು ಈ ವಿಪತ್ತು ನೋಡು
ಮಾಳ ಮಾರ್ಜಾಲ ಹೊಂಚಿದೆ ವೇಳೆಗಾಗಿ
ಬಾಳುಭಯದಿಂದ ತುಂಬಿದೆ ಸಹಿಸಲಾರೆ ವೀರರಾಮ ॥ ೩ ॥

ಕದ ಒಡೆದು ಬಿಡು ಗಗನದಾಗ ಮನಕೆನ್ನ
ಹಾರಿ ಹೋಗುವ ಹರಿ ನಿನ್ನ ಹರ್ಮ್ಯದೆಡೆಗೆ
ಹಾಹಾ ಹಾಹಾ ಆಹಾ ಎನುತ ಹಾಡಿಕೊಳುತ
ಜ್ಞಾನಸಾಗರ ಮಾಧವಾ ನಿನ್ನ ಮಹಿಮೆ ॥ ೪ ॥

೧೪೬

ಮಹಿಮೆ ತಿಳಿದು ನಾ ಹರಿಪೂಜೆ ಮಾಡಲಾರೆ । ಅವನಿ ಆಕಾಶದಲೆಲ್ಲ ಅವನ ಮೂರ್ತಿ
ಅನುಕಣಗಳಂತೆ ಪಿಲಿಪಿಲಿಯಾಗಿರುತಿರೆ । ಆವಮೂರ್ತಿಗೆ ನಾ ಮಾಡಲಾರ್ಚನೆಯನು ॥ ೧ ॥

ಪೀಠವೆ ಅವನಾಗಿರೆ ಪೀಠದುಪರಿ । ಆವಮೂರ್ತಿಗಾವಾಹನೆ ಭಾವಿಸುವುದು ॥
ಗಂಟೆಯಲವನೆ ನಿಂತರೆ ಗಂಟೆಪಿಡಿದು । ಬಾರಿಸಲಿ ಹೇಗೆ? ಏನೇನು ತೋರದೆನಗೆ ॥ ೨ ॥

ನೀರಿನಿಂದಭಿಷೇಕಕೆ ನೀರು ತರಲು । ತೋರುತಿಹನು ನಾರಾಯಣವಾರಿಯಾಗಿ
ಯಾರಿಗಭಿಷೇಕ ಮಾಡಲಿ ನೀರಿನಿಂದ । ದಾರಿತೋರದೆ ಜಡನಾದೆ ದಾರುವಂತೆ ॥ ೩ ॥

ಪೂಜಿಸಲು ಪುಷ್ಪಪಿಡಿಯಲು ಪುಷ್ಪವಾದ । ಅವನ ಮೇಲನವನೆಸೆಯಲಾಗಲಿಲ್ಲ
ಧೂಪತೋರೆ ಅಂಗಾರದಿ ತೋರಿದವನೆ । ದಾರಿತೋರಿದೆ ಬಿಟ್ಟೆ ಧೂಪದಾರತಿಯನು ॥ ೪ ॥

ಪರಿಪರಿ ನೈವೇದ್ಯ ತರಲು ತಾನೆ । ಅವುಗಳಲಿ ಕಾಣೆ ನೈವೇದ್ಯ ಹರಿಸಲೆಂತು?
ಆರತಿಯಜ್ಯೋತಿರೂಪದಿ ಅವನೆ ಕಾಣೆ । ಆರತಿಯನಾರಿಗೆ ತೋರಲಿ
ಅರಿಯೆ ನಾನು ॥ ೫ ॥

ಛತ್ರವವನೆ ಆದ ಅವನೆ ಚಾಮರಾದಿ । ಸೇವೆಗಾಗುವ ಸಾಮಗ್ರಿ ಭಾವನಾದ
ಏನು ಮಾಡಲು ಕೈಯಾಡದೆನಗೆ ಚಿತ್ರ । ವಾದನುಭವವಿದು ಅನಿರ್ವಾಚ್ಯವೆನಗೆ
॥ ೬ ॥

ಏನು ಮಾಡಲಾಗದೆ ನಾನು ಜ್ಞಾನವೀವ । ಪೂರ್ಣಬೋಧ ಗುರುಚರಣ ಪುಂಡರೀಕ
ಶರಣನಾದೆ ಜಿಜ್ಞಾಸುವಾಗಿ ಸಿರಿರಮಣ । ಸ್ವಾಖ್ಯ ಸದ್ಭಾವ ಪೂಜೆಯ ಜ್ಞಾನವಿತ್ತ
॥ ೭ ॥

ಎಲ್ಲವಸ್ತುಗಳಲಿ ತದ್ರೂಪನಾಗಿರುವ । ತನ್ನ ರೂಪದಿಂದ್ಯೈಕ್ಯವ ನೆನೆವ ದಿವ್ಯ
ಸ್ವಾಖ್ಯಪೂಜಾನುಸಂಧಾನ ಭಾವದಿಂದ । ಅವನನವನಿಗೆರ್ಪಿಸುವುದೆ ಅವನ ಪೂಜೆ
ಜ್ಞಾನಸಾಗರ ಮಾಧವ ಒಲಿವ ॥ ೮ ॥

ಕೋ.ಸು.ಸಂಪುಟಾಣೆ (೧೯೩೦-   )

ಸಂತಾ ವಿಠಲ ಅಂಕಿತದ ಕೀರ್ತನೆಗಳು (೧೬೦-೧೬೨)

ಜನನ:ಕೋಸು ಸಂಪುಟಾಣೆ ಅವರು ೩-೧-೧೯೩೦ರಲ್ಲಿ ದೊಡ್ಡಬಳ್ಳಾಪುರದ ಕೋಡಿಹಳ್ಳಿಯಲ್ಲಿ ಜನಿಸಿದರು. ೧೯೫೫ರಲ್ಲಿ ಬಿ.ಇ. ಪದವೀಧರರಾಗಿ ಲೋಕೋಪಯೋಗಿ ಇಲಾಖೆಯಲ್ಲಿ ಸೇವೆಸಲ್ಲಿಸಿದರು. ಅನೇಕ ಸಂಘಸಂಸ್ಥೆಗಳ ಸ್ಥಾಪಕರಾದ ಇವರು ನಾಟಕಗಳನ್ನು ರಚಿಸಿದ್ದಾರೆ. ಸುಮಾರು ೨೫ ಕೃತಿಗಳನ್ನು ರಚಿಸಿದ್ದಾರೆ. ಕಾವ್ಯಕ್ಷೇತ್ರದಲ್ಲಿ ಮಕ್ಕಳ ಅಭಿನಯಗೀತೆಗಳನ್ನು ಸಹಕಾರಿವೃಂದ ಗೀತೆಗಳನ್ನು ಪದ್ಯಮಾಲಿಕೆಶತಕ ಬರೆದಿರುವ ಇವರು ೬೬ ಭಕ್ತಿಸಂಕೀರ್ತನೆಗಳ ಸಂಗ್ರಹವಾದ ಸಂಪುಟಾಣೆ ಭಕ್ತಿಸಂಪುಟವನ್ನು ೧೯೫೫ರಲ್ಲಿ ಪ್ರಕಟಿಸಿದ್ದಾರೆ.

ಶ್ರೀ ಸಂತಾವಿಠಲ ಅಂಕಿತದಲ್ಲಿ ಅವರ ಶ್ರೀಮತಿ ದಿವಂಗತ ಪ್ರಭಾಸಂಪುಟಾಣೆ ತಾಯಿ ನೆನಪಿನಲ್ಲಿ ಭಕ್ತಿ ಸಂಪುಟವನ್ನು ಅರ್ಪಿಸಿದ್ದಾರೆ.

ವೃತ್ತಿಯಲ್ಲಿ ಸಿವಿಲ್ ಇಂಜಿನಿಯರ್ ಆದರೂ ಸಾಹಿತಿ ಕವಿ, ಕಲಾವಿದ, ನಾಟಕಕಾರ, ಕೀರ್ತನರಚಕ, ಸಮಾಜಸೇವೆ ಸಂಘಸಂಸ್ಥೆಗಳ ಸೇವೆ ಸಂತಗಣಪತಿ, ಶ್ರೀಸಂತವಿಠಲ ರುಕುಮಾಯಿ, ನವಗ್ರಹಗಳು ಮುಂತಾದ ದೇವತಾವಿಗ್ರಹಗಳನ್ನು ಪ್ರತಿಷ್ಠಾಪನೆಗೆ ನೆರವಾಗಿದ್ದಾರೆ. ದೈವಭಕ್ತರಾದ ಸಮಾಜಸೇವೆಯಲ್ಲಿ ನಿರತರಾದ ಹೊರನೋಟಕ್ಕೆ ಲೌಕಿಕರಾದರು. ಅಂತರಂಗದಲ್ಲಿ ವಿಠಲಭಕ್ತರಾದ ಇವರ ಭಕ್ತಿ ಸಂಪುಟದಿಂದ ಕೆಲವು ಸಮಾಜಮುಖಿ ಕೀರ್ತನೆಗಳನ್ನು ಆಯ್ಕೆ ಮಾಡಿದೆ.

೧೪೭

ದಾಸನಾಗದಿರಯ್ಯ ವಿಷಯದ
ದಾಸನಾಗದಿರಯ್ಯ ॥ ಪ ॥

ದಾಸನಾದರೆ ಲೋಕದ
ದಾಸನೀನಾಗಯ್ಯ ॥ ಅ.ಪ. ॥

ಸಾಮೋಹ ಸುತರ ಮೋಹ
ಅತಿಆಶೆಯ ವ್ಯಾಮೋಹ
ಮಿತಿಮೀರಿದ ಅಹಿತವಾದ
ಅತಿಶೀಘ್ರ ಅಳಿಸಯ್ಯ ॥ ೧ ॥

ದುಗುಡವನು ದೂಡದಲೆ
ತುಡುಗ ನೀ ತಡೆಯದಲೆ
ಜಡಬಾಳ್ವೆಯ ಜಂಜಾಟ
ಕಡುಸುಖವು ಎನ್ನುತಲೆ ॥ ೨ ॥

ಕೇಳಿದರೆ ಒಳಿತನ್ನು ಕೇಳಬೇಕಯ್ಯ
ಹೇಳಿದರೆ ಒಳಿತನ್ನು ಹೇಳಬೇಕಯ್ಯ
ಬಾಳುವೆಯ ಆಳವನು ತಿಳಿಯಬೇಕಯ್ಯ
ಗೋಳು ಕಳೆಯುವ ನಮ್ಮ ಸಂತಾ ವಿಠಲಯ್ಯ ॥ ೩ ॥

೧೪೮

ರಾಗ : ಶಿವರಂಜಿನಿ ತಾಳ : ಝಂಪೆ

ಪಾಪಗಳ ಮಾಡಿಹೆನೊ ದಯೆ ತೋರೋ ಓ ದೊರೆಯೆ
ತಾಪಹರಿಸುವ ತಂದೆ ಬಾರಯ್ಯ ಕೈಪಿಡಿಯೆ ॥ ಪ ॥

ಅತಿ ಆಸೆಯಲಿ ಪರರ ದೂಷಿಸಿದೆ ನಾನಲಿದೆ
ಮತಿಗೆಟ್ಟು ಮನ್ನಣೆಯ ಮರೆತು ಬಾಳಿದೆ, ಮೆರೆದೆ
ಗತಿ ಕಾಣದಂದದಲಿ ನಡೆದು ನೊಂದೆನು ಒಡೆಯ
ಸ್ತುತಿಸಿ ಕರೆವೆ ತಂದೆ ಮತಿವಂತ ನೀನಯ್ಯ ॥ ೧ ॥

ಲೋಕಮೋಹಕೆ ಸಿಲುಕಿ ಲೋಕಕಂಟಕನಾದೆ
ನಾಕ ನರಕದ ಅರಿವನರಿಯದಂದದೆ ನೊಂದೆ
ಸಾಕು ಮಾಡೊ ಹರಿಯೆ । ಸಾಕು ಸಾಕಾಗಿ ಇದೆ
ವ್ಯಾಕುಲವನರುಹುವೆನು ನಾಕುಲೋಕಸಲಹದೆ ॥ ೨ ॥

ಒಡಹುಟ್ಟಿದವರಲ್ಲಿ ಕೆಡಕಮಾಡಿದೆ ನಾನು
ಹಡೆದ ತಾಯ್ತಂದೆಯರ ಹಗೆ ಮಾಡಿದಣುಗನು
ತಡವೇಕೆ ಕೇಳು ಶ್ರೀ ಸಂತಾವಿಠಲ ಅಳಲು
ಪೊಡವಿಯಲಿ ಕಾಪಾಡು ಬಿಡದೆ ಬೆಳಕಾಗಿಸಲು ॥ ೩ ॥

೧೪೯

ರಾಗ : ಹಂಸಧ್ವನಿ ತಾಳ : ಆದಿ

ಹುಡುಕದಿರು ಮನುಜ ದೇವರನಲ್ಲೆಲ್ಲು
ನೆಲಸಿಹನು ನಿನ್ನಯ ಮನದಲ್ಲು ॥ ಪ ॥

ಬೇಡಿದರೆ ಬರನು ಕಾಡಿದರೆ ಬರನು ।
ಮೂಡಿದರೆ ಭಕುತಿ ಭಕುತಿಗೆ ಪೊರೆವನು
ಕಡೆಹಾಯಿಸಿ ಭವ ಬಂಧನ ಕಳೆವನು
ಜಡತೆಗೆ ಜ್ಞಾನದ ಸೊಡರನು ಪಿಡಿವರು ॥ ೧ ॥

ಅಜಮಿಳ ಧ್ರುವ ಪ್ರಹ್ಲಾದರಿಗೊಲಿದ
ಗಜರಾಜಗೆ ಗತಿತೋರುತ ಸಲಹಿದ
ಸುಜನರ ಆನಂದಕೀರ್ತಿಯ ಗೋವಿಂದ
ಭಜಿಸುವೆ ಸಂತಾವಿಠಲಯ್ಯ ನೀ ಚೆಂದ ॥ ೨ ॥

❖❖

ವರಹವಿಠಲ ಅಂಕಿತದ ಕೀರ್ತನೆಗಳು (೧೬೩-೧೭೨)
ವಿಠಲಶೇಷೋ ಝುಂಝುರವಾಡಿ (೧೯೩೦-   )

'ವರಹವಿಠಲ' ಅಂಕಿತದಲ್ಲಿ ಕೀರ್ತನೆಗಳನ್ನು ರಚಿಸಿರುವ ಶ್ರೀ ವಿಠಲಶೇಷೋ ಝುಂಝುರವಾಡ ಅವರು ೨೧-೮-೧೯೩೦ರಂದು ಬಾಗಲಕೋಟೆಯಲ್ಲಿ ಜನಿಸಿದವರು. ತಂದೆ ಮರಾಠಿಕವಿಗಳಾಗಿದ್ದ ಶೇಷೋಘೋಂಡೋ ಝುಂಜರವಾಡರು. ಬಾಲ್ಯದಿಂದಲೇ ಮರಾಠಿಪತ್ರಿಕೆ ಕಲ್ಯಾಣವನ್ನು ಪುಸ್ತಕ 'ಜ್ಞಾನೇಶ್ವರಿ'ಯನ್ನು ಓದಿಕೊಂಡು ತಮ್ಮ ಬದುಕಿಗೆ ಅಳವಡಿಸಿಕೊಂಡಿದ್ದ ಝುಂಝುರವಾಡರು ತಾತ್ವಿಕ ಮತ್ತು ಆಧ್ಯಾತ್ಮಿಕ ಚಿಂತನೆಯಲ್ಲಿ ಬೆಳೆದುಬಂದವರು. ಸಂಸ್ಕೃತದಲ್ಲಿ ಎಂ.ಎ. ವಿದ್ವತ್‌ಪದವಿಗಳನ್ನು ಗಳಿಸಿ ಸಂಸ್ಕೃತ ವಿಷಯಪರಿವೀಕ್ಷಕರಾಗಿ ಸು.೩೦ ವರ್ಷ ಮೈಸೂರಿನಲ್ಲಿ ಸೇವಾನಿರತರಾಗಿದ್ದರು.

ಅನೇಕಕವಿತೆಗಳನ್ನು ರಚಿಸಿ ಕವಿಗಳಾಗಿರುವ ಝುಂಝುರವಾಡಗು ಬಾಲ್ಯದಲ್ಲಿ ನಾಟಕಗಳಲ್ಲೂ ಪಾತ್ರವಹಿಸಿದ್ದ ಕಲಾವಿದರು ಹೌದು. ತಾಯಿಯವರು ಹಾಡುತ್ತಿದ್ದ ಹಾಡುಗಳು, ಮನೆಯಲ್ಲಿ ನಡೆಯುತ್ತಿದ್ದ ಮಾಧ್ವಸಂಪ್ರದಾಯ ನಿಷ್ಠೆಗಳು ಇವರ ಮೇಲೆ ಪ್ರಭಾವಬೀರಿದವು. 'ಶ್ರೀ ಗುರುವಂಶಾವಳಿ/ ಎಂಬ ಕೃತಿಯನ್ನು ರಚಿಸಿದ್ದು ಅಪ್ರಕಟಿತವಾಗಿದೆ ಎಂಬು ತಿಳಿದುಬಂದಿದೆ.

ಆಧುನಿಕ ಚಿಂತನಧಾರೆಗಳನ್ನು ಅರಗಿಸಿಕೊಂಡಿರುವ ಝುಂಝುರವಾಡರು ತಮ್ಮ ೧೨೩ ಕೀರ್ತನೆಗಳ ಶ್ರೀವರಹ ವಿಠಲಕೃತಿಗಳು ಪುಸ್ತಕವನ್ನು ೨೦೧೧ರಲ್ಲಿ ಪ್ರಕಟಿಸಿದ್ದಾರೆ. ಈ ಕೃತಿಯ ಮೂಲಕ ಆಧುನಿಕ ಕೀರ್ತನಕಾರರಾಗಿ ಬೆಳಕಿಗೆ ಬಂದಿದ್ದಾರೆ. ಸ್ವಪ್ನಾಂಕಿತವಾಗಿ ಮನೆಯಲ್ಲೇ ಪ್ರಕಟಿಸುವ ಆರಾಧ್ಯದೇವರ ಹೆಸರಲ್ಲೇ ವರಹವಿಠಲ ಅಂಕಿತ ಸ್ವೀಕರಿಸಿ ದಾಸತ್ವ ಅನುಸಂಧಾನಮಾಡಿ ಭಕ್ತಿಭಾವದಲ್ಲಿ ಈ ಕೀರ್ತನೆಗಳನ್ನು ರಚಿಸಿದ್ದಾರೆ. ಸಮಾಜಮುಖಿ ಚಿಂತನೆಯನ್ನು ಅಭಿವ್ಯಕ್ತಿಸುವ ಪ್ರಸ್ತುತ ೧೦ ಕೀರ್ತನೆಗಳನ್ನು ಇಲ್ಲಿ ಕೊಟ್ಟಿದೆ. ಇವರ ಎಲ್ಲ ಕೀರ್ತನೆಗಳಲ್ಲಿ ಮಾನವೀಯತೆಯ ಬಗೆಗಿನ ಲಕ್ಷ್ಯ ಧರ್ಮದ ಉಪ ಆಕೃತಿಯಾಗಿಯೇ ಕಾಣಿಸಿಕೊಂಡಿದ್ದರೂ ಈ ರಚನೆಗಳಲ್ಲಿ ಸಾಮಾಜಿಕ ಆಯಾಮವೇ ಪ್ರಧಾನ ಆಕೃತಿಯಾಗಿರುವುದನ್ನು ಕಾಣಬಹುದು. ಆಧುನಿಕ ಕೀರ್ತನಕಾರರು ಸಮಾಜಮೂಖಿ

ಚಿಂತನೆಗಳಿಗೇ ಹೆಚ್ಚು ಒತ್ತುಕೊಟ್ಟು ದಾಸಸಾಹಿತ್ಯದ ಪಾರಂಪರಿಕ ವಿಧಾನದಲ್ಲೇ ಮುಂದುವರಿದು ದಾಸಸಾಹಿತ್ಯದ ಜೀವಂತಿಕೆಯನ್ನು ಸಾಕ್ಷೀಕರಿಸಿದ್ದಾರೆ.

೧೫೦

ಅರಿವು ಎಂಬುದು ಏನು ಸ್ವಾಧೀನವೇ ।
ಪರಿಪರಿ ಅಲೆದೂ ನಿಜವು ನಿಜ ದೂರೇ ॥ ॥ ಪ ॥

ಮನದಂದು ನೆಟ್ಟದಿಟ್ಟಿಯ ಹೊತ್ತಗೆಯ ಪಾಠ
ಮನದಿಂದ ಗುರುಪಾಠ, ಚಿಂತನ ಪ್ರಪಾಠ ।
ಅನವರತ ದೀರ್ಘ ಆಳದ ಆ ಪ್ರಯಾಸದಲಿ
ಇನ್ನು ಸತ್ಯದ ಸಾರ ವಶವೇನು ಹೇಳು ॥ ೧ ॥

ಕೈಮುಗಿದು, ಕಾಲ್ಗೆರಗಿ, ಕಂಡ ಕಂಡೆಡೆ ತಿರುಗಿ
ಮೈ ಮುರಿದು ಸಾಷ್ಟಾಂಗ ಕುರಿಕುರಿತು ಓದಿ ।
ಕೈಮರವು ಸಿಕ್ಕೀತು ದಾರಿ ಸವೆಯಲೇಬೇಕು
'ಸ್ವೈ' ಮತಕೆ ಮೀರಿಯಾ ಅಂತರಂಗ ಪ್ರಜ್ಞೆ ॥ ೨ ।

ಅರಿತೆನೆಂಬುದ ಮರೆತು ಅರಿವ ಹಂಬಲ ಹಿಡಿದು
ಸಾರಿಸಾರಿದ ಅಂಶ ಸಾಲುಸಾಲು ।
ಸೇರಿ ಈ ಗಾತ್ರ ಸಂತ್ಯಾಗ ಕ್ಷಣದಲಿ ಜ್ಯೋತಿ
ಸರ್‍ರನೆ ಹೊಳೆದರೆ ವರಹವಿಠ್ಠಲ ಪ್ರೀತಿ ॥ ೩ ॥

೧೫೧

ಆಳ ಅಳೆಯಲೆನೆ ನಾನೇ ಬದಿಗಾದೆ ।
ಬಾಳು ಮಿಂಚಿ ಕಾರೆಂಬಂತೆ ॥
ಫಳ್ಳನೆ ಉಜ್ವಲ ಕಣ್ಣಂಚೊಳಗೆ ।
ಉಳ್ಳ ಗುಪ್ತನಿಧಿ ಮೈ ತುಂಬಿತು ॥ ॥ ಪ ॥

ಅದೇ ನೆನೆದ ಹುರಿ ಹುರೀ ಇಂದಿಗೂ
ಇದಕೆ ಇದಿರು ಎಳೆಯದು ಎಲ್ಲೊ

ಒದಗಿ ಬೆದೆಹುದಲು ನಿತ್ಯ ಮಂಥನ
ಸಿದಗಿ ಎಂಬುದು ಕಣ್ ಚಿವುಟಿನ ತೊರೆಕಡ್ಡಿ ॥ ೧ ॥

ಉಸಿರು ಬರಿ ಹೆಸರು ಜಾಗೃತಿ ಶಕ್ತಿ
ಕಸಿಯದ ಪ್ರಜ್ವಲ ಪಥಪೂರ್ತಿ
ಅಸಿಮಿಸಿ ಬೇಡ ಕಸಿವಿಸಿ ನೀಗಿ
ಹಸಿರು ಹಾಸನು ಬೇರಾಚೆಗೆ ನೆನೆಸು ॥ ೨ ॥

ಆ ದಿನ ಈ ದಿನ ಎಂದೇನಿಲ್ಲ
ಸದಾ ಸಮೃದ್ಧ ಸತ್ವರ ತೀರ್ಥ
ಇದು ಒಲಿದರೆ ಎಲ್ಲಾ ಇಲ್ಲೇ ಸರಿ
ಸದಯ ವರಹವಿಠ್ಠಲ ದಯಮಾಡೋ ॥ ೩ ॥

೧೫೨

ಕುಂಟುತ್ತ ಕುಂಟುತ್ತ ಎಲ್ಲಿವರೆ ಪಯಣ ।
ಸೊಂಟ ಮುರಿದರೂ ಪ್ರಾಣಮಾತ್ರವೇ ಜಿವನ ॥ ॥ ಪ ॥

ಕಾಲೆಲ್ಲಿ ಎಳೆಯಲಿ ನೆಲವೆಲ್ಲೆ ಕರೆಯಲಿ
ಮೂಲ ಏನೋ ಆಶೆ ಎಲ್ಲೋ ಇರಲಿ ।
ಜಾಲದಲಿ ಎಳೆ ಎಣಿಸಿ ಆಚೆ ಇಲ್ಲದ ಬದುಕು
ಕಾಲಹರ ಮೀಸಲು ನಿಜದ ಸೆಲೆ ಇಲ್ಲ ॥ ೧ ॥

ಶ್ರಮಣ ಎಂತೇನೊ ನಿಷ್ಕ್ರಮಣ ನಿಲ್ಲದ್ದಕ್ಕೆ
ಶ್ರಮವೇನು ವಿಶ್ರಾಂತಿ ಎಲ್ಲ ಬೀಸಾತೆ ।
ತಮದಲ್ಲೂ ಕೈ ಚಾಚಿ ಕುರಿತು ಅಲೆಯಲಿಬಹುದು
ಸಮ ಆದಿ ಅದೇ ಅಂತ್ಯ ಬೇಡ ತಬ್ಬಿಬ್ಬು ॥ ೨ ॥

ಮಲಗಿದಾ ಸಿಂಹ ಉಪವಾಸೆ ಎರಗದೇ ಇಲ್ಲ
ಓಲಗಿಸಿ ಅಂತಿಂಥ ದೊರೆವುದಿಲ್ಲ ।
ಸಲಸಲಕೂ ತಲೆಯಾಡಿ ಮತ್ತೆ ಹಿಂದಕೆ ಸರಿದು
ಎಲ್ಲಿಗೋ ನಿನ್ನ ನೆಲೆ ವರಹವಿಠ್ಠಲನಿರದೆ ॥ ೩ ॥

೧೫೩

ಘುಡು ಘುಡು ನೋಡು ಅಚೇತನ ಚಲ ।
ಆಡಂಬರವೆಲ್ಲಿ ಮೂಢ ಮೂಲ ದೃಢ ॥ ಪ ॥

ಹಿಂಸ್ರಪ್ರಾಣಿಗತ ಆಸ್ರವಘಾತ
ಪ್ರಸವಿಸಿ ಅಳಿಗಾಳಕೆ ಪಾತ ॥
ವಿಸ್ರವ ಸಂತತ ಪಾಪ ಸ್ರಾವ
ವಿಶ್ರಮ ಸಜ್ಜೀವ ಕೃಪಾವಸರ ॥ ೧ ॥

ಕಣ್ಣಿಗೆ ಬಂಗಾರದ ಇಡಿ ಲೇಪ
ತಣ್ಣನೆ ಹಾಸಿಗೆಗೂ ತಲೆದಿಂಬ ॥
ಚಿಣ್ಣ ಮುಗ್ಧರಿಗೂ ಭಯ ನಿರಂತರ
ಮಣ್ಣುಗೂಡಿದರೂ ಹುಣ್ಣಿನ ವಾಸನೆ ॥ ೨ ॥

ಆಡಿ ಆಡಿ ದಣಿದರೂ ಇನ್ನಿಲ್ಲ
ಹೂಡಿ ವ್ಯೂಹ ಜಯ ಸಾಧಿಸಲಿಲ್ಲ ॥
ಮೂಡಲು ಒಳಗೆ ಕಿರಣ ಜ್ಯೋತಿ ಸೆಲೆ
ಮೂಡಿ ನಿಂತ ಶ್ರೀ ವರಹವಿಠ್ಠಲ ॥ ೩ ॥

೧೫೪

ಬಾರದ್ದು ಬಂದೀತೆ ಆಗದ್ದು ಆದೀತೆ ।
ಬಾರದೆ ನಿನ್ನ ದಯ ಭವ ನೀಗೀತೆ ॥ ॥ ಪ ॥

ತಂದೆ ನೀ ಎಂದೆಂದೂ ಅಂದಂದು ಅಲ್ಲಲ್ಲಿ
ಬಂಧನವ ಸಡಿಲಿಸಲು ಮತಿಯ ನೀಡಿ ।
ಅಂಧನ ಕೈದೀಪ ಸ್ವಂತಕೇನುಪಯೋಗ
ಬಂದ ಹುರಿಹುರಿಗಟ್ಟುವಂತೆ ನಾ ಬಂದೆ ॥ ೧ ॥

ಎಷ್ಟು ಅವಕಾಶವೇನು ಸಾವಕಾಶವೇ ತಿಳಿವು
ಇಷ್ಟು ದಿನ ನೀ ಕಂಡೂ ದಯಬಾರದೆ ।

ಎಷ್ಟೇನೋ ಎಂತೇನೋ ಯಾವುದಕೂ ಹಣಿಯದು
ಕಷ್ಟ ಜಗಿಜಗಿದರೂ ಇಷ್ಟು ಮತಿ ಕೂಡಿಲ್ಲ ॥ ೨ ॥

ನಿಶ್ಚಯವೆ ಸಲಸಲವು ಸಡಿಲೇ ಅದು ಕ್ಷಣಕ್ಷಣವೂ
ಆಶ್ಚರ್ಯ ನಾ ಅರಿಯೆ ಮಾಡುವವರಾರು ।
ಕಶ್ಚಿತ ಅಹುದು ನಾನು ಹಣೆಬರಹವೇ ಇಷ್ಟು
ನಿಶ್ಚಿತ ಸುತಾರಕ ವರಹವಿಠ್ಠಲ ಕಾಯೋ ॥ ೩ ॥

೧೫೫

ಬೈಗೂ ಬೆಳಗೂ ಮಾಸುವ ಚಿಂತೆ
ಅದರೊಳಗೇ ಸಾಗೋದೆಲ್ಲ ।
ತಂದದ್ದೆಷ್ಟೋ, ಬಂದದ್ದೆಷ್ಟೋ
ಬ್ಯಾರೆ ಎಂದೂ ಇಲ್ಲ ॥ ಪ ॥

ಅಂದಿನ ಲೆಕ್ಕಾ ಅಂದಿಗೆ ಚುಕ್ತಾ
ಎಂದೂ ಆಗಲೇ ಇಲ್ಲ ।
ಮುಂದಿನ ಲೆಕ್ಕಾ ಲಕ್ಷ್ಯಕ್ಕಿಲ್ಲ
ಬ್ಯಾರೆ ಬ್ಯಾರೆ ಎಲ್ಲ ॥
ಸಂದಿಗೊಂದಿಗೂ ಅದೇ ವಾಸನಿ
ಖಂದಕ ಮಗ್ಗಲದಾಗೇ
ಬಾಂಧವ ನೀನೆ ಕ್ವಾಟಿ ಆದರೂ
ಭಗ್ಗನೆ ಹೊತ್ತುವ ಬೇಗೆ ॥ ೧ ॥

ಪೈಗೆ ಪೈ ನೀ ಲೆಕ್ಕಾ ಹಾಕೀ
ನ್ಯಾಯಮಾರ್ಗ ಕಾಯ್ದಿ ।
ಪೈಗೆ ಕೈ ಒಡ್ಡಿ ಬೆಳೆಕೋತ ಹೋತು ।
ದೇಣೇ ಕೊಡಾವ್ರ ಯಾದಿ ॥
ಮೈಗೆ ಸರಿಯೋ, ಬೇ-ಆರಾಮೋ
ನಮಗ ಯಾಕ ಬೇಕು?।
ಹೊರಳಿದರೇನು, ನರಳಿದರೇನು
ಸಾಲ ಮುಟ್ಟಬೇಕು ॥ ೨ ॥

ಹಗಲು-ರಾತ್ರಿ, ಸಂಜೀ-ಮುಂಜಾನೆ
ಆದ ಧ್ಯಾಸ ಸತತ ।
ಸಾಗ ಹಾಕಬೇಕು ಸಾವ್ಕಾರೀ ಸಾಲ
ದೊಡ್ಡದ ಬಡ್ಡಿ ಅಸಲಿಗಿಂತ ॥
ಮುಗಿದ ಕೈ ನಿನಗ ಮುಗದಾಂಗ ಇರಲಿ
ಅರಳಲಿ ಒಳಮಗ್ಗಿ
ಆಗೂ ನೀನೆ, ಈಗೂ ನೀನೆ ।
ವರಹವಿಠ್ಠಲನ ಮನಹಿಗ್ಗಿ ॥ ೩ ॥

೧೫೬

ತುಳಿದದ್ದೇ ನಾ ದಾರಿ ಅಂದರ
ಭಾಳ ಅಡ್ಡ ಹೊಡಮರಳೀತು ।
ಬಾಳಬೇಕಂದರ ತಾಳಿ ಸರಿದೂಗಿ
ಬಾಗಿ ನಾವು ನಡೀಬೇಕಲ್ಲ ॥ ಪ ॥

ಕೈ ಹಾಕು ಮೊದಲೇ ಯೋಚಿಸಿ ಹುಂಬತನ ಬೇಡ
ಮೈ ಎಲ್ಲಾ ಕಣ್ಣಾಗಿದ್ದರೂ ಮತ್ತೂ ತಿಳಿ ತಿಳಿ ಆಡು ॥
ಸೈ ಎನಿಸಿದರೂ ಸುತ್ತಿನ ಬ್ಯಾನಿ ಏನು ತಿಳಿದು ನೋಡು
ಬೈಗೂ ಬೆಳಗೂ ದಾಟಿ ದಾಟಿ ನೀ ಇರುಳು ಕಳೆದುಕೂಡು ॥ ೧ ॥

ಅತೀ ಸ್ವಂತಿಕೆ, ಮೀರಿದ ಹಮ್ಮು, ಎಲ್ಲಾ ಕಡೆ ಅಲ್ಲ
ಕಥೀ ಹೇಳಿ ನೂರೆಂಟು ಆದೀತು, ಕೈಗೆ ಸಿಗಲೇ ಇಲ್ಲ
ಸಥೀ ಇಂದ ಹೇಳಿದ ಕಟುಮಾತು ಒಳಗ ಅರಿಯಲಿಲ್ಲ
ವ್ಯಥೀ ವ್ಯಥೀ ಅಂತ ಬಯಲಿಗೆ ಬಂದರೂ ಯಾರೂ ಕೇಳಲಿಲ್ಲ ॥ ೨ ॥

ಮಾತು ಮಾತಿಗೆ ಕೈ, ಕಣ್ಣು ತಾಕಿಸಿ ವ್ಯರ್ಥ ಖುಷಿ ಬ್ಯಾಡ
ಅಂತೂ ಇಂತೂ ಹೊಗಳಾಪ್ರಿಗಂತೂ ಸಾರ್ಥ ಸ್ವಾರ್ಥ ನೋಡ
ಚಿಂತೀಬ್ಯಾಡ, ಅಂತರಚಿಂತನೀ ಸಫಲಕಡೆಗೂ ಪಾಡ
ಕಂತೀ ಸರಿಸಿ ನೀ ಅ-ಕುಂತಪ್ರಿಯ ಶ್ರೀ ವರಹವಿಠ್ಠಲನ ಹಾಡ ॥ ೩ ॥

೧೫೭

ಮುಂಗೈತನಕ ಹ್ಯಾಂಗೋ ಹೀರಿದೆ
ಮೊಳಕೈ ಮಟ ಬಂತು
ಆಗೂ ಈಗೂ ಸಹಜ ಧಾಟಿಯೇ
ಬ್ಯಾಗ ಮುಗಿಯದಲ್ಲ ॥ ಪ ॥

ಎಲ್ಲಾ ಗೊತ್ತು ಅವನೇ ತಿಳಿಸಿದ ತಾಳಿಕೊಳ್ಳೂ ಅಂತ
ಬಲ್ಲೆ ಅದೇ ನಿಜದಾರಿ ಆದರೆ ಶಕ್ತಿ ಉಳಿಯಲಿಲ್ಲ ॥
ಸಾಲಮಾಡಿ ಮಾಡಿ ಬಾಳಾದೀತೆ ಬೇಕು ಸ್ವಂತ ಕಸುವು
ಎಲ್ಲಿಗೋ ಬೇರೆ ಹಚ್ಚಲಿಕ್ಕೆ ಅವ ಹೀಂಗ ಮಾಡಿಬಿಟ್ಟ ॥ ೧ ॥

ದುಡ್ಡಿದ್ದದ್ದೇ ದೊಡ್ಡತನಾ ಅಂತ ದಡ್ಡ ಅರಿವು ಎಲ್ಲೆಲ್ಲೂ
ಬಡ್ಡಿ ಬೇಡುವವ ಅಡ್ಡದಾರಿಯಲೇ ನನ್ನದೇ ನನ್ನದೇ ಅಂತಾನ ॥
ಬಡ್ಡೀ ಕೊಟ್ಟು ಹೇಳ್ಯಾನವಾ 'ನಾ ಇದ್ದೀನಿ' ನಿನಗ ಚಿಂತೀಬ್ಯಾಡ
ಒಡ್ಡ ತಲಿಗೆ ಅದು ಹತ್ತದಿದ್ದರ ಅವನೇ ಕಾಯಬೇಕಲ್ಲ ॥ ೨ ॥

ನೂರೆಂಟು ದಾರಿ ಚಿಗಿಚಿಗಿತು ಅದು ಏನು ಬಂತು ಹೇಳು
ಸಾರ ಒಂದೇ ಅವನೇ ಇರವೇ ಸಾರವಂದ್ಯ ಅವನು ॥
ದಾರಿ ಕಾಣಲಿಕೆ ಮುಗಿದು ಕೈಯ ಒಳ ಒಳಗೊಂಡೇನು
ಸರಿ ಬಂದಂತೆ ಸಲಹಲಿ ಅವನೇ ವರಹವಿಠ್ಠಲ ಪ್ರಭುವು ॥ ೩ ॥

೧೫೮

ಹೇಳಿದರಿದು ಕೇಳಿ ಕೇಳಿ ನನ್ನದು ಎಲ್ಲಿದೆ ತಿಳಿಯದು ।
ಸುಳಿಗಾಳಿಯ ವಿಹರಣ ತತ್ತರತೆಗೆ ಒಳಹಸಿವೇ ತಲೆ ತಾಕಿಹುದು ॥ ॥ ಪ ॥

ಆರಾರೆಲ್ಲ ಬಿಡಿ ಬಿಡಿ ಕೂಡಿ ಹೆಣೆಹೆಣೆದೂ ದಣಿದರು
ಯಾರ್ಯಾರೆಲ್ಲ ಕೇಳಿ ತಿವಿದೂ ತಲೆ ಕಿರೀಟಕೆ ಸಂದರು ॥
ಭಾರೀ ಯೋಚಿಸಿ ಏನೂ ಇಲ್ಲಾ ಎಂದೂ ಮೌನವ ವಹಿಸಿದರು
ತೂರಿ ತೂರಿ ಸದ್ಭಾವ ಅದೋ ಈ ಕಾಲಲಬ್ಧಿ ದೇವಾಧಿಪರು ॥ ೧ ॥

ಅದೇ ನೀನು ತಿಳಿಸಲು ನವನವ ದೃಷ್ಟಾಂತ ಹರವಿ ಬೆಳೆ–ರಾಶಿಯಲಿ
ತಿದೀ ಒತ್ತಿದರೂ ಧೂಳಿ ಮುಸುಕಿ ಅಗೋ ಕಂಡೂ ಕಾಣದರಾದರೊ ॥
ಅದೇ ಎಂದರೂ ಇದೂ ಬಿಡದೆ ಅನುಭಾವ ಭಾವವೀಡಾಡಿದರು
ಸದಾ ಅದೇ ಧ್ಯಾನದಲಿ ಅಸ್ತ ಸಮಸ್ತ ನಿರ್ವಿಷಯವನೇ ನಲಿದರು ॥ ೨ ॥

ಮಾತು ಯಾತಕೆ ಮೂಡದೆ ಒಳಗೆ ಸಾಥಿಲ್ಲದೆ ಸಂಗೀತ
ಕಾತರ ಹೌದು ಆತುರ ಬೇಡ ಸ್ವಾನುಭೂತಿ–ಪರಿಪಾಕ ॥
ಉತ್ತರ ತಾನೇ ಬರಬೇಕಲ್ಲ ಎಲ್ಲಾ ಇದೇ ತಿಳಿದು
ಉತ್ತರ ವರಹವಿಠ್ಠಲ ಉತ್ತರಿಸುವ ಉತಾರ ಒಳಗೇ ಬರೆದು ॥ ೩ ॥

೧೫೯

ಹಾಳಿಯಲ್ಲಿ ಎಲ್ಲ ಇದ್ದೇನು
ಹಾಳತವಾಗಲಿಲ್ಲ ಬಾಳಿನಲ್ಲಿ ।

ಕಲ್ಲೋ ಕಂಬವೋ ಕಟ್ಟಿಗೆ ಗೆರೆಗೆರೆ
ಎಲ್ಲಾ ಮೂಲ ಅದೇ ಅದೇ ।
ಒಳಗ ಹೊಕ್ಕು ಒಪ್ಪಾಗದ ತನಕ
ಎಲ್ಲಾ ಬರಿ ಕಣ್ಣಟ್ಟಾಟಿ ॥ ೧ ॥

ಕಾಲ ಮುಗಿದು ನೀ ಕಾಲ ಮುಗಿಸಿಕೊಂಡು
ಕಾಲದ ಹವಣಿಕೆಗೊಳಗಾದಿ ।
ಕಲಕಲ ನದಿ ಎದಿ ಸದಾ ಉಲಿಯುವಾಗ
ಇಲ್ಲಿಲ್ಲದ್ದು ಅಲ್ಲೆಲ್ಲಿ? ॥ ೨ ॥

ಗೂಢಗುಂಜನ ವಿಶ್ವ ಪ್ರತಿಪ್ರತಿ
ಆಥಾವೆ ತಗೀಲಿಕ್ಕೆ ವ್ಯಾಖ್ಯಾ ಇಲ್ಲ ।
ಮಾಡಿ ಮಡಿದರೂ ಕೂಡದು ಕೈಗೇನೂ
ಅಡಿಹುಡಿಯಾಗದೆ ವರಹವಿಠ್ಠಲಗೆ ॥ ೩ ॥

❖❖

ಶಾರದಮ್ಮ (೧೯೩೧-೨೦೦೩)
ಶಾರದಾದಾಸಿ ಅಂಕಿತ ಕೀರ್ತನೆಗಳು (೧೭೩-)

ಜೀವನ : ಬೆಂಗಳೂರಿನಲ್ಲಿ ವೀಣಾ ವಿದ್ವಾಂಸರಾದ ವಿಶ್ವನಾಥಶಾಸ್ತ್ರಿ ಹಾಗೂ ಕಲ್ಯಾಣಮ್ಮ ದಂಪತಿಗಳು ಬಸವನಗುಡಿಯಲ್ಲಿ ವಾಸವಾಗಿದ್ದರು. ಅವರಿಗೆ ೨೫-೩-೧೯೩೧ರಲ್ಲಿ ಶಾರದಮ್ಮ ಹುಟ್ಟಿದಳು. ೫ನೇ ತರಗತಿವರೆಗೆ ಓದಿದ ಶಾರದಾಳಿಗೆ ವ್ಯಾಸಂಗದಲ್ಲಿ ಶಿಕ್ಷಣ ಆಸಕ್ತಿಯಿಲ್ಲದೆ ಮುಂದುವರೆಯಲಿಲ್ಲ. ಆದರೆ ಮನೆಯಲ್ಲಿ ಸಂಗೀತದ ವಾತಾವರಣವಿದ್ದುದರಿಂದ ಸುಶ್ರಾವ್ಯವಾಗಿ ಹಾಡುವ ಕಲೆ ಅವರಿಗೆ ಸಿದ್ಧಿಸಿತ್ತು.

ವಿವಾಹ : ಮೈಸೂರು ಪಿಟೀಲು ಚೌಡಯ್ಯನವರ ಮೊದಲಗುರು. ಅವರ ಮೊಮ್ಮಗ ಎ.ಶ್ರೀಕಂಠನ್ ಅವರೊಂದಿಗೆ ೧೪ನೇ ವಯಸ್ಸಿನಲ್ಲಿ ಮದುವೆ ಆಯಿತು. ಪತಿಯು ೧೯೬೬ರಲ್ಲಿ ನಿಧನರಾದಾಗ ವಿದ್ವಾನ್ ಚನ್ನಕೇಶವಯ್ಯ ಅವರ ಬಳಿ ಶಾಸ್ತ್ರೀಯ ಸಂಗೀತ ಕಲಿತು ವಿದ್ಯಾರ್ಥಿಗಳಿಗೆ ಸಂಗೀತಪಾಠ ಹೇಳಿ ಮಕ್ಕಳನ್ನು ಸಾಕಿ ಬದುಕು ಸಾಗಿಸಿದರು.

ಅಂಕಿತ: **ಒಮ್ಮೆ ಪೂಜಾ ಕಾಲದಲ್ಲಿ ಗಣಪತಿ ಇವರನಾಲಿಗೆ ಮೇಲೆ ಶಾರದಾದಾಸಿ ಎಂದು ಬರೆದನಂತೆ ಅದೇ ಅಂಕಿತದಲ್ಲಿ ಕೀರ್ತನೆಗಳನ್ನು ರಚಿಸಲಾರಂಭಿಸಿದರು. ದೊರಕಿರುವ ಹಾಡುಗಳು ೫೦೦.**

ಕೃತಿಗಳು:ರಚಿಸಿರುವ ಹಾಡುಗಳು ಸುಮಾರು ೨೦೦೦ ಎಂದು ತಿಳಿದುಬಂದಿದೆ. ಇದಲ್ಲದೆ ಶ್ರೀನಿವಾಸ ಕಲ್ಯಾಣ, ಗಿರಿಜಾಕಲ್ಯಾಣ, ಆಂಡಾಳ್ ಚರಿತ್ರ, ಅಯ್ಯಪ್ಪನ ಕಥೆ, ಭಕ್ತಸಿರಿಯಾಳ, ಸೀತಾಕಲ್ಯಾಣ ಮುಂತಾದ ೨೦ ಕಥನಕಾವ್ಯಗಳನ್ನು ರಚಿಸಿದ್ದಾರೆ.

ಶಾರದಮ್ಮನವರ ಕುಲದೈವ ಅರುಣಾಚಲೇಶ್ವರ ಆದರೆ ಇಷ್ಟದೈವ ಗೋವಿಂದ. ಹಾಗಾಗಿ ಗೋವಿಂದನ ಮಹಿಮೆ. ವಿಶೇಷಗಳನ್ನು ಕುರಿತು ೨೨೫ ಕೀರ್ತನೆಗಳನ್ನು ರಚಿಸಿದ್ದಾರೆ. ತಮ್ಮ ಕೀರ್ತನೆಗಳಿಗೆ ರಾಗ-ತಾಳಗಳನ್ನು ನಿರ್ದೇಶಿಸಿದ್ದಾರೆ. ಇವರ ಕೀರ್ತನೆಗಳ ಸಂಗ್ರಹವಿರುವ ಗೀತಾಂಜಲಿ, ಪುಸ್ತಕ ಪ್ರಕಟವಾಗಿದೆ.

ನಿಧನ:೧೫-೧-೨೦೦೩ರಂದು ಶಾರದಮ್ಮ ೭೮ನೇ ವಯಸ್ಸಿನಲ್ಲಿ ನಿಧನರಾದರು.

೧೬೦

ರಾಗ : ಹಮ್ಮೀರ್ ಕಲ್ಯಾಣಿ **ತಾಳ : ಖಂಡಛಾಪು**

ಯಾರೆನ್ನ ಸರಿಸದಿರು ನೀ ದೂರ ಸರಿಸದಿರು
ಶಾರದಾದಾಸಿ ವಂದಿತ ಮಾಧವ ॥ ಪ ॥

ಬೇಡಾದ ಚಿಂತೆಯೊಳು ಎನ್ನನು ಮುಳುಗಿಸದೆ
ನಿನ್ನ ಪಾದಪದ್ಮದ ಚಿಂತೆಯೊಳು ಮುಳುಗಿಸಿ
ಮನವೆಂಬ ಮಂಟಪದೊಳು ಮಧುರನಾಮವ ಬಿಟ್ಟು
ಬೇರಾವ ಹವ್ಯಾಸ ಬಾರದೆ ನೀ ಹರಸು

❖❖

ಯಶೋದೇಶ ಕೃಷ್ಣ ಅವರ ಅಂಕಿತ ಕೀರ್ತನೆಗಳು (೧೭೪-೧೭೬)

ಉಡುಪಿ ಯಶೋದಮ್ಮ (೧೯೩೧-೨೦೧೦)

ಜೀವನ : ಉಡುಪಿಯ ಪ್ರಸಿದ್ಧವಕೀಲರಾದ ಕೆ.ಎಲ್.ಐತಾಳ್ ಅವರ ಪುತ್ರಿ ಯಶೋದಮ್ಮ ಜನಿಸಿದ್ದು ೧೯೩೧ರಲ್ಲಿ. ಉಡುಪಿಯ ಸೈಂಟ್ ಸಿಸಿಲೀಸ್ ಕಾನ್ವೆಂಟಿನಲ್ಲಿ ೯ನೇ ತರಗತಿವರೆಗೆ ಓದಿದರು.

ಶಿಕ್ಷಣ : ೯ನೇ ವಯಸ್ಸಿನಲ್ಲಿ ಕಿನ್ನಿಗೋಳಿಯ ದಿ॥ ಪದ್ಮನಾಭ ಆಚಾರ್ಯರಲ್ಲೂ ಮತ್ತು ದಿ ॥ ನರಸಿಂಗ ಸೇರೆಗಾರರಲ್ಲೂ ಕರ್ನಾಟಕ ಶಾಸ್ತ್ರೀಯ ಸಂಗೀತ ಅಭ್ಯಾಸ ಮಾಡಿದರು. ಕಡಿಯಾಳು ಕಾಳುಭಟ್ಟರಲ್ಲಿ ಶಾಸ್ತ್ರೀಯ ನೃತ್ಯ ಕಲಿತರು. ಕಿನ್ನಿಮುಲ್ಕಿ ಪದ್ಮನಾಭ ಆಚಾರ್ಯರಲ್ಲಿ ಹರಿಕಥೆಯನ್ನು ಕಲಿತರು.

ವಿವಾಹ: ೧೪ನೇ ವಯಸ್ಸಿನಲ್ಲಿ ಗುಡಿಬೇಲ್ ಶಿವರಾಂ ಸರಾಫರ ದ್ವಿತೀಯಪುತ್ರ ಲಕ್ಷ್ಮೀನಾರಾಯಣಭಟ್ಟರೊಂದಿಗೆ ವಿವಾಹವಾಯಿತು. ೪ ಪುತ್ರರೂ ೪ ಪುತ್ರಿಯರೂ ಜನಿಸಿದರು. ಸಂತೆಕಟ್ಟೆಯ ಶ್ರೀಕೃಷ್ಣವಿಲಾಸ ಹೋಟೆಲಿನ ಮಾಲೀಕರಾದರು. ಯಶೋದಮ್ಮ ಕನ್ನಡ, ತುಳು, ಹಿಂದಿ, ತಮಿಳು, ಇಂಗ್ಲೀಷ, ಕೊಂಕಣಿ ಭಾಷೆಗಳನ್ನು ತಿಳಿದು ಸಾಧನೆ ಮಾಡಿಮಾಡಿ ಷಡ್ಭಾಷಾ ಚತುರೆ ಆಗಿದ್ದರು. ಫಲಿಮಾರುಮಠದ ಅಧಿಪತಿಗಳಾಗಿದ್ದ ಕೀರ್ತಿಶೇಷ ವಿದ್ಯಾಮಾನ್ಯ ತೀರ್ಥರಿಂದ ಯಶೋದೇಶ ಕೃಷ್ಣ ಎಂಬ ಅಂಕಿತವನ್ನು ಪಡೆದಿದ್ದರು. ಶ್ರೀಕೃಷ್ಣ ಮುಖ್ಯಪ್ರಾಣ ಭಗಿನೀ ಭಜನಾ ಮಂಡಳಿ ಸ್ಥಾಪಿಸಿ ಭಜನೆ ಮತ್ತು ಹರಿಕಥೆ ಕಾರ್ಯಕ್ರಮಗಳನ್ನು ನೀಡಿ ಜನಮನ ಗೆದ್ದರು.

ಪ್ರಶಸ್ತಿ ; ಇವರಿಗೆ ಹಲವಾರು ಪ್ರಶಸ್ತಿ ಗೌರವಗಳು ಸಂದಿದ್ದವು. ೧) ಪೇಜಾವರ ವಿಶ್ವೇಶತೀರ್ಥರಿಂದ ಭಕ್ತೆಮೀರಾ ಪ್ರಶಸ್ತಿ ೨)ಫಲಿಮಾರು ಮಠಾಧೀಶರುಶ್ರೀ ವಿದ್ಯಾಮಾನ ತೀರ್ಥರಿಂದ ಹರಿಕಥಾ ಪ್ರವೀಣೆ ಎಂಬ ಪ್ರಶಸ್ತಿ ಥಲಿಮಾರು ಮಠಾಧೀಶರಾದ ಶ್ರೀ ವಿದ್ಯಾಮಾನ್ಯತೀರ್ಥರಿಂದ ಹರಿಕಥಾಪ್ರವೀಣೆ ಎಂಬ ಪ್ರಶಸ್ತಿ ೩) ಆದಮಾರು ಮಠಾಧೀಶರಾದ ಶ್ರೀ ವಿಧುವೇಶತೀರ್ಥರಿಂದ ಹರಿಕಥಾರಂಜನಿ ೪) ಧರ್ಮಸ್ಥಳದ ವೀರೇಂದ್ರ ಹೆಗ್ಗಡೆ ಅವರಿಂದ ಹರಿದಾಸಿ

ಯಶೋದವಲ್ಲಿ ೫) ಪುತ್ತಿಗೆಯ ಮಠಾಧೀಶರಾದ ಸುಗುಣೇಂದ್ರ ತೀರ್ಥರು ಭಗವದ್ಗೀತೆ ಪಾರಾಯಣ ಮಂಡಳಿಯ ಅಧ್ಯಕ್ಷೆಯನ್ನಾಗಿ ಆರಿಸಿದರು.

ನಿಧನ : ಕಡೆಗಾಲದಲ್ಲಿ ಸಣ್ಣ ಕುಟೀರದಲ್ಲಿ' ವಾಸಿಸುತ್ತಾ ಅಧ್ಯಾಪನ ಮಾಡಿಕೊಂಡು ವಾಸಿಸುತ್ತ ೫-೧೦-೨೦೧೦ರಲ್ಲಿ ನಿಧನರಾದರು.

೧) ಗ್ರಂಥಗಳು : ೧) ತುಳು, ಕನ್ನಡ ಭಾಷೆಗಳಲ್ಲಿ ಕೀರ್ತನೆಗಳನ್ನು ರಚಿಸಿದ್ದಾರೆ.

೨) ಭಕ್ತಕುಚೇಲ-ದ್ರೌಪದಿ ಅಕ್ಷಯಾಂಬರ -ಚಂದ್ರಹಾಸನ ಕಥೆ - ಭಕ್ತಪ್ರಹ್ಲಾದ - ಶ್ರೀ ಕೃಷ್ಣಲೀಲೆ - ಭಕ್ತೆ ಶಬರಿ - ಶ್ರೀ ಗುರುರಾಘವೇಂದ್ರರ ಚರಿತ್ರೆ ಇತ್ಯಾದಿ.

೧೬೧

ರಾಗ : ಶಿವರಂಜಿನಿ

ಏನೆಂದು ಹೊಗಳಲಿ
ಗುರುಗಳಾ ಮಹಿಮೆಗಳಾ ॥ ಪ ॥

ಗುರು ಕರುಣೆ ಇರಲು । ಹರಿ ಕರುಣೆ ಸೇರಲು
ಯಾರು ಏನು ಮಾಡರು । ಗುರು ಮುನಿದ ಮೂಢರು ॥ ಅ.ಪ ॥

ಗುರುವಿನ ಒಲುಮೆ । ಭಕ್ತಿಯ ಚಿಲುಮೆ ।
ಜ್ಞಾನದ ಒಸರು । ಆರದ ಸೊಡರು ॥
ಗುರುವಿನ ಸ್ತೋತ್ರ । ಪಾಪಕ್ಕೆ ಅಗ್ನಿಅಸ್ತ್ರ ।
ಭಕ್ತಗೇ ಮಾತ್ರ । ಹೇಳುವುದು ಶಾಸ್ತ್ರ ॥ ೧ ॥

ಗುರುವಿನ ಕುಡಿನೋಟ । ಭಕ್ತರಲಿ ಒಡನಾಟ ।
ಸಾಗದು ನೀಚರ ಆಟ । ನೀಗುವುದು ಭವದಕಾಟ ॥
ಗುರುವಿನ ಪಾದದೂಳಿ । ಧರಿಸಿದರೆ ಶಿರಸ್ಸಿನಲಿ ।
ಬೆರೆಯುವರು ಮುಕ್ತರಲಿ । ಓಲಾಡುವರು ಆನಂದದಲಿ ॥ ೨ ॥

ಗುರುಸೇವೆ ಚಿಂತಾಮಣಿ । ಮುಕ್ತಿಗೆ ಏರುವ ಏಣಿ ।
ಭಕ್ತಿ ಜ್ಞಾನ ವಿರಕ್ತಿಯ ತ್ರಿವೇಣಿ । ಭವಸಾಗರಕೆ ದೋಣಿ ॥
ಗುರುವಿನ ಸಂಗದಲಿ । ಜ್ಞಾನದ ಗಂಗೆಯಲಿ ।
ತನುಮನದ ಜಳಕದಲಿ । ಬೆಳಗುವರು ಬಾಳಿನಲಿ ॥ ೩ ॥

ಗುರುವಿನ ದರುಶನ । ತುಂಗಭದ್ರೆಯ ಮಿಲನ ।
ತೊಳೆ ಹೃದಯದ ಮಲಿನ । ಅರಳೆ ಜ್ಞಾನ ನಾಳಿನ ॥
ಗುರುವಿನ ನಾಮಾವಳಿ । ಎಳೆಯದು ಪಾಪದ ಸುಳಿ ।
ಪಾರಾಗುವರು ನುಸುಳಿ । ಸಾಗುವರು ಹರಿಯ ಬಳಿ ॥ ೪ ॥

ಗುರುವಿನ ಭಜನೆ । ಫಲಕೊಡುವ ಖಜಾನೆ ।
ಬಗೆಹರಿವ ವೇದನೆ । ಗುರಿ ಮುಟ್ಟುವ ಸಾಧನೆ ॥
ಗುರು ಉಪದೇಶದಲ್ಲಿ । ಜ್ಞಾನಗಂಗೆ ಹರಿಯಲಿ ।
ಭಕ್ತಿಯಾ ಪ್ರವಾಹದಲ್ಲಿ । ಮಿಂದವನೆ ಜ್ಞಾನಿ ಅದರಲ್ಲಿ ॥ ೫ ॥

ಧರೆಯೊಳು ಗುರುಗಳಿಗೆಣೆಯಾರು ಇಲ್ಲ ।
ಇವರಂಥ ಗುರುಗಗಳು ಕಾಣ ಸಿಗಲಿಲ್ಲ ।
ಕೃಷ್ಣ ಪ್ರೀತಿಯ ಸೂರೆಗೊಂಡರೆಲ್ಲಾ ।
ಯಶೋಧೆಯ ಮನದಲ್ಲಿ ಇವರೇ ಎಲ್ಲಾ ॥ ೬ ॥

೧೬೨

ದಯೆ ತೋರೋ ದೇವಾ ಶ್ರೀ ಕೃಷ್ಣರಾಯಾ ।
ಭಯವಾಗುವುದೆನಗೆ ಭವ ಸಾಗರದಿ ॥ ಪ ॥

ತುದಿಮೊದಲಿಲ್ಲದೆ ಜನ್ಮವೆತ್ತಿ ಬಂದೆ
ಬದಿ ಸೇರಿಸಯ್ಯ ಜಗಕೆ ನೀನೇ ತಂದೆ ॥ ೧ ॥

ಆಶಾಪಾಶದಲ್ಲಿ ಮುಳುಗಿ ಬಳಲುತಿರುವೆ
ಈಶನೇ ನಿನ್ನಯ ಚರಣಕ್ಕೆ ಬೀಳುವೆ ॥ ೨ ॥

ಅನ್ನವಸನಕ್ಕಾಗಿ ಅನ್ಯರನ್ನು ಒಲಿಸಿ
ಬನ್ನಪಟ್ಟೆನಯ್ಯ ಬವಣೆ ಬಿಡಿಸಿ ॥ ೩ ॥

ದಾರಿ ತೋರದಯ್ಯ ಸಂಸಾರದಲ್ಲಿ
ಮೀರಿನಡೆದೆನಯ್ಯ ಅಂಧಕಾರದಲ್ಲಿ ॥ ೪ ॥

ನಿನ್ನ ನಂಬಿದವಗೆ ಅನ್ಯಭಯವು ಏಕೆ ?
ಸನ್ನುತಾಂಗ ಕಾಯೋ ದಾಸಿ ಯಶೋದೆಯ ॥ ೫ ॥

೧೬೩

ನಗುವರಲ್ಲವೋ ಜನರು ನಗುವರಲ್ಲವೋ ಕೃಷ್ಣಾ ॥ ಪ ॥

ನಗುವರೆಂದು ನಾನು ನಿನ್ನ । ಭಜನೆ ಮಾಡದೆ ಇರಲಾರೆ
ನಕ್ಕು ನಗಿಸಿ ಗೇಲಿಮಾಡಿ । ಪಾಡಿಕೊಂಡರೇನು ಎನಗೆ ॥ ೧ ॥

ನಿನ್ನ ಮಹಿಮೆ ಅರಿಯದವರು । ನಿನ್ನ ಭಜನೆ ಮಾಡದವರು
ಅಂಧಕಾರ ಸಂಸಾರದಲ್ಲಿ । ಹರುಷದಿಂದ ಕುಣಿಯುವರು ॥ ೨ ॥

ಕಾಮಕ್ರೋಧ ಬಿಡದವರು । ತನುವೇ ನಿತ್ಯ ಎನ್ನುವವರು
ಜನರ ಹಾಸ್ಯ ಬಯಸುವವರು । ಜನಾರ್ದನನ ಪೊಗಳದವರು ॥ ೩ ॥

ನಿನ್ನ ದಾಸನಾದ ಮೇಲೆ । ನಿನ್ನ ಚರಣ ಹಿಡಿದಮೇಲೆ
ಮಾನ ಅಪಮಾನ ನಿನಗೆ । ಸೇರಿದೆಂದು ನಿನ್ನ ಭಜನೆ ಬಿಡಲಾರೆ ॥ ೪ ॥

ನಿನ್ನ ಮಹಿಮೆಯ ಅರಿತು ನಾನು । ನಿನ್ನ ಬಿಟ್ಟು ಬಾಳಲಾರೆ
ಎನ್ನ ಮರೆತು ಹೋದರೆ ನೀನು । ದಾಸಿ ಯಶೋದೆಯ ಕಾಯ್ವರಾರು॥ ೫ ॥

❖❖

ಸಂತಭದ್ರಗಿರಿ ಅಚ್ಯುತದಾಸರು
ಮೂಲನಾರಯಣ ಅಂಕಿತದ ಕೀರ್ತನೆಗಳು(೧೭೭-೧೮೭)

ಸಂತಭದ್ರಗಿರಿ ಅಚ್ಯುತದಾಸರು ಉಡುಪಿ ಜಿಲ್ಲೆಯ ಭದ್ರಗಿರಿಗ್ರಾಮದವರು. ಹರಿಕಥಾ ಭೀಷ್ಮ ಎಂದೇ ಪ್ರಸಿದ್ಧರಾಗಿರುವ ಹರಿಕಥಾದಾಸರು. ಸಾವಿರಕ್ಕೂ ಹೆಚ್ಚು ಕೀರ್ತನೆಗಳನ್ನು ರಚಿಸಿ ಹರಿದಾಸರೂ ಆಗಿ ಮೂಡಿ ಬಂದಿದ್ದಾರೆ.

ಭದ್ರಗಿರಿಯ ಸಂಪ್ರದಾಯಸ್ಥ ಗೌಡಸಾರಸ್ವತ ಬ್ರಾಹ್ಮಣರ ಕುಟುಂಬದಿಂದ ಬಂದ ಶ್ರೀ ವೆಂಕಟರಮಣ ಪೈ ಮತ್ತು ರುಕ್ಮಿಣೀದೇವಿ ದಂಪತಿಗಳಿಗೆ ದ್ವಿತೀಯಪುತ್ರರಾಗಿ ಜನಿಸಿದ ದಾಸರು ಬಾಲ್ಯ ವಿದ್ಯಾಭ್ಯಾಸಗಳನ್ನು ಉಡುಪಿಯಲ್ಲಿ ಕೈಗೊಂಡು ಬಾಲ್ಯದಿಂದಲೇ ಆಧ್ಯಾತ್ಮಚಿಂತನೆಯಲ್ಲಿ ಕೈಗೊಂಡು ಬಾಲ್ಯದಿಂದಲೇ ಆಧ್ಯಾತ್ಮ ಚಿಂತನೆಯಲ್ಲಿ ತೊಡಗಿ ಹರಿಕಥೆ ಕಲಿತು ಅದನ್ನೇ ವೃತ್ತಿಯಾಗಿಸಿಕೊಂಡರು. ಪತ್ನಿ ಸೌ. ಶ್ರೀಮತಿಯವರೊಂದಿಗೆ ತುಂಬು ಸಂಸಾರಜೀವನ ನಡೆಸಿ ಮೂರು ಗಂಡು ಮತ್ತು ನಾಲ್ಕು ಹೆಣ್ಣು ಮಕ್ಕಳ ತಂದೆಯಾಗಿ ಮಕ್ಕಳಿಗೂ ಸೂಕ್ತಶಿಕ್ಷಣ ನೀಡಿ ಸಂಗೀತಕ್ಷೇತ್ರದಲ್ಲಿ ಪರಿಣತರನ್ನಾಗಿ ಮಾಡಿದ್ದಾರೆ. ಜೊತೆಗೆ ಇವರ ಸೋದರಿಗೂ ಸಂಗೀತ ಮತ್ತು ಹರಿಕಥಾ ಶಿಕ್ಷಣನೀಡಿ ಬೆಳೆಸಿದ್ದಾರೆ. ಇನ್ನೊಬ್ಬ ಪ್ರಸಿದ್ಧ ಹರಿಕಥಾವಿದ್ವಾಂಸರಾದ ಸಂತ ಭದ್ರಗಿರಿಕೇಶವ ದಾಸರೂ ಇವರ ಕಿರಿಯ ಸೋದರರೇ.

ಮಹಾಯೋಗಿಗಳಂತೆ ಸದಾ ದೈವಧ್ಯಾನ, ದೈವಚಿಂತನ ಮತ್ತು ದೈವಸ್ತುತಿಯಲ್ಲೇ ಇರುತ್ತಿದ್ದ ದಾಸರು ಆಶುಕವಿಗಳೂ ಆಗಿ ಸುಮಾರು ಸಾವಿರಕ್ಕೂ ಕವಿತೆ ಕೀರ್ತನೆಗಳನ್ನು ರಚಿಸಿರುವ ದಾಸರು ೧೯೫೭ರಲ್ಲಿ ಉಡುಪಿಯಲ್ಲಿ ಶ್ರೀ ಭುವನೇಂದ್ರ ತೀರ್ಥರ ಚಾತುರ್ಮಾಸದಲ್ಲಿ ನಡೆಸಿಕೊಟ್ಟ ಇಡೀ ಮಹಾಭಾರತದ ನಾಲ್ಕು ತಿಂಗಳ ಹರಿಕಥಾರೂಪದಿಂದ ಶ್ರೀಗಳು ಸಂಪ್ರೀತರಾಗಿ ಹರಿದಾಸ ದೀಕ್ಷೆ ನೀಡಿ ಮೂಲ ನಾರಾಯಣ ಅಂತ ಪ್ರಧಾನಮಾಡಿ ಕೀರ್ತನಾಗ್ರೇಸರ ಎಂಬ ಬಿರುದನ್ನಿತ್ತು ಗೌರವಿಸಿದ್ದರು. ಅಂದಿನಿಂದ ಅವರ ಜ್ಞಾನ, ಸಾಹಿತ್ಯ ಭಕ್ತಿಗಳು ಕೀರ್ತನೆಗಳಾಗಿ ಮೈದಳೆದು ಭಕ್ತಿಭಾವವನ್ನು ಪಡಿಮೂಡಿಸಿವೆ. ಕನ್ನಡ, ಮರಾಠಿ, ಕೊಂಕಣಿ, ತುಳು,

ಭಾಷೆಗಳಲ್ಲಿ ಇವರು ಕೀರ್ತನೆಗಳನ್ನು ಶ್ರೀ ಹರಿಕಥಾಸಿಂಧು ರಾಮಾಯಣ, ಭಾಗವತ ಎಂಬ ಪುರಾಣಗ್ರಂಥಗಳೊಂದಿಗೆ ಹತ್ತಾರು ಹರಿಕಥೆಗಳನ್ನು ಸ್ವತಃ ರಚಿಸಿದ್ದಾರೆ. ಪ್ರಸ್ತುತ ಇವರ ಕೀರ್ತನೆಗಳ ಸಂಕಲನ ಹರಿಭಜನಸಿಂಧು ಗ್ರಂಥದಿಂದ ಹತ್ತು ಸಾಮಾಜಿಕ ಕೀರ್ತನೆಗಳನ್ನು ಇಲ್ಲಿ ಕೊಟ್ಟಿದೆ.

೧೬೪

ರಾಗ : ಜಂಜೂಟಿ **ತಾಳ : ತ್ರಿತಾಳ**

ಕರದಲಿ ತಾಳ ಸಂತರ ಮೇಳ
ಅಲ್ಲಿರುವನು ಹರಿ ಗೋಪಾಲ

ಪರಿಪರಿ ನುತಿಸುವ ಪರಮ ಭಕ್ತರನು
ಪರಿಪಾಲಿಪ ಪುರಂದರ ವಿಠಲ ॥ ೧ ॥

ಗೆಜ್ಜೆಯಕಟ್ಟು ಲಜ್ಜೆಯ ಬಿಟ್ಟು
ಸಜ್ಜನ ಸೇವೆಯೊಳು ಮನಸಿಟ್ಟು
ಹೆಜ್ಜೆ ಹೆಜ್ಜೆಗೂ ಹರಿನಾಮವನು
ಘರ್ಜಿಸಿ ಹೇಳುತೆ ಕರತಟ್ಟು ॥ ೨ ॥

ನಾಮವೆ ಧ್ಯಾನ ನಾಮವೆ ಪಾವನ
ನಾಮ ಸಂಕೀರ್ತನ ಜೀವನ
ನಾಮವೆ ಧನ ಹರಿನಾಮವೆ ರಕ್ಷಣ
ನಾಮವೆ ಮೋಕ್ಷ ಸಾಧನ ॥ ೩ ॥

ಬಾಲ್ಯ ಯೌವನ ವೃದ್ಧಾಪ್ಯದೊಳು
ಕೋಳು ಹೋಯ್ತು ಆಯುಷ್ಯವೆಲ್ಲ
ಮೂಲನಾರಾಯಣನಾಲಯ ಸೇರಲು
ನಾಮಹೊರತು ಗತಿಬೇರಿಲ್ಲ ॥ ೪ ॥

೧೬೫

ರಾಗ : ಮಾಂಡ್   ತಾಳ : ಕೇರವ

ಜ್ಞಾನಿಯಾಗಿ ಬಾಳು
ಜ್ಞಾನ ರಹಿತ ಬಾಳದು ಗೋಳು ॥ ಪ ॥

ಜ್ಞಾನಿಯಾಗಿ ಅಜ್ಞಾನ ನೀಗಿ
ಸುಜ್ಞಾನ ಬರುವತನಕ ತಾಳು
ಜ್ಞಾನಿಯಾಗಿ ಬಾಳು।
ಜ್ಞಾನ ರಹಿತ ಬಾಳದು ಗೋಳು
ಜ್ಞಾನಾಗ್ನಿಯಲಿ ಸರ್ವಕರ್ಮದಾ
ಗ್ಲಾನಿಯು ದಹಿಸುವದ್ಯೆ ಕೇಳು ॥ ೧ ॥

ಜ್ಞಾನ ಗಂಗೆಯಲಿ ಮುಳುಗು
ಹರಿ ಜ್ಞಾನ ತೇಜದಲಿ ಬೆಳಗು
ಕೋಳುಹೋಗುವ ಮುನ್ನ ಏಳದಿದ್ದರೆ
ಆಯುಷ್ಯವೆಲ್ಲ ಹಾಳು ॥ ೨ ॥

ಕರಣಗಳೆಲ್ಲವನಾಳೂ
ಶ್ರೀಹರಿಯೇ ದೈವವೆಂದ್ಹೇಳು
ಶರಣು ಮೂಲನಾರಾಯಣನೆನ್ನುತ
ತ್ವರಿತದಿ ಪಯಣಕ್ಕೇಳು ॥ ೩ ॥

೧೬೬

ರಾಗ : ಕಾಲಂಗಡಾ   ತಾಳ : ಝುಂಪೆತಾಳ

ದೀಪಾವಳಿ ಬಂತು ದೀಪಾವಳಿ
ತಾಪನಾಶಗೈದು ಭವಕೂಪದ ಕತ್ತಲಕಳೆಯೆ ॥ ಪ ॥

ಹೃದಯದಾ ಹಣತೆಯಲಿ ಜೀವಬತ್ತಿಯನಿಟ್ಟು
ಭಾವತೈಲವನೆರೆದು ಜ್ಞಾನಾಗ್ನಿಯಲಿ

ಭಕ್ತಿ ದೀಪವ ಬೆಳಗಿ ಮುಕ್ತಿ ಪಥದಲಿ ಸಾಗಿ
ಇಹಪರ ಬೆಳಗೆಂದು ಬೆಳಗುತ್ತ ಬಂತು ॥ ೧ ॥

ತನ್ನನೇ ತಾ ಸುಟ್ಟು ಬೆಳಕನೀವುದು ಬತ್ತಿ
ನಿನ್ನನೇ ನೀ ಸುಟ್ಟು ಬೆಳಗು ಎಂದು
ನಿನ್ನ ಹಣತೆಯಿಂ ಇನ್ನೊಂದು ಹಣತೆಯ ಹಚ್ಚಿ
ನೀನು – ನಾನೆಂಬುದಂ ಮರೆತು ಬೆಳಗು ಎಂದು ॥ ೨ ॥

ಬೆಳಗಲಿ ಬೆಳಕು ಬೇಗ । ಕತ್ತಲೆಯ ಕಳೆ ಈಗ
ಬೆಳಗಾಗುವ ಮುನ್ನ ಬೆಳಗಿ ಹೋಗು
ಬೆಳಗಿ ನೀ ಹೋದರೂ ನೀ ಹೊತ್ತಿಸಿದ ಬೆಳಕು
ಬೆಳಗಿಸುವ ನಂದಿಸದೆ ಮೂಲನಾರಾಯಣನೆಂದು ॥ ೩ ॥

೧೬೭

ರಾಗ : ಹಂಸಾನಂದಿ **ತಾಳ : ಝಂಪೆ**

ಬಳಲಿಸಲು ಬೇಡವೈ । ಭವದೂರ ದೇವ
ಭಕ್ತಜನಮಂದಾರ । ಮಹಾನುಭಾವ ॥ ಪ ।

ತನುವಿದನು ರೋಗಗಳು ದಿನದಿನವು ಕೆಡಿಪುವು
ಮನವು ವಿಷಯದಿ ಮುಳುಗಿ ಸುಡುತಲಿಹುದು
ಕ್ಷಣವು ಬಿಡದೇ ಮೃತ್ಯು ಎನ್ನಾಯು ಎಣಿಸುವಳು
ಅನಿಮಿತ್ತ ಬಾಂಧವನೆ ಕಾಯೋ ಕರುಣಾಳು ॥ ೧ ॥

ಭವದ ಬಂಧನದಿ । ನಾ ಬಹುವಿಧದಿ ಬಳಲಿದೆನೊ
ಅವಮಾನ ಅಪಜಯವನೆಂತು ಸಹಿಸುವೆನೋ
ಜವವಾಳುಗಳು ಕಡೆಯೊಳವಸರಿಸಿ ಸೆಳೆದೊಯ್ಯೆ
ಅವರ ಮೊರೆ ಇಡಲ್ಯಾಕೆ ಒಡೆಯಾ ನೀನಿರಲು ॥ ೨ ॥

ಬಲೆಗೆ ಬಿದ್ದಿಹ ಹಕ್ಕಿ ಬಲೆಯಕ್ಕಿಹನನರಿತು
ಬಲು ಭಕ್ತಿಯಿಂ ಬೇಡ ಬಿಡಿಸದಿಹನೆ

ನಳಿನಾಕ್ಷ ಮೂಲನಾರಾಯಣನೆ ನಿನ್ನಾಜ್ಞೆ
ಗಳವಲ್ಲ ತಪ್ಪಲೆಂದರಿತೆ ನಿನ್ನಾಣೆ ॥ ೩ ॥

೧೬೮

ಭವಬಾಧೆ ಬಿಡಿಸಯ್ಯ ಬಾದರಾಯಣ
ಭವರೋಗವೈದ್ಯ ನಾರಾಯಣ ॥ ಪ ॥

ಜ್ಞಾನ ಅಜ್ಞಾನವೆಂಬ ಭೇದವನರಿಯೆ
ಜ್ಞಾನವನಿತ್ತು ಮನ್ನಿಸೊ ದೊರೆಯೆ
ಮಾನಾಭಿಮಾನ ನಿನಗೆ ಅರ್ಪಿಸಿದೆ
ಏನೊಂದನರಿಯದಂತಿರುವೆ ಏಕೆನ್ನ ॥ ೧ ॥

ಭಯದಿ ಬಳಲಿದೆ ಕರ್ಮಾತ್ರಯಕ್ಕೊಳಗಾದೆ
ಭಯನಿವಾರಣ ಅಭಯ ತೋರದಾದೆ
ಜಯವಿಲ್ಲದೀ ಜನನ ಮರಣದ
ಭವದಲಿ ಬಿದ್ದೆನು ತೋರೈ ಕರುಣ ॥ ೨ ॥

ಭಾರತೀರಮಣಗೆ ಪೇಳಿದೆ ಜ್ಞಾನ
ಭಾರತಪೇಳಿದ ಬದರೀಸಂಚರಣ
ತೋರಿದೆಯತಿ ಸುಧೀಂದ್ರರಲಿ ಕರುಣಾ
ತೋರುಚರಣ ಮೂಲನಾರಾಯಣ ॥ ೩ ॥

೧೬೯

ರಾಗ : **ತಾಳ : ಝಂಪೆ**

ಮನವೇ ಮರೆವರೆ ಹರಿಯನೆನೆಯದೀಗ
ತನುಸುಖಕೆ ಭ್ರಮಿಸದಲೆ ಶರಣೆನ್ನು ಬೇಗ ॥ ಪ ॥

ಕಷ್ಟಕೊದಗುವರಿಲ್ಲ, ನಷ್ಟ ಮಹಾ ಸಂಸಾರ
ಇಷ್ಟಮಿತ್ರರು ಬಂಧುಗಳು ಬರುವುದಿಲ್ಲ

ಭ್ರಷ್ಟನಿವನೆಂದೂ ನಿಕೃಷ್ಟವಾಗಿಸಿ ನಿನ್ನ
ದೃಷ್ಟಿಸಿಯೋ ಕಾಣರೈ ಸೃಷ್ಟಿ ಬಳಗ ॥ ೧ ॥

ಖೂಳ ಯಮನಾಳಂಗಳ ಮೇಲೇರಿ ಬರಲಿನ್ನು
ಗೋಳು ಹೊಯ್ಯಲು ಹರಿಭಕ್ತರಲ್ಯದಾರು
ನೀಲಮೇಘ ಶ್ಯಾಮ ಮೂಲನಾರಾಯಣನ
ವೇಳೆವೇಳೆಗೆ ಸ್ಮರಿಸಿ ಸದ್ಗತಿಯ ಪಡೆಯದೆ ॥ ೨ ॥

೧೭೦

ರಾಗ : ಮಾಂಡ್ ತಾಳ : ಕೇರವತಾಳ

ಮಾಡು ಕರ್ಮವ ಯೋಗಿಯಾಗಿ
ಮಾಡು ಅರ್ಪಿಸು ಹರಿಚರಣಕೆ ಬಾಗಿ ॥ ಪ ॥

ರೂಢಿಯೊಳುತ್ತಮ ಕರ್ಮಕೆ ಫಲವು
ಕಾಡೊಳಗಿದ್ದರೂ ಪಡೆವೆ ನಿಶ್ಚಯವು
ಮಾಡದೆ ಮಾಡಿದಿ ಜ್ಞಾನಿಯಾಗು
ಮಾಡಿಯು ಮಾಡದೆ ಕರ್ಮನೀಗು ॥ ೧ ॥

ಬೇಡದೇ ದೃಢಮಾಡು ಧ್ಯಾನ
ಪಡೆವೆ ಮಹಾ ಫಲವಿಲ್ಲವನುಮಾನ
ಕೊಡದಿರುವನೆ ಕರುಣಾನಿಧಾನ
ಮೃಡವಂದಿತ ಮೂಲನಾರಾಯಣ ॥ ೨ ॥

೧೭೧

ರಾಗ : ಭೈರವಿ ತಾಳ : ಕೇರವತಾಳ

ಮಾನವನಾದೊಡೆ ಮಾನವಂತನಾಗೋ
ಹೀನಪಶುವಂತೆ ಶತಮಾನ ಬಾಳಲೇಕೋ ॥ ಪ ॥

ಧರ್ಮ ನಿಯಮವಿಲ್ಲದ ಬ್ರಾಹ್ಮಣನೇಕೋ
ಧರ್ಮವಾಚಾರ ರೂಪದೊಳಿರಬೇಕೊ ॥ ೧ ॥

ಕರ್ಮ ಕೃಷ್ಣಾರ್ಪಣವೆನಬೇಕೋ
ಸ್ವಧರ್ಮದಿ ಅರ್ಥವ ಗಳಿಸಬೇಕೋ ॥ ೨ ॥

ಹರಿಗುರುಗರ್ಪಿಸದಿರ್ಪ ಕರ್ಮಗಳೆಲ್ಲಾ
ದುರುಳ ದಾನವರು ಅಪಹರಿಸುವರೋ ॥ ೩ ॥

ಗುರುವಿತ್ತಿಹ ಉಪದೇಶದ ಸಾರವ
ಗುರುತಿಟ್ಟು ಜೀವ ಸ್ವರೂಪವರಿಯರೋ ॥ ೪ ॥

ಸಾರಾಸಾರ ವಿವೇಕದಿ ಧರ್ಮ
ವಾಚಾರ ರೂಪದಿ ರೂಪಿಸಿಕೋ ॥ ೫ ॥

ಕಾರುಣಿಕ ಮೂಲನಾರಾಯಣನ
ಅಪಾರ ಕರುಣೆಗೆ ಪಾತ್ರರಾಗಿರೋ ॥ ೬ ॥

೧೬೨

ರಾಗ : ಮೋಹನ ತಾಳ : ಆದಿ

ವ್ಯರ್ಥವಾಯಿತಲ್ಲ । ಜನುಮದ । ಅರ್ಥ ಅರಿಯಲಿಲ್ಲ ॥ ಪ ॥

ಪಾರ್ಥಸಾರಥಿಯ ಪ್ರಾರ್ಥನೆ ಮಾಡದೆ
ಸ್ವಾರ್ಥಿಯಾದೆ ಸಾರ್ಥಕನಾಗಿಲ್ಲ ॥ ಅ.ಪ. ॥

ಅರ್ಥಕಾಮಗಳಿಗಾಗಿ ನಾನೇ ಕರ್ತನೆಂದು ಬಿಗಿ
ಮರ್ತ್ಯರ ಸೇರಿ ಅನರ್ಥಕ್ಕೊಳಗಾದೆ ।
ಕರ್ತವ್ಯವನರ್ಥೈಸದೇ ಜೀವನ ॥ ೧ ॥

ಮರೆತು ಹೋಯಿತಲ್ಲಾ । ವಿಷಯದಿ ಬೆರೆತು ಬೆಂದೆನಲ್ಲ
ಕರ್ತು ಮೂಲನಾರಾಯಣ ನಾಮವ
ತುರ್ತು ಕಾಲದಲಿ ಗುರುತಿಸಲಿಲ್ಲ ॥ ೨ ॥

೧೭೩

ರಾಗ : ಹಿಂದೂಸ್ಥಾನಿ ಕಾಪಿ ತಾಳ : ತ್ರಿತಾಳ

ಸಂತ ಸಂಗದೊಳಿಡಿಸೋ । ಶ್ರೀಹರಿ ಎಮ್ಮ ।
ಸಂತ ಸಂಗದೊಳಿಡಿಸೋ ॥ ಪ ॥

ಸಂತಸಂಗದಿಂದ ಸಂಶಯ ಕಳೆವುದು
ಚಿಂತೆ ಶೋಕ ಭಯ ತಾಪ ತಣಿವುದು ॥ ೧ ॥

ಸಂತರೊಳಂತಿಂಥಾ ಪಂಥಗಳನ್ನಾಡಿ
ಸಂತತ ನರಕಕೆ ಪೋಗದಂತೆಸಗೋ ॥ ೨ ॥

ಸಂತಸಂಗ ಸಂತತ ಸಂತಸವಿತ್ತು
ಅಂತರಂಗದೊಳನಂತನ ತೋರ್ವದೋ ॥ ೩ ॥

ಸಂತರೆ ಚರಿಸುವ ತೀರ್ಥರೂಪರೋ
ಸಂತರೆ ಕೃತಾಂತನ ಗೆಲುವರೋ ॥ ೪ ॥

ಸಂತರೆ ಮೂಲನಾರಾಯಣನಂತಾ
ನಂತ ಗುಣಾಂಬುಧಿ ಎಂತೆಂಬುವರೋ ॥ ೫ ॥

೧೭೪

ಹರಿಯಿಲ್ಲದೇ ಪರದೈವವಿಲ್ಲಾ
ಗುರುವಲ್ಲದೆ ತಿಳಿಸುವರಿಲ್ಲಾ ॥ ಪ ॥

ಹರಿಗುರುವಿಗೆ ಶರಣೆನ್ನದ ನರನಿಗೆ
ಇಹಪರ ಗತಿಯಿಲ್ಲಾ
ಮರುತಾಂತರ್ಗತ ಹರಿಯ ನಂಬಿದವಗೆ
ಪರಮಗತಿಗೆ ಸಂಶಯವಿಲ್ಲಾ ॥ ೧ ॥

ಭಕ್ತಾಪರಾದ ಸಹಿಷ್ಣುವಾ ಸರ್ವ
ಶಕ್ತಮೂಲನಾರಾಯಣನಾ
ಭಕ್ತರಾದವರ ಮುಕ್ತರೊಡನಿರುವಾ
ಮರೆತ ಮೂರ್ಖನಿಗೆ ಮುನಿವಂ ॥ ೨ ॥

❖❖

ಮಂಜುಳಾ ಸುಬ್ಬರಾವ್ (೧೯೩೩-೨೦೧೦)
ಅಜವಿಠಲ ಅಂಕಿತದ ಕೀರ್ತನೆಗಳು(೧೮೮-೧೯೧)

ಜೀವನ: ಕುಣಿಗಲ್ ತಾಲ್ಲೂಕಿನ ಡಿ.ಎಸ್.ವೆಂಕಟರಾವ್ ಮತ್ತು ಸುಶೀಲಾಬಾಯಿ ದಂಪತಿಗಳ ಸುಪುತ್ರಿಯಾಗಿ ಮಂಜುಳಾ ಅವರು ೨೨-೩-೧೯೩೩ರಲ್ಲಿ ಜನಿಸಿದರು. ಬೆಂಗಳೂರಿನ ಮಾಡೆಲ್ ಇನ್ಫ್ಯಾಂಟ್ ಸ್ಕೂಲಿನಲ್ಲಿ ಶಿಕ್ಷಕಿಯಾಗಿ ಕಾರ್ಯನಿರ್ವಹಿಸುತ್ತಾ ೨೮ನೇ ವಯಸ್ಸಿನಲ್ಲಿ ವೆಂಕಟರಾವ್-ಸೋನಾಬಾಯಿ ದಂಪತಿಗಳ ಪುತ್ರ ಸುಬ್ಬರಾವ್ ಅವರನ್ನು ವಿವಾಹವಾದರು. ಪರಂಪರಾಗತವಾಗಿ ಧಾರ್ಮಿಕ ವಾತಾವರಣದ ಕುಟುಂಬದಲ್ಲಿ ಬೆಳೆದ ಮಂಜುಳಾ ಸುಬ್ಬರಾವ್ ಅಫರು. ಬಾಲ್ಯದಲ್ಲಿಯೇ ಪೇಜಾವರ ಶ್ರೀ ವಿಶ್ವೇಶ್ವತೀರ್ಥರಿಂದ ಅಜವಿಠಲ ಎಂದು ಅಂಕಿತವನ್ನು ಪಡೆದರು. ೧೪-೧೦-೨೦೧೦ರಲ್ಲಿ ನಿಧನರಾದರು.

ಕೃತಿಗಳು: ಸಾಕಷ್ಟು ವೈವಿಧ್ಯಪೂರ್ಣ ಕೃತಿಗಳನ್ನು ರಚಿಸಿರುವ ಮಹಿಳಾ ಬರಹಗಾರರಲ್ಲಿ ಮಂಜುಳಾ ಸುಬ್ಬರಾವ್ ಒಬ್ಬರಾಗಿದ್ದಾರೆ. ಅವರು ರಚಿಸಿರುವ ಕೆಲವು ಕೃತಿಗಳಿವು.

೧) ಅಜವಿಠಲನ ನೀತಿ ಶತಕ (ತ್ರಿಪದಿ ರಚನೆ)

೨) ನಳ ಚರಿತ್ರೆ ೩) ಶ್ರೀಮದ್ಭಾಗವತ ಭಾವದೀಪ್ತಿ (ಭಾಮಿನೀ ಷಟ್ಪದಿ)

೪) ರಾಘವೇಂದ್ರ ಕಥಾಸೌರಭ (ಭಾಮಿನಿ ಷಟ್ಪದಿ ೨೦೧೫ ಪದ್ಯಗಳು)

೫) ಸುಮಧ್ವ ವಿಲಾಸ (ಬೋಗಷಟ್ಪದಿ ೫೦೬ ಪದ್ಯಗಳು)

೬) ಚಿಂತನ-ಮಥನ (ತತ್ವಜ್ಞಾನ)

೭) ಶ್ರೀನಿವಾಸ ಕಲ್ಯಾಣ

೮) ವಿಶ್ವೇಶತೀರ್ಥ ವಿಜಯ

೯) ಗೀತಸುಧಾ (೧೧೯ ಬ್ರಾಮಿನೀ ಘಟ್ಪದಿಯಲ್ಲಿ ಭಗವದ್ಗೀತೆಯ ಅನುವಾದ.)

೧೦) ಶ್ರೀ ಮನ್ಮಹಾಭಾರತ ಇತ್ಯಾದಿ ೪೫ ಗ್ರಂಥಗಳನ್ನು ೪೦೦ಕ್ಕೂ ಹೆಚ್ಚು ದೇವರನಾಮಗಳನ್ನು ರಚಿಸಿದ್ದಾರೆ.

ಪ್ರಶಸ್ತಿಗಳು :

೧) ಡಿ.ಎಸ್.ಇ.ಆರ್.ಟಿ.ಯಿಂದ ಮಕ್ಕಳಿಗೆ ಹೇಗೆ ಕಲಿಸಬೇಕು ಎಂಬ ಗ್ರಂಥಕ್ಕೆ ೧೯೮೮ರ ರಾಜ್ಯಪ್ರಶಸ್ತಿ.

೨) ಲಯನ್ಸ್ ಇಂಟರ್ ನ್ಯಾಷನಲ್ ಸಂಸ್ಥೆಯಿಂದ ಉತ್ತಮ ಶಿಕ್ಷಣಸೇವೆಗಾಗಿ ಬೆಸ್ಟಟೀಚರ್ ಸನ್ಮಾನ.

೩) ೨೦೦೪ರಲ್ಲಿ ಪೇಜಾವರ ವಿಶ್ವೇಶತೀರ್ಥರಿಂದ ದಾಸಸಾಹಿತ್ಯ ಭಾಷಣ ಪ್ರಶಸ್ತಿ.

೪) ಗೀತಸುಧಾ (೧೯೯ ಭಾಮಿನೀ ಷಟ್ಪದಿಯಲ್ಲಿ ಭಗವದ್ಗೀತೆಯ ಅನುವಾದ)

೫) ೨೦೦೬ರಲ್ಲಿ ಸಾಹಿತ್ಯ ರತ್ನ, ಪುಣ್ಯಧಾಮದಲ್ಲಿ ವಿದ್ವತ್ ಪ್ರಶಸ್ತಿ.

೧) ಅಮೆರಿಕಾದ ಮಿಚಿಗನ್‌ನಲ್ಲಿ ವಿಶ್ವವ್ಯಾಸರಾಜ ಭಕ್ತರ ವೇದಿಕೆ ಯಿಂದ ಸನ್ಮಾನ.

೧೪-೧೦-೨೦೧೦ರಲ್ಲಿ ನಿಧನರಾದರು.

೧೭೫

ಒದೆಯಲಿಲ್ಲವೋ ನಿನ್ನ ಭೃಗುಮುನಿಯಂತೆ
ಬಡಿಯಲಿಲ್ಲವೊ ನಿನ್ನ ಯಶೋದೆಯಂತೆ
ಕದ ಕಾಯಿಸಲಿಲ್ಲ ಬಲಿರಾಜನಂತೆ
ನುಡಿನಿಂದೆ ಇಲ್ಲವೋ ಗೋಪಿಕೆಯರಂತೆ
ನಡೆಸಲಿಲ್ಲವೊ ರಥವ ಆ ಪಾರ್ಥನಂತೆ
ಬಡಿಸಿದೆಂಜಲೆಲೆ ಬಳಸಲಿಲ್ಲೊ ಧರ್ಮಜನಂತೆ
ಕೆಡಿಸಲಿಲ್ಲವೊ ಶಪಥ ಸಲಹೋ ಅಜವಿಠಲ

೧೭೬

ಚುಕುಪುಕು ಚುಕುಪುಕು ರೈಲೋಡುತಿದೆ
ಜೀವನ ರೈಲೋಡುತಿದೆ ॥ ಪ ॥

ಕಂಬಿಯ ಮೇಲೆ ಓಡುತಿದೆ । ಹರಿಗೆರೆ ಮೇಲೆ ಓಡುತಿದೆ ॥ಅ.ಪ. ॥

ನಡೆಸುವ ಶ್ರೀಹರಿ ನಡೆವವ ಜೀವಿ ನಿಲ್ದಾಣದಿ ಅವ ಇಳೀಬೇಕು
ಮುಗಿದರೆ ಆಯು ಅವ ಇಳಿಬೇಕು ॥ ೧ ॥

ಗಾರ್ಡ್ ಹನುಮ ಡ್ರೈವರ್‌ರಾಮ ಪಾರ್ಡೇವಿಧವಿಧ ಬೋಗಿಗಳು
ಕಾರ್ಡಾಗಿದೆ ಜೀವಿ ಅಗತ್ಯಗಳು ॥ ೨ ॥

ಪ್ರಥಮದರ್ಜೆ ಸಾತ್ತ್ವಿಕಜೀವಿ ದ್ವಿತೀಯ ರಾಜಸಜೀವಿಗಳು
ತೃತೀಯ ಪ್ಯಾಸೆಂಜರ್ ತಾಮಸರು ॥ ೩ ॥

ಭೋಗಿ ಸಂತಸ ಶೋಕ ಮಮತೆ । ಭೋಗಿಯ ಬಿಟ್ಟರೆ
ತ್ಯಜಿಸುವುದು । ಹಾಗೆಯೇ ಜೀವನ ಸಂಸಾರ ॥ ೪ ॥
ಆರೂ ಬರರು ಆರೂ ಇರರು ಧೀರಜವಿಠಲ ತಾನೊಬ್ಬ
ನಿತ್ಯ ಸಾರಿ ಸ್ಮರಿಸಿ ಅದು ಸತ್ಯ ॥ ೫ ॥

೧೭೭

ದೈವಕ್ಕೊಂದು ಮಂದಿರವಿದೆ ಕೈವಲ್ಯಕ್ಕೊಂದು ಸಾಧನೆ ಇದೆ
ನೀನು ಏನು ಮಾಡುವೆ ವಿಚಾರಿಸು ವಿಚಾರಿಸು ॥ ಪ ॥

ಕಷ್ಟಸುಖವು ಜೀವನದಲಿ ಕಾಲಚಕ್ರವು
ಮರಕೆ ಬಹುದೇ ಕಷ್ಟ ಮನುಜಗೇನೇ ಬರುವುದು
ಸೂತ್ರಧಾರಿ ಹಿಡಿದ ಪಟ ನೀನು
ಸೂತ್ರ ಬಿಟ್ಟಕಡೆ ನೀನು ಓಡಬೇಕೆಲೆ ॥ ೧ ॥

ಮುಂದೆ ಬರಲು ಹಕ್ಕಿಯಂತೆ ನೀನು ಹಾರುವೆ
ಹಿಂದೆ ತಳ್ಳಿ ಹಾಕುವಂಥ ಶಕ್ತಿಯೊಂದಿದೆ
ಹರಿಯ ಕರುಣೆ ಗುರು ಹರಕೆ
ಎರಡು ಸೇರಲು ಗುರಿಯಮುಟ್ಟೆ ಸಾಧ್ಯವು
ಇಹಕೆ ಆಗಲಿ ಪರಕೆ ಆಗಲಿ
ಅಜವಿಠಲನ ಪದಕೆ ಬೀಳಬೇಕು ॥ ೨ ॥

೧೭೮

ನಡೆದು ಬಾ ರೈಲೇ ನಡೆದು ಬಾ
ಮೊದಲು ಇಂಜಿನ್ನಿಂದ ॥ ಪ ॥

ಕಡೆಗೆ ಬೋಗಿಗಳಿಂದ
ನಡೆದು ಬಾ ನೀ ನಡೆದು ಬಾ ॥ಅ.ಪ ॥
ಸರಿಗಮಪದನೆಂಬ ಸಪ್ತಸ್ವರರೈಲೆ
ಗುರುವೆ ಇಂಜಿನ್ನು ನಡೆಸುವನು ವೇಳೆ
ಗುರುವಿರದೆ ಗುರಿಯನ್ನು ಸಾಧಿಸಲಳವೆ
ಇರಬೇಕು ಶ್ರದ್ಧೆಯು ನೀರೆರೆಯುವಂತೆ ॥ ೧ ॥

ಕಂಬಿಯೇ ತಂಬೂರಿ ಶ್ರುತಿ ಇರಲುಬೇಕು
ಎಂಬ ಚುಕ್‌ಪುಕ್ ಚುಕ್‌ಪುಕ್ ತಾಳವು ಬೇಕು
ಬೆಂಬಿಡದ ಘಟ್ಟಗಳು ನಿಲ್ದಾಣ ಬೇಕು
ಸಂಭ್ರಮದ ಊತುತ್ ಶಬ್ದದ ಜನ ಕರೆಯಬೇಕು ॥ ೨ ॥

ಎಂತು ಸಾಗಿದರೆಮ್ಮ ಊರುಬಹುದು
ಸಂತಸವು ಸಂಗೀತ ಕಲಿತರೆ ಅಹುದು
ಚಿಂತಾಮಣಿ ಅಜವಿಠಲನೊಲಿಸಬಹುದು
ಚಿಂತೆಮರೆಸುವ ವಿದ್ಯೆ ಸಂಗೀತ ಅಹುದು ॥ ೩ ॥

❖❖

ಸುಶೀಲಾಬಾಯಿ ಶಿರಿವಾರ (೧೯೩೪-೨೦೧೪)

ಶಿರಿವಾರದೊಡೆಯ ಶ್ರೀನಿವಾಸ ಅಂಕಿತದ ಕೀರ್ತನೆಗಳು (೧೯೧-೧೯೨)

ಕರಡಿಗುಡ್ಡದ ರಾಮರಾವ್ ಮತ್ತು ವೆಂಕೂಬಾಯಿ ದಂಪತಿಗಳಿಗೆ ೧೯೩೪ರಲ್ಲಿ ಸುಶೀಲಾಬಾಯಿ ಜನಿಸಿದರು. ಬಾಲ್ಯದಲ್ಲಿ ಧಾರ್ಮಿಕವಾತಾವರಣದಲ್ಲಿ ಶ್ಯಾಮಸುಂದರ ವಿಠಲದಾಸರಿಂದ ದೀಕ್ಷೆಪಡೆದ ಬಲ್ಲಟಗಿ ಗುಂಡಾಚಾರ್ ಅವರ ಸೇವಾಕಾರ್ಯದಲ್ಲಿ ನಿರತರಾದ ಸುಶೀಲಾಬಾಯಿ ಅವರಿಗೆ ಧರ್ಮಶ್ರದ್ಧೆ ನೆಲೆಯೂರಿತು. ೧೯೫೪ರಲ್ಲಿ ೨೦ನೇ ವಯಸ್ಸಿನಲ್ಲಿ ರಾಯಚೂರಿನ ಶಿರಿವಾರ ಗ್ರಾಮದ ಕುಲಕರ್ಣಿ ರಾಮಚಂದ್ರರಾವ್ ಹಾಗೂ ಗಂಗೂಬಾಯಿ ದಂಪತಿಗಳ ಪುತ್ರ ವೆಂಕಟರಾವ್ ಅವರೊಂದಿಗೆ ಸುಶೀಲಾಬಾಯಿ ಅವರ ಮದುವೆಯಾಯಿತು.

ಮದುವೆಯಾಗಿ ೫-೬ ವರ್ಷಗಳಾದರೂ ಮಕ್ಕಳಾಗಲಿಲ್ಲ ಎಂಬ ಕಾರಣಕ್ಕಾಗಿ ವೆಂಕಟರಾಯರಿಗೆ ಎರಡನೇ ಮದುವೆ ಮಾಡಲು ಅತ್ತೆಮನೆಯವರು ನಿರ್ಧರಿಸಿದಾಗ ಅವರಿಂದ ನೊಂದ ಸುಶೀಲಾಬಾಯಿ ಹರಿಭಕ್ತರ ಹಾಗೂ ಸೋದೆ ವಾದಿರಾಜರ ಸೇವೆಯನ್ನು ಶ್ರದ್ಧೆಯಿಂದ ಮಾಡುತ್ತಾ ಮನಸ್ಸಿಗೆ ನೆಮ್ಮದಿ ತಂದುಕೊಳ್ಳಲು ಯತ್ನಿಸಿದರು.

ದೈವಾನುಗ್ರಹದಿಂದ ಸೋದೆ ವಾದಿರಾಜರ ಅನುಗ್ರಹದಿಂದ ಇಬ್ಬರು ಗಂಡುಮಕ್ಕಳು (ವಾದಿರಾಜ, ವಸುಧೇಂದ್ರ) ಒಬ್ಬ ಹೆಣ್ಣು ಮಗಳು (ವೈದೇಹಿ) ಜನಿಸಿದರು. ಹರಿಗುರುಗಳಲ್ಲಿ ಸುಶೀಲಾಬಾಯಿ ಅವರಿಗೆ ಅಪಾರ ಶ್ರದ್ಧಾಭಕ್ತಿಗಳು ಉಂಟಾಯಿತು.

ಶಿರಿವಾರದ ಶ್ರೀನಿವಾಸನ ಆರಾಧಿಸುತ್ತಿದ್ದ ಸುಶೀಲಾಬಾಯಿ ಶಿರಿವಾರದೊಡೆಯ ಶ್ರೀನಿವಾಸ ಎಂಬ ಅಂಕಿತವನ್ನು ಇಟ್ಟುಕೊಂಡು ಕೀರ್ತನೆಗಳನ್ನು ಸಂಪ್ರದಾಯದ ಹಾಡುಗಳನ್ನು ರಚಿಸಿದರು. ೮೦ ವರ್ಷಗಳ ಬಾಳಿದ ಸುಶೀಲಾಬಾಯಿ ೧೪-೪-೨೦೧೪ರಲ್ಲಿ ಪರರಧಾವನ್ನು ಸೇರಿದರು.

ದಯಮಾಡಿ ಸಲಹಯ್ಯಾ ಭಯನಿವಾರಕನೆ
ನಿನ್ನ ದರುಶನವಿತ್ತು ಪೊರೆಯೊ ವೆಂಕಟನೆ ॥ ಪ ॥

ಕ್ಷಣಕ್ಷಣಕ್ಕೂ ನೀ ಮಾಡಿದಂಥ ಉಪಕಾರವನು
ವರ್ಣಿಸಲೊಳವಲ್ಲ ಅಷ್ಟಿಷ್ಟು ಹರಿಯೆ । ಫಣಿಶಯನನೆ ಎನ್ನ
ಅವಗುಣಗಳೆಣಿಸದೆ । ಕರುಣಾಳು ಕೃಪೆಮಾಡಿ ಕಾಯೋ ಶ್ರೀ ನರಹರಿಯೆ ॥೧ ॥

ನೂರೆಂಟು ರೋಗಗಳು ಅನುಭವಿಸುತ್ತಿರುವಾಗ । ನಿನ್ನ
ದರುಶನವಿಲ್ಲೆಂದು ವ್ಯಥೆಪಟ್ಟೆನಯ್ಯಾ । ದೇವಾ ಧನ್ವಂತರಿಯೆ
ನೀನೆ ಗತಿ ಎಂದೆನು ಸಿಂಧುಶಯನ ಕೃಪೆ ಮಾಡಿ ಕರೆತಂದೆ ನಿನ್ನಡಿಗೆ ॥೨ ॥

ನಿನ್ನ ದರುಶನವಾಗುವುದಿಲ್ಲವೇನೊ ಎಂಬಂತೆ ಭಯದಿಂದ
ಇಂದಿರಾಪತಿಯೆ ಗತಿ ಎಂದು ಸಾಗಿದೆವು ಜನರ ಹಿಂದ್ಹಿಂದೆ
ಗೋವಿಂದ ಗೋವಿಂದೆಂದು ಗರ್ಜಿಸುತ ಭಕ್ತವೃಂದ
ಬರುವುದು ಬಲು ಛಂದ ಅದನ್ನೋಡಿ ಎನ್ನಮನಕಾಯಿತಾನಂದ ॥ ೩ ॥

ನೀನಿತ್ತ ಪರಿವಾರವನು ನೀ ಸಲಹುವಿಯೆಂದು ತಿಳಿಯದೆ
ನಾಗೊಡ್ಡು ಮಮತೆಯ ಮಾಡುವೆನಯ್ಯಾ ಹರಿಯೆ
ದುಡ್ಡು ದುಡ್ಡಿಗೆ ಎನ್ನ ಅಡ್ಡ ಹಾದಿ ಹಿಡಿಸದಂತೆಯೆ ಬಡ್ಡಿ ಸಹಿತ
ನೀ ಕಸೆದರು ನಿನ್ನ ಪ್ರಸಾದ ಲಡ್ಡು ಒದಗಿಸೋ ಸ್ವಾಮಿ ॥ ೪ ॥

ಎಂದಿಗಾದರೂ ನಿನ್ನ ಪಾದಾರವಿಂದವೆ ಗತಿಯೆಂದು ನಂಬಿದೆ
ಇಂದಿರೇಶ ನಿನ್ನ ನಂಬಿದಾ ಭಕ್ತರ ಕುಂದುಗಳ ಎಣಿಸದೆ
ತಂದೆ ಕಾಯೋ ಶಿರಿದೇವಿ ಗ್ರಾಮದ ಮುಕುಂದ ॥ ೫ ॥

ಸಂತರು ಸದ್ಭಕ್ತರು ಸಾವಿರಾರು ಜನರು । ಸಾಲು ಸಾಲಾಗಿ ಬರುವ
ದೃಶ್ಯವನು ನೋಡುವ । ಘನ್ನ ಮಹಿಮನೆ ನೀನು
ಎನ್ನೊಮ್ಮೆ ಒರಗಿಸೋ । ಸಾಸಿರನಾಮದ ಶಿರಿವಾರದೊಡೆಯ ಶ್ರೀನಿವಾಸನೆ ॥೬॥

೧೪೦

ನಿನ್ನ ಪುಟ್ಟಪಾದದ ದರುಶನ ಮಾಡಬೇಕೆಂದು
ಗಟ್ಟಿಮನಸು ಮಾಡಿ ಬಂದೆನಯ್ಯಾ ಹರಿಯೆ ॥ ಪ ॥

ಮೆಟ್ಟಿಲು ಮೇಲಿಂದ ತಳ್ಳಿದರೂ ನೀ ಎನ್ನ ಕೈ ಬಿಟ್ಟು
ಹೋಗಲಿಲ್ಲವೋ ಎನ್ನ ದೊರೆಯೆ ॥ಅ.ಪ. ॥

ನಿನ್ನ ಉಪಕಾರವನ್ನು ಎಂದಿಗೂ ಮರೆಯೆನೊ ಮನ್ನಿಸಿ ಕಾಪಾಡಿ
ಸಲಹೋ ಸ್ವಾಮಿ ಎನ್ನಮನದಲಿ ಸದಾ ನಿನ್ನ ಧ್ಯಾನವನೆ ಮಾಡುವ
ಮನಸನು ಕರುಣಿಸಿ ಕೊಟ್ಟು ಕಾಪಾಡು ಹರಿಯೆ (ಪುರುಷೋತ್ತಮ) ॥ ೧ ॥

ಗಂಗೆ ಧರಿಸಿದ ರಾಮಲಿಂಗ ದೇವರಿಗೆ ತುಂಗೆ ತಟದಿ ಮೆರೆವ
ದಾಸವರ್ಯರಿಗೆ ಎಮ್ಮ ಪರಿವಾರವ ಪೊರೆಯೆಂದು
ಪ್ರೇರಣೆ ಇತ್ತು ಅವರಿಗೆ ಮನ್ನಿಸಿ ಸಲಹಿದಿ, ಕೃಪೆಮಾಡಿ ಹರಿಯೆ ॥ ೨ ॥

ಎಷ್ಟು ಕಷ್ಟವನು ನೀ ಕೊಟ್ಟರೂ ಸರಿಯೇ ಎನ್ನ ದಿಟ
ಶ್ರೀನಿವಾಸ ಬೆಟ್ಟದೊಡೆಯಾ ಪುಟ್ಟಗ್ರಾಮದಿ ನೆಲಸಿರುವ
ನಾ ಹಿರಿಯರ ಗುರುಗಳ ಸೇವೆ ಮನಮುಟ್ಟಿ
ಮಾಡುವ ಮನಸು ನೀಥಟ್ಟನೆ ಕೊಟ್ಟು ಕಾಪಾಡು ॥ ೩ ॥

ಅನ್ಯರ ದುರ್ಗುಣವನ್ನು ಎಣಿಸಿ ದಣಿಸಿ ಬ್ಯಾಡೋ
ನಿನ್ನ ನಾಮಾಮೃತದ ಮೃಷ್ಟಾನ್ನವನುಣಿಸೋ
ಎನ್ನನ್ನು ನೀ ಕಡೆಹಾಯಿಸದೆ ಕರುಣಿಸೊ
ನಿನ್ನವರ ಸಂಗ ಎನ್ನ ಜನ್ಮದಲ್ಲಿರಿಸೋ ॥ ೪ ॥

ಅಮಿತಜೀವರೊಳಗೆ ಅಧಮಳಾದವಳು ನಾನು
ನಿಮಿಷವಾದರೂ ನಿನ್ನ ಸ್ಮರಿಸಲಿಲ್ಲ । ಮಮತೆಯ ವಿಷಯದಲ್ಲಿ
ಘನವಾಯಿತೋ ಸ್ವಾಮಿ ನಿನ್ನ ಕಡೆಗೆ ಮನವನ್ನು ಹೋಗುವ
ಹಾಗೆ ಘನ್ನ ಮಹಿಮನೆ ಕರುಣಿಸೊ ಹರಿಯೆ ॥ ೫ ॥

ನೀನೆ ಎನ್ನಯ ದೇಹದೊಳಗೆ ಹೊರಗೆ ಇದ್ದು
ನಾನಾ ವ್ಯಾಪಾರವ ಮಾಡಿಸುವಿ । ಧೇನುಪಾಲನೆ ನಿನ್ನಾ
ಅಧೀನನು ನಾನಯ್ಯ ಸುಮನಸರೊಡೆಯನೆ ರಮೆ ಅರಸನೆ ನಿನ್ನ ॥ ೬ ॥

ಅಣೋರಣೀಯನೆ ಅಗಣಿತ ಮಹಿಮನೆ ಪರಮ
ಪುರುಷನೆ ಪರವಾಸುದೇವನೆ ಶಿಲೆಯಲ್ಲಿ ನೆಲೆಸಿದ
ಗುಡೇಬಲ್ಲೂರು ವಾಸನೆ ಶಿರಿದೇವಿ ಗ್ರಾಮದ ನಿಂತ
ಮಹಾತ್ಮನೆ ಶಿರಿವಾ಼ರದೊಡೆಯ ಶ್ರೀನಿವಾಸನೆ ॥ ೭ ॥

❖❖

ಭದ್ರಗಿರಿಕೇಶವ ದಾಸರು (೧೯೩೪-೧೯೯೭)

ದಾಸಕೇಶವನುತ ಅಂಕಿತ ಕೀರ್ತನೆಗಳು(೧೯೪-೨೧೦)

ಉಡುಪಿಗೆ ೩ ಮೈಲಿ ದೂರದಲ್ಲಿರುವ ಭದ್ರಗಿರಿಯಲ್ಲಿ ವೆಂಕಟರಮಣ ಪೈ – ರುಕ್ಮಿಣಿಬಾಯಿ ಭಕ್ತದಂಪತಿಗಳಿಗೆ ೧೯೩೪ರಲ್ಲಿ ಕೇಶವದಾಸರು ಜನಿಸಿದರು. ಶಾಲೆಯಲ್ಲಿ ಓದುತ್ತಿದ್ದಾಗಲೆ ಶಾಲಾ ಪರೀಕ್ಷಕರೆದುರು ಹರಿಕಥೆ ಮಾಡಿ ಬಾಲಕ ಹರಿದಾಸ ಎಂದು ಪ್ರಸಿದ್ಧಿಯಾದರು. ಅನಂತರ ಶಾಲಾ ವಿದ್ಯಾಭ್ಯಾಸ ಮುಗಿಸಿ ಉಡುಪಿಯ ಎಂ.ಜಿ.ಎಂ.ಕಾಲೇಜಿನಲ್ಲಿ ಬಿ.ಎ.ಡಿಗ್ರಿ ಪಡೆದರು. ಉಡುಪಿಯ ಕಾನೂನು ಕಾಲೇಜಿನಲ್ಲಿ ಎಲ್.ಎಲ್.ಬಿ. ಪಾಸುಮಾಡಿದರು. ಕ್ರಮೇಣ ಹರಿಕಥೆ ಮಾಡುವುದರ ಮೂಲಕ ನಾಡಿನಾದ್ಯಂತ ಪ್ರಖ್ಯಾತರಾದರು.

ಬೆಂಗಳೂರಿನಲ್ಲಿ ನೆಲಸಿದಮೇಲೆ ದಾಸಾಶ್ರಮ ಮತ್ತು ಪುರಂದರವಿಠಲ ಮಂದಿರ ನಿರ್ಮಿಸಿದರು. ಭಾರತಾದ್ಯಂತ ಸಂಚರಿಸಿ ಹಿಂದಿ ಮರಾಠಿ ತಮಿಳು ತುಳು ಕೊಂಕಣಿ ಕನ್ನಡ ಷಡ್ಭಾಷೆಗಳಲ್ಲಿ ಹರಿಕಥೆ ಮಾಡಿದ ಬಹುಭಾಷಾಕೋವಿದರಾದ ಕನ್ನಡಿಗರು ಇವರೊಬ್ಬರೇ ೧೯೬೪ರಲ್ಲಿ ಅಖಿಲ ಕರ್ನಾಟಕ ಕೀರ್ತನಕಾರರ ಸಮ್ಮೇಳನ ಆಯೋಜಿಸಿದರು. ೧೯೬೪ರಲ್ಲಿ ರಾಷ್ಟ್ರಾಧ್ಯಕ್ಷರಾಗಿದ್ದ ರಾಷ್ಟ್ರಧರ್ಮದಲ್ಲಿ ಸರ್. ರಾಧಾಕೃಷ್ಣನ್ ಅವರ ಸಮ್ಮುಖದಲ್ಲಿ ಇಂಗ್ಲೀಷಿನಲ್ಲಿ ಹರಿಕಥೆ ಮಾಡಿದರು. ೧೯೬೫ರಲ್ಲಿ ದಾಸಕೀರ್ತನ ಕಾಲೇಜು ಪ್ರಾರಂಭಿಸಿದರು.

ಕಲ್ಕತ್ತಾದಲ್ಲಿ ಚಾತುರ್ಮಾಸ ಕೀರ್ತನ ಉತ್ಸವ ನಡೆಸಿ ೧೯೬೬ರಲ್ಲಿ ಪ್ರಥಮಬಾರಿಗೆ ಅಮೆರಿಕಾಕ್ಕೆ ಯಾತ್ರೆ ಮಾಡಿ ಅನಂತರ ೩೦ವರ್ಷಗಳ ಕಾಲ ಸತತವಾಗಿ ಹರಿಕಥೆ ಧಾರ್ಮಿಕ ಉಪನ್ಯಾಸಗಳನ್ನು ಇಂಗ್ಲಿಷಿನಲ್ಲಿ ಮಾಡಿದರು. ಜಗತ್ತಿನ ನಾನಾಕಡೆಗಳಲ್ಲಿ ಅಂತರರಾಷ್ಟ್ರೀಯ ಕೇಂದ್ರಗಳನ್ನು (ದಾಸ ಸತ್ಸಂಗದ ಕೇಂದ್ರಗಳನ್ನು) ಸ್ಥಾಪಿಸಿದರು. ೫೦೦ಕ್ಕೂ ಹೆಚ್ಚುಗ್ರಂಥಗಳನ್ನು ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ರಚಿಸಿ ಪ್ರಕಟಿಸಿದರು. ೫೦೦೦ಕ್ಕೂ ಹೆಚ್ಚು ಕೀರ್ತನೆಗಳನ್ನು ರಚಿಸಿದ್ದಾರೆ. ೨೦೦೦ಕ್ಕೂ ಮಿಗಿಲು ಕೀರ್ತನೆಗಳು ಗ್ರಂಥರೂಪದಲ್ಲಿ ಪ್ರಕಟವಾಗಿದೆ. (ಸಂತ ಶ್ರೀ ಭದ್ರಗಿರಿಕೇಶವದಾಸರ ಕೀರ್ತನೆಗಳು ೧೯೮೭) ದಾಸವಾಣಿ ಎಂಬ ಮಾಸಪತ್ರಿಕೆ

ಹೊರಡಿಸಿದರು. ವಾಗ್ಗೇಯಕಾರರು ಹರಿಕಥೆದಾಸರು, ದಾಸಕೀರ್ತನರಚಕರೂ ಪ್ರಚಾರಕರೂ ಆದ ಸಂತ ಶ್ರೀ ಭದ್ರಗಿರಿ ಕೇಶವದಾಸರು ೧೯೯೭ರಲ್ಲಿ ನಿಧನರಾದರು.

ಕೃತಿಗಳು : ೫೦ಕ್ಕೂ ಮಿಕ್ಕು ಗ್ರಂಥಗಳನ್ನು ಇಂಗ್ಲಿಷಿನಲ್ಲಿ ಮತ್ತು ಕನ್ನಡದಲ್ಲಿ ರಚಿಸಿರುವ ಭದ್ರಗಿರಿ ಕೇಶವದಾಸರು ರಚಿಸಿದ್ದಾರೆ. ಆ ಪೈಕಿ ಕೆಲವು ದಾಸಸಾಹಿತ್ಯ ಕೃತಿಗಳು ಹೀಗಿವೆ.

೧) ಸಂತ ಶ್ರೀ ಭದ್ರಗಿರಿ ಕೇಶವದಾಸರ ಕೀರ್ತನೆಗಳು (೧೯೯೭)

೨) ಪುರಂದರೋಪನಿಷತ್ (ಕೀರ್ತನೆಗಳ ವ್ಯಾಖ್ಯಾನ)

೩) ಭಗವದ್ಗೀತಾದರ್ಶನ (ಗೀತೆ)

೪) ಕಥಾಕೀರ್ತನತರಂಗಿಣಿ (ಹರಿಕಥೆಗಳು)

೫) ಸದ್ಗುರು ಉಪದೇಶಾಮೃತ

೬) ಪ್ರೇಮಯೋಗ (ಭಕ್ತಿಯೋಗ)

೭) ಪುರಂದರ ದಾಸರು (ನಾಟಕ)

೮) ಕನಕದಾಸರು (ನಾಟಕ)

೯) ಸಂತ ತುಕಾರಾಂ (ನಾಟಕ)

೧೦) ಗಾಯತ್ರಿ ಶ್ರೇಷ್ಠಧ್ಯಾನ

೧೧) ಕೀರ್ತನರೂಪಿ ಭಗವದ್ಗೀತೆ

೧೨) ಭಜನ ಭಾಗೀರಥಿ (೨ ಭಾಗಗಳು)

೧೩) ಭಜನಸಭಾ

೧೪) ಕೇಶವ ಕೀರ್ತನ ಗಂಗಾ

೧೫) ಕರ್ಣಾಟಕ ಕೀರ್ತನ ತರಂಗಿಣಿ

೧೬) ಸದ್ಗುರು ದತ್ತಾತ್ರೇಯ ಗೀತೆಗಳು

ಇಂಗ್ಲಿಷ್‌ನಲ್ಲಿ ೨೪ ಗ್ರಂಥಗಳನ್ನು ರಚಿಸಿದ್ದಾರೆ.

೧೮೧

ರಾಗ : ಹಿಂದೂಸ್ತಾನಿ ಕಾಪಿ ತಾಳ : ತ್ರಿತಾಳ

ಎಂಟು ಗೇಣಿನ ದೇಹ ಜನನ ಮರಣವೆಂಬ
ಸುಂಟರಗಾಳಿಗೆ ಉರುಳುತಿದೆ
ಎಂಟುಕೋಟಿ ರೋಮ ಎಂಟುಮದಗಳು
ಅಂಟಿಕೊಂಡಿರುವುದೀ ಪಂಜರಕೆ ॥ ಪ ॥

ಹಸಿವು ಬಾಯಾರಿಕೆ ಪಶು ಸದೃಶ ಕಾಮ
ವಶವಾಗಿ ಚರಿಸುವುದೀ ದೇಹ
ಬಿಸಜನಾಭನ ನಾಮಕೊಸರ ಕಳೆಯುತಿರೆ
ಕೆಸರ ಹೊಂಡದಲಿ ಬೀಳ್ವುದೀ ದೇಹ ॥ ೧ ॥

ಎಲುಬಿನ ಹಂದರ ಮಲಮೂತ್ರದ ಭಾಂಡ
ಬಿಲವಿದಕಿದೆ ನವದ್ವಾರಗಳು
ಚೆಲುವ ಚರ್ಮದ ಹೊದಿಕೆ ಸುತ್ತಿರುತಲಿ
ನೆಲೆಯದಕ್ಕಲ್ಲಿ ಯಮನಾಲಯದಿ ॥ ೨ ॥

ಡಂಬಕ ದೇಹವ ನಂಬಿ ನೆಚ್ಚಿರಬೇಡ
ಅಂಬುಜಲೋಲಪನ ನಾಮವ ಪಾಡು
ಕುಂಭಿನೀಪತಿ ದಾಸಕೇಶವನುತಡಿ
ನಂಬಿ ಸ್ತುತಿಸಿ ಕುಣಿದಾಡು ॥ ೩ ॥

೧೮೨

ರಾಗ : ಮಾಂಡ್ ತಾಳ : ತ್ರಿತಾಳ

ಎಂತಿರಬೇಕು ದೇವರ ಸನಿಹ
ಅಂತಿರಬೇಕು ಗುರುವಿನ ಸನಿಹ ॥ ಪ ॥

ಪಂಥಮಾತುಗಳ ಬಿಟ್ಟಿರಬೇಕು
ಸಂತತ ಭಜನೆಯು ನಡೆದಿರಬೇಕು

ಚಿಂತನೆ ಹರಿಚರಣದಿಂದ್ದಿರಬೇಕು
ಸಂತಸ ಹೃದಯದಿ ತುಂಬಿರಬೇಕು ॥ ೧ ॥

ದೇವರ ಧ್ಯಾನದಿ ಮನವಿರಬೇಕು
ದೇವ ದೇವನಿಗೆ ಶರಣೆನಬೇಕು
ಭಾವಭಕ್ತಿಯಿಂ ಸೇವಿಸಬೇಕು
ಸಾವುಹುಟ್ಟು ತಪ್ಪಿಸಬೇಕು ॥ ೨ ॥

ಘನತೆ ಗೌರವವನರಿತಿರಬೇಕು
ಮನತೋಷದ ನುಡಿಯಾಡಲುಬೇಕು
ಇನಕುಲಾಂಬುಧಿಯ ಸ್ತುತಿ ಇರಬೇಕು
ಭಜನ ಶ್ರವಣ ಮನವದಿರಬೇಕು ॥ ೩ ॥

ದೋಷಯುಕ್ತ ನುಡಿಗಳ ಬಿಡಬೇಕು
ಕೇಶವನ ಪರದೈವ ನೆನೆಬೇಕು
ಆಶೆ ಸ್ವಾರ್ಥಿಗಳ ಸುಟ್ಟುರುಹಿ ಹರಿ
ದಾಸಕೇಶವಮತ ನೆನಬೇಕು ॥ ೪ ॥

೧೮೩

ರಾಗ : ಮೋಹನ ತಾಳ : ಝಂಪೆ

ಕಲ್ಲಾಗದಿರು ಮನುಜ ಅನ್ಯರಾ ಕಷ್ಟದಲಿ
ಕಲ್ಲಾಗು ಕಷ್ಟಗಳು ನಿನಗೆ ಬಂದಾಗ
ಎಲ್ಲರಿಗೂ ಸುಖವನ್ನು ಬಯಸುತಿರು
ಫುಲ್ಲಲೋಚನ ಹರಿಯ ಪ್ರಾರ್ಥಿಸುತೆ ಸತತ ॥ ೧ ॥

ಎಲ್ಲ ತಾನಾಗಿಹನು ಎಲ್ಲಿ ನೋಡಿದರಿಹನು
ಇಲ್ಲದಿಹ ತಾವಿಲ್ಲ ವಿಶ್ವದೊಳಗೆಲ್ಲ
ಸೊಲ್ಲ ಪಾಲಿಸಿ ಕಂಬದಿ ಬಂದ ಪರಮಾತ್ಮ
ನಲ್ಲದೆ ಗತಿಯಿಲ್ಲವೆಂಬುದರಿ ಮನುಜಾ ॥ ೨ ॥

ನೀರ ಮೇಲಣ ಗುಳ್ಳೆ ತೋರಿ ಅಡಗುವ ತೆರದಿ
ಜಾರುವ ದೇಹವಿದ ನೆಚ್ಚದಲೆ ಸತತ
ಮೀರಿ ದ್ವಂದ್ವವ ತಂದೆ ದಾಸ ಕೇಶವನುತನ
ಸೇರಿ ಮುಕ್ತಿಯ ಸುಖ ಸೂರೆಗೊಳ್ಳಯ್ಯ ॥ ೩ ॥

೧೮೪

ರಾಗ : ಪಟ್ದೀಪ್ ತಾಳ : ತ್ರಿತಾಳ

ಗುರುಕೃಪೆಯ ಹೊರತು ಹರಿ ಕೃಪೆಯಾಗದು
ಗುರುವೆ ಮುಕ್ತಿಪಥ ತೋರುವ ಸ್ವಾಮಿಯು ॥ ಪ ॥

ಅರಿಷಡ್ವರ್ಗವ ಜ್ಞಾನ ಖಡ್ಗದಿಂ
ತರಿದು ಬಿಸಾಡುವ ಶಕ್ತಿ ಕರುಣಿಪ
ಹರಿ ಸಾಕ್ಷಾತ್ಕಾರವ ಗೈಸುವನವ
ಪರಮ ಕೃಪಾಳು ಪೂರ್ಣಾನಂದಮಯ ॥ ೧ ॥

ಅಹಂ ಮಮತೆಗಳು ಸುಟ್ಟುರುಹುತ ದಾ
ಸೋಹಂ ತತ್ತ್ವ ಉಪದೇಶಿಪನು
ಬ್ರಹ್ಮಾನಂದವ ಕರುಣಿಸಿ ಪೊರೆದನು
ದಾಸಕೇಶವನುತ ಸದ್ಗುರು ದೇವನು ॥ ೨ ॥

೧೮೫

ರಾಗ : ಸೋಹನಿ ತಾಳ : ಝಂಪೆ

ಜಗದೊಡೆಯ ಏನ ಅರ್ಪಿಸಲಿ ನಿನಗೆ
ಜಗವಿದೆಲ್ಲವು ನಿನ್ನ ಉದರದೊಳಗಿರುತಿರಲು ॥ ಪ ॥

ತಲೆಯ ನಾರಿಕೇಳ ಫಲವಾಗಿ ಅರ್ಪಿಪೆನು
ನಾಲಿಗೆಯ ವಾದ್ಯದಿಂ ಕೀರ್ತಿ ಪೊಗಳುವೆನು
ಒಲಿದು ಸಂತಸದಿಂದ ಸ್ವೀಕರಿಸು ನಯನಗಳ
ಜಲಜ ಪುಷ್ಪವಿದೆಂದು ಚರಣಕರ್ಪಿಸುವೆನು ॥ ೧ ॥

ಹಲ್ಲುಗಳ ದಾಳಿಂಬ ಬೀಜವೆಂದರ್ಪಿಪೆನು
ಮೆಲ್ಲ ಕಿವಿ ಚಾಮರದಿ ಗಾಳಿ ಬೀಸುವೆನು
ಸಲ್ಲಿಸುವ ಕೈಬೆರಳ ದಶ ಕದಳಿಫಲವೆಂದು
ಫುಲ್ಲಲೋಚನ, ಕೃಪೆಯಶೋರಿ ಸ್ವೀಕರಿಸು ॥ ೨ ॥

ಕೊರಳ ಶಂಖದಿ ಧ್ವನಿಯ ಗೈದು ಪೊಗಳುವೆ ನಿನ್ನ
ಸರಳ ಹೃದಯ ತಟ್ಟೆ ಸೊಡರ ಗೈಯುವೆನು
ಮುರಳಿಧರ ಜ್ಞಾನಜ್ಯೋತಿಯ ಬೆಳಕ ಬೆಳಗಿಸುತ
ತರಳ ಕೇಶವದಾಸ-ಪೂಜೆ ಗೈಯ್ಯುವೆನು ॥ ೩ ॥

೧೮೬

ರಾಗ : ಹಿಂದೂಸ್ತಾನಿ ಭೈರವಿ ತಾಳ : ಏಕ

ಜ್ಯೋತಿ ಬೆಳಗಲಿ ಪರಂಜ್ಯೋತಿ ಬೆಳಗಲಿ
ಮನೆ ಮನೆಯೊಳು ಮನಮನದೊಳು ॥ ಪ ॥

ಹೃದಯ ತಟ್ಟೆ ಮನದ ಬತ್ತಿ । ಪದುಮನಾಭನ ಪ್ರೇಮದ ತೈಲ
ಮುದದಿ ಎರೆದು ದೇಹಮರೆದು । ಹೃದಯ ಹೃದಯದೊಳಗು ಜ್ಞಾನ ॥ ೧ ॥

ಅಹಂಕಾರ ನರಕಾಸುರ । ಮಮಕಾರವೆ ಮುರನೆಂಬಸುರ ।
ಶಿಷ್ಟರ ಕರೆಗೆ ಕೃಷ್ಣ ಬಂದು । ದುಷ್ಟರ ತರಿದು ಮೆರೆಯೆ ಧರ್ಮ ॥ ೨ ॥

ನಾನು ನೀನು ಎಂಬ ದ್ವೇಷ । ಮಾನ ಅಭಿಮಾನ ದೋಷ
ಹೀನಬುದ್ಧಿಗಳೆಲ್ಲ ನಾಶ । ಗೊಳಿಸಿ ಜಗವ ಪೊರೆವ ನಾಮ ॥ ೩ ॥

ಕಾಮಕ್ರೋಧ ಲೋಭ ಮೋಹ । ಆ ಮಹಾಮತ್ಸರವು ಮದವು
ಹೋಮಗೈದು ಸಕಲ ಜನ । ಸ್ತೋಮ ಒಂದು ಗೈದ ಪ್ರೇಮ ॥ ೪ ॥

ಆಶೆ ಸ್ವಾರ್ಥ ಸುಟ್ಟು ಕರುಣೆ । ಕೇಶವಪದ ಸೇವೆ ಕೊಟ್ಟು
ದಾಸಕೇಶವಸಂತನು ಸತತ । ಭಾಷೆಯಿತ್ತು ಪೊರೆವ ದಾಸ ॥ ೫ ॥

೧೮೭

ರಾಗ : ಮುಲ್ತಾನಿ	ತಾಳ : ತ್ರಿತಾಳ

ದಾರಿ ತೋರದು ಗುರುವೆ ಪೊರೆಯೈ
ಭಾರಿ ಅಂಧಕಾರದಿ ಸಿಲುಕಿಹೆ ನಾ ॥ ಪ ॥

ನಡೆಸುವ ಶಕ್ತಿ ನೀ ನುಡಿಸುವವನು ನೀ
ಎಡೆಎಡೆಗೂ ಬಿಡದಲೆ ಪೊರೆವನು ನೀ
ಮೃಡ ನೀನೇ ಹರಿ ನೀನೇ ವಿಧಿ ನೀ
ಪಿಡಿಯುತೆ ಕರವನು ಕಡೆ ಹಾಯಿಸುವ ದೇವ ॥ ೧ ॥

ಮಾತಾಪಿತೃವು ನೀ ಬಂಧುಬಳಗ ನೀ
ಸೋತಿಹ ಭಕ್ತರ ಎತ್ತಿ ಪೊರೆವ ನೀ
ಏತಕೆ ಮೌನವಾಗಿವೆ ಕರುಣಾಳುವೆ
ಯಾತಕೆ ಬಿಡಿಸುತ ಪೊರೆಯೈ ಧೊರೆಯೆ ॥ ೨ ॥

ಕತ್ತಲೆಯೊಳು ಕೂಗುವ ಶಿಶುವಿನ ತಾಯಿ
ಎತ್ತಿ ಪೊರೆವಂತೆ ಪೊರೆಯೊ ಸದ್ಗುರುವೆ
ಉತ್ತಮಶ್ಲೋಕನೆ ದಾಸಕೇಶವನುತ
ದತ್ತಾತ್ರೇಯ ಔದುಂಬರವಾಸಿಯೆ ॥ ೩ ॥

೧೮೮

ರಾಗ : ಹಿಂದೂಸ್ಥಾನಿ ಭೈರವಿ	ತಾಳ : ತ್ರಿತಾಳ

ದುರ್ಜನಸಂಗವ ದೂರವಿಡು
ಸಜ್ಜನಸಂಗ ಸತತ ಮಾಡು ॥ ಪ ॥

ದುರ್ಜನರಿರ್ಪರು ಮುಳ್ಳಿನಂದದಲಿ
ಸಜ್ಜನರಿರ್ಪರು ಗುಲಾಬಿಯಂತೆ
ದುರ್ಜನರಿರ್ಪರು ಬೇವಂತೆ ಕಹಿಯಾಗಿ
ಸಜ್ಜನರ ಸಕ್ಕರೆ ಸವಿಯಂತಿರ್ಪರ್ ॥ ೧ ॥

ದುರ್ಜನರ್ ಬಾಳುವರು ಊರಹಂದಿಯಂತೆ
ಸಜ್ಜನರ್ ಬಾಳುವರ್ ಗೋಮಾತೆಯಂತೆ
ದುರ್ಜನರಿರುವರು ಕಾಳೋರಗದಂತೆ
ಸಜ್ಜನರ ಅಮೃತಕಳಶದಂತಿಹರು ॥ ೨ ॥

ಭೂದೇವಿಗೆ ಭಾರ ದುಷ್ಟಜನರುಗಳು
ಭೂದೇವಿಗಾನಂದ ಶಿಷ್ಟಜನಕೆ
ಶ್ರೀದೇವಿರಮಣ ಶ್ರೀ ದಾಸಕೇಶವನುತ
ಮೋದವೀವನು ತನ್ನ ನಂಬಿದಭಕ್ತರ ॥ ೩ ॥

೧೬೯

ರಾಗ : ರಾಗ : ಥಾಣಿ **ತಾಳ : ಝಂಪೆ**

ದೇವರಿಗೆ ಭಕ್ತಿಯೇ ಪ್ರೀತಿ
ದೇವರಿಗೆ ಭಜನೆಯೇ ತೃಪ್ತಿ
ದೇವರಿಗೆ ವಂದನೆಯೇ ತೃಪ್ತಿ
ದೇವಕೃಪೆಯಿಂದೆಮಗೆ ಪುಷ್ಟಿ ॥ ೧ ॥

ವಿಠಲನಿಗೆ ಕೀರ್ತನೆಯೆ ಪ್ರಿಯವು
ವಿಷ್ಣುವಿಗೆ ಪೂಜೆಯೇ ಸುಖವು
ರಾಮನಿಗೆ ನಾಮ ಜಪವೇ ಹಿತವು
ಕೃಷ್ಣನಿಗೆ ಹರಿಕಥೆಯೇ ರುಚಿಯು ॥ ೨ ॥

ಹರಿಗೆ ಶರಣಾಗತಿಯೇ ಪ್ರೀತಿ
ರಂಗಗೆ ರಂಗಪೂಜೆಯೊಳಾಸಕ್ತಿ
ವೆಂಕಟಗೆ ವೇದಘೋಷದೊಳ್ ಪ್ರೇಮ
ವಿಠಲನಿಗೆ ನಾದಬ್ರಹ್ಮದೊಳ್ ಆರಾಮ ॥ ೩ ॥

ಭದ್ರಗಿರೀಶಗೆ ಭಕ್ತಿಯೇ ಮುಖ್ಯ
ಹೇಗಾದರೂ ಗಳಿಸಿರೋ ದಾಸ್ಯ-ಸಖ್ಯ
ವೀರವಿಠಲನು ದಾಸಕೇಶವನುತ
ಬಾರಿಬಾರಿಗೂ ಕರೆಸಿ ಹರಸುವನು ॥ ೪ ॥

೧೯೦

ರಾಗ : ಮೋಹನ ತಾಳ : ಝಂಪೆ

ನೀನಲ್ಲದಿನ್ನ್ಯಾರು ಕಾಯುವರು ಕೇಶವನೆ
ಜ್ಞಾನಿಗಳರಸ ಸಜ್ಜನ ನಿತ್ಯಸ್ತುತನೆ
ದೇಹಸಂಬಂಧಿಗಳು ಸುಖ ಕೊಡುವವರೆವಿಗೂ
ಮೋಹದಿಂದಂಟಿಕೊಂಬರು ಬಳಿಕ ತ್ಯಜಿಪರು ॥ ೧ ॥

ಧನಧಾನ್ಯ ಮನೆ ಒಡವೆಯಾಸೆಯಿಂ ಆಯುವನು
ಘನತೆ ಗಾಂಭೀರ್ಯಗಳಿಗಾಗಿ ವ್ಯಯಿಸಿದೆನು
ಅನುವು ತಪ್ಪಿತು ಈಗ ಮನ ಧನವು ಬಾರದೋ
ಘನಮಹಿಮ ಕೃಷ್ಣ ಕರುಣಾಳು ಶ್ರೀಪತಿ ಹರಿಯೆ ॥ ೨ ॥

ಸತಿಯು ಕಡೆಗಣಿಸುವಳು ಸುತರು ತಿರಸ್ಕರಿಪರು
ಅತಿಹಿತರು ಅಹಿತನಂದದಿ ಕಾಂಬರೆನ್ನ
ಮತಿವಿಕಲನಾದೆನೋ ರತಿಪತಿಜನಕ ಕೃಷ್ಣ
ಗತಿಯಾರು ಎನಗಿನ್ನು ಕುವಲಯಾಂಬಕ ಕೃಷ್ಣ ॥ ೩ ॥

ಶ್ವಾಸ ಎಳೆಯುತಲಿಹೆ ಯಮನವರು ಬಂದಿಹರು
ಘಾಸಿಗೊಂಡಿಹೆ ದೇವ ಭವದಿನೊಂದು
ಈ ಸಮಯದಲಿ ಬಂಧುಮಿತ್ರರ್‍ಯಾರು ಒದಗರು
ದಾಸ ಕೇಶವನುತನೆ ಬಂದೊದಗೊ ಹರಿಯೆ ॥ ೪ ॥

೧೯೧

ರಾಗ : ಭೀಮಪಲಾಸ್ ತಾಳ : ಕೇರವ

ನೌಕೆ ಬಂದಿದೆ ನಾಮ । ನೌಕೆ ಬಂದಿದೆ ಪಿ
ನಾಕಿ ಚಕ್ರಧಾರಿ ವಿಧಿಗಳೆಂಬ । ಚತುರ ಅಂಬಿಗರಿಪ್ಪ ॥ ಪ ॥

ಕಾಮಿನಿ ಕಾಂಚಣ ತೆರೆಗಳಿಂದ
ಕಾಮುಕ್ರೋಧ ಮಕರಿಗಳಿಂದ

ಈಮಹಾ ಸಂಸಾರ ಶರಧಿ
ಪ್ರೇಮದಿಂ ದಾಟಿಪ ತ್ರಿವರ್ಣರಂಜಿತ ॥ ೧ ॥

ತ್ರಿಗುಣ ಕಡಲ ದಾಟಿದ ನೌಕೆ
ತ್ರಿತಾಪ ಬಾಧೆಯೆ ಹರಿಪ ನೌಕೆ
ತ್ರಿಲೋಕದೊಳಗೆ ಒಂದೆ ನೌಕೆ
ತ್ರಿಮೂರ್ತಿ ದತ್ತಾತ್ರೇಯ ಹೆಸರ ॥ ೨ ॥

ಬೇಡದಿಷ್ಟಾರ್ಥಕೊಡುವ ನೌಕೆ
ನಾಡೊಳೆಲ್ಲೂ ಸಿಗದ ನೌಕೆ
ನೀಡಿ ಭಕ್ತಿಯ ಪೊರೆವ ನೌಕೆ
ಕೂಡಿ ಪೋಗುವ ಬನ್ನಿರೆಲ್ಲ ॥ ೩ ॥

ಮೂರುಶಿರಗಳುಳ್ಳ ನೌಕೆ
ಆರು ಕರಗಳಿರುವ ನೌಕೆ
ಮೂರು ಆರರ ಬಾಧೆ ಬಿಡಿಸಿ
ಸೇರಿಸಲೆಮ್ಮ ವೈಕುಂಠಕೆ ॥ ೪ ॥

ಆಶೆ ದುಃಖ ಬಿಡಿಪನೌಕೆ
ಭೀಷಣ ಭವವ ತಪ್ಪಿಪ ನೌಕೆ
ದಾಸಾಶ್ರಮದಿ ಸಿದ್ಧವಾದ
ದಾಸಕೇಶವನುತನನೌಕೆ ॥ ೫ ॥

೧೯೨

ರಾಗ : ಚಾಂಪ್ ತಾಳ : ಝಂಪೆ

ಬಿದ್ದು ಬೇಡುವೆ ಗುರುವೆ । ಉದ್ಧರಿಸೊ ಗುಣನಿಧಿಯೇ ।
ಶುದ್ಧನಾಗಿ ಪೊರೆಯೊ । ಪರಶುಧರ ಸ್ವಾಮಿ ॥ ಪ ॥

ವಿಪ್ರನೋ ನಾ ಕ್ಷತ್ರಿಯನೋ । ಇನ್ನ್ಯಾವ ಕುಲಜವನೋ
ಅಪ್ರತಿಮ ಗುರುವ ನಾನರಿಯನಯ್ಯಾ

ತ್ವತ್ಪ್ರಸಾದದಿ ಪಡೆವ ದಿವ್ಯವಿದ್ಯೆಯೆನಗೆ
ಕ್ಷಿಪ್ರವೇ ನೆಲೆಗೊಳಿಸು ಸದ್ಗುರುಸ್ವಾಮಿ ॥ ೧ ॥

ಕೋಪದಿಂದಲಿ ಇತ್ತ ಶಾಪದಿಂ ಕಂಗೆಟ್ಟ
ತಾಪವ ನಿವಾರಿಸೈ ಶ್ರೀಪತಿ ಸ್ವಾಮಿ
ಆಪತ್ತ ಹರಿಸಿ ವಿಶಾಪವೀಯುತೆ ಸಲಹೊ
ಭೂಪಕುಲಕುಠಾರಿ ಪರಶುರಾಮ ॥ ೨ ॥

೧೯೩

ರಾಗ : ದರ್ಬಾರಿ ತಾಳ : ತ್ರಿತಾಳ

ಮುದದಿ ಭಜಿಸುವೆವು ದೇವದೇವನೆ
ಹೃದಯಕಮಲದೊಳು ಒದಗು ಪಾವನನೆ ॥ ಪ ॥

ಕಂಗಳು ನಿನ್ನಯ ಮೂರ್ತಿಯ ಕಾಣಲಿ
ಕಿವಿಗಳು ನಿನ್ನಯ ಕೀರ್ತಿಯ ಕೇಳಲಿ
ಜಿಹ್ವೆಯು ನಿನ್ನಯ ನಾಮವ ಹೇಳಲಿ
ಕರಗಳೆರಡು ನಿನ್ನ ಪೂಜಿಸಲೀ ಹರಿ ॥ ೧ ॥

ಪಾದದ್ವಯವು ತೀರ್ಥಯಾತ್ರೆಯ ಮಾಡಲಿ
ಸಾಧು ಸಜ್ಜನರಿಗೆ ಶಿರವು ಮಣಿಯಲಿ
ಮೋದದಿ ಕರತಾಡನದಿ ಭಜನೆ ಗೈದು
ಬಾದರಾಯಣನುತ ದೇಹವೆ ಬೀಳಲಿ ॥ ೨ ॥

ದಾಸನಾಗುವ ಭಾಗ್ಯ ಕರುಣಿಸು ದೇವನೆ
ದಾಸದಾಸರ ಸೇವೆ ದೊರೆಯಲಿ ಸ್ವಾಮಿ
ಭಾಸುರಾಂಗ ತವಕೋಟಿ ಸೂರ್ಯಪ್ರಭ
ಹಾಸವದನ ತೋರೊ ದಾಸಕೇಶವನುತ ॥ ೩ ॥

೧೯೪

ರಾಗ : ಭೀಮಪಲಾಸ್ **ತಾಳ : ಝಂಪೆ**

ವ್ಯರ್ಥ ವ್ಯರ್ಥ ಬಾಳ್ವೆ । ವ್ಯರ್ಥ ವ್ಯರ್ಥ ॥ ಪ ॥

ಕರ್ತು ಪರಮಾತ್ಮನನು ಕಾಣದಿಹ ಕಂಗಳಿದ್ದೂ ವ್ಯರ್ಥ ॥ ಅ.ಪ. ॥

ದೇವಕಥೆ ಕೇಳದಿಹ ಕಿವಿಯು ವ್ಯರ್ಥ
ದೇವ ನೈರ್ಮಲ್ಯ ಗ್ರಹಿಸಿದ ನಾಸಿಕವು ವ್ಯರ್ಥ
ದೇವ ಪ್ರಸಾದವ ಭಜಿಸದ ಜಿಹ್ವೆ ವ್ಯರ್ಥ ॥ ೧ ॥

ಹರಿಪೂಜೆ ಮಾಡದಿಹ ಕರಗಳಿದ್ದೂ ವ್ಯರ್ಥ
ಹರಿಭಜನೆ ಹೇಳದಿಹ ನಾಲಿಗೆಯು ವ್ಯರ್ಥ
ಹರಿಯಾತ್ರೆ ಗೈಯದಿಹ ಕಾಲ್ಗಳಿದ್ದೂ ವ್ಯರ್ಥ
ಹರಿತೀರ್ಥಸ್ನಾನಗೈಯದ ದೇಹ ವ್ಯರ್ಥ ॥ ೨ ॥

ದಾನಗೈಯದ ಧನವು ಎಷ್ಟಿದ್ದರೂ ವ್ಯರ್ಥ
ಮಾನವತೆ ಗಳಿಸದಿಹ ಬಾಳ್ವೆ ವ್ಯರ್ಥ
ದಾನವಾಂತಕನ ಶ್ರೀ ಕಥೆಯ ಕೇಳುತ
ದೇಹಭಾವ ಮರೆಯದ ಬಾಳು ವ್ಯರ್ಥವ್ಯರ್ಥ ॥ ೩ ॥

ಕೇಶವನ ದಾಸನಾಗದವ ಬಾಳದು ವ್ಯರ್ಥ
ಕೇಶವ ಭಜನ ರಹಿತ ಜಿಹ್ವೆ ವ್ಯರ್ಥ
ದಾಸಾಶ್ರಮವಾಸಿ ದಾಸಕೇಶವನುತನ
ದಾಸನಾಗದೆ ಕಳೆದ ಬಾಳುವೆ ವ್ಯರ್ಥ ॥ ೪ ॥

೧೯೫

ರಾಗ : ಭೀಮಪಲಾಸ್ **ತಾಳ : ತ್ರಿತಾಳ**

ಹರಿಕಥೆ ಎಂದರೆ ಹೀಗಿರಬೇಕು
ಹರಿಯು ಎಲ್ಲರಿಗೂ ಕಾಣಿಸಬೇಕು

ಹರಿದಾಸರು ದೇಹ ಮರೆತಿರಬೇಕು
ಹರಿಬೋಲ್ ಮಂತ್ರವು ನಡೆದಿರಬೇಕು ॥ ಪ ॥

ವೇದ ಪುರಾಣವ ತಿಳಿದಿರಬೇಕು
ವಾದಿಸಿ ಸತ್ಯವ ಮಂಡಿಸಬೇಕು
ಬೋಧಿಸ ಜ್ಞಾನವ ತಿಳಿದಿರಬೇಕು
ಸಾಧಿಸಿ ಸತ್ಯವ ಬೋಧಿಸಬೇಕು ॥ ೧ ॥

ವೇದಮಾರ್ಗದಿ ನಡೆದಿರಬೇಕು
ನಾದಬ್ರಹ್ಮನೊಳು ಓಲಾಡಬೇಕು
ಕ್ರೋಧಕಳವಳವ ಬಿಟ್ಟಿರಬೇಕು
ಬೂಟಾಟಿಕೆಗಳ ಬಿಟ್ಟಿರಬೇಕು ॥ ೨ ॥

ಹಾಟಕಾಂಬರನ ನೆನೆಯಲು ಬೇಕು
ಕೋಟಲೆ ಸಂಸಾರ ದಾಟಿಸಬೇಕು
ತೀರ್ಥಯಾತ್ರೆಗಳ ಮಾಡಿಸಬೇಕು
ತೀರ್ಥಪದವ ನಾಮ ಬರೆಸಲು ಬೇಕು ॥ ೩ ॥

ಸಾರ್ಥಕ ಪದವನು ತೋರಲು ಬೇಕು
ಪ್ರಾರ್ಥನೆ ಪಥವನು ತೋರಲು ಬೇಕು
ಪ್ರಾರ್ಥನೆ ಭಜನೆಯ ಹೇಳಿಸಬೇಕು
ಪರಶಿವನೊಲಿಮೆಯ ಮಾಡಿಸಬೇಕು ॥ ೪ ॥

ಅಡಿಗಡಿಗಾನಂದ ಉಕ್ಕೇರಬೇಕು
ನುಡಿಗೆ ನುಡಿಗೆ ವಿಠಲ ಎನಬೇಕು
ಬಿಡದೆ ಹರಿಪದವ ಸೇವಿಸಬೇಕು
ಒಡೆಯ ಕೇಶವದಾಸನುತನ ದಯಬೇಕು ॥ ೫ ॥

೧೯೬

ರಾಗ : ಭಾಲಿವಲಾಸ್ **ತಾಳ : ತ್ರಿತಾಳ**

ಹರಿಕಥೆ ಕೇಳ್ವರೆ ಎಂತಿರಬೇಕು?
ಹರಿಸ್ಮರಣೆ ಜಿಹ್ವೆಯಲ್ಲಿರಬೇಕು ॥ ಪ ॥

ಸಭೆಯಲಿ ಮೌನದಿ ಕುಳ್ಳಿರಬೇಕು । ಅಭಯವ ಹೃದಯದಿ ತಾಳಿರಬೇಕು
ಸುಲಭವಾಗಿ ಒಳ ಹೊರಗಿರಬೇಕು । ಜಗದಭಿಮಾನ ಬಿಟ್ಟಿರಬೇಕು ॥ ೧ ॥

ಕೇಳ್ವ ವಿಷಯ ಮನಮುಟ್ಟಿರಬೇಕು । ಹೇಳ್ವ ಭಜನೆ ಜಿಹ್ವೆಯಲಿ ನಿಲಬೇಕು ।
ತಾಳ್ವ ಶಕ್ತಿ ಸಂಪಾದಿಸಬೇಕು । ಬಾಳ್ವೆಯ ಸಾರ್ಥಕವಾಗಿಸಬೇಕು ॥ ೨ ॥

ಮನೆಯ ಮಾತುಗಳ ಬಿಟ್ಟಿರಬೇಕು । ಸನುಮತದಿಂ ಕಿವಿ ಗೊಟ್ಟಿರಬೇಕು ।
ಅನುನಯದಿಂ ಮನ ಇಟ್ಟಿರಬೇಕು । ಮನದ ಚಾಂಚಲ್ಯ ಸುಟ್ಟಿರಬೇಕು॥ ೩ ॥

ನಿಂದೆ ಟೀಕೆಗಳ ಮೀರಲುಬೇಕು । ಒಂದು ದಿನ ಬಿಡದೆ ಕೇಳಲು ಬೇಕು ।
ಹಿಂದಿನ ದುಃಖವ ಮರೆತಿರಬೇಕು । ಮುಂದಿನ ಗತಿಯು ಹಾರೈಸಲು ಬೇಕು
॥೪॥

ಅಸ್ಥಿರ ಸಕಲವೆಂದರಿಯಬೇಕು । ಸ್ವಸ್ಥ ಮನದಿ ಧ್ಯಾನದೊಳಿರಬೇಕು ।
ಹಸ್ತತಾಡನದಿ ಭಜಿಸಲು ಬೇಕು । ಮಸ್ತಕ ಹರಿಪದಕ್ಕೆರಗಲು ಬೇಕು ॥ ೫ ॥

ನಿದ್ರಾಲಸ್ಯವ ಬಿಟ್ಟಿರಬೇಕು । ಭದ್ರಾಸನದಲಿ ಕುಳ್ಳಿರಬೇಕು ।
ಕ್ಷುದ್ರ ಚಿಂತನೆಯ ಬಿಟ್ಟಿರಬೇಕು । ಮುದ್ರಾಧಾರಣ ಗೈದಿರಬೇಕು ॥ ೬ ॥

ಕೇಶವ ಮಾಧವ ಹರಿ ಎನಬೇಕು । ವಾಸನಾಕ್ಷಯವ ಗೈಯಲುಬೇಕು
ದಾಸನಾಗುವಾಶೆಯು ಇರಬೇಕು । ದಾಸಕೇಶವನುತ ಪರನೆನಬೇಕು ॥ ೭ ॥

೧೯೭

ರಾಗ : ಭೀಂಪಲಾಸ್ ತಾಳ : ತ್ರಿತಾಳ

ಹೇಳ್ ಹೇಳ್ ಹೇಳ್ ರಾಮನ ಭಜನೆ ಹೇಳ್ ॥ ೧ ॥

ಕೇಳ್ ಕೇಳ್ ಕೇಳ್ ಕೇಶವ ಕಥೆಯ ಕೇಳ್ ॥ ೨ ॥

ಹೂಳ್ ಹೂಳ್ ಹೂಳ್ ಚರ್ಚೆವಾದ ಹೂಳ್ ॥ ೩ ॥

ಬೀಳ್ ಬೀಳ್ ಬೀಳ್ ಗುರುಗಳ ಪಾದಕೆ ಬೀಳ್ ॥ ೪ ॥

ತಾಳ್ ತಾಳ್ ತಾಳ ಕಷ್ಟ ಸುಖದಿ ತಾಳ್ ॥ ೫ ॥

ಆಳ್ ಆಳ್ ಆಳ್ ಮುಕ್ತಿಕಾಂತಿಯ ಆಳ್ ॥ ೬ ॥

ಏಳ್ ಏಳ್ ಏಳ್ ಅಜ್ಞಾನ ನಿದ್ದೆಯಿಂದೇಳ್ ॥ ೭ ॥

ಬಾಳ್ ಬಾಳ್ ಬಾಳ್ ದಾಸರ ಸಂಗದಿ ಬಾಲ್ ॥ ೮ ।

ಹಾರ್ ಹಾರ್ ಹಾರ್ ಭಜನೆಯಲಿ ಕುಣಿಯುತ ಹಾರ್
ಏರ್ ಏರ್ ಏರ್ ಸಮಾಧಿ ಸ್ಥಿತಿಗೆ ಏರ್
ಮೀರ್ ಮೀರ್ ಮೀರ್ ದ್ವಂದ್ವಗಳೆಲ್ಲವ ಮೀರ್
ಸೇರ್ ಸೇರ್ ಸೇರ್ ದಾಸಕೇಶವನುತನ ಸೇರ್ ॥ ೯ ॥

❖❖

ಶ್ರೀ ಕಾಂತೇಶಪ್ರಿಯ ವಿಠಲದಾಸ ಅಂಕಿತದ ಕೀರ್ತನೆಗಳು
(೨೧೧-೨೧೨)
(ಸಿ.ಕೆ.ವಿಠ್ಠಲ - ೧೯೩೫)

ಜೀವನ : ವಿಜಯದಾಸರ ಪೀಳಿಗೆಯ ಶ್ರೀ ವೇಣುಗೋಪಾಲ ದಾಸರ (ಪಂಗನಾಮ ತಿಮ್ಮಣ್ಣ ದಾಸರ) ಪರಂಪರೆಗೆ ಸೇರಿದ ಪರಮಪ್ರಿಯ ಸುಬ್ಬರಾಯದಾಸರೆಂದು ಪ್ರಸಿದ್ಧರಾದ ತಂದೆ ಮುದ್ದುಮೋಹನ ವಿಠಲ ದಾಸರ ಪ್ರಮುಖ ಶಿಷ್ಯರಲ್ಲಿ ರಮಾಕಾಂತವಿಠಲ ಅಂಕಿತದ ಸಿ.ಕೃಷ್ಣರಾವ್ ಅವರೂ ಒಬ್ಬರು. ಅವರ ಜೇಷ್ಠ ಪುತ್ರರು (ಸಿ.ಕೆ.ವಿಠಲರು) ತಂದೆಯವರ ಗುರುಗಳಾದ ತಂದೆ ಮುದ್ದುಮೋಹನ ವಿಠಲದಾಸರಿಂದಲೇ ಕದರಮಂಡಲಗಿ ಕಾಂತೇಶನ ಸನ್ನಿಧಿಯಲ್ಲಿ ೩ನೇ ವಯಸ್ಸಿನಲ್ಲಿ ಶ್ರೀಕಾಂತೇಶ ಪ್ರಿಯವಿಠ್ಠಲ ಅಂಕಿತವನ್ನು ಸ್ವೀಕರಿಸಿದರು. ತಂದೆ ಮಗನಿಗೆ ಒಬ್ಬರೇ ಗುರುಗಳಿಂದ ಅಂಕಿತೋಪದೇಶ ಆದ ಪ್ರಸಂಗವಿದು. ತಂದೆ ರಮಾಕಾಂತ ವಿಠಲದಾಸರು ತಾಯಿ ಸುಂದರಮ್ಮ. ಜನನ ೧೯೩೫ – ವೃತ್ತಿಯಲ್ಲಿ ಎಚ್.ಎಂ.ಟಿ ಇಂಜನಿಯರ್ ಆಗಿ ನಿವೃತ್ತರಾಗಿದ್ದಾರೆ. ಬಹಿರಂಗದಲ್ಲಿ ಸದ್ಗೃಹಸ್ಥರಾಗಿ ಅಂತರಂಗದಲ್ಲಿ ದಾಸರಾಗಿ ಬಾಳುತ್ತಿದ್ದಾರೆ.

ಕೃತಿಗಳು : ಭಕ್ತಿಗೀತೆಗಳು (೨೦೧೮

೧೯೮

ರಾಗ : ಪೂರ್ವಕಲ್ಯಾಣಿ **ತಾಳ : ಅಟತಾಳ**

ಕಡೆ ಹಾಯಿಸೋ ಇಲ್ಲ ಭವ ಕಡಲಲಿ ಮುಳುಗಿಸೋ – ನಿನ್ನ
ಒಡಲಲಿ ಬಿದ್ದಿಹನೋ ಪಾಲ್ಗಡಲಶಯನನೇ ॥ ಪ ॥

ಕಾಮಕ್ರೋಧದಲಿ ಬಹುಬೆಂದು ಮೋಹದಿ ।
ತಾಮಸಕಲಾಪದೊಳು ಬಿದ್ದೆನೋ ನಾನು

ಕಾಮಜನಯ್ಯನೆ ನೇಮನಿಷ್ಠೆಯೊಳಲಿಸಿ ನಿನ್ನ
ನಾಮ ಸ್ಮರಣೆಯಿತ್ತು ಸಲಹೋ ॥ ೧ ॥

ಒಡಲ ಕಿಚ್ಚಿಗೆ ಪರರ ಕಡುನೋಯಿಸುತಲಿ ನಾನು
ಬಿಡದೆ ಅನ್ಯರ ಒಡಲ ಉರಿಸಿದೆನೋ
ಕಡಲಶಯನ ನಿನ್ನಡಿಗಡಿಗೆ ಬೇಡುವೆ ನಿನ್ನೊಳು
ದೃಢಭಕುತಿಯಿತ್ತು ಕಡೆವರೆಗೆ ಸಲಹೋ ॥ ೨ ॥

ಮೋಸಮಾಡುತ ಬಹುವೇಷ ಧರಿಸದೇ
ಆಸೆಪಾಶಕೆ ಸಿಲುಕಿ ಬಹುಘಾಸಿ ಹೊಂದಿದೆನೋ
ಶೇಷಶಯನ ಶ್ರೀಕಾಂತೇಶಪ್ರಿಯವಿಠಲನೆ ನಿನ್ನ
ದಾಸರ ಸಂಗವಿತ್ತು ಪೋಷಿಸೋ ದೊರೆಯೇ ॥ ೩ ॥

೧೯೯

ಕಾಯಬೇಕು ಸತತ ಕಾಯಬೇಕು ॥ ಪ ॥

ಆಯುಮುಗಿಯುವತನಕ ಜನುಮಜನುಮದಲ್ಲಿ
ವಾಯುಪಿತನ ಕರುಣೆ ದೊರಕುವತನಕ ॥ಅ.ಪ. ॥

ಬಂಧನದೊಳು ಸಿಲುಕಿ ಬಹು ಬೆಂದುಹೋದ ಜೀವಕೆ
ನಂದನಂದನ ಧ್ಯಾನ ಒಂದೇ ಉಪಯವೆಂದು ತಿಳಿಯುವ ತನಕ ॥ ೧ ॥

ಪಸುಜನುಮಗಳಿಂದ ಬಹುಘಾಸಿಗೊಂಡ ಜೀವಕೆ
ವಾಸುಕಿಶಯುಸನ ನಾಮದ ಆಸೆ ಒಂದೇ ಎಂದು ತಿಳಿಯುತನಕ ॥ ೨ ॥

ಮುಂದೆ ಬರುವ ಜನುಮಂಗಳ ರೂಪ ಇಂದಿರೇಶನೊಬ್ಬ ಬಲ್ಲ
ತಂದೆ ಶ್ರೀ ಕಾಂತೇಶಪ್ರಿಯ ವಿಠಲಧ್ಯಾನ ಒಂದೇದಾರಿ ಎಂದು ತಾ ತಿಳಿಯುವ
ತನಕ ॥ ೩ ॥

❖❖

ಉಡುಪಿ ಶ್ರೀಶದಾಸರು (ಕ್ರಿ.ಶ. ೧೯೩೫)

ಶ್ರೀಶ ಅಂಕಿತದ ಕೀರ್ತನೆಗಳು (೨೧೩–೨೧೫)

ಉಡುಪಿ ಶ್ರೀಶದಾಸರು ಮೂಲತಃ ಹರಿಕಥಾ ಕೀರ್ತನಕಾರರು. ವೃತ್ತಿಯಿಂದ ಸಂಗೀತ ಶಿಕ್ಷಕರು, ಮೃದಂಗ ವಾದಕರು ಮತ್ತು ಆಶುಕವಿಗಳು ಶ್ರೀಶ ಅಂಕಿತದಲ್ಲಿ ನೂರಾರು ಕೀರ್ತನೆಗಳನ್ನು ರಚಿಸಿದ್ದು ಅವೆಲ್ಲಾ ಅಪ್ರಕಟಿತವಾಗಿಯೇ ಇವೆ.

ಉಡುಪಿಯ ರಾಮಕೃಷ್ಣ ಘನಸಾರಿ ಮತ್ತು ಜಲಜಾಕ್ಷಮ್ಮ ದಂಪತಿಗಳ ಳನೇ ಪುತ್ರರಾಗಿ ಕ್ರಿ.ಶ.೧೯೩೫ರಲ್ಲಿ ಜನಿಸಿದ ಶ್ರೀಶದಾಸರು ಸಂಸ್ಕೃತಪಾಠಶಾಲೆಯಲ್ಲಿ ಸಂಸ್ಕೃತಕಲಿತರೆ ತಂದೆಯಿಂದಲೇ ವೇದಪಾಠ ಕಲಿತು ನಾರಾಯಣತಂತ್ರಿಗಳಲ್ಲಿ ವೇದಾಂತ ಅಧ್ಯಯನ ಮಾಡಿದ್ದಾರೆ. ಉಡುಪಿಯ ಹಂಡೆ ಶ್ರೀಪಾದದಾಸರಿಂದ ದೀಕ್ಷೆಪಡೆದು ಹರಿಕಥೆ ಸಂಕೀರ್ತನಕಾರರಾಗಿ ಜನಾನುರಾಗಿಯಾಗಿದ್ದಾರೆ. ಶ್ರೀಶ ಅಂಕಿತದಲ್ಲಿ ಕೀರ್ತನೆಗಳನ್ನು ರಚಿಸಿದ್ದಾರೆ. ಕನ್ನಡ, ತುಳು ಭಾಷೆಗಳನ್ನು ಅಪ್ರತಿಮ ಪಾಂಡಿತ್ಯವನ್ನು ಹೊಂದಿರುವ ಶ್ರೀಶದಾಸರು ಆಶುಕವಿಗಳಾಗಿಯೂ ಜನಪ್ರಿಯರಾಗಿದ್ದಾರೆ. ಸಾವಿರಾರು ಪುಟಗಳಲ್ಲಿ ಹರಿಕಥಾಸಾಹಿತ್ಯ ಮತ್ತು ಕೀರ್ತನೆಗಳನ್ನು ರಚಿಸಿದ್ದಾರೆಂದು ತಿಳಿದುಬಂದಿದ್ದು ಅವು ಯಾವುವೂ ಈವರೆಗೆ ಪ್ರಕಟವಾಗಿಲ್ಲ. ಇವರ ಬಗ್ಗೆ ಮಾಹಿತಿ ನೀಡಿರುವ ಬಿ. ಕೆ. ಶ್ರೀಮತಿರಾವ್ ಅವರು ತೌಳವದಾಸ ದರ್ಶನದಲ್ಲಿ ೯–೧೦ ಕೀರ್ತನೆಗಳನ್ನು ಅವರಿಂದಲೇ ಪಡೆದು ಪ್ರಕಟಿಸಿದ್ದಾರೆ. ಅದರಲ್ಲಿ ಮೂರು ಕೀರ್ತನೆಗಳು ಸಮಾಜಮುಖಿ ಚಿಂತನೆಯಿಂದ ಕೂಡಿವೆ.

ಹಸಿವು ಭಾವವನ್ನು ಕೇಂದ್ರವಾಗಿಸಿಕೊಂಡು ಇಂದಿನ ಸಮಾಜಘಾತುಕರ ಕಬಳಿಕೆಯ ಹಸಿವನ್ನು ಮಾರ್ಮಿಕವಾಗಿ ನುಡಿಸಿದ್ದಾರೆ. ಹಸಿವೊ ಬಹಳ ಹಸಿವೊ ಎಂಬ ಕೀರ್ತನೆಯಲ್ಲಿ ಉಳಿದ ಎರಡು ಕೀರ್ತನೆಗಳಲ್ಲಿ ದಾಸರು ಆತ್ಮವಿಮರ್ಶೆ ಮಾಡಿಕೊಳ್ಳುತ್ತಲೇ ಸಮಾಜದಜೀವನದಲ್ಲಿ ಆಗುತ್ತಿರುವ ಆತ್ಮವಂಚನೆಯ ಪ್ರಪಂಚವನ್ನು ತೆರೆದಿಟ್ಟಿದ್ದಾರೆ. ಈ ಮೂರು ಕೀರ್ತನೆಗಳಲ್ಲೇ ಇಷ್ಟು ಉತ್ತಮವಾದ ಸಾಮಾಜಿಕ ಚಿಂತನೆ ಇರಬೇಕಾದರೆ ಇವರ ಅಪ್ರಕಟಿತ ನೂರಾರು ಕೀರ್ತನೆಗಳಲ್ಲಿ ಇನ್ನು ಎಷ್ಟಿದೆಯೋ ಬಲ್ಲವರಾರು? ಇವೆಲ್ಲ ಆದಷ್ಟು ಬೇಗ ಬೆಳಕು ಕಾಣುವಂತಾಗಲಿ.

೨೦೦

ರಾಗ : ಪಂತುವರಾಳಿ **ತಾಳ ರೂಪಕತಾಳ**

ಏನು ಸಾರ್ಥಕ ಮತ್ತೇ ಏನು ಸಾರ್ಥಕ ॥ ಪ ॥

ತಾನು ಸರ್ವತಂತ್ರನೆಂಬ
ಊನದಿಂದ ಕೂಡಿದನಕ ॥ ಅ.ಪ. ॥

ಅವನಿಗಿವನು ಇವನಿಗವನು
ಅವನಿಯೊಳಗೆ ದ್ವೇಷಿಸುವರು
ಅವನ ಇವನ ಸರುವರನು ಮಾ
ಧವನೆ ಆಡಿಸಿ ಆಡುವನೆನದೆ ॥ ೧ ॥

ಗರುಡ–ನಾಗ ನಾಗ–ಗರುಡ
ಬರಿದೆ ದ್ವೇಷ ಭಯದೊಳಿಹರು
ಗರುಡಗಮನನೆಂಬ ಕ್ರೂರ
ವರದ ಶ್ರೀಶನನ್ನೆ ಮರೆತು ॥ ೨ ॥

ಶ್ರೀಶ ವೇದವ್ಯಾಸ ನಿನ್ನ
ದಾಸ ನಾನು ಈಶ ನೀನು
ವಾಸಿ ನೀನು ಗೈದುದೆಂದು
ತೋಷ ಪಡದೆ ಬಾಳಿ ಬದುಕಿ ॥ ೩ ॥

೨೦೧

ರಾಗ : ದರ್ಬಾರ್ ಕಾನಡ **ಆದಿತಾಳ**

ನಾನಪರಾಧಿ ಖರೇ – ಮುರಾರೇ ।
ನಾನಪರಾಧಿ ಖರೇ – ಮುರಾರೇ ॥ ಪ ॥

ಮಾನವ ಜನುಮದಿ ಬಂದು ನಾನಾವಿಧ ।
ಹೀನಕಾರ್ಯವನು ಮಾಡಿ ಕೆಡಿಸಿದೆನು ॥ ಅ.ಪ. ॥

ಧನದ ಮೋಹದಲಿ ದಿನವ ಕಳೆದೆ ನಾ
ನನುದಿನ ವಂಚನೆ ಗೈಯ್ಯುತಲೀ
ಮನಸಿಜನಯ್ಯನ ಪಾದವ ಭಜಿಸದೆ
ಕನಸು ಕಂಡೆನೋ ಭ್ರಮೆಯಲ್ಲಿ ಹರೇ ॥ ೧ ॥

ಹಿಂದೇನಾಗಿದ್ದೆ ಮುಂದೇನಾಗುವೆನೊ
ಒಂದನೂ ತಿಳಿಯದ ಮಂದಮತಿಯು ನಾ
ಸುಂದರಿಯರ ಮುಖಕಮಲವ ನೋಡುತ
ಹಂದಿಯಂತೆ ಕೊಸರಾಡುತಲಿಹೆನೋ ॥ ೨ ॥

ಆಸೆಯಿಂದ ನಾ ಕ್ಲೇಶಕೊಳಗಾದೆ
ಘಾಸಿಪಡುತ ನಿರಾಸೆಯಿಂದಲೀ
ದಾಸನೆಂಬ ಅಭಿಧಾನಪಡೆದೆ ತವ
ದಾಸದೀಕ್ಷೆ ದೃಢವಾಗದೊ ಶ್ರೀಶನೆ ॥ ೩ ॥

೨೦೨

ರಾಗ : ಅಭೇರಿ **ಆದಿತಾಳ**

ಹಸಿವೋ ಬಹಳ ಹಸಿವೋ
ಏನೇ ತಿಂದರು ಹಸಿವೋ ॥ ಪ ॥

ದೇಶವ ನುಂಗುವ ಹಸಿವೊ – ಮಹ
ದಾಸೆಯೆಂಬ ಬಲು ಹಸಿವೋ
ಮೋಸದಿಂದ ಬಲು ಘಾಸಿಪಡಿಸಿ ಮಹ
ದೇಶದ್ರೋಹದ ಹಸಿವೋ ॥ ಪ ॥

ಧನದಾಗಾರವ ಪೊಕ್ಕು – ಬಹು
ಧನವನ್ನಲ್ಲೆ ಇಕ್ಕೀ – ತನ್ನ
ತನುಸಮ್ಮಂಧರ ಪೆಸರಿಂದಲ್ಲೇ
ಹಣವಿಟ್ಟರು ತೀರದ ಬಕಾಸುರನ ॥ ೧ ॥

ಊರೆಲ್ಲಿಷ್ಟು ತನದಾಗಲು ಬೇಕು
ಕಾಡಿನಲ್ಲೇ ತಿರುಗಲು ಬೇಕು
ದಾರಿತಪ್ಪಿ ಕಾಳಸಂತೆ ದೊರೆಯಾ
ಗ್ಹಾರಿ ಎಮ್ಮೆಲ್ಲೇಯಾದರು ತೀರದ ॥ ೨ ॥

ಕಬ್ಬಿಣ ಸಿಮೆಂಟು ಚಿನ್ನದ ಬಿಸ್ಕುಟು
ಒಬ್ಬನೇ ತಿಂದರು ತೀರದ ಹಸಿವು
ಅಬ್ಬರ ದೈವ ಶ್ರೀಶನ ಮರೆಸುವ
ಒಬ್ಬರಿಗೀಯದ ಗಾದಿಯ ಹಸಿವು ॥ ೩ ॥

❖❖

ಇ.ಡಿ.ನರಹರಿ (೧೯೩೬–೨೦೨೦)

ಕರಿಗಿರಿನರಹರಿ ಅಂಕಿತದ ಕೀರ್ತನೆಗಳು(೨೧೬–೨೧೯)

ಇ.ಡಿ.ನರಹರಿ ಅವರು ದಾಸಕುಟುಂಬಕ್ಕೆ ಸೇರಿದವರಾಗಿದ್ದಾರೆ. ವಿಜಯದಾಸರ ಪರಂಪರೆಯಲ್ಲಿ ಬರುವ ವಿಜಯದಾಸರಿಂದ ಅಂಕಿತಪಡೆದಿದ್ದ ಎರಪಲ್ಲಿ ಸುಬ್ಬರಾಯರು 'ನರಹರಿವಿಠಲ' ಅಂಕಿತದಿಂದ ಹರಿದಾಸರಾಗಿದ್ದವರು. (೧೮೮೩–೧೯೨೨) ಇವರ ಮರಿಮಕ್ಕಳು ಇ.ಡಿ.ನರಹರಿ ಅವರು. ಹರಿದಾಸ ಮನೆತನದವರೇ ಆಗಿದ್ದರೂ ಉನ್ನತವಿದ್ಯಾಭ್ಯಾಸ ಭೂವಿಜ್ಞಾನ ಇಲಾಖೆಯಲ್ಲಿ ಉದ್ಯೋಗಗಳಿಂದ ನಿವೃತ್ತಿಯವರೆಗೆ ಲೌಕಿಕಜೀವನದಲ್ಲೇ ಇದ್ದ ನರಹರಿಯವರು ನಂತರ ದಾಸತ್ವದಕಡೆಗೆ ಮನಸ್ಸು ಹೊರಳಿಸಿ ಮನೆದೈವದ ಹೆಸರಲ್ಲಿ 'ಕರಿಗಿರಿಯನರಹರಿ' ಅಂಕಿತವನ್ನು ಸ್ವೀಕರಿಸಿ ೫೦ಕ್ಕೂ ಹೆಚ್ಚಿನ್ನ ಕೀರ್ತನೆಗಳನ್ನು ರಚಿಸಿದ್ದಾರೆ.

ಉದ್ಯೋಗಕಾಲದಲ್ಲಿ ವಿಜ್ಞಾನಿಗಳಾಗಿ ಸಾಗರಶಾಸ್ತ್ರದ ಮೇಲೆ ಪಿ.ಎಚ್.ಡಿ. ಪ್ರಬಂಧಮಂಡಿಸಿ ಆ ಕ್ಷೇತ್ರದಲ್ಲಿ ತಜ್ಞರಾಗಿ ಹಲವಾರು ಕೃತಿಗಳನ್ನು ರಚಿಸಿದ್ದರೂ ಅವರ ಮನಸ್ಸೆಲ್ಲ ದಾಸಸಾಹಿತ್ಯದಲ್ಲೇ ಮಿಡಿಯುತ್ತಿತ್ತು. ಸುಮಧ್ವವಿಜಯವನ್ನು ಕನ್ನಡಕ್ಕೆ ತರುವುದರ ಮೂಲಕ ದಾಸಸಾಹಿತ್ಯ ಪ್ರವೇಶಿಸಿದವರು. 'ದ್ವಾದಶಸ್ತೋತ್ರ' ಹರಿನಾಮಸ್ತುತಿ, 'ಜಯತೀರ್ಥ ಪಾವನಚರಿತ್ರೆ' ಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ.

ತಮ್ಮ ಪೂರ್ವಜರಾದ ಎರಪಲ್ಲಿ ಸುಬ್ಬರಾಯನ (ಜೈಲು ಸುಬ್ಬರಾಯರು) ಬಗೆಗೆ ಶೋಧನೆ ಮಾಡುತ್ತ ಅವರ ಕೀರ್ತನೆಗಳ ಸಂಗ್ರಹಕ್ಕೆ ಪ್ರಯತ್ನಿಸಿದರೂ ಅಂಕಿತಪ್ರಧಾನ ಕೀರ್ತನೆ ಬಿಟ್ಟರೆ ಇನ್ನೊಂದು ಕೀರ್ತನೆ ಮಾತ್ರ ಲಭ್ಯವಾಗಿದೆ. ಸ್ವತಃ ನರಹರಿಯವರೂ ಅದೇ ಮಾರ್ಗದಲ್ಲಿ ಮುಂದುವರಿದು ೫೦ ಕ್ಕೂ ಹೆಚ್ಚು ಕೀರ್ತನೆಗಳನ್ನು ರಚಿಸಿದ್ದಾರೆ. ೨೦೧೮ರಲ್ಲಿ ಪತ್ನಿ ಸರಸ್ವತಿ ನೆನಪಿನಲ್ಲಿ ೧೧ ಕೀರ್ತನೆಗಳ ಪುಟ್ಟ ಕೈಪಿಡಿ ಪ್ರಕಟಿಸಿದ್ದು ಅವುಗಳನ್ನು ಒಳಗೊಂಡು ೩೬ ಕೀರ್ತನೆಗಳ ಸಂಕಲನ ಎರಪಲ್ಲಿ ಭಕ್ತಿಗೀತೆಗಳು ಹೆಸರಲ್ಲೆ ೨೦೦೭ರಲ್ಲಿ ಪ್ರಕಟವಾಗಿದೆ.

ಈ ಕೀರ್ತನೆಗಳಲ್ಲಿ ನಾಲ್ಕು ಸಮಾಜಮುಖಿಯಾಗಿವೆ. ಗುರುಹಿರಿಯರ ಸಂಗ, ಸ್ನಾನಗಳ ಮಹತ್ವವನ್ನು ಹೇಳುವ ಕೀರ್ತನೆಗಳು ಬೋಧಪ್ರದವಾಗಿದೆ.

ಮುಸುರೆ ಪ್ರತಿಮೆಯ ಮೂಲಕ ಮುಸುರೆ ತೊಳೆಯುವಕ್ರಿಯೆಯನ್ನು ಮನಸ್ಸಿನ ಕಸವೆಂಬ ಮುಸುರೆ ತೊಳೆಯುವುದಕ್ಕೆ ದುಡಿಸಿರುವುದು ಮಾರ್ಮಿಕವಾಗಿದೆ. ಆಧುನಿಕಕೀರ್ತನಕಾರರಾದರೂ ಸಮಾಜಮುಖಿ ಶುದ್ಧಿಕರಣಪ್ರಕ್ರಿಯೆಯನ್ನು ದಾಸಪರಂಪರೆಯ ಭಾಗವಾಗಿಸಿರುವುದನ್ನು ಕಾಣಬಹುದಾಗಿದೆ.

೨೦೩

ಅರಿತವರ ಬಳಿ ಕುಳಿತು ಅರಿಯುತಿರಬೇಕು
ಗುರುವಿನ ಬೋಧನೆಯ ತಿಳಿಯುತಿರಬೇಕು ॥ ಪ ॥

ಹಿರಿಯರಲಿ ಭಕುತಿಯನು ಇರಿಸುತಿರಬೇಕು
ಸಿರಿರಮಣ ಚರಣಗಳ ಸತತ ಸೇವಿಸಬೇಕು ॥ ಅ.ಪ. ॥

ತಂದೆ ತಾಯಿಯರನ್ನು ಕಾಪಾಡುತಿರಬೇಕು
ಚಂದದ ಮಕ್ಕಳನು ಸಲಹಿ ಪೋಷಿಸಬೇಕು
ಬಂಧುಮಿತ್ರರ ಕೂಡೆ ಬೆಲ್ಲದಂತಿರಬೇಕು
ಇಂದಿರಾಪತಿಯನ್ನು ಸತತ ಪೂಜಿಸಬೇಕು ॥ ೧ ॥

ಕಂಡಕಂಡವರನ್ನು ಬೇಡದಂತಿರಬೇಕು
ಭಂಡ ಜೀವನವನ್ನು ತ್ಯಜಿಸಿ ಬಿಡಬೇಕು
ಮಂಡು ಮನವನು ನಿತ್ಯ ದಂಡಿಸುತ್ತಿರಬೇಕು
ಅಂಡಜವಾಹನನ ಭಜಿಸುತಿರಬೇಕು ॥ ೨ ॥

ಪೂರ್ಣಪ್ರಜ್ಞರ ಯುಕ್ತಿ ನಮಗೆ ಸಿಗಬೇಕು
ಧರ್ಮಜನ ಅನುಜನ ಶಕ್ತಿ ಬರಬೇಕು
ವೀರಾಂಜನೇಯನಲಿ ಭಕ್ತಿ ಇರಬೇಕು
ಕರಿಗಿರಿಯ ನರಹರಿಯ ಕರುಣೆ ಸಿಗಬೇಕು ॥ ೩ ॥

೨೦೪

ಆರು ವೈರಿಗಳನ್ನು ನನ್ನೊಳಗೆ ನಾ ಕಂಡೆ
ನೀರಜಾಕ್ಷನೆ ಪೊರೆಯೊ ಕರುಣೆಯನು ತೋರೋ ॥ ಪ ॥

ಮನುಜರಿಗೆ ಕಂಟಕವ ತರುವ ಈ ವೈರಿಗಳು
ದನುಜರ ಪರಿಯಲ್ಲಿ ಸಂಕಟವ ನೀಡುವರು ॥ ಅ.ಪ. ॥

ಕಾಮವೆಂಬುದು ನನ್ನ ಮೊದಲ ವೈರಿ
ಕ್ಷೇಮದಿಂದಿರೆ ಬಿಡದು ಈ ಪ್ರಬಲ ವೈರಿ
ನೇಮನಿಷ್ಠೆಯ ತಪವು ಸಾಗದೇ ಇಹುದು
ಪ್ರೇಮವಿಲ್ಲದ ಕಾಮ ನನ್ನದಾಗಿಹುದು ॥ ೧ ॥

ಕೋಪವೆಂಬುವ ಅಗ್ನಿ ಸುಡುತಿಹುದು ಜೀವವ
ತಾಪದಲಿ ಕುದಿಯುತ್ತ ಬೆಂದು ಬಸವಳಿದಿಹೆನು
ಕೂಪದಿಂದೆನ್ನನು ಉದ್ಧರಿಸು ದೊರೆಯೆ
ಕಾಪಾಡಿ ಸಲಹಯ್ಯ ಪಂಕಜೋದ್ಭವ ಪಿತನೆ ॥ ೨ ॥

ನಾಭಿಯಲಿ ಕಮಲವನು ಧರಿಸಿರುವ ದೊರೆಯೆ
ಲೋಭ ಪ್ರಲೋಭನೆಯು ಕಾಡಿಹವು ಪ್ರಭುವೆ
ಲಭಿಸುವುದೆ ಬಿಡುಗಡೆಯು ಈ ಬಂಧದಿಂದ
ನಂಬಿರುವ ಭಕ್ತನನು ಕಾಪಾಡು ದೇವ ॥ ೩ ॥

ನಾನು ನನ್ನದು ಎಂಬ ಮೋಹ ಬಿಗಿದಿಹುದು
ಏನು ಮಾಡಲಿ ಎಂದು ತೋಚದಾಗಿಹುದು
ಹೀನಭಾವನೆ ನನ್ನ ಸುತ್ತುವರಿದಿಹುದು
ಪ್ರಾಣದಾಯಕ ನೀನು ಸಲಹೆನ್ನ ಸ್ವಾಮಿ ॥ ೪ ॥

ಅನ್ನದ ಅರ್ಥದ ವೈಭವದ ಮದವೆಲ್ಲ
ನಿನ್ನ ಕರುಣೆಯ ಸ್ಮರಣೆ ಅಳಿಸಿ ಹಾಕಿಹುದು
ಎನ್ನ ಮನ್ನಿಸಿ ನಿನ್ನ ಕರುಣೆಯನು ನೀಡಿ
ಪನ್ನಗಾಧೀಶನೆ ಪಾಲಿಸು ಪರಮಾತ್ಮ ॥ ೫ ॥

ಮಾತ್ಸರ್ಯದೆ ಬುದ್ಧಿ ಏಕೆನಗೆ ಬಂದಿಹುದು
ವಾತ್ಸಲ್ಯದ ಮೂರ್ತಿ ಶ್ರೀಕಾಂತ ದಯೆ ತೋರಿ
ತಾತ್ಸಾರಭಾವನೆ ತೊರೆದು ಓ ದೇವ
ಭರ್ತ್ಸನೆಯ ಅರಿಗಳನು ಸಂಹರಿಸು ಸ್ವಾಮಿ ॥ ೬ ॥

ಇಂತು ಕಾಡಿಹವೆನ್ನ ಈ ಆರು ವೈರಿಗಳು
ಕಂತುಪಿತ ಕರಿಗಿರಿಯ ನರಹರಿಯೆ ಕಾಪಾಡು
ಭ್ರಾಂತುನಾಗಿಹೆನಯ್ಯ ಕಾಂತ-ಲಕುಮಿ ರಮಣ
ಶಾಂತವದನನೆ ನೀನೆ ಸಲಹಬೇಕಯ್ಯ ॥ ೭ ॥

೨೦೫

ಮುಸುರೆ ತೊಳೆಯಬೇಕು ಮನಸಿನ ಕಸವ ದೂಡಬೇಕು
ಅಸುರಾರಿಯನು ಸತತ ಸ್ಮರಿಸುತಿರಬೇಕು ॥ ಪ ॥

ಮನಸು ಜ್ಞಾನವನು ಮುಚ್ಚಿಟ್ಟ ಕಸದ ರಾಶಿ
ತನುವ ಶುದ್ಧತೆಯನ್ನು ಕೆಡಿಸುವ ಆಸೆಗಳ ರಾಶಿ ॥ ಅ.ಪ. ॥

ಕಾಮಕ್ರೋಧಗಳನ್ನು ಹೊರದೂಡುತಿರಬೇಕು
ತಾಮಸಿಕ ಬಂಧನದ ಹೊರೆ ಇಳಿಸಬೇಕು
ಮಮಕಾರವೆಂಬುವ ಕಸ ಗುಡಿಸಬೇಕು
ಪ್ರೇಮ ವಾತ್ಸಲ್ಯದಲಿ ಮನ ತೊಳೆಯಬೇಕು ॥ ೧ ॥

ಹೋಮ ಹವನಗಳನ್ನು ಮಾಡುತಿರಬೇಕು
ನೇಮನಿಷ್ಠೆಗಳಿಂದ ಬಾಳುತಿರಬೇಕು
ಭೀಮಶಕ್ತಿಯ ಪಡೆದು ಕಷ್ಟವೆದುರಿಸಬೇಕು
ಕಮಲನಾಭನ ಸತತ ಭಜಿಸುತಿರಬೇಕು ॥ ೨ ॥

ಹನುಮಂತ ದಿವ್ಯ ಹೃದಯಮಂದಿರದಲ್ಲಿ
ಅನುಮಾನ ತೀರ್ಥರ ಪಾದಪಂಕಜದಲ್ಲಿ
ಮಣಿದು ನಲಿದಾಡುವ ಭಾಗ್ಯ ನಮಗಿರಲಿ
ಧಣಿಯಾದ ಕರಿಗಿರಿಯ ನರಹರಿಯ ಕೃಪೆ ಇರಲಿ ॥ ೩ ॥

೨೦೬

ಸ್ನಾನ ಮಾಡಬೇಕು ಶುಭ್ರಸ್ನಾತರಾಗಬೇಕು
ಸ್ನಾನ ಮಾಡುತ ಹರಿಯ ಭಜಿಸುತಿರಬೇಕು ॥ ಪ ॥

ತನುಮನವೆನೆಂದೆಂದೂ ಶುಭ್ರವಿರಿಸಿರಬೇಕು
ಹನುಮನನು ಅನುದಿನವೂ ನೆನೆಯುತಿರಬೇಕು ॥ ಅ.ಪ. ॥

ಗಂಗಾದಿ ತೀರ್ಥದಲಿ ಮುಳುಗೇಳುತಿರಬೇಕು
ಸಂಗಮ ಸ್ಥಳಗಳಲಿ ಜಪ ಮಾಡುತಿರಬೇಕು
ಕಂಗಳಲಿ ರಂಗನನು ನಿಲ್ಲಿಸುತ್ತಿರಬೇಕು
ಡಿಂಗರಿಗರೊಡಗೂಡಿ ಧ್ಯಾನಿಸುತ್ತಿರಬೇಕು ॥ ೧ ॥

ದಾನಧರ್ಮವ ಸತತ ಮಾಡುತಿರಬೇಕು
ನಾನು ನನ್ನದು ಎಂಬ ಭಾವನೆಯ ಬಿಡಬೇಕು
ಹೀನಮಾನವರಿಂದ ದೂರವಿರಬೇಕು
ಗಾನಲೋಲನ ಪೊಗಳಿ ಪಾಡುತಿರಬೇಕು ॥ ೨ ॥

ಹರಿಚರಣ ಸೇವೆಯನು ಮಾಡುತಿರಬೇಕು
ಸಿರಿಪತಿಯ ಕರುಣೆಯನು ಬೇಡುತಿರಬೇಕು
ಪರಿಪರಿಯ ವಿಧದಲ್ಲಿ ಅವನನರ್ಚಿಸಬೇಕು
ಕರಿಗಿರಿಯ ನರಹರಿಯ ಪದತಲದಲ್ಲಿರಬೇಕು ॥ ೩ ॥

❖❖

ನಳಿನಿರಾವ್ (೧೯೩೯-೨೦೦೯)
ಅಂಕಿತ – ವೆಂಕಟಪತಿ / ಗುರುವೆಂಕಟ

ಅದ್ವೈತ ವೇದಾಂತ ಗುರುಗಳಾಗಿದ್ದ ಚಿಕ್ಕನಾಯಕನಹಳ್ಳಿಯ ವಾಸುದೇವಾರ್ಯರ ಪರಂಪರೆಯಲ್ಲಿ ಹಲವು ದಾಸರು ಕಾಣಿಸಿಕೊಂಡಿದ್ದು ಅವರಲ್ಲಿ ತಿಮ್ಮಪ್ಪದಾಸರು, ವೆಂಕಟದಾಸರು ಪ್ರಮುಖರು. ತಿಮ್ಮಪ್ಪದಾಸರು ವಾಸುದೇವಾರ್ಯರ ಅಳಿಯಸಂತಾನವಾದರೆ ವೆಂಕಟದಾಸರು ಪುತ್ರಸಂತಾನವಾಗಿದ್ದಾರೆ. ಈ ವೆಂಕಟದಾಸರ ಪರಂಪರೆಯಲ್ಲಿ ೫ನೇ ತಲೆಮಾರಿನವರಾಗಿ ನಳಿನಿರಾವ್ ಅವರು ಕಾಣಿಸಿಕೊಂಡಿದ್ದಾರೆ.

ನಳಿನಿರಾವ್ ಅವರು ದಾಸರ ಪದ್ಮಾವತಮ್ಮ ಮತ್ತು ಶ್ರೀನಿವಾಸರಾವ್ ದಂಪತಿಗಳ ಮೂರನೇ ಪುತ್ರಿಯಾಗಿ ೭-೮-೧೯೩೯ರಲ್ಲಿ ಬೆಂಗಳೂರಿನಲ್ಲಿ ಜನಿಸಿದ್ದಾರೆ. ಪರಂಪರೆಯಿಂದ ಬಂದ ದಾಸಸಾಹಿತ್ಯವನ್ನು ತಾಯಿಯವರ ಮೂಲಕ ಗ್ರಹಿಸಿ ಗುರುಗಳ ಹಾಡುಗಳನ್ನು ಅಭ್ಯಾಸಮಾಡಿ ಮನಸ್ಸಿನಲ್ಲಿ ದಾಸತ್ವದ ಅನುಸಂಧಾನ ಮಾಡಿದ್ದಾರೆ. ಉನ್ನತಶಿಕ್ಷಣ ಪದವೀಧರೆಯಾಗಿ ಶಿಕ್ಷಣಕ್ಷೇತ್ರದಲ್ಲಿ ಎಂ.ಎಡ್. ಮಾಡಿ ಬೆಂಗಳೂರು ವಿಶ್ವವಿದ್ಯಾಲಯದ ಶಿಕ್ಷಣವಿಭಾಗದಲ್ಲಿ ಪ್ರಾಧ್ಯಾಪಕಿಯಾಗಿ ಸೇವೆಸಲ್ಲಿಸಿ ನಿವೃತ್ತರಾಗಿದ್ದಾರೆ. ವಿದೇಶಗಳಿಗೂ ಹಲವು ಬಾರಿ ಹೋಗಿ ವಿಚಾರಗೋಷ್ಠಿಗಳಲ್ಲಿ ಪ್ರಬಂಧಗಳನ್ನು ಮಂಡಿಸಿದ್ದಾರೆ.

ನಿವೃತ್ತಿನಂತರ ತಂದೆ ತಾಯಿಗಳ ಸೇವೆಯಲ್ಲೇ ಮನಸ್ಸನ್ನು ಇಟ್ಟು ಕೊನೆಯವರೆಗೂ ಕುಮಾರಿಯಾಗಿಯೇ ಇದ್ದು ದಾಸಸಾಹಿತ್ಯಾಧ್ಯಯನ ದಾಸಚಿಂತನಗಳಲ್ಲಿ ಮನಸ್ಸಿಟ್ಟು ಗುರುವಾಸುದೇವಾರ್ಯರಿಂದ ಸ್ವಪ್ನಾಂತರಾಗಿ ಮನೆದೈವ ತಿರುಪತಿ ವೆಂಕಟೇಶ್ವರನನ್ನು ವೆಂಕಟಪತಿ ಅಂಕಿತವಾಗಿ ಸ್ವೀಕರಿಸಿ ೩೦ ಕ್ಕೂ ಹೆಚ್ಚು ಕೀರ್ತನೆಗಳನ್ನು ಐದಾರು ದೀರ್ಘಕೃತಿಗಳನ್ನು ರಚಿಸಿದ್ದಾರೆ. ಇವರ ಕೀರ್ತನೆಗಳೆಲ್ಲ ಅದ್ವೈತ ತತ್ವಚಿಂತನೆಯಲ್ಲಿವೆ.

ಪ್ರಸ್ತುತ ಹದಿಮೂರು ಸಾಮಾಜಿಕ ಕೀರ್ತನೆಗಳನ್ನು ಇಲ್ಲಿ ಕೊಟ್ಟಿದೆ. ಗುರು ಮನೆಯನ್ನು ಪಾಠಶಾಲೆಯಾಗಿ ಕಂಡಿರುವ ಕೀರ್ತನೆ ಸುಂದರವಾಗಿದೆ. 'ಮನ್ನಿಸನ್ನಪರಾಧ ಸಂಚಯ'ವೆಂದು ತನ್ನನ್ನು ತಾನು ಕೇಳಿಕೊಳ್ಳುತ್ತಲೇ

ಇಡೀಸಮಾಜಕ್ಕೂ ಈ ಕ್ಷೇಮಕೋರಿಕೆ ಅನ್ವಯವಾಗುತ್ತದೆ. ನರದೇಹವಿದು ಬರಿದು ಶ್ರೀಮಾತೆಗೊಳಿಸು ಎನ್ನುವಲ್ಲಿ ಮಾನವ ಜನ್ಮದ ಘನತೆಯನ್ನು ಹೇಳಲಾಗಿದೆ. ಕಾಯ ಪ್ರತಿಮೆಯ ಮೂಲಕ ಹಲವು ಆಯಾಮಗಳಲ್ಲಿ ನಾಮ – ಕ್ರಿಯಾ ರೂಪಗಳಲ್ಲಿ ಈ ಪದವನ್ನು ದುಡಿಸಿರುವುದು ವಿಶೇಷವಾಗಿದೆ.

೨೦೭

ಎಲ್ಲಿಹನು ದೇವನೆಂದರಸಿದನೊಬ್ಬಜ್ಞಾನಿ ॥
ಬಲ್ಲೆನೋಡೆಂದೊಡಲ ಬಗೆ ತೋರಿ ಪ್ರಾಜ್ಞ ತಾ
ನಿಲ್ಲಿಹುದು ಒಡೆಯನಿಟ್ಟಾತ್ಮವೆಂದನು ಜ್ಞಾನ
ವೆಲ್ಲೆಡೆಯ ದಿವ್ಯ ಚೇತನವೆಂದಾತ್ಮಜ್ಞಾನಿ ॥ ॥ ಪ ॥

ಕರಶುದ್ಧವಿರಿಸುವರೆ ಕರಮುಗಿದರಲ್ಲಿಹನು ॥
ಶಿರಬದ್ಧವಾಗಿ ಇರೆ ಶಿರಬಾಗಲಲ್ಲಿಹನು ॥
ಉರುತರದಲುರವಿರೆ ಸ್ವರಬಿರಿದು ಹರಿ ಎಂದು ॥
ಕರೆವ ಧನ್ಯತೆಯು ಬರೆ ವರದನೆದುರಾಗುವನು ॥ ॥ ೧ ॥

ಬಿತ್ತಿ ಬೆಳೆಸುವನೆಷ್ಟೋ, ಬತ್ತಿ ನಸಿದವದೆಷ್ಟೋ ॥
ಎತ್ತಿ ನೆಟ್ಟದು ಫಲಿಸುತಿತ್ತು ನೆರಳಾದಷ್ಟು ॥
ಭಕ್ತಚಿತ್ತರು ಹರಿಯ ಮುಕ್ತಿದಾತನ ದೊರೆಯೆ –
ನುತ್ತ ನಿತ್ಯದಲತುಳ ಹರಿಭಾಗ್ಯ ತೊಟ್ಟಿಹರು ॥ ॥ ೨ ॥

ತೋರಿ ಪರಮಾತ್ಮ ಹರಿದಾಡುವ ಸತ್ಯಗಳ ॥
ಬೆರೆದು ಮನಸಂಚಾರಿ ಪಾಪಸಂಹಾರಿಯನು ॥
ಸಾರಿ ಕಾತರಿಸೆ ತವಕದಿ ವೆಂಕಟಗುರುವಿನಿಂದ ॥
ಪರಿಯ ಸಿರಿ ಬಿರಿದು ನೋಡೆಂದು ಬಿಚ್ಚಿಡುತಿಹರು ॥ ॥ ೩ ॥

೨೦೮

ಕಾಯಬೇಕು ಗೋವಿಂದನ ಕಾಣಲು ॥
ಕಾಯಬೇಕು ಭವಬಂಧನ ನೀಗಲು ॥ ಪ ॥

ಕಾಯಜಪಿತ ನಮಗಿನ್ನಾರಿಂದು ॥
ಕಾಯಬೇಕು ಕಮಲಾಕ್ಷನೀನಿಂದು ॥ ॥ಅ.ಪ. ॥

ಕಾಯಕಷ್ಟ ಕರ್ಮವ ಸವೆಸುತ ಈ ।
ಕಾಯದ ಕಾಷ್ಟವುರಿಯಬೇಕು ॥

ಕಾಯದಾತ ಕಾರುಣ್ಯಸಿಂಧುವನು ।
ಕಾಯದೊಳಿರಿಸಿ ಸಿರಿ ಪಡೆಯಬೇಕು ॥ ॥ ೧ ॥

ಕಾಯವ ಕುಣಿಸುವ ಕ್ಷಣಭಂಗುರದಾ ।
ಕಾಯಿ ದೇಹ ಮಾಗಿಸಬೇಕು ॥
ಕಾಯಿಸಿ ಕಾರಣಕರ್ತನೊಳಾಡುತ ।
ಕಾಯವಗಲುತಲಿ ಸರಿಯಬೇಕು ॥ ॥ ೨ ॥

ಕಾಯಪಿಡಿದು ಮಾಯಾತೀತನ ತ –
ತ್ಕಾಯದೊಳರಿಯುತ ನಲಿಬೇಕು ॥
ಕಾಯವ ಜೀವವ ದೇವನ ಪಾದದಿ ।
ಕಾಯ್ದು ನೆಲೆಯ ಸೇರಿಸಬೇಕು ॥ ॥ ೩ ॥

ತೋಯಜಾಕ್ಷ ತ್ರಿಗುಣಾಂತ ರಂಗನನು –
ಪಾಯದಿ ಸ್ಮರಿಸುತಲಿರಬೇಕು ॥
ಆರ್ಯ ವಾಸುದೇವಗುರು ಸ್ಮರಿಸಿ ಸುಖ –
ದಾಯ ವೆಂಕಟನ ಕರೆಯಬೇಕು ॥ ॥ ೪ ॥

೨೧೯

ಕಾಯವಿತ್ತೆ ವಿಷಯವಿತ್ತೆ, ಕ್ಲೇಶ ನನ್ನದೇ ॥
ಮಾಯೆಮರೆಸಿ ಮೋಹವಳಿಪ ಕ್ಷೇಮ ನಿನ್ನದೇ॥ ॥ ೧ ॥

ಕರ್ತೃವಾದೆ ಕರಣಜನ್ಯ ಬಯಕೆ ನನ್ನದೇ ॥
ಭೋಕ್ತೃವಾದೆ ಕುಶಲವೆರೆ ಉಪಾಯ ನಿನ್ನದೇ । ॥ ೨ ॥

ಭುಕ್ತಿಯಿತ್ತೆ ಸುಪ್ತಿಯಲಿ ವಿಲಾಸ ನನ್ನದೇ ॥
ಭಕ್ತಿ ಸಾಧನೆ ಸಂಕಲ್ಪ ಲೀಲೆ ನಿನ್ನದೇ ॥ ॥ ೩ ॥

ಕರ್ಮಜಾಲವಜ್ಞೆಸುತ್ತೆ ಚಪಲ ನನ್ನದೇ ॥
ಕ್ಷಮತೆಯಲಿ ವಿವೇಕವೀವಚರಿತೆ ನಿನ್ನದೇ ॥ ॥ ೪ ॥

ಮಾನವಿತ್ತೆ ವಿದ್ಯೆಯಿತ್ತೆ ಗರುವ ನನ್ನದೇ ॥
ಜ್ಞಾನವಿತ್ತು ಆತ್ಮ ತೆರೆವ ಸತ್ವ ನಿನ್ನದೇ ॥ ॥ ೫ ॥

ಸನ್ನುತಾಂಗ ವೆಂಕಟೇಶ ಸಲಹು ತೋರುತ ॥
ಇನ್ನು ಪಾದರಜೆಯಲಿರಿಸು ಹೊರೆಯನೀಸುತ ॥ ॥ ೬ ॥

ನಿನ್ನ ಸಂಗಸುಖದಿ ದೋಷಸವೆದು ದೂಡುವೆ ॥
ನಿನ್ನ ನಾಮಸ್ಮರಣೆಯಲ್ಲಿ ಗುರುವೆ ಎರಗುವೆ ॥ ॥ ೭ ॥

೨೧೦

ರಾಗ : ಶ್ರೀರಾಗ

ನರದೇಹವಿದು ಬರಿದು । ಶ್ರೀಮಂತಗೊಳಿಸು ॥
ನಾರಾಯಣನು ಇತ್ತ ಬಹು ದಿನಸು ಸೊಗಸು।
ಅದನರಿತು ಬಳಸು ॥ ॥ ಪ ॥

ಹರುಷದಲಿ ಹೊಂದಿದನು ನಿತ್ಯದೊಳಗನುಭವಿಸು ॥
ಪರವಸ್ತು ವೆಂಕಟನ ವರವದನಲಂಕರಿಸು ॥ ॥ಅ.ಪ. ॥

ಶಿರಕೆ ಹರಿಜ್ಞಾನ ರತುನದ ಮಕುಟವನು ತೊಡಿಸು ॥
ಹರಿಭಕುತಿ ಪದ್ಮಪೀತಾಂಬರದ ಮಡಿಯುಡಿಸು ॥
ಕರಕೆ ಪದಗ್ರಹಣ ಕುಂದಣ ಕಂಕಣದ ಧರಿಸು ॥
ದೊರೆತುರದಿ ನಾಮಜಪ ಪವಳಪದಕನ ಮೆರಸು ॥ ॥ ೧ ॥

ಭವ ಕರಗಿಸುವ ಧ್ಯಾನ ಸ್ವರ್ಣ ಕುಸುಮವ ಮುಡಿಸು ॥
ಪಾವನನ ಸ್ಮರಣೆ ಮಕರದ ಮುರಿಗೆ ತಾಕಿಸು॥

ಶ್ರವಣ ಶಬ್ದದ ಕರ್ಣಕುಂಡಲವ ಹೊಂದಿಸು ॥
ದೇವನರ್ಚನೆ ಪಚ್ಚೆಯುಂಗುರದಿ ಸಿಂಗರಿಸು ॥ ॥ ೨ ॥

ಹರಿಜನರ ಸಖ್ಯ ಸಂಪದ ಕಂಠಿಗಳನಿರಿಸು ॥
ಗುರುವಚನ ನಿಧಿದಾಸ್ಯ ಗಂಧವನೆಲೇಪಿಸು ॥
ಪರಿವಂದನೊಡ್ಯಾಣ ಮೌಕ್ತಿಕವ ಕೂಡಿಸುತ ।
ಸ್ಥಿರಕುಂದಹಾರದಾತ್ಮ ನಿವೇದನವ ಬೆರೆಸು ॥ ॥ ೩ ॥

೨೧೧

ನಾನುಪರಿಣತ ಪರಮಯೋಗ್ಯಳೆ ॥
ನೀನು ಸಲಹುವೆ ಎಂತು ಘನಳೆ ॥ ॥ ಪ ॥

ಅನ್ಯ ಬೇಡುವೆ ಭಾಗ್ಯ ಒಂದನು ॥
ನಿನ್ನ ಭಕ್ತಿಗೆ ಯೋಗ್ಯಳೆನಿಸೆನ್ನನು ॥ ॥ಅ.ಪ. ॥

ಆ ಘನತೆ ನಿನ್ನದೇ ಚಿದ್ಘನಾನಘನೆ ॥
ನಿಗಮಗೋಚರ । ಚರಾಚರ ಚಿತ್ತಚೇತನನೆ ॥
ಆಗಮಾಡಿಸು ನಿನ್ನ ಧ್ಯಾನ ಸ್ಮರಣೆ, ಸಾನು –
ರಾಗ ಮೂಡಲಿ ಭಕ್ತಿ ಜ್ಞಾನ ಗಂಭೀರನ ॥ ॥ ೧ ॥

ಜಪತಪಾದಿಗಳ ಸಾಧನಯೋಗ ಇನಿತಿಲ್ಲ ॥
ಸುಪಥಪೂಜಾರ್ಚನೆಗೆ ನೇಮ ಸಿದ್ಧಿಸಲಿಲ್ಲ ॥
ಉಪವಾಸವನುಷ್ಠಾನಗಳು ನಡೆದು ಬರಲಿಲ್ಲ ॥
ಅಪರಾಧಿಯಾಗಿ ಅರಸುತನ ಬಿಡದಗ್ರಣಿಯ ॥ ॥ ೨ ॥

ಹಾಡಿಕೊಂಡಾಡಿ ತಿಳಿಸಲು ಸಂಪದೊದಗದವು ॥
ನಡೆಸಿ ನಲಿಸುವ ಶ್ರದ್ಧೆಸಾಮರ್ಥ್ಯಬಲುದೂರ ॥
ನುಡಿ ಬರೆದು ತಿಳಿಸಲು ತಿಳಿವೆ ದುರ್ಲಭವು ॥
ನಡೆದು ತೋರಲು ಜೀವಜಾಡ್ಯ ಬಿಡದಂಟಿರುವ ॥ ॥ ೩ ॥

ದಾನಧರ್ಮದ ದಾರಿ ಬಹುದೂರವಿಹುದು ॥
ಹೀನ ಲೌಕಿಕ ಸುತ್ತಿಕೊಂಡದುವೆಬಿಡದು ಅಭಿ –

ಮಾನ ಕಾರಣ ನಿಪುಣ ಚತುರತೆಯ ಬಿನುಗಿನಲ –
ಧೀನ ನಿನ್ನವಳೆಂಬ ಶೀಲವನರಿಯದವಳು ॥ ॥ ೪ ॥

ಪರಿಪರಿಯ ಕರಣಜನ್ಯದಿ ತೊಡರಿಕೊಂಡಿರುವ ॥
ಮರುಳನೀಗುವ ಬಗೆಯು ವಶವಾಗದಿರುವಾಗ ॥
ವರದವೆಂಕಟರಮಣ ಗುರುರಾಮ ಕರುಣ ನಿನ್ನ ॥
ಚರಣದಲಿ ಹೊಂದಿ ಮಂದಳನು ಕಾಯದಿರೆ ॥ ॥ ೫ ॥

೨೧೨

ರಾಗ : ಮಾಂಡ್ ತಾಳ : ಆದಿ

ಪಾಠಶಾಲೆಯು ನನ್ನ ಗುರುಮನೆ ।
ಆಟವಾಡಿಸಿ ತೋರುವೆ ॥
ಆಟವದರೊಳು ವಿದ್ಯೆ ಬಹು ನಯ ।
ಆಟವಳಿಸುತ ಮುಗಿಸುವೆ ॥ ॥ ಪ ॥

ಅಂತರಾತ್ಮವು ನಿಂತು ನೋಡುತವ –
ರೆಂತು ಕಲಿತವರೆನ್ನುವೆ ॥
ಹಂತಹಂತಗಳಲ್ಲಿ ತಾ ಪಡೆ –
ದಂತೆಯೇಫಲವೆನ್ನುವೆ ॥ ॥ ೧ ॥

ಬಲಿತವಿದ್ಯೆಯು ಕಳೆಯುವುದು ಬಲ –
ವಂತನಾ ಛಲವೆನ್ನುವೆ ॥
ಉಳಿವ ಸಾಧಿಸಿ ಗಳಿಸುವುದು, ಪರಿ –
ಯಂತ ಸಿದ್ಧಿಯನೀಯುವೆ ॥ ೨ ॥

ಭವದರಿಸುತೌಚಿತ್ಯ ಕರ್ಮದ –
ಲರಿತ ವಾಟದಲಿರಿಸುವೆ ॥
ಅವರವರ ಸಾರ್ಥಕ್ಯ ಧರ್ಮದ–
ಲಾಯದಲಿಪರಿಹರಿಸುವೆ –
ಗುರುವೆಂಕಟನೆ ಶರಣೆನ್ನುವೆ ॥ ॥ ೩ ॥

೨೧೩

ಬಲವಂತಳ ಮಾಡೆನ್ನನು ದೊರೆಯೆ ॥
ಛಲದಲಿ ಖಳರೆಲ್ಲರನಡಗಿಪ ಬಲು ॥ ॥ ಪ ॥

ಎಂಟು ಸಖಿಯರೆನಗೆಂಟು ನೆಂಟರು ॥
ಒಂಟಿ ಬಿಡದೆ ಬಿಗಿದಂಟಿ ಕೊಂಡರಿ –
ನ್ನುಂಟೆ ಬೇರೆ ಕಂಟಕ ತೃಣಜೀವಕೆ॥
ಪೆಂಟೆಯಾಗಿ ಬಹ ದಂಡನು ತರಿಯುವ ॥ ॥ ೧ ॥

ಗುರಿಕಾರೂಳಿಗದವರುಂಟೈವರು ॥
ಚಾರರು ಸಂಚಲೊಂಚಿಪರೈವೈವರು ॥
ಪ್ರೇರಿಪರೊಂದಿಮಾಗಧರಾರಿರುವರು ॥
ಸಾರಿ ಸರಿಯತೀ ಸಂಗ ಪರಿಹರಿಪ ॥ ॥ ೨ ॥

ಆಪ್ತರಾಗಿ ಗುಪ್ತದೊಳಿಹ ಸಪ್ತರು ॥
ಸುಪ್ತ ಜಾಗ್ರತದೊಳೆಡಬಿಡದವರು ॥
ಕ್ಲುಪ್ತವಳಿಪ ಕಡುಮಿತ್ರರು ಮೂವರು ॥
ಲುಪ್ತಗೈವಚಾಕರತಾಪ ತಣಿಪ ॥ ॥ ೩ ॥

ಷಷ್ಟಾರಿಗಳೆನ್ನಿಷ್ಟರು ಪುಷ್ಟರು ॥
ದಷ್ಟರುಗಳೇಳು ಸಂಗ ಪಿಡಿದವರು ॥
ಹೃಷ್ಟರಾದವರ ಕಾಷ್ಠವಾಗಿಸುತ ॥
ಭ್ರಷ್ಟನಾಗಿಸಿದ ದುಷ್ಟರ ದಂಡಿಪ ॥ ॥ ೪ ॥

ನಾಲುವರಿಂ ನೆಲೆ ಸುದ್ದಿಗೈದು ಈ ॥
ಜಾಲವೆಸೆದ ನಾಲ್ಕುಳ್ಳರುವತ್ತರ ಬಲ ॥
ತೇಲಿಸಿ ಶೀಲವ ಲಾಲಿಸಿ ಬೆಳೆಸಿ ॥
ಪಾಲಿಸಿ ಶ್ರೀಗುರು ವೆಂಕಟಪತಿ ನೀ ॥ ॥ ೫ ॥

೨೧೪

ರಾಗ : ನಾದನಾಮಕ್ರಿಯ

ಬಯಸಿದರೆ ಬಾಹುದೇ ನಿನ್ನ ಭಕ್ತಿಯ ಭಾಗ್ಯ ॥
ಜಯಿಸಿ ಮಾಯೆಯ ಗಳಿಸಿ ಪುಣ್ಯದಲಿ ಬಾರದಲೆ ॥ ॥ ಪ ॥

ಅಭಿಮಾನ ಕರಗದಲೆ, ಅಹಂಕಾರ ಹರಿಯದಲೆ ॥
ಬಹುವಾದ ಬಯಕೆಗಳ ಮೊಳಕೆಯಲಿ ಸೆಳೆಯದಲೆ ॥
ಸಹಿತ ಬಾಂಧವರೆಂದಂಧತನ ಬೆರೆಸದಲೆ ॥
ವಿಹಿತಲೋಕದ ಸಂಗವೆಂಬ ಭ್ರಮೆಬಾಡದಲೆ॥ ॥ ೧ ॥

ಸದ್ವೃತ್ತಿ ಸಹಜ ಸತ್ಯದ ನಡೆಯ ಮುಸುಕಿನಲಿ॥
ಸಿದ್ಧಿಸುವ ಸತ್ವ ಮೂರುತಿ ಸದನ ಚಿತ್ತಮನ ॥
ಬುದ್ಧಿಪೂರ್ವಕ ವಿಪುಲ ನಾಮಸ್ಮರಣೆಯ ಸವಿಯು –
ತುದ್ಧಾರ ಕರ್ತನಾ ಸಂಕಲ್ಪವೆನ್ನದೆಲೆ ॥ ॥ ೨ ॥

ನವೆದು ಬಲಗೊಳಿಸಿ ಅನುಭವಿಸಿ ಬಯಲಾದ ॥
ಪೂರ್ವ ಕರ್ಮದಲರ್ಜಿಸಿದ ನೆಲವನನುಗೊಳಿಸಿ ॥
ಭವದ ಸೆಲೆಯಳಿಸಿ ಕುಲಗುರು ಪದದಿ ನೆಲೆಯಿರಿಸಿ ॥
ದೇವವೆಂಕಟಪತಿಗೆ ನಮಿಸಿ ಬಾರದೆ ಬರಿದೆ ॥ ॥ ೩ ॥

೨೧೫

ರಾಗ : ತೋಡಿ / ಕಾಂಬೋದಿ ತಾಳ : ರೂಪಕ

ಭಕ್ತರಾಗಿರಿ । ಭಾಗ್ಯವಂತರಾಗಿರಿ । ॥ ಪ ॥

ನಿತ್ಯಶುದ್ಧರಾಗಿ ಚಿತ್ತದಲ್ಲಿ ಸೇವೆಮಾಳ್ಪ ಹರಿಯ ॥ ॥ಅ.ಪ. ॥

ತರಣಿಯಾಗಿ, ಧರಣಿ ಗಗನ, ಅಗ್ನಿ ವಾಯು, ಅನಿಲದಲ್ಲಿ ।
ಸ್ಥಿರವಾಗಿ ಸರ್ವತ್ರದೊಳು, ವ್ಯಾಪ್ತನಾಗಿ ನೆಲೆಸಿರುವನ
ಅರಿಯದಲೆ, ಅರ್ಚಿಸುವರು, ಬಹುಜನರು, ಸಹಜದಲ್ಲಿ ॥
ಹರಿಯನರಿತ ಆತ್ಮಗಳಿಗೆ, ದೊರೆವ ತಾನೆ, ಸುಲಭದಲ್ಲಿ ॥ ೧ ॥

ಜ್ಞಾನಿಗಳು ತೋರಿದ ಸನಾತನ ನೀತಿ ಒಂದೇ ರೀತಿ ॥
ಧ್ಯಾನದಲ್ಲಿ ಅರಿವಿನಿಂದ ಬರುವ ಜ್ಞಾನದಲ್ಲಿ ಬೆಳೆವ ॥
ಮೌನರೂಪ ಮೂಲಭಾವವದುವೆ ನೈಜಭಕ್ತಿ ಅನು –
ಮಾನವೇತಕದಕೆ ಒಲಿವ. ನಲಿದು ತನ್ನನೇ ಕೊಡುವ ಹರಿಯ ॥ ೨ ॥

ದಾನಿ ಧನಿಕ, ದೀನ ದಾರಿದ್ರನವನವಗೆ ಭಿನ್ನವೇ ॥
ಅನ್ಯರಲ್ಲ, ಅವನ ಭಕ್ತರಲ್ಲಿ ಏಕೋ, ಭಾವವೇ ॥
ಭಾನುವಾಗಿ, ಭಕ್ತರಲ್ಲಿ ನಿಲುವ ಹೊಳೆದು ಹೊಳೆಸುತ, ಕಾಮ –
ಧೇನುವಾಗಿ ವತ್ಸಲನ್ನು ಕಾಯ್ವ ಭಕುತವತ್ಸಲ ॥ ॥ ೩ ॥

ನಿತ್ಯಸೌಖ್ಯರಾಗಿ ಪರಬ್ರಹ್ಮವದನೆ, ಪಡೆದ ಉತ್ತ
ಮೋತ್ತಮರು, ಭರತ, ಸೌಮಿತ್ರ ಸಂತ ಹನುಮಂತ ॥
ಭಕ್ತ ವಿದುರ, ಪ್ರಹ್ಲಾದ ರವಿಜ, ದಾನವಾನುಜರ, ಪ –
ವಿತ್ರಚರಿತಕನ್ಯ ಭಕ್ತಿಸೂತ್ರನೆಂದರದುವೆ ವೆಂಕಟಪತಿ ॥ ೪ ॥

೨೧೬.

ಭಿಕ್ಷಾರ್ಥಿಗಳವರು, ಯಾಚಿಸೆ ಬರರವರು ॥ ॥ ಪ ॥

ರಕ್ಷೆ ಇಟ್ಟು ಜ್ಞಾನಕ್ಷಯಗೊಳಿಸಲು
ದಕ್ಷನಾಜ್ಞೆಯಲಿ ಶಿಸ್ತಾಗಿ ಬಂದವರು ॥ ॥ ಅ.ಪ. ॥

ಪಾನ ಅಶನ ವಸನ ಪರಿವಿರದವರು ॥
ಧ್ಯಾನ ವಶದಿ ಭಕ್ತಿ ಭುಕ್ತಜನರು ॥
ಮಾನವದೇಹಿಗಳಾದ ಮಹಾತ್ಮರು ॥
ಜ್ಞಾನವೆ ಬಹುವಿಧ ಭಕ್ಷ್ಯಗಳಾಗಿಹ ॥ ॥ ೧ ॥

ಕೊಟ್ಟ ದ್ರವ್ಯ ಧನಕನಕಗಳವು ನಿ –
ಕೃಷ್ಟವವರಿಗೆ ಮನ ಮನಸಿಜ ಪರ –
ಮುತ್ಕೃಷ್ಟನ ಪರಪುಷ್ಟರು ದೇಹವಿ –
ಶಿಷ್ಟ ನೇಮದಲಿ ಹರಿನಿಷ್ಠರಾದ ॥ ॥ ೨ ॥

ರಾಗಿ ಬೇಡುವ ವಿರಾಗಿಗಳವರು ॥
ಭೋಗ ತೊರೆಸಿ ಭವರಾಗ ಹರಿಸಿ, ನಿಜ ॥
ಯೋಗದಲರಿವಿನ ಭಿಕ್ಷೆ ಇಡುತ ಅನು ॥
ರಾಗದಿ ವೆಂಕಟನಾಥಗೊಪ್ಪಿಸುವ ॥ ॥ ೩ ॥

೨೧೭

ರಾಗ : ಆರಭಿ ಆದಿತಾಳ

ಮನ್ನಿಸೆನ್ನಪರಾಧ ಸಂಚಯ ॥
ಮುನ್ನ ಮಾಡಿದನುಚಿತವಕ್ಷಯ ॥
ಇನ್ನು ಮಾಡದ ಬಂಧ ನೀತಿಯ ॥
ನಿನ್ನದಾಗಿಸಿ ಒಪ್ಪಿಸಿಕೊಳ್ಳೆಯ ॥ ॥ ಪ ॥

ಹುಟ್ಟಿ ಬರಲಿ ಪರಿ ಈ ಧರೆಯೊಳು ।
ಅಟ್ಟಿ ಬಂದುದು ಕರ್ಮದಳ್ಳುರಿ ॥
ಬೆಟ್ಟದೋಷದ ದಟ್ಟ ಹೊಗೆಯೊಳು ॥
ಕೆಟ್ಟು ನಿಂತಿತು ಚಿತ್ತ ತನುವೊಳು ॥ ॥ ೧ ॥

ದುರಿತಗಳ ಕುಸ್ತರಿಸಿ ಬಸವಳಿ
ದರಿತು ಕಾಯದ ಕಲ್ಮಷದ ಫಲ ॥
ಮರೆತು ನಡೆಸಿದ ಘೋರ ಕಳೆಯಲು ॥
ಕುರಿತು ಆದ್ಯರ ಸ್ಮರಿಸದಘಗಳ॥ ॥ ೨ ॥

ಪೂರ್ವರೆಸಗಿದ ಪುಣ್ಯ ಬಹಳ ಆ
ಪರ್ವಕಾರ್ಯಫಲಿಸಿತು, ಮನ ॥
ಸರ್ವರೊಡೆಯನ ದಿವ್ಯ ಚರಣದಿ ॥
ಮರ್ಮದಲ್ಲಡಗಿದ ರಜೆಯೊಳಿಟ್ಟು ॥ ॥ ೩ ॥

ಅಂಧಳಾದೆನು ಬಂಧು ಬಾಂಧವ ॥
ಬಂಧನದ ದುಮ್ಮಾನ ಜನಧನ ॥
ನಂಬಿ ಜಡತನ ಕಂದಿ ನಿನ ನೆಲೆ –
ಯಂದವರಿಯದ ಮಂದಮತಿಯನು ॥ ॥ ೪ ॥

ಈಗ ಸಮಯವು ಸರಿಸುವುದು
ರಾಗದತೆರೆ ಕ್ಲೇಶ ಕಲುಷವ ॥
ನೀಗಿ ವೆಂಕಟಪತಿಗೆ ಅಪಚರ –
ಳಾಗಿ ನಿಂದಪರಾಧಿ ಅಧಮಳ । ॥ ೫ ॥

೨೧೮

ಮಿಕ್ಕಯೋನಿಗಳಲ್ಲಿ ದಕ್ಕದಾಸಾಧನವು ॥
ಪಕ್ವವಾಗುವುದೀ ಮನುಜತ್ವ ಪಡೆದಾಗೊಮ್ಮೆ ॥ ॥ ೧ ॥

ಹಳಿಬೇಡ ಮಾನವನ ಜನುಮ ಸಾಫಲ್ಯವನು ॥
ಸುಳಿದಾಡಿ ಸಾರ್ಥಕದಿ ದೊರೆವುದೊಮ್ಮೊಮ್ಮೆ ॥ ॥ ೨ ॥

ದುರ್ವಿಚಾರವ ತೂರಿ ನಿರ್ಮಮದಲಿರಿಸಿ ತನು ॥
ಕರ್ಮಕರಗಿಸುತೊಮ್ಮೆ ಧರ್ಮದಾರಿಯ ತೋರಿ ॥ ॥ ೩ ॥

ಸರ್ವರಾಧಾರನಾ ಸಂಕಲ್ಪದಲಿ ಉಳಿದು ॥
ನಿರ್ಗತಾಶನನಾಗಿ ಸದ್ಗತಿಯ ಸಾಧನಕೆ ॥ ॥ ೪ ॥

ಕರದು ಕೂಗಿದರಲ್ಲಿ ಕರಗಿಕರಶಿರದಲಿರಿಪ ॥
ಗುರುವೇಂಕಟನ ಬಹು ಪರಿಯಲೆರಗುವರೊಮ್ಮೆ ॥ ೫ ॥

೨೧೯

ರಾಗ : ಕಲ್ಯಾಣಿ ತಾಳ : ಆದಿ ತಾಳ

ಮೂರು ಮಕ್ಕಳ ವರವನಿತ್ತೆ ಸಕಲರಿಗೆ ಉಪ
ಕಾರದಲಿ ಮನ, ಬುದ್ಧಿ ಅಂತಃಕರಣವೆಂಬ ॥ ॥ ಪ ॥

ಸಾರಸತ್ವವನದರೊಳಳವಡಿಸಿ ಸುಖದುಖ
ಕರಣಗಳ ಹೊಂದಿಸುತ ಸಿಂಗರಿಸಿ ಚಿಂತೆಯಾಗಿ ॥ ಅ.ಪ. ॥

ಮನವನಿತ್ತೆ ಬಳಸಿದೆನು ಅನುಭವದ ಸುಳಿಯಿಂ –
ದನುಪಮವದೆಂಬ ಬಯಲಚ್ಚರಿಯ ಬಳವಳಿ–

ಯನು ನಯದ ಆನಂದದಲಿ ಮಾಯೆ ಮುಸುಕಿನಲಿ ॥
ಮನುಜನೇಮವ ಮರೆತು ಭವಭಂಗಕಂಜದುದು
ನೀನಿತ್ತ ಮನದಿ ತಾನೆ ॥ ೧ ॥

ಬುದ್ಧಿ ಭಾವವನಿತ್ತ ನಿತ್ಯ ಸತ್ಯನ ಸೆಲೆಗ
ಶುದ್ಧ ಬಾಧಿತಳಾಗಿ ಭ್ರಮೆಭಾರದಲಿ ತೂಗಿ
ಬದ್ಧ ಬಂಧನಳೆಂಬ ಬಿರುದಿಗೆ ತಾಗಿ ಪ್ರ
ಸಿದ್ಧಳಾಗಿಸಿದೆನ್ನ ಸದ್ಗುಣ ಸಂಪನ್ನತೆಯ
ಸಾಧಕಳ ಬುದ್ಧಿ ನಿನ್ನದು ತಾನೆ ॥ ೨ ॥

ಸಮನಾದ ಸತ್ವಾಂತಃಕರಣ ಜನನವದಾಯ್ತು ॥
ಸುಮನೋಹರ ನಿನ್ನ ಕಾಮವರಿಯದೆ ಬಿಗಿದು ॥
ತಮದಹಂಕಾರದಾ ರಾಗಲೇಪಿಸಿ ಬೆಳೆಸು –
ವೀ ಮನುಜಹಂದರವ ಮಾಯೆಮಂಟಪಕಿಡಲು
ಸ್ವಾಮಿ ನೀನಿತ್ತಂತಃಕರಣ ತಾನೆ ॥ ೩ ॥

ಮೂರು ಮಕ್ಕಳ ವರವನಿತ್ತುಪಕರಿಸಿ ಭವ
ಭಾರದಲಿ ತಂದ ಮನ, ಬುದ್ಧಿ, ಅಂತಃಕರಣವಿರಿಸಿ
ಧರಿಸದೆ ಮಾಯೆ, ಭ್ರಮೆ, ಅಹಂಕಾರವಿರಿಸಿದೆ
ಕರಣ ಕಾರಣ ವೆಂಕಟಪತಿ ಬಾಳಹದಗೊಳಿಸು ॥
ಗುರು, ಚಿತ್ತ ಸ್ವಾಸ್ಥ್ಯ ಕಳೆದೀ ಲಘು ಜೀವ ಹರಸು ॥ ॥ ೪ ॥

೨೨೦

ರಥವನವನೆ ನಡೆಸುತಿರುವ । ಪಥದ ಭಯವು ಏಕೆ ॥
ಪೃಥುವಿಯಲ್ಲಿ ನಡೆಸಿನಲಿವ । ನಾಥ ಶಂಕೆ ಏಕೆ ॥ ॥ ಪ ॥

ವ್ಯರ್ಥವಳಲಿ ಸುತ್ತಿಬಳಲಿ । ವ್ಯಥಿಸೆ ದಾರಿ ತಿಳಿವುದೇ ॥
ಮಥಿಸಿನೋಡುವನಿತರೊಳಗೆ । ಕಥೆಯುಮುಗಿಯದಿರುವುದೇ ॥ಅ.ಪ. ॥

ದೈತ್ಯಕಂಸ ಮೃತ್ಯು ವಿಧಿಸೆ । ಅಶ್ವರಥವ ತಂದನು ॥
ಭೃತ್ಯನಾದಕ್ರೂರ ನಿಲಿಸಿ । ವಿಶ್ವರೂಪ ಕಂಡನು ॥ ॥ ೧ ॥

ಜರರರರಿರುಕ್ಮನು ರಥದಲಿ । ಏರಿ ಹರಿಯ ಹಾಯ್ದನು ॥
ಸರಿದಾರಿಲಿ ತೇರು ಹೊರಳಿ । ಹರಿ ಸಿರಿಯನು ಹೊತ್ತನು ॥ ॥ ೨ ॥

ಅರ್ಜುನ ಕದನದಲಿ ಸಂದು ।ಸಜ್ಜಾದರನೀಕ್ಷಿಸಿ ॥
ಭುಜದೆ ಕುಸಿದು ಶರವ ಕಳೆದು । ಸ್ವಜನರವರ ರಕ್ಷಿಸಿ ॥ ॥ ೩ ॥

ವಿಜಯಗೊಲಿದು ಸ್ಯಂದನಿಂದು । ಮಾಜಿಸಿದನ ವಿದ್ಯೆಯ ॥
ಸುಜಯಗೊರೆದು ಭವಸಾರಥಿ । ವಿಜಯ ಧರ್ಮದೀಕ್ಷೆಯ । ॥ ೪ ॥

ಕೊಡುವೆ ಬಿಡುವೆನೆಂದು ಒಡಲಿ । ಗಮರಿ ಒಡೆಯನಾಗದೆ ॥
ಬಿಡಿಸು ನಡುವೆ ಸುಳಿವ ಜಡಕೆ । ತಿಮಿರದರಿವೆ ತೊಡಿಸದೆ ॥ ॥ ೫ ॥

ಇಡುವ ನೆಡುವ ಕರ್ತನಿಂದು । ಬಿಡದೆ ಕರ್ಮ ಕೆಡವುವನು ॥
ಒಡವೆ ಕಾಯವಿತ್ತು ಕರೆದು । ಕಡುಮೋಹವ ಕಳೆವನು ॥ ೬ ॥

ಅರಿತು ಬೆರೆತು ಗುರುವ ಸಾರಿ । ಕರುಣಿ ಹರಿಯ ಸೇವಿಸು ।
ಏರಿ ವೆಂಕಟಪತಿ ದಾರಿ । ಹರಣ ಚರಣ ಸೇರಿಸು ॥ ॥ ೭ ॥

❖❖

ಅಂಕಿತ : ವಾರಿಧೀಶ

ರಚನೆ : ಜಲಜಾ ಗಂಗೂರ (೧೯೪೦-೨೦೧೭)

ಜನನ : ಆನೆಗೊಂದಿ ರಾಜರಿಂದ ಜಗದಾನಿ ಎಂಬ ಬಿರುದಾಂಕಿತರಾದ ಶ್ರೀ ಜಗದಾನಿ ವಿಠಲಾಚಾರ್ಯರ ವಂಶೋತ್ಪನ್ನರಾದ ಪ್ರಹ್ಲಾದಾಚಾರ್ಯ ಪದ್ಮಾವತಿಬಾಯಿ ದಂಪತಿಗಳಿಗೆ ೧೪-೬-೧೯೪೦ರಂದು ಜಲಜಾ ಅವರು ಜನಿಸಿದರು. ಚಿಕ್ಕಪ್ಪ ಗಿರಿಯಚಾರ್ಯರ ಮನೆಯಲ್ಲಿದ್ದುಕೊಂಡು ೭ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದರು.

ವಿವಾಹ : ೧೯೬೭ರಲ್ಲಿ ಗಂಗೂರ ಮನೆತನದ ಶ್ರೀ ಲಕ್ಷ್ಮೀಕಾಂತ ಆಚಾರ್ಯ ಅವರ ಮಗ ಶ್ರೀಪತಿ ಆಚಾರ್ಯ ಅವರೊಂದಿಗೆ ಕಡಲಬಾಳು ರಾಯರ ಸನ್ನಿಧಾನದಲ್ಲಿ ನೆರವೇರಿತು. ೧೯೭೨ರಲ್ಲಿಸ್ವಗೃಹದಲ್ಲಿ ಕಡಲಬಾಳು ರಾಘವೇಂದ್ರ ಗುರುಗಳಿಂದ ಪರೋಕ್ಷವಾಗಿ ಶರಧೀಶ, ಕಡಲಪುರೀಶ, ವಾರಿಧೀಶ ಎಂಬ ಪರ್ಯಾಯ ಅಂಕಿತವನ್ನು ಪಡೆದ ಜಲಜಾ ಅವರು ದೈವಾನುಗ್ರಹದಿಂದ ಕೀರ್ತನೆಗಳನ್ನು ರಚಿಸಲಾರಂಭಿಸಿದರು.

ಪ್ರಶಸ್ತಿ : ೧) "ಅವನಿಯ ಅಪ್ಸರೆ ಅಮೇರಿಕಾ" "ಪ್ರವಾಸ ಕಥನಕ್ಕೆ ಅತ್ತಿಮಬ್ಬೆ ಪ್ರಶಸ್ತಿ". ೨) ಹರಿದಾಸ ಸಾಹಿತ್ಯಕ್ಕೆ ಶ್ರೀ ಗುರುಶ್ರೀಶ ಪ್ರಶಸ್ತಿಗಳನ್ನು ಪಡೆದಿದ್ದಾರೆ. ಎಪ್ರಿಲ್ ೨೦೧೭ರಲ್ಲಿ ಜಲಜಾಗಂಗೂರ ನಿಧನರಾದರು.

ಕೃತಿಗಳು : ೧) ರಾಘವೇಂದ್ರ ಭಕ್ತಿ ಕುಸುಮಾಂಜಲಿ (ಭಕ್ತಿ ಗೀತೆಗಳು)

ಮರುತಮತದ್ಧಕ್ಕಿ (ಭಕ್ತಿ ಗೀತೆಗಳು)

ಪಂಚಪದರರದಹಾರ (ಪ್ರವಾಸ)

ಶ್ರೀಮಂತ ಭೂರಮೆ (ಪ್ರವಾಸ)

ಶಿಲ್ಪದುಲಿ (ಪ್ರವಾಸ)

ಅವನಿಯ ಅಪ್ಸರೆ ಅಮೇರಿಕ ಪ್ರವಾಸ)

ಜ್ಞಾನಜ್ಯೋತಿ (ಸತ್ಯಜ್ಞಾನತೀರ್ಥರ ಚರಿತ್ರೆ)

ಹಗಲು ರಾತ್ರಿಗಳಲ್ಲಿ ವ್ಯತ್ಯಾಸವಿಲ್ಲ ಹರಿದಾಸರಿಗೆಇಳೆಯೊಳಗೆ
ಮಿಗಿಲಿಲ್ಲಾದ ಭಕುತಿ ಭುಗಿಲಿಲ್ಲದ ಮನದಿಂದ
ಜಗನ್ನಿಯಾಮಕನ ಪಾಡಿ ಪೊಗಳಲ್ಕೆ ॥ ಪ ॥

ಹಗರಣವ ಮಾಡದೆ ಹಗೆತನವ ಸಾಧಿಸದೆ
ಒಗರು ಮಾತಿನಲಿ ಪರರ ಮನ ನೋಯಿಸದೆ
ನಿಗಮಗೋಚರನನ್ನು ನಿರ್ಮಲಚಿತ್ತದಿಂದಮ
ಲಗಿ ಪಾಡಿದರು ಆ ಜಾಗವಾಗ್ವುದಾಗ ಪಾವನ ನೆಲದ ದೇವಜಗುಲಿ ॥ ೧ ॥

ರೋಗರುಜಿನಗಳಲ್ಲಿ ಆಗುಹೋಗುಗಳಲ್ಲಿ
ವೇಗಗತಿಯಿಂದ ಇತಿಮಿತಿ ಇಲ್ಲದೆ ಸದಾ
ಜಗನ್ನಾಥನ ಭಜಿಸುವ ಪರಿಪಾಠವಿದ್ದ ತಾಣಗಳೇ
ರೋಗ ಭವರೋಗ ಹೋಗಲಾಡಿಸುವ ದೇವ ಧನ್ವಂತರಿಯ ದಿವ್ಯ ಚಿಕಿತ್ಸಾಲಯ ॥ ೨ ॥

ನಾಗಾಲೋಟದಿಂ ಓಡ್ವ ಯಾಂತ್ರಿಕ ಯುಗದಲ್ಲಿ
ನಾಗರಿಕರ ಬದುಕು ನರಕ ಸದೃಶವಾಗಿರಲು
ಹಗಲು ರಾತ್ರಿಯೆನ್ನದೆ ದುಡಿದು ದಣಿದಿರುವಾಗ
ನಾಗಶಯನನ ನಾಮ ನಾಲಿಗೆಯಲಿ ನಲಿವರದೇ ವಾರಿಧೀಶ್ವರ ಭೂಸ್ವರ್ಗ ॥ ೩ ॥

❖❖


20ನೆಯ ಶತಮಾನದ ಸಂದರ್ಭದಲ್ಲಿ ಸರಳ ಭಾಷೆ, ಆದಿಪ್ರಾಸದ ನೆಲೆ, ವಸ್ತು ಮತ್ತು ವಿಷಯ ವೈವಿಧ್ಯದೊಂದಿಗೆ ಸಂಬಂಧವನ್ನು ಹೋಲಿಸಿ ಹರಿದಾಸರು ಸಂಗೀತಮಯವಾಗಿ, ಹೃದಯಂಗಮವಾಗಿ ಹಾಡಿದ್ದಾರೆ. ಶ್ರೀ ಹರಿಯನ್ನು ಕಾಣಲು ಅಡ್ಡ ಬಂದವರಿಗೆ ಚಾಟಿ ಏಟು ನೀಡುತ್ತ, ಮುಗ್ಧರನ್ನು, ಪಾರಮಾರ್ಥಿಕದ ಕಡೆಗೆ ಕರೆದುಕೊಂಡು ಹೋಗುವ ಭಾವನಾಲಹರಿ ಅಗಮ್ಯ ಅಗೋಚರವಾಗಿದೆ. 'ಅರಿತವರ ಬಳಿ ಕುಳಿತು ಅರಿಯುತಿರಬೇಕು', 'ಮುಸುರಿ ತೊಳೆಯಬೇಕು, ಮನಸಿನ ಕಸವ ದೂಡಬೇಕು' ಎನ್ನುವ ಆಧುನಿಕ ಹರಿದಾಸರ ನುಡಿಗಳು ನಮಗಿಂದು ದಾರಿದೀಪವಾಗಿವೆ.

-ಡಾ. ಎಂ.ಎಸ್.ಮದಭಾವಿ,

(ಮುನ್ನುಡಿಯಿಂದ)

ದಾಸರು 'ಮಾಧ್ವರ ಜನ್ಮ ದೊಡ್ಡದು, ಇದ ೩ಹಾನಿ ಮಾಡಬೇಡಿ ಹುಚ್ಚಪ್ಪಗಳಿರಾ' ಎಂದು ಹೇಳಲಿಲ್ಲ. ಅವರು ಹೇಳಿದ್ದು, 'ಮಾನವ ಜನ್ಮ ದೊಡ್ಡದು, ಇದ ಹಾನಿ ಮಾಡಬೇಡಿ ಹುಚ್ಚಪ್ಪಗಳಿರಾ' ಎಂದರು. ದಾಸರ ಕೀರ್ತನೆಗಳಲ್ಲಿ ಬರದೇ ಇದ್ದ ವಿಚಾರಗಳೇ ಇಲ್ಲ. ಧರ್ಮ, ನೀತಿ, ಸಂಸಾರ, ವೇದಾಂತ, ರಾಜಕಾರಣ, ಅರ್ಥನೀತಿ, ಸಾಮಾನ್ಯ ನೀತಿ, ವಿನೋದ ಎಲ್ಲವೂ ಇದೆ. ಮುಖ್ಯವಾಗಿ ಜೀವನಗಂಗೆಯ ಬೃಹದ್ದರ್ಶನವನ್ನು ಅವರು ತಮ್ಮ ಸಾಹಿತ್ಯದಲ್ಲಿ ಮಾಡಿಸಿದ್ದಾರೆ.

-ಪ್ರಸ್ತಾವನೆಯಿಂದ



ವಿಜಯ ಪ್ರಕಾಶನ
ವಿಜಯಪುರ ೫೮೬೧೦೯